S.T Aralimath

# ಆನಂದ ಮಾರ್ಗ

ಶ್ರೀ ಶ್ರೀ ಆನಂದಮೂರ್ತಿ

ರಾಯಣಾನಂದ ಅವಧೂತ
ತಿವ,
 ಪ್ರಚಾರಕ ಸಂಘ (ರಜಿ.)
,
. ಜಿ. ಪುರೂಲಿಯ (ಪ. ಬಂಗಾಲ)

ಣ:
.೦೦

ಅನುವಾದಕರು:
ಎಸ್. ಆರ್. ಪಾಟೀಲ ಬಿ. ಈ.

ದ ಎಲ್ಲ ಹಕ್ಕುಗಳು ಕಾಯ್ದಿರಿಸಲ್ಪಟ್ಟಿವೆ)

ಾಲಯ
3, ಗದಗ—582 101

# ರೋಮನ್ ಸಂಸ್ಕೃತ

ಬೇರೆ ಬೇರೆ ಭಾಷೆಗಳ ಸರಿಯಾದ ಉಚ್ಚಾರಣೆ ಮಾಡುವುದನ್ನೂ ಮತ್ತು ಸರಳ ಲೇಖನ ಪ್ರಯೋಜನವನ್ನೂ ಮನದಂದು, ಕೆಳಗೆ ನೀಡಲಾದ ಪದ್ಧತಿಯಲ್ಲಿ ರೋಮನ್ ಸಂಸ್ಕೃತ ವರ್ಣಮಾಲೆಯನ್ನು ಹೊಂದಿಸಲಾಗಿದೆ.

ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ
अ आ इ ई उ ऊ ऋ ॠ ऌ ॡ ए ऐ ओ औ अं अः
a a' i ii u u' r rr lr lrr e ae o ao am' ah

ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ
क ख ग घ ङ च छ ज झ ञ ट ठ ड ढ ण
ka kha ga gha uṋa ca cha ja jha iṋa t'a t'ha d'a d'ha n'a

ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ
त थ द ध न प फ ब भ म य र ल व श
ta tha da dha na pa pha ba bha ma ya ra la va sha

ಷ ಸ ಹ ಕ್ಷ
ष स ह क्ष
s'a sa ha ks'a

ಅँ ಜ್ಞ ಋಷಿ ಛಾಯಾ ಜ್ಞಾನ
अँ ज्ञ ऋषि छाया ज्ञान
aṋ jiṋa rs'i cha'ya' jiṋa'na

ಸಂಸ್ಕೃತ ತತೋಽಹಂ

संस्कृत ततोऽहं

Sam'skrta tato'ham

A'nanda Ma'rga Praca'raka Sam'gha

c d d' e g h i j k l m m' n n'
r s s' t t' u u' v y.

, ವಿಶ್ವದಲ್ಲಿ ಬಹಳ ಪ್ರಸಾರ ಹೊಂದಿದ, ರೋಮನ್ ಲಿಪಿಯ ಈ
ಂದ ಸಂಸ್ಕೃತ ಭಾಷೆಯ ಸರಿಯಾದ ಉಚ್ಚಾರಣೆ ಮಾಡುವುದು
ಇದರಲ್ಲಿ ಒತ್ತಕ್ಷರಗಳ ಗೊಂದಲವಿಲ್ಲ. ಅರಬ್ಬೀ, ಫಾರಸೀ
ೇತರ ಭಾಷೆಗಳಲ್ಲಿ f, q, qh, z, ಇತ್ಯಾದಿ ಅಕ್ಷರಗಳ ಪ್ರಯೋ
; ಸಂಸ್ಕೃತದಲ್ಲಿಲ್ಲ.

ಮಧ್ಯೆ ಇಲ್ಲವೆ ಕೊನೆಯಲ್ಲಿ 'ಡ' (ड-da) ಮತ್ತು 'ಢ'
ನುಕ್ರಮವಾಗಿ 'ಡ' (ड़-r'a) ಮತ್ತು 'ಢ' (ढ़-r'ha) ರೂಪ
ರಿತವಾಗುತ್ತವೆ. 'ಯ' (ಎಲ್ಲಿ 'ಯ'ದ ಉಚ್ಚಾರವು ಇಅ
ಯೋ) ದಂತೆ ಅವು ಸ್ವತಂತ್ರ ವರ್ಣಗಳಲ್ಲ. ಪ್ರಯೋಜನಾನುಸಾರ
ಸ್ಕೃತ ಶಬ್ದಗಳನ್ನು ಬರೆಯುವ ಕಾಲಕ್ಕೆ r'a ಮತ್ತು r'ha ಗಳನ್ನು
ಸುದಾಗಿದೆ.

## ಚರಮ ನಿರ್ದೇಶ

ಯಾರು ನಿತ್ಯವೂ ಎರಡು ವೇಳೆ ಸಾಧನೆ ಮಾಡುವರೋ, ಅಂತ್ಯ ಸಮಯಕ್ಕೆ ಅವರ ಮನದಲ್ಲಿ ಪರಮ–ಪುರುಷನ ಭಾವನೆಯು ಅವಶ್ಯವಾಗಿ ಮೂಡುವುದು. ಈ ಪ್ರಕಾರ, ಅವನಿಗೆ ಮುಕ್ತಿ–ಪ್ರಾಪ್ತಿಯು ನಿಶ್ಚಯವಾಗಿ ಲಭಿಸಿಯೇ ತೀರುತ್ತದೆ. ಆದ್ದರಿಂದ, ಪ್ರತಿಯೊಬ್ಬ ಆನಂದ ಮಾರ್ಗಿಯು, ದಿನದ ಎರಡೂ ಹೊತ್ತು, ಸಾಧನೆ ಮಾಡಲೇಬೇಕಾಗುತ್ತದೆ. ಪರಮ–ಪುರುಷನ ನಿರ್ದೇಶನವೇ ಇದಾಗಿದೆ. ಯಮ–ನಿಯಮಗಳ ಪಾಲನೆಯಿಲ್ಲದೆ, ಸಾಧನೆಯು ಸಾಧ್ಯವಿಲ್ಲ. ಆದ್ದರಿಂದ, ಯಮ–ನಿಯಮಗಳ ಪಾಲನೆ ಮಾಡುವುದೂ ಸಹ, ಪರಮ–ಪುರುಷನ ನಿರ್ದೇಶನವೇ ಆಗಿದೆ. ಈ ನಿರ್ದೇಶನವನ್ನು ಅಮಾನ್ಯ ಮಾಡುವುದೆಂದರೆ, ಕೋಟ್ಯಂತರ ವರುಷಗಳ ವರೆಗೆ, ಪಶು ಜೀವನದ ಕಷ್ಟದ ಬೆಂಕಿಯಲ್ಲಿ ಬೆಂದು ಬೇಗುದಿಗೊಳ್ಳುವುದಾಗಿದೆ. ಯಾವ ಮನುಷ್ಯನೂ, ಅಂಥ ಕಷ್ಟದ ಬೆಂಕಿಯಲ್ಲಿ ಬಿದ್ದು, ದಗ್ಧವಾಗದಿರಲಿ; ಹಾಗಾದರೆ, ಪರಮ ಪುರುಷನ ಸ್ನೇಹದ ನೆರಳಲ್ಲಿ ಎಲ್ಲರೂ ಬಂದು, ಶಾಶ್ವತ ಶಾಂತಿಯ ಲಾಭ ಪಡೆಯಲಿ; ಆದ್ದರಿಂದ, ಸರ್ವ ಮನುಷ್ಯರನ್ನೂ ಆನಂದ ಮಾರ್ಗದ ಕಲ್ಯಾಣ–ಪಥದತ್ತ ತರುವ ಪ್ರಯತ್ನ ಮಾಡುವುದು, ಪ್ರತಿಯೋರ್ವ ಆನಂದಮಾರ್ಗಿಯ ಕರ್ತವ್ಯವಾಗಿದೆ. ಎರಡನೆಯವರಿಗೆ ಸತ್-ಪಥ ತೋರಿಸುವುದು ಸಾಧನೆಯ ಅಂಗವೇ ಆಗಿದೆ.

ಶ್ರೀ ಶ್ರೀ ಆನಂದಮೂರ್ತಿ

# ಪರಿವಿಡಿ


| ಕ್ರಮಸಂಖ್ಯೆ | ವಿಷಯ | ಪುಟ |
|---|---|---|
| ೧. | ಯಾವುದು ಧರ್ಮ? | ೧ |
| ೨. | ವಿಭು ಸತ್ತೆ ಯಾರು? | ೧೪ |
| ೩. | ಜಗತ್ತು ಏನಿದೆ? | ೨೩ |
| ೪. | ನಾನು ಯಾರು? ಮತ್ತು ಏನಿರುವೆ? | ೫೧ |
| ೫. | ಜಗತ್ತು ಮತ್ತು ಭೂಮಾ ಸತ್ತೆಗಳೊಂದಿಗೆ ನನ್ನ ಸಂಬಂಧವೇನು | ೫೪ |
| ೬. | ಈ ಜಗತ್ತಿನಲ್ಲಿ ಮಾನವನು ಹೇಗೆ ಇರಬೇಕು? | ೭೦ |
| ೭. | ಮಾನವನ ಲಕ್ಷ್ಯವಾವುದು? | ೮೩ |
| ೮. | ಆಧ್ಯಾತ್ಮಿಕ ಅನುಶೀಲನೆ ಮತ್ತು ಅದರ ಪ್ರಯೋಜನೆ | ೮೫ |
| ೯. | ಮಾನವನು ಸಾಧನೆಗೆ ಬೆದಗುವುದೇಕೆ? | ೧೦೪ |




## ಯಾವುದು ಧರ್ಮ?

ವಿಕಾಸದ ಕ್ರಮದ ಚರಮ ಸೀಮೆಯಲ್ಲಿ ಮಾನವನು ತನ್ನ ಚೈತನ್ಯವನ್ನು ವ್ಯಾಪಕವಾಗಿ ವಿಕಸಿತಗೊಳಿಸುವ ಕಾರಣ, ಅವನು ಬೇರೆ ಎಲ್ಲ ಜೀವಿಗಳಿಗಿಂತ ಶ್ರೇಷ್ಠನಾಗಿದ್ದಾನೆ. ಮಾನವನು ತನ್ನ ಈ ವಿಕಸಿತ ಚೈತನ್ಯದ ಕಾರಣ, ಒಳಿತು–ಕೇಡುಗಳನ್ನು ನಿರ್ಣಯಿಸುವ, ಹಾಗೂ ಕಷ್ಟ–ಕಾರ್ಪಣ್ಯಗಳಿಂದ ಮುಕ್ತಿ ಪಡೆಯುವ ಮಾರ್ಗವನ್ನು ಹುಡುಕುವಲ್ಲಿ ಸಕ್ಷಮನಾಗಿದ್ದಾನೆ. ಜೀವಿಗಳಾದರೂ ದುಃಖ–ದುರ್ದೆಶೆಗಳನ್ನೂ ಹಾಗೂ ಕ್ಲೇಶಪೂರ್ಣ ಜೀವನವನ್ನೂ ಬಯಸರು. ಇನ್ನು, ಪ್ರತಿಕಾರ ಗೈಯ್ಯುವಲ್ಲಿ ಸಕ್ಷಮನಾದ, ವಿಕಸಿತ ಚೈತನ್ಯ ಜೀವಿಯಾದ, ಮಾನವನಂತೂ ಎಷ್ಟೆಷ್ಟೂ ಬಯಸನು. ವಾಸ್ತವವಾಗಿ, ಮಾನವನ ಸ್ವಭಾವವೇ ಆನಂದವನ್ನು ಹುಡುಕುವುದಾಗಿದೆ. ಮಾನವನ್ನು ಆನಂದ ಪಡೆಯುವ ಉದ್ದೇಶದಿಂದ ಏನು ಮಾಡುತ್ತಾನೆ? ಮತ್ತು ಅವನಿಗಿದು ಪ್ರಾಪ್ತವಾಗುವುದೋ? ಇಲ್ಲವೋ? ಎಂಬುದನ್ನು ನೋಡುವಾ.

ಆನಂದದ ಶೋಧದಲ್ಲಿ, ಮಾನವನು ಮೊಟ್ಟಮೊದಲು, ಭೋಗಗಳಿಂದ ಇನ್ನಷ್ಟು ಆಕರ್ಷಿತನಾಗುತ್ತಾನೆ. ಇಚ್ಛೆಯ ನಿವೃತ್ತಿಗಾಗಿ ಅವನು ಧನ–ಸಂಚಯ ಮಾಡುತ್ತಾನೆ. ಶಕ್ತಿ ಮತ್ತು ಪ್ರಭಾವಗಳನ್ನು ಗಳಿಸುವಲ್ಲಿ ತತ್ಪರನಾಗುತ್ತಾನೆ. ಆದರೆ, ಈ ಎಲ್ಲ ವಸ್ತುಗಳು ಅವನಿಗೆ ಆನಂದವನ್ನೀಯುವುದಿಲ್ಲ. ಇಂದು ಯಾರ ಬಳಿ ಒಂದು ನೂರು ರೂಪಾಯಿಗಳು ಇರುವವೋ, ಅವನು ಒಂದು ಸಾವಿರ ರೂಪಾಯಿಗಳನ್ನು ಪಡೆಯಲು ಬಯಸುತ್ತಾನೆ. ಇನ್ನು, ಯಾರ ಬಳಿ ಒಂದು ಸಾವಿರ ರೂಪಾಯಿಗಳಿವೆಯೋ, ಅವನು ಲಕ್ಷಾಧಿಪತಿಯಾಗ ಬಯಸುತ್ತಾನೆ. ಈ ಪ್ರಕಾರ ಕ್ರಮೇಣ ಹೆಚ್ಚುತ್ತಿರುವ ಇಚ್ಛೆಗಳ ಗತಿಗೆ ಕೊನೆಯೆಂಬುದೇ ಇಲ್ಲ. ಇಂದು ತನ್ನ ಜಿಲ್ಲೆಯಲ್ಲಿ ಪ್ರಭಾವ

ಶಾಲಿ ವ್ಯಕ್ತಿಯಾದವನು, 'ಇಡೀ ನಾಡಿನಲ್ಲಿಯೇ ನಾನು ಪ್ರಭಾವಶಾಲಿ
ಯಾಗುವೆ.' ಎಂದು ಬಯಸುತ್ತಾನೆ. ಅದೇ ಪ್ರಕಾರ, ನಾಡ–ನೇತಾರನು
ರಾಷ್ಟ್ರದ ಮುಖಂಡನಾಗಲು ಬಯಸುತ್ತಾನೆ; ಮತ್ತು ರಾಷ್ಟ್ರ–ಮುಖಂಡ
ನಾದ ಬಳಿಕ ಸಹ, ಅವನ ಮನದಲ್ಲಿ ವಿಶ್ವದ ಮುಖಂಡನಾಗಬೇಕೆಂಬ ವಾಸ
ನೆಯು ಉದಿಸುತ್ತದೆ. ಅರ್ಥಾತ್, ಸೀಮಿತ ಸಂಪತ್ತು, ಮಾನ, ಯಶ,
ಶಕ್ತಿ, ಪ್ರಭಾವ ಮುಂತಾದವುಗಳು ಮಾನವನ ವಾಸನೆಗಳ ನಿವೃತ್ತಿಯನ್ನು
ಮಾಡಿಕೊಡಲಾರವು. ಪ್ರತಿಯಾಗಿ, ಭೋಗದ ವೃತ್ತಿಯನ್ನೇ ಇನ್ನಷ್ಟು
ಬೆಳೆಸುತ್ತವೆ. ಮತ್ತು ಇವೆಲ್ಲವುಗಳಿಂದ, ಮಾನವನ ಅನಂತ ಹಸಿವು ಅತೃಪ್ತ
ವಾಗಿಯೇ ಉಳಿಯುತ್ತದೆ.

ಮಾನವನು ಅದೆಷ್ಟೇ ಧನವನ್ನು ಗಳಿಸಲೊಲ್ಲನೇಕೆ, ಅನಂತ ಸುಖದ
ದಾಹ ಹೊಂದಿದ ಮಾನವ ಮನವನ್ನು ಅದು ಪರಿತೃಪ್ತಗೊಳಿಸದು. ಯಾವ
ಜನರು, ಧನ, ಮಾನ, ಯಶ, ಖ್ಯಾತಿ ಮುಂತಾದವುಗಳ ಹಿಂದೆ ಓಡು
ವರೋ, ಅವರು ಎಲ್ಲಿಯ ತನಕ ಇವೆಲ್ಲವುಗಳನ್ನೂ ಅನಂತ ಪರಿಮಾಣದಲ್ಲಿ
ಪಡೆಯುವದಿಲ್ಲವೋ, ಅಲ್ಲಿಯ ತನಕ, ಎಂದೂ ತೃಪ್ತರಾಗಲಾರರು. ಆದರೆ,
ಪೃಥ್ವಿಯು ತಾನೇ ಸೀಮಿತ ಸತ್ತೆಯಾಗಿದೆ. ಅಂದ ಮೇಲೆ, ಇದರ ಮೇಲಿನ
ಸಕಲ ಸೃಷ್ಟ ಪಾರ್ಥಿವ ವಸ್ತುಗಳು ಅವಶ್ಯವಾಗಿ ಸೀಮಿತವಾಗಿರಬೇಕಷ್ಟೇ.
ಈ ಎಲ್ಲವುಗಳನ್ನು ಅನಂತ ರೂಪದಲ್ಲಿ ಪಡೆಯುವುದಂತೂ ಅಸಂಭವವೇ
ಸರಿ. ಆದ್ದರಿಂದ ಪಾರ್ಥಿವ ಪ್ರಾಪ್ತಿಯು, ಅದೆಷ್ಟೇ ಮಹಾನ್ ಆಗಿರಲೊಲ್ಲ
ದೇಕೆ, ಭೂಮಂಡಲವೇ ಆಗಿರಲೊಲ್ಲದೇಕೆ, ಆದರೂ ಸಹ, ಅದು ಅನಂತವೂ
ಅಲ್ಲ; ಶಾಶ್ವತವೂ ಅಲ್ಲ. ಹೀಗಿದ್ದ ಮೇಲೆ, ಮಾನವನಿಗೆ ಚಿರಂತನ ಸುಖವೀಯುವ
ಶಾಶ್ವತ ಸತ್ತೆಯಾದರೂ ಯಾವುದು?

ಭೂಮಾ ಸತ್ತೆಯೊಂದೇ ಕೇವಲ ಅನಂತವಾಗಿದೆ; ಶಾಶ್ವತವಾಗಿದೆ.
ಮತ್ತು ಅವನ ಉಪಲಬ್ಧಿಯಿಂದ ಮಾತ್ರ, ಮಾನವನ ಅನಂತದ ಹಸಿವಿನ
ಆತ್ಯಂತಿಕ ನಿವೃತ್ತಿಯು ಸಂಭವಿಸಬಹುದಷ್ಟೇ. ನಶ್ವರವಾದ ಪಾರ್ಥಿವ
ಮಾನ, ಐಶ್ವರ್ಯ, ಶಕ್ತಿ, ಪ್ರಭಾವ ಮುಂತಾದವುಗಳು, ಮಾನವನನ್ನು ಈ
ತರ ಸಿದ್ಧಾಂತಕ್ಕೆ ತಂದು ನಿಲ್ಲಿಸಿವೆ; ಅದೇನೆಂದರೆ–ಸಾಂತ, ಸೀಮಿತ, ಪೃಥ್ವಿಯ
ಯಾವುದೇ ವಸ್ತುವಿನಿಂದ ಅನಂತ ಸುಖ ಪಡೆಯಬೇಕೆಂಬ ಚಿರಂತನ ದಾಹದ
ತೃಪ್ತಿಯು ಎಂದೆಂದಿಗೂ ಈಡೇರಲಾರದು. ಇದು ಕೇವಲ ಆ ವಿಭು ಸತ್ತೆ
ಯಾದ ಬ್ರಹ್ಮನ ಉಪಲಬ್ಧಿಯಿಂದ ಮಾತ್ರ ಸಂಭವಿಸಬಹುದು. ವಾಸ್ತವದಲ್ಲಿ



ಮಾನವನ ಅನಂತ ಭೋಗವಾಸನೆಯ ಹಿಂದೆ, ಬ್ರಹ್ಮೋಪಲಬ್ಧಿಯ ಇಚ್ಛೆಯು ಗುಪ್ತವಾಗಿರುತ್ತದೆ. ಆದ್ದರಿಂದ, ಬ್ರಹ್ಮೋಪಲಬ್ಧಿಯೇ ಮಾನವನ ಧರ್ಮವಾಗಿದೆ. ಮತ್ತು ಇದುವೇ ಜೀವರೆಲ್ಲರ ಸ್ವಭಾವವಾಗಿದೆ.

ಧರ್ಮ ಶಬ್ದದ ಅರ್ಥವೆಂದರೆ, ಅದರದೇ ಆದ, ವಿಶೇಷತೆ ಇಲ್ಲವೆ ಗುಣ. ಆಂಗ್ಲ ಭಾಷೆಯ ಇದರ ಪ್ರತಿ ಶಬ್ದವೆಂದರೆ 'ನೇಚರ'. (Nature-Characteristic or property)· ಅಗ್ನಿಯ ಧರ್ಮ ಇಲ್ಲವೆ ಸ್ವಭಾವವು ಸುಡುವುದು. ಅಗ್ನಿ ಮತ್ತು ಅದರ ಧರ್ಮಗಳೆರಡೂ ಯಾವ ರೀತಿ ಬೇರೆಯಾಗಲಾರವೋ, ಅದೇ ರೀತಿ, ಮಾನವ ಮತ್ತು ಅವನ ಧರ್ಮವಾದ ಬ್ರಹ್ಮೋಪಲಬ್ಧಿಯ ಇಚ್ಛೆಯೂ ಸಹ, ಅದೇ ಪ್ರಕಾರದ್ದಾಗಿವೆ.

ಮಾನವನಲ್ಲಿ ಚೈತನ್ಯದ ವಿಕಾಸದೊಂದಿಗೇನೇ ಪಶುತ್ವದ ಭಾವನೆಯೂ ಸಹ ಇದೆ. ಸೃಷ್ಟಿಯ ಕ್ರಮ–ವಿಕಾಸದ ಧಾರೆಯಲ್ಲಿ ಪಶು ಜೀವನದಿಂದ ಮಾನವ ಜೀವನದ ವಿಕಾಸವಾಗಿದೆ. ಆದ್ದರಿಂದ, ಮಾನವ ಜೀವನದಲ್ಲಿ ವೃತ್ತಿಯ ದ್ವಿಮುಖ ಗತಿಯು ಕಂಡು ಬರುತ್ತದೆ. ಜಡಾಭಿಮುಖಿ ಗತಿಯು ಅವನನ್ನು ಪಶುತ್ವದತ್ತ ಸೆಳೆದೊಯ್ಯುತ್ತದೆ. ಮತ್ತು ಇದಕ್ಕೆ ವಿಪರೀತವಾಗಿ, ಸೂಕ್ಷ್ಮದತ್ತಣ ಗತಿಯು ಪಶುತ್ವದಿಂದ ಬಿಡುಗಡೆ ಮಾಡುತ್ತದೆ. ಪಶು ಜೀವನದಲ್ಲಿ ಪಶುತ್ವದ ವ್ಯಾಪಕ ವಿಕಾಸವು ಕಾಣಬರುತ್ತದೆ ಮತ್ತು ಮಾನವ ಜೀವನದಲ್ಲಿ ಚೈತನ್ಯದ ವಿಕಾಸವು ಹೆಚ್ಚು–ಹೆಚ್ಚಾದ ಕಾರಣ, ವಿಚಾರ ಮತ್ತು ವಿವೇಚನೆಗಳ ಮಹತ್ತ್ವವನ್ನು ಪರಿಲಕ್ಷಿಸಬೇಕಾಗುತ್ತದೆ. ಪಶುತ್ವದ ಪ್ರಬಲತೆಯ ಕಾರಣ, ಮನುಷ್ಯನು, ಅನ್ನ-ನೀರು ಮುಂತಾದ ಸ್ಥೂಲ ಭೋಗಗಳತ್ತ ಆಕರ್ಷಿಸಲ್ಪಡುತ್ತಾನೆ. ಇವಾವುಗಳೆಂದೂ ಅವನ ಅನಂತ ಹಸಿವೆಯನ್ನು ನಿವೃತ್ತಗೊಳಿಸಲಾರವು. ಪಶುಗಳ ಭೋಗವೃತ್ತಿಗಳು ಅನಂತವಿರದ ಕಾರಣ, ಅವುಗಳ ಪರಿತೃಪ್ತಿಯು ಈ ಸೀಮಿತ ಭೋಗ್ಯ ವಸ್ತುಗಳಿಂದಾಗುತ್ತದೆ. ಈ ಭೋಗ್ಯ ವಸ್ತುಗಳು ಲೆಕ್ಕವಿಲ್ಲದಷ್ಟಿರುವಾಗಲೂ ಸಹ, ಪಶುಗಳು ಅವುಗಳನ್ನು ತಮ್ಮ ಆವಶ್ಯಕತೆಗಿಂತ ಹೆಚ್ಚಾಗಿ ಗ್ರಹಿಸುವದಿಲ್ಲ. ಆದರೆ, ಅಂಥ ಸಂದರ್ಭದಲ್ಲಿ ಮಾನವನು, ನಿಶ್ಚಯವಾಗಿಯೂ, ಅದೇ ರೀತಿ ವ್ಯವಹರಿಸುವದಿಲ್ಲ. ಇದರಿಂದ, ಪಶುಗಳ ಭೋಗ ಲಾಲಸೆಯು ಸೀಮಿತವಾಗಿದೆ. ಆದರೆ, ಮಾನವನದು ಅನಂತವಾಗಿದೆ; ಎಂಬುದು ಸಿದ್ಧವಾಗುತ್ತದೆ. ಆದರೂ ಸಹ, ಉಭಯ ಕ್ಷೇತ್ರಗಳಲ್ಲಿ, ಪಶುತ್ವವನ್ನು ಕೇಂದ್ರವಾಗಿರಿಸಿಕೊಂಡೇ ಭೋಗಾಭಿಮುಖಿ ಗತಿಯು ಅಭಿವ್ಯಕ್ತವಾಗುತ್ತದೆ. ಮಾನವನ ವಿಕಸಿತ ಚೈತನ್ಯವೇ ಈ ಎರಡ

ರಲ್ಲಿಯೂ ಈ ವಿಭೇದವನ್ನು ಸೃಷ್ಟಿಸಿದೆ. ಈ ವಿಕಸಿತ ಚೈತನ್ಯದ ಕಾರಣ, ಅನಂತ ಸುಖವನ್ನು ಪಡೆಯಬೇಕೆಂಬ ಅನಂತ ಹಸಿವು, ನಶ್ವರ, ಸೀಮಿತ, ಪಾರ್ಥಿವ ಸುಖ, ಐಶ್ವರ್ಯ, ಶಕ್ತಿ, ಪ್ರಭಾವ ಮುಂತಾದವುಗಳಿಂದ ತಣಿಯದು. ಪ್ರತಿಯಾಗಿ, ಇನ್ನಷ್ಟು ಬ್ರಹ್ಮಾನಂದದ ಕಡೆಗೇ ಆಕರ್ಷಿತವಾಗುತ್ತಿರುತ್ತದೆ.

ಮಾನವನ ಪಶುತ್ವ ಮತ್ತು ವಿವೇಕಗಳ ಮಧ್ಯೆ, ಯಾವಾಗಲೂ ಹೋರಾಟವು ನಡೆದಿರುತ್ತದೆ. ಪಶುತ್ವವು ಅವನನ್ನು ಜಗದ ಭೋಗದತ್ತ ಪ್ರೇರಿಸುತ್ತದೆ. ಇನ್ನು ಅತೃಪ್ತ ಹಾಗೂ ಜಾಗ್ರತ–ವಿವೇಕವು ಅವನ ಬ್ರಹ್ಮಾಭಿಮುಖಿ ಗತಿಯನ್ನು ಕೊನೆಗೊಳಿಸಲು ಬಿಡುವದಿಲ್ಲ. ಶಕ್ತಿ, ಪ್ರಭಾವ ಮುಂತಾದವುಗಳ ಮೂಲಕ ಗಳಿಸಿದ ಭೋಗ–ಸಾಮಗ್ರಿಗಳು, ಒಂದು ವೇಳೆ, ಅಸೀಮ ಮತ್ತು ಅನಂತವಾಗಿದ್ದರೆ, ಅವುಗಳು ಅವಶ್ಯವಾಗಿ, ಆನಂದವನ್ನು ಬಯಸುವ ಹಸಿವನ್ನು ಹಿಂಗಿಸುತ್ತಿದ್ದವು. ಆದರೆ, ಅವು ಅಸೀಮ, ಅನಂತವಾಗಿಲ್ಲ. ಮತ್ತು ಇದೇ ಕಾರಣದಿಂದ ನಶ್ವರ ಪಾರ್ಥಿವ ಭೋಗಗಳು ಅದೆಷ್ಟೇ ಹೆಚ್ಚಾಗಿದ್ದರೂ ಸಹ, ಮಾನವನ ಮನಕ್ಕೆ ಶಾಶ್ವತ ಶಾಂತಿಯನ್ನು ನೀಡಿ, ಅದನ್ನು ಭಮಾನಂದದಲ್ಲಿ ನೆಲೆಗೊಳಿಸಲಾರವು.

ಚೈತನ್ಯದ ವ್ಯಾಪಕ ವಿಕಾಸವೇ ಮಾನವ ಮತ್ತು ಪಶುಗಳಲ್ಲಿಯ ಭೇದವನ್ನು ತಿಳಿಸುತ್ತದೆ. ಹಾಗಾದರೆ, ಈ ಚೈತನ್ಯದ ಸದ್‌ವ್ಯವಹಾರವು ಮಾನವನ ಏಕಮಾತ್ರ ಕರ್ತವ್ಯವಲ್ಲವೇ? ಒಂದು ವೇಳೆ, ಅವನ ಚೈತನ್ಯ ಇಲ್ಲವೆ ವಿವೇಕವು ಪಶುತ್ವದಲ್ಲಿಯೇ ಲೀನವಾದರೆ, ಅವಶ್ಯವಾಗಿಯೂ ಅವನ ಆಚರಣೆಯು ಪಶು–ಸಮಾನವಾಗುತ್ತಿದೆ. ವಾಸ್ತವದಲ್ಲಿ ಅವನು ಪಶುವಿಗಿಂತಲೂ ಅಧಮನಾಗಿದ್ದಾನೆ. ಏಕೆಂದರೆ, ಚೈತನ್ಯದ ವ್ಯಾಪಕ ವಿಕಾಸವನ್ನು ಪಡೆದೂ ಸಹ, ಅವನು ಈ ಸುಯೋಗದಿಂದ ಲಾಭ ಪಡೆದುಕೊಳ್ಳುತ್ತಿಲ್ಲ. ಇಂಥವನು ನಿಜವಾಗಿಯೂ ಮನುಷ್ಯನೆಂದು ಕರೆಯಲೂ ಸಹ ಯೋಗ್ಯನಲ್ಲ. ಇಂಥ ಎಲ್ಲ ವ್ಯಕ್ತಿಗಳೂ ಮಾನವ ಶರೀರದಲ್ಲಿಯ ಪಶುಗಳಂತೆ.

ಅಖಂಡ ಸತ್ತೆಯಾದ ಬ್ರಹ್ಮನನ್ನು ಪಡೆಯುವ ಪ್ರಯತ್ನ ಮಾಡುವುದೇ ಚೈತನ್ಯದ ಧರ್ಮವೇ ಆಗಿದೆ. ವಿಕಸಿತ ಚೈತನ್ಯದ ಪ್ರೇರಣೆಯನ್ನು ಕಾರ್ಯಾನ್ವಿತಗೊಳಿಸಿ, ಯಾರು ಮಾನವರೆಂಬ ಹೆಸರನ್ನು ಸಾರ್ಥಕಗೊಳಿಸುವರೋ, ಅವರು ತಮ್ಮ ಲಕ್ಷ್ಯವು ಅವಶ್ಯವಾಗಿ ಏಕಮಾತ್ರ, ಅದ್ವಿತೀಯ, ಅನಂತ ಬ್ರಹ್ಮವೆಂಬುದನ್ನು ಕಂಡುಕೊಳ್ಳುತ್ತಾರೆ. ಬ್ರಹ್ಮೋಪಲಬ್ಧಿಯ ಈ ಇಚ್ಛೆಯೇ



ಮಾನವನ ವಿಶೇಷತೆ, ಗುಣ ಇಲ್ಲವೆ ಧರ್ಮವಾಗಿದೆ. ಇಚ್ಛೆಯು ಪೂರ್ತಿಯಾಗುವುದೇ ಆನಂದ. ಇಚ್ಛಿತ ವಸ್ತುವು ಸಿಕ್ಕದಾದರೆ, ಮಾನವನ ಮನವು ದುಃಖದಿಂದ ತುಂಬಿ ಬರುತ್ತದೆ. ವಿಕಸಿತ ಚೈತನ್ಯವೇ ಮಾನವನನ್ನು ಪಶುತ್ವದಿಂದ ಮುಕ್ತಗೊಳಿಸುತ್ತದೆ. ಮತ್ತು ಬ್ರಹ್ಮೋಪಲಬ್ಧಿಯ ಮಾರ್ಗವನ್ನು ಹಿಡಿಯುತ್ತದೆ. ಆದ್ದರಿಂದ, ಬ್ರಹ್ಮೋಪಲಬ್ಧಿಯಿಂದ ಇಲ್ಲವೆ ಬ್ರಹ್ಮೋಪಲಬ್ಧಿಯ ಪ್ರಯತ್ನದಲ್ಲಿ ತೊಡಗುವುದರಿಂದ, ಮಾನವನು ಯಥಾರ್ಥ ಆನಂದವನ್ನು ಪಡೆಯುತ್ತಾನೆ. ಇದರಿಂದ ನಾವು, ಅನಂತ ಇಲ್ಲವೆ ಬ್ರಹ್ಮನ ಉಪಲಬ್ಧಿ ಮಾಡಿಕೊಳ್ಳುವುದೇ ವಿಶ್ವಮತವಾದ ಇಲ್ಲವೆ ಮಾನವ ಧರ್ಮವಾಯಿತು; ಎಂಬ ಸಿದ್ಧಾಂತಕ್ಕೆ ಬಂದು ತಲುಪುತ್ತೇವೆ. ಕೇವಲ ಈ ಧರ್ಮದ ಅನುಶೀಲನೆಯಿಂದಾಗಿಯೇ ಮಾನವನು ಶಾಶ್ವತ ಸುಖ ಇಲ್ಲವೆ ಪರಮ ಶಾಂತಿಯನ್ನು ಪಡೆಯಬಲ್ಲನು.

ಯಾವಾಗ ಬ್ರಹ್ಮನನ್ನು ಪಡೆಯುವುದೇ ಮಾನವನ ನಿಜ ವಿಶೇಷತೆ ಇಲ್ಲವೆ ಧರ್ಮವಾಗಿದ್ದರೆ, ಆಗ ಬ್ರಹ್ಮನು ಇರುವನೋ, ಇಲ್ಲವೋ? ಎಂಬುದನ್ನೂ ನೋಡಬೇಕಾಗುತ್ತದೆ. ಏಕೆಂದರೆ, ಯಾವ ವಸ್ತುವಿನ ಅಸ್ತಿತ್ವವೇ ಇಲ್ಲವೋ, ಅದನ್ನು ಪಡೆಯುವ ಎಲ್ಲ ಪ್ರಯತ್ನಗಳೂ ವ್ಯರ್ಥವಷ್ಟೇ? ಇನ್ನು ಒಂದು ವೇಳೆ, ಬ್ರಹ್ಮನು ಇರುವುದಾದರೆ, ಅವನನ್ನು ಅರಿಯುವುದು ನಮಗೆ ಅವಶ್ಯವಾಗಿದೆಯೇ?

ಮೇಲು–ನೋಟದಿಂದ, ಸ್ಥೂಲ ಇಂದ್ರಿಯಗಳನ್ನೇ ಯಾವನೊಬ್ಬ ವ್ಯಕ್ತಿಯ ಎಲ್ಲ ಕಾರ್ಯಗಳ ಕರ್ತಾರ ಎಂದು ತಿಳಿಯುತ್ತೇವೆ. ಇಂದ್ರಿಯಗಳ ಸಂಖ್ಯೆಯು ಒಟ್ಟು ಹತ್ತು. ವಿಶೇಷ ವ್ಯಕ್ತಿಯ ಎಲ್ಲ ಕಾರ್ಯಗಳ ಎಲ್ಲ ಕರ್ತಾರರ ರೂಪದಲ್ಲಿ ಇವು ಕಾಣಬಂದರೂ ಸಹ, ವಾಸ್ತವದಲ್ಲಿ ಇವುಗಳೇನೂ ಕರ್ತಾರರಲ್ಲ. ಮನವು ನಿಷ್ಕ್ರಿಯವಾದರೆ ತೀರಿತು; ಇಂದ್ರಿಯಗಳು ತಾವಾವ ಕಾರ್ಯವನ್ನೂ ಮಾಡಲಾರವು.

ಮನವೇ ಕರ್ಮವನ್ನು ಮಾಡುತ್ತದೆ. ಇಂದ್ರಿಯಗಳು ಕೇವಲ ಅದರ ಮಾಧ್ಯಮಗಳಷ್ಟೇ. ಇಂದ್ರಿಯಗಳ ಮಾಧ್ಯಮದಿಂದ, ಮನದೊಳಗೆ ಉದ್ಭೂತವಾದ ಕರ್ಮಗಳು ಹೊರಗೆ ಪ್ರಕಟವಾಗುತ್ತವೆ. ಉದಾಹರಣೆಗೆ ನೋಡಿರಿ; ಪುಸ್ತಕವನ್ನೋದುವ ಕಾರ್ಯವನ್ನು ಚಕ್ಷುರಿಂದ್ರಿಯದ ಮಾಧ್ಯಮದಿಂದ ಮನವೇ ಮಾಡುತ್ತದೆ. ಮನದ ನಿಷ್ಕ್ರಿಯ ಅವಸ್ಥೆಯಲ್ಲಿ ಚಕ್ಷುರಿಂದ್ರಿಯವು ನೋಡಲಾರದು. ಹೇಗೆಂದರೆ, ಚೇತನಾ ಹೀನ ಅವಸ್ಥೆಯಲ್ಲಿ ಚಕ್ಷುವು

ಸ್ವತಂತ್ರವಾಗಿ ಮತ್ತು ಅವಿಕೃತವಾಗಿ ಇದ್ದರೂ ಸಹ, ಮನದಿಂದ ಅಗಲಿರುವುದರಿಂದಾಗಿ, ಅದರ ಸ್ವಾಭಾವಿಕ ಕಾರ್ಯವು ನಿಲ್ಲುತ್ತದೆ. ಈ ಕಾರಣ, ಅಚೇತನಗೊಳಿಸುವ ಔಷಧದ ಪ್ರಭಾವದಿಂದ ಅಂಗ-ಪ್ರತ್ಯಂಗಗಳು ಅಥವಾ ಇಂದ್ರಿಯಸಮೂಹವು ಪೂರ್ಣವಾಗಿ ಅವಿಕೃತವಿದ್ದರೂ ಸಹ ನಿಷ್ಕ್ರಿಯವಾಗಿರುತ್ತವೆ. ಬಹುತೇಕ, ಯಾವುದೇ ವಿಶೇಷ ಭಾವದಿಂದ ಆವೇಶಗೊಂಡಿದ್ದರೆ, ನಾವು ಎದುರಿಗಿರುವ ವ್ಯಕ್ತಿಯನ್ನೇ ಗುರುತಿಸುವುದಿಲ್ಲ. ಇಲ್ಲವೆ ತಮ್ಮ ಬಂಧುವನ್ನು ಗುರುತಿಸುವಲ್ಲಿಯೂ ವಿಳಂಬವಾಗುತ್ತದೆ. ಇದರ ಒಂದೇ ಕಾರಣವೆಂದರೆ, ಯಥಾರ್ಥ ಕರ್ತ್ತಾ ಆದ ಮನದ ನಿಷ್ಕ್ರಿಯತೆ. ಅದೇ ರೀತಿ, ಅದರ ಮಾಧ್ಯಮವಾದ ಇಂದ್ರಿಯದ ಅಲಕ್ಷ್ಯ ಅರ್ಥಾತ್ ಪರಿವೆಯಿಲ್ಲದಿರುವಿಕೆ.

ಈಗ, ಕರ್ಮದ ಯಥಾರ್ಥ ಕರ್ತ್ತಾ ಆದ ಮನವು ಯಾವ ಪ್ರಕಾರ ಕಾರ್ಯ ಮಾಡುತ್ತದೆ? ಎಂಬುದನ್ನು ನೋಡುವಾ. ಪುಸ್ತಕವನ್ನು ನೋಡುವ ಕರ್ಮವು ಇಂದ್ರಿಯದ ಮಾಧ್ಯಮದಿಂದ ಮನದ ಒಂದು ವಿಶೇಷ ಕಾರ್ಯವಾಗಿದೆ. ಪುಸ್ತಕವನ್ನು ನೋಡುವ ಕಾಲಕ್ಕೆ ಮನವು ಕಣ್ಣಿನ ಸಹಾಯದಿಂದ ಪುಸ್ತಕ ರೂಪದ ವಸ್ತುವಿನ ಆಕೃತಿಯನ್ನು ಧಾರಣ ಮಾಡುತ್ತದೆ. ಚಕ್ಷು ಪಟದ ಮೇಲೆ ಮೂಡಿದ ಪ್ರತಿಬಿಂಬದಿಂದ ಮನದ ಮೂಲಕ ಗೃಹಿಸಲ್ಪಟ್ಟ ಈ ಆಕೃತಿಯು ಒಂದು ಭಿನ್ನ ವಸ್ತುವಾಗಿದೆ. ಏಕೆಂದರೆ, ಕಣ್ಣು ಮುಚ್ಚಿಕೊಂಡ ಮೇಲೆಯೂ ಸಹ, ಒಂದು ವೇಳೆ, ಮನವು ಇಚ್ಛಿಸಿದರೆ, ಸಾಕು, ಪುಸ್ತಕದ ಆಕಾರವನ್ನು ಧಾರಣ ಮಾಡಬಲ್ಲದು. ಆದರೆ, ಮನವೇ ನಿಷ್ಕ್ರಿಯವಾದರೆ, ಚಕ್ಷುವು ಕರ್ಮ ಮಾಡಲಾರದು. ಅದೂ ನಿಷ್ಕ್ರಿಯವಾಗಿ ಬಿಡುತ್ತದೆ. ಅಂದಮೇಲೆ, ಪುಸ್ತಕವನ್ನು ನೋಡುವ ಕಾಲಕ್ಕೆ ಮನದ ಒಂದು ಅಂಶವೇ ಪುಸ್ತಕದ ರೂಪವನ್ನು ಧಾರಣ ಮಾಡುತ್ತದೆ. ಮತ್ತು ಮನದ ಆ ಅಂಶವನ್ನು ಚಿತ್ತ ಎಂದು ಕರೆಯುತ್ತಾರೆ. ಚಿತ್ತವು ಪುಸ್ತಕದ ಆಕಾರವನ್ನು ಧಾರಣಮಾಡಿದ ಬಳಿಕ ಸಹ ನೋಡುವ ಕಾರ್ಯವನ್ನು ಚಿತ್ತವನ್ನು ಹೊರತುಪಡಿಸಿ, ಬೇರೊಂದು ಸತ್ತೆಯು ಮಾಡುತ್ತದೆ. ಮನದ ಯಾವ ಅಂಶವು ಈ ನೋಡುವ ಕರ್ಮವನ್ನು ಮಾಡುವುದೋ, ಅದನ್ನು ಅಹಂ ತತ್ತ್ವವೆಂದು ಕರೆಯುತ್ತಾರೆ. ಆದರೆ, "ನಾನು"ವಿನ ಅಸ್ತಿತ್ವವು ಇಲ್ಲದಿದ್ದರೆ, "ನಾನು" ಯಾವುದೇ ಕರ್ಮದ ಕರ್ತ್ತಾ ಎಂತಾಗಬಲ್ಲದು? ಆದ್ದರಿಂದ ಚಿತ್ತ ಮತ್ತು ಅಹಂ ತತ್ತ್ವಗಳ ಹೊರತು ಇನ್ನೂ ಒಂದು ಸತ್ತೆ ಇದೆ; ಎಂಬುದನ್ನು ಅವಶ್ಯವಾಗಿ ಒಪ್ಪಿಕೊಳ್ಳಲೇ ಬೇಕಾಗುತ್ತದೆ. "ನಾನು"ವಿನ ಅಸ್ತಿತ್ವವನ್ನು ಪ್ರಮಾಣಿಸುವ ಈ ಮೂರನೆಯ



ಅಂಶಕ್ಕೆ ಮಹತ್ತತ್ತ್ವ ಎಂದು ಹೆಸರಿಸಲಾಗಿದೆ. ಅಸ್ತಿತ್ವ ಬೋಧೆ ಇಲ್ಲವೆ ಆತ್ಮ ಬೋಧೆಯು ಇಲ್ಲದಿದ್ದರೆ, ಯಾವ ಕರ್ಮವೂ ಆಗಲಾರದು. ಮತ್ತು ಮಹತ್ತತ್ತ್ವವೇ ಈ ಬೋಧೆಯನ್ನು ಉಂಟುಮಾಡುತ್ತದೆ. ಈ ಅಂಶಗಳ ಸಾಮೂಹಿಕ ಹೆಸರೇ ಮನ ಇಲ್ಲವೇ ಅಂತಃಕರಣವಾಗಿದೆ. ಮತ್ತು ಒಂದೊಂದು ಅಂಶವು ಮನದ ಒಂದೊಂದು ಭಾವದ ಕೇವಲ ಅಭಿವ್ಯಕ್ತಿಯಾಗಿದೆ. ಈ ಮನದ ಮೂಲಕವೇ ನೋಡುವ ಕರ್ಮವು ಘಟಿಸುತ್ತದೆ. ಇದಕ್ಕೇ ಮನದಲ್ಲಿ ರೂಪ ತನ್ಮಾತ್ರೆಗಳ ರೂಪಾಂತರಿತವಾಗುವುದು, ಎಂದು ಹೇಳಬಹುದಾಗಿದೆ.

ತನ್ಮಾತ್ರೆ ಎಂಬ ಹೊಸದೊಂದು ಶಬ್ದವು ಬಳಕೆಯಲ್ಲಿ ಬಂದಿತಷ್ಟೇ. ಇದರಿಂದ ಇದರ ವಿಷಯದಲ್ಲಿಯೂ ಸ್ವಲ್ಪ ಹೇಳುವುದು ಆವಶ್ಯಕವೆನಿಸುತ್ತದೆ. ಇಂದ್ರಿಯಗಳ ಮಾಧ್ಯಮದಿಂದ ಸ್ಥೂಲ ವಸ್ತುವನ್ನು ಸೂಕ್ಷ್ಮ ರೂಪದಿಂದ ಮಾನಸಪಟದ ಮೇಲೆ ಗ್ರಹಣ ಮಾಡುವುದನ್ನೇ ತನ್ಮಾತ್ರೆ ಎಂದು ಕರೆಯುತ್ತಾರೆ. ಇನ್ನಷ್ಟು ವಿಶದವಾಗಿ ತಿಳಿದುಕೊಳ್ಳಲಿಕ್ಕೋಸುಗ, ಚಕ್ಷುರಿಂದ್ರಿಯದ ಸಹಾಯದಿಂದ ವಸ್ತುವಿನ ದರ್ಶನ ಕಾಲದಲ್ಲಿ ರೂಪ ತನ್ಮಾತ್ರೆಯ(ಭಾವ ಗ್ರಾಹಿ ಚಾಕ್ಷುಸ ನಾಡಿಗಳ ಸ್ಪಂದನದ ಸಂಗಾತದಿಂದ ವಸ್ತುವಿನ ಸೂಕ್ಷ್ಮರೂಪದ ಧಾರಣೆ) ಸೂಕ್ಷ್ಮದ ಸಹಾಯದಿಂದಲೇ ಮಾನಸ ಪಟದ ಮೇಲೆ ವಸ್ತುವಿನ ರೂಪ ಧಾರಣವಾಗುತ್ತವೆ. ಆದರೆ ಕಣ್ಣುಮುಚ್ಚಿಕೊಂಡಾಗ ಹಾಗೂ ಕತ್ತಲೆ ಇರುವಾಗ, ಮಾನವನು ಸ್ಪರ್ಶದ ಮೂಲಕ ಸಹ, ವಸ್ತುವಿನ ಅನುಭವ ಪಡೆಯುತ್ತಾನೆ. ಈ ಅವಸ್ಥೆಯಲ್ಲಿ ಸ್ಪರ್ಶತನ್ಮಾತ್ರೆ ಎಂಬ ಹೆಸರಿನ ಇನ್ನೊಂದು ತನ್ಮಾತ್ರೆಯ ಸಹಾಯದಿಂದ ವಸ್ತುವಿನ ಬೋಧೆಯಾಗುತ್ತದೆ. ಮತ್ತೆ ದರ್ಶನ ಹಾಗೂ ಸ್ಪರ್ಶಗಳ ಸೀಮೆಯಿಂದ ಹೊರಗೆ ಹೋದ ಮೇಲೂ ಸಹ ವಸ್ತುವಿನ ಬೋಧೆಯು ಮಾನಸಿಕ ಅನುಭೂತಿಯ ಮೂಲಕ ಆಗುವ ಸಂಭವವಿದೆ. ಅಹಂ ತತ್ತ್ವದ ಇಚ್ಛೆಗೆ ಅನುಸರಿಸಿಯೇ ಚಿತ್ತವು ತನ್ಮಾತ್ರೆಯ ರೂಪವನ್ನು ಧಾರಣ ಮಾಡುತ್ತದೆ. ನೋಡುವ ಕರ್ಮ ಹಾಗೂ ವಸ್ತುವಿನ ನಿರೂಪಣೆಗಳು ಅಹಂ ತತ್ತ್ವದ ಮೇಲೆಯೇ ಅವಲಂಬಿಸಿವೆ. ಏಕೆಂದರೆ, ಚಿತ್ತವು ಸ್ವತಃ ಯಾವುದೇ ಕ್ರಿಯೆಯನ್ನು ಮಾಡಲಾರದು. ಅಹಂ ತತ್ತ್ವ ಇಲ್ಲವೆ ಮನದ ಕ್ರಿಯಾಶೀಲ ಅಂಶದ ದರ್ಶನದ ಇಚ್ಛೆಯಿಂದ ಚಿತ್ತವು ದೃಷ್ಟಿ ಸ್ನಾಯುಗಳೊಂದಿಗೆ ಸಾನ್ನಿಧ್ಯ ಲಾಭ ಪಡೆಯುತ್ತದೆ. ಕಣ್ಣು ವಸ್ತುವಿನ ರೂಪ ತನ್ಮಾತ್ರೆಯನ್ನು ಗ್ರಹಿಸುತ್ತದೆ. ಸುತ್ತುಮುತ್ತಿನ ವಸ್ತುಗಳಿಂದ ತನ್ಮಾತ್ರೆಗಳು ಯಾವಾಗಲೂ ಪ್ರವಹಿಸುತ್ತಿರುತ್ತವೆ. ಮತ್ತು ಈ ತನ್ಮಾತ್ರೆಗಳ ತರಂಗಗಳು ಚಕ್ಷುವಿನ ಮಾಧ್ಯಮ

ದಿಂದ ಚಿತ್ತದಲ್ಲಿ ಅಪ್ಪಳಿಸುತ್ತವೆ. ಈ ಸಂಘರ್ಷದ ಫಲವಾಗಿ ಚಿತ್ತವು ವಸ್ತುವಿನ ರೂಪವನ್ನು ಧಾರಣ ಮಾಡುತ್ತದೆ. ಮತ್ತು ಅಹಂ ತತ್ತ್ವವು ಅದನ್ನು ನೋಡುತ್ತದೆ. ಇದೇ ಪ್ರಕಾರ, ಯಾವಾಗ ಅಹಂ ತತ್ತ್ವವು ಸ್ವಲ್ಪ ನೋಡ ಬಯಸುವುದೋ ಆಗ ಅದು ಚಿತ್ತವನ್ನು ಕರ್ಣೇಂದ್ರಿಯದ ಸಾನ್ನಿಧ್ಯಲಾಭ ಪಡೆದುಕೊಳ್ಳಲು ಪ್ರೇರೇಪಿಸುತ್ತದೆ. ಮತ್ತು ಶ್ರವಣೇಂದ್ರಿಯವು ಸ್ಥೂಲ ವಸ್ತುಗಳಿಂದ ಶಬ್ದ ತರಂಗಗಳ ಮಾಧ್ಯಮದಿಂದ ಶಬ್ದ ತನ್ಮಾತ್ರೆಗಳನ್ನು ಗ್ರಹಿಸಿಕೊಳ್ಳುತ್ತದೆ. ತನ್ಮಾತ್ರೆಗಳ ಮೇಲೆ ಏಕಾಗ್ರವಾಗುವುದರಿಂದ ಚಿತ್ತವು ತಾನೇ ಶಬ್ದಗಳಲ್ಲಿ ರೂಪಾಂತರಿತವಾಗುತ್ತದೆ. ಮತ್ತು ಅಹಂ ತತ್ತ್ವವು ಅದೇ ಶಬ್ದವನ್ನು ಕೇಳುತ್ತದೆ. ಅರ್ಥಾತ್, ಅಹಂ ತತ್ತ್ವವು ಏನನ್ನು ಬಯಸುವುದೋ, ಇಲ್ಲವೆ ಮಾಡುವುದೋ, ಅದೇ ರೂಪವನ್ನು ಚಿತ್ತವು ಧಾರಣ ಮಾಡುತ್ತದೆ. ಇದರಿಂದ ಅಹಂ ತತ್ತ್ವದ ಮೂಲಕ ಮಾಡಲಾದ ಸಕಲ ಕಾರ್ಯಗಳ ಅಭಿಪ್ರಕಾಶವು ಚಿತ್ತವನ್ನೇ ಅವಲಂಬಿಸಿದೆ.

ಈ ಮೊದಲೇ ಹೇಳಿರುವಂತೆ, ಚಿತ್ತ, ಅಹಂ ತತ್ತ್ವ ಮತ್ತು ಮಹತ್ತತ್ತ್ವ ಇಲ್ಲವೆ ಬುದ್ಧಿ ತತ್ತ್ವಗಳ ಸಾಮೂಹಿಕ ರೂಪವೇ ಮನವಾಗಿದೆ. ಅಹಂ ತತ್ತ್ವದ ನಿರ್ದೇಶನದಿಂದ ಚಿತ್ತವು ವಸ್ತುವಿನ ಭಾವವನ್ನು ತಾಳುತ್ತದೆ ಮತ್ತು ಅಹಂ ತತ್ತ್ವವು ಕೇವಲ ಕರ್ಮ ಮಾಡುತ್ತದೆ. "ನಾನು ಇದ್ದೇನೆ" ಬೋಧೆಯು ಮಾನಸ ಭೂಮಿಯ ಚೇತನಾ ಪೂರ್ಣ ಮಹತ್ತತ್ತ್ವ ಇಲ್ಲವೆ ಬುದ್ಧಿ ತತ್ತ್ವದಿಂದ ಉದ್ಭೂತವಾಗಿ ಅಹಂ ತತ್ತ್ವ ಮತ್ತು ಚಿತ್ತಗಳನ್ನು ಕಾರ್ಯಾನ್ವಿತಗೊಳಿಸುತ್ತದೆ. ಅಹಂ ತತ್ತ್ವದ ಪ್ರಭಾವದಿಂದ ಚಿತ್ತವು ವಸ್ತುವಿನ ರೂಪವನ್ನು ಧಾರಣಮಾಡಿದ ಮೇಲೂ ಸಹ, ಅಸ್ತಿತ್ವ ಬೋಧೆಯನ್ನುಂಟುಮಾಡುವ "ನಾನು"ವಿನ ಅಭಾವದಲ್ಲಿ ವಸ್ತುವಿನ ಅನುಭೂತಿಯಾಗದು. ಮನದೊಳಗೆ ಅಸ್ತಿತ್ವ ಬೋಧೆಯನ್ನುಂಟುಮಾಡುವ "ನಾನು"ವಿನ ಹಿಂದೆ "ಜ್ಞಾತಾ", "ದೃಷ್ಟಾ" ಇಲ್ಲವೇ "ಅಧಿಕಾರಿ ನಾನು"ಗಳ ರೂಪದಲ್ಲಿ ಯಾವ "ಮನದಾಚೆಯ ನಾನು" ಇದೆಯೋ, ಅದುವೇ ಎಲ್ಲ ಕರ್ಮಗಳ ನಿಜವಾದ ಕರ್ತಾ ಅಗಿದೆ. ಮತ್ತು ಮನದ ಅಸ್ತಿತ್ವವೂ ಸಹ ಅದರ ಮೇಲೆಯೇ ಅವಲಂಬಿಸಿದೆ. ಮನದ ಈ "ದ್ರಷ್ಟಾ ನಾನು"ವಿಗೇ ಅಣು ಚೈತನ್ಯ ಇಲ್ಲವೇ ಆತ್ಮಾ ಎಂದು ಕರೆಯುತ್ತಾರೆ. ಈ ಪ್ರಕಾರ ಸೂಕ್ಷ್ಮ ರೂಪದಿಂದ ವಿಚಾರ ಮಾಡಿದ ಬಳಿಕ ಅಣು ಚೈತನ್ಯ ಮತ್ತು ಮನ, ಇವುಗಳೆರಡೂ ಪೃಥಕ್ ಸತ್ತೆಗಳಾಗಿವೆ, ಎಂಬ ಸಿದ್ಧಾಂತಕ್ಕೆ ನಾವು ತಲುಪುತ್ತೇವೆ.



ಆದರೆ ಆತ್ಮಾ ಮತ್ತು ಮನಗಳು ಎರಡು ಪೃಥಕ್ ಸತ್ತೆಗಳಾಗಿದ್ದರೂ ಸಹ, ಇವೆರಡೂ ಒಂದರೊಡನೊಂದು ಸೇರಿಕೊಂಡಿವೆ. ಮನದ "ಕ್ರಿಯಾನ್ವಿತ ನಾನು" ಹಾಗೂ ತನ್ಮಾತ್ರೆಗಳ ಮಾಧ್ಯಮದಿಂದ ವಸ್ತುವಿನ ರೂಪ ಧಾರಣ ಮಾಡುವ "ಚೈತ್ತಿಕ ನಾನು", "ಅಸ್ತಿತ್ವ ಬೋಧಕ ನಾನು"ವಿನ ಉಪಸ್ಥಿತಿಯ ಸಾಪೇಕ್ಷವಾಗಿದೆ. "ಅಸ್ತಿತ್ವ ಬೋಧ ಮಾಡಿಸುವ ನಾನು"ವನ್ನು ಸಾಕ್ಷೀರೂಪ ಆತ್ಮಾ ಇಲ್ಲವೆ, ಅಣುಚೈತನ್ಯ ಎಂದು ಕರೆಯುತ್ತಾರೆ. ಯಾವ "ನಾನು"ವು ಅಸ್ತಿತ್ವ ಬೋಧೆಯನ್ನು ಮಾಡಿಸುವುದೋ, ಹಾಗೂ ಆತ್ಮದ ಉಪಸ್ಥಿತಿಯನ್ನು ಸಿದ್ಧಪಡಿಸುವುದೋ, ಅದು ಮಹತ್ತತ್ತ್ವ, ಯಾವ "ನಾನು" ಕಾರ್ಯ ಮಾಡುವುದೋ ಅದು ಅಹಂ ತತ್ತ್ವ. ಇನ್ನು ಯಾವ "ನಾನು" ಇಲ್ಲವೆ ಮನದ ಯಾವ ಅಂಶವು ವಸ್ತುವಿನ ರೂಪಧಾರಣ ಮಾಡುವುದೋ, ಅದು ಚಿತ್ತ ಎಂದು ಕರೆಯಲ್ಪಡುತ್ತದೆ. ಅರ್ಥಾತ್ ಒಂದೇ ನಾನು, ಬೇರೆ ಬೇರೆ ಸ್ತರಗಳಲ್ಲಿ ಗುಣ ಬಂಧನದ ಭೇದದಿಂದ ಬೇರೆ ಬೇರೆ ಅವಸ್ಥೆಗಳಲ್ಲಿ ಪಡೆಯುತ್ತವೆ. ಈಗ ಒಂದೇ ನಾನು ಯಾವ ಪ್ರಕಾರ ಬೇರೆ ಅವಸ್ಥೆಗಳಲ್ಲಿ ಕಾರ್ಯ ಮಾಡುತ್ತದೆ. ಎಂಬುದನ್ನು ಹೇಳುವುದು ಅವಶ್ಯವಿದೆ. "ನಾನು ಇದ್ದೇನೆ" ಎಂದು ಹೇಳಿದ ಮೇಲೆ, "ನಾನು ಇದ್ದೇನೆ, ಎಂಬುದನ್ನು ನಾನು ತಿಳಿಯುತ್ತೇನೆ" ಎಂಬ ಸಾಕ್ಷೀ ಸ್ವರೂಪ ಸತ್ತೆಯೊಂದರ ಉಪಸ್ಥಿತಿಯನ್ನು ಮೊದಲೇ ಒಪ್ಪಬೇಕಾಗುತ್ತದೆ. ಆದರೆ ಈ "ನಾನು ಇದ್ದೇನೆ"ಯ "ನಾನು" ಆತ್ಮನಿಂದ ಭಿನ್ನ ಸತ್ತೆಯಾಗಿದೆ. ಏಕೆಂದರೆ ಈ "ನಾನು", ಆತ್ಮನ ಉಪಸ್ಥಿತಿಯನ್ನು ಸಿದ್ಧಪಡಿಸುತ್ತದೆ. ಆದ್ದರಿಂದ, ಮಹತ್ತಾತ್ತ್ವಿಕ ಬೋಧವನ್ನು ಉಂಟು ಮಾಡಲಿಕ್ಕೋಸುಗ, ಚೈತನ್ಯದ ಉಪಸ್ಥಿತಿಯನ್ನು ಒಪ್ಪಲೇಬೇಕಾಗುತ್ತದೆ. ಅರ್ಥಾತ್ ಆತ್ಮನಲ್ಲಿ ಮಹತ್ತತ್ತ್ವವು ಅದೇ ಭಾವದಿಂದ ಇರಲಾರದು.

ಆದರೆ ಸಾಕ್ಷೀ ಸತ್ತೆ ಹಾಗೂ ವಿಕಸಿತ 'ನಾನುವಿನ ಬೋಧ'ಗಳು, ಆ ಒಂದೇ ನಾನುವಿನ ಕಾರ್ಯ ರೂಪಾನುಸಾರ ಬೇಧಗಳಷ್ಟೇ ಸರಿ. ವಾಸ್ತವದಲ್ಲಿ ಸಾಕ್ಷೀ ಸತ್ತೆಯಾದ, ಚೆತನ್ಯ ಸ್ವರೂಪ ನಾನುವೇ ತನ್ನನ್ನು 'ನಾನು ಇದ್ದೇನೆ'ಯ ನಾನುವಿನಲ್ಲಿ ಇಲ್ಲವೆ ಮಹತ್ತಾತ್ತ್ವಿಕ ನಾನುವಿನಲ್ಲಿ ಅಭಿವ್ಯಕ್ತಗೊಳಿಸಿ, ತನ್ನ ಅಸ್ತಿತ್ವವನ್ನು ಸಿದ್ಧಪಡಿಸುತ್ತದೆ. ಅರ್ಥಾತ್ ಅಣುಚೈತನ್ಯವೇ ಇನ್ನೊಂದು ಅವಸ್ಥೆಯಲ್ಲಿ ಮಹತ್ತತ್ತ್ವವೆಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ತೆರನಾಗಿ, ಅಣು ಚೈತನ್ಯವು ಬೇರೆ ಬೇರೆ ರೂಪದಿಂದ ಕಾರ್ಯ ಮಾಡುವ

ಗುಣದಿಂದ ಗುಣಾನ್ವಿತವಾಗಿದೆ. ಈ ಗುಣವೇ ಚೈತನ್ಯವಲ್ಲ. ಏಕೆಂದರೆ, ಹಾಗಾಗಿದ್ದರೆ, ಅಣುಚೈತನ್ಯವು ಮಹತ್ತತ್ತ್ವದಲ್ಲಿ ರೂಪಾಂತರಿತವಾಗಬೇಕಾಗಿದ್ದಿಲ್ಲ. ಅಂದ ಮೇಲೆ, ಆತ್ಮದಲ್ಲಿ ಚೈತನ್ಯ ಮತ್ತು ಅದರ ಗುಣ, ಈ ಎರಡೂ ಪೃಥಕ್ ಸತ್ತೆಗಳಿವೆ. ಇದಲ್ಲದೆ ಗುಣಬಂಧನದ ಕಾರಣ ಸ್ವರೂಪವಾಗಿ, ಅವಶ್ಯವಾಗಿಯೇ, ಯಾವುದೋ ಬೇರೊಂದು ಸತ್ತೆಯ ಅಸ್ತಿತ್ವವಿದೆ. ಗುಣ ಬಂಧನದ ಮೂಲಕ ಆತ್ಮನ ಸ್ಥೂಲ ಅಭಿವ್ಯಕ್ತಿಯು ಯಾವ ಸತ್ತೆಯ ಕಾರಣದಿಂದ ಆಗುವುದೋ, ಅದನ್ನೇ ಪ್ರಕೃತಿ ಎನ್ನುತ್ತಾರೆ. ಅರ್ಥಾತ್ ಪ್ರಕೃತಿಯ ಪ್ರಭಾವದಿಂದ ಆತ್ಮನು ಮಹತ್ತತ್ತ್ವದಲ್ಲಿ ಅಭಿವ್ಯಕ್ತವಾಗುತ್ತಾನೆ.

ಪ್ರಕೃತಿಯು ಏನಿದೆ? ಪ್ರಾಕೃತ ಸತ್ತೆಗಳ ಸಮೂಹದ ನಿಯಾಮಕ ಸತ್ತೆಯೇ ಪ್ರಕೃತಿಯಾಗಿದೆ. ಪ್ರಕೃತಿಯು ಸ್ವಭಾವ ಇಲ್ಲವೆ ಗುಣವೇನಲ್ಲ. ಉದಾಹರಣೆ: ಸುಡುವ ಶಕ್ತಿಯನ್ನು ಅಗ್ನಿಯ ಸ್ವಭಾವ, ಗುಣ ಇಲ್ಲವೆ ಅದರ ಸ್ವಂತ ವಿಶೇಷತೆಯೆಂದು ಹೇಳುತ್ತಾರೆ. ಆದರೆ, ಅಗ್ನಿಯನ್ನು ಈ ಗುಣದಿಂದ ಗುಣಾನ್ವಿತಗೊಳಿಸುವ ಯಾವುದಾದರೂ ಬೇರೊಂದು ಸತ್ತೆಯು ಅವಶ್ಯವಾಗಿ ಇದ್ದೇ ಇದೆ. ಈ ಪ್ರಕಾರ; ಆತ್ಮನೂ ಸಹ, ಯಾವುದೋ ಬೇರೊಂದು ಸತ್ತೆಯಿಂದ ಗುಣಾನ್ವಿತನಾಗುತ್ತಾನೆ. ಆತ್ಮಾ ಇಲ್ಲವೆ ಅಣುಚೈತನ್ಯವನ್ನು ಗುಣಾನ್ವಿತಗೊಳಿಸುವ ಈ ಸತ್ತೆಯೇ ಪ್ರಕೃತಿಯಾಗಿದೆ. ಅಭಿವ್ಯಕ್ತವಾದ ಗುಣವೇ ಪ್ರಕೃತಿಯಲ್ಲ. ಪ್ರಕೃತಿಯು ಒಂದು ಸಂಸ್ಕೃತ ಶಬ್ದ. ಪ್ರ + ಕೃ + ಕ್ತಿನ್ = ಪ್ರಕೃತಿ. ಇದರ ಅರ್ಥವೆಂದರೆ, ವಿಶೇಷ ರೂಪದಿಂದ ಪ್ರಕಾರಗಳನ್ನು ನಿರ್ಮಿಸುವುದು. ಪ್ರಕೃತಿಯ ಮೂಲಕ ಗುಣಾನ್ವಿತವಾದ ಮೇಲೂ ಸಹ, ಅಣುಚೈತನ್ಯದ ಅಸ್ತಿತ್ವವು ಸಿದ್ಧವಾಗುತ್ತದೆ. ಅರ್ಥಾತ್ ಪ್ರಕೃತಿಯು ಸ್ವರೂಪದ ಉಪಲಬ್ಧಿಗಾಗಿಯೇ ಇನ್ನೊಂದನ್ನು ಗುಣಾನ್ವಿತಗೊಳಿಸುತ್ತದೆ. ಆದ್ದರಿಂದ, ಅದೊಂದು ವಿಶೇಷ ಕ್ರಿಯಾಶೀಲ ಶಕ್ತಿಯಾಗಿದೆ. ಈ ಪ್ರಕೃತಿಯ ಪ್ರಭಾವದಿಂದಲೇ ಆತ್ಮನು ಬೇರೆ ಬೇರೆ ಕಾರ್ಯ ಮಾಡುವ ರೂಪವನ್ನು ಧಾರಣ ಮಾಡುತ್ತಾನೆ. ಪ್ರಕೃತಿಯು ಒಂದು ವಿಶೇಷ ಶಕ್ತಿಯಾಗಿದೆ. ಈಗ, ಅದು ಯಾರ ಶಕ್ತಿ? ಎಂಬ ಪ್ರಶ್ನೆ ಏಳುತ್ತದೆ. ಪ್ರಕೃತಿಯು ಆತ್ಮಿಕ ಶಕ್ತಿಯಾಗಿದೆ. ಮತ್ತು ಆತ್ಮಿಕ ಪ್ರಭಾವದಿಂದಾಗಿಯೇ ಅದು ಪ್ರಭಾವಿತವಾಗುತ್ತದೆ. ಹಾಗೂ ಗುಣಾನ್ವಿತವಾಗುತ್ತದೆ. ಆತ್ಮಿಕ ಸತ್ತೆಯಲ್ಲಿಯೇ ಪ್ರಕೃತಿಯು ನೆಲೆಯಿದೆ. ವಾಸ್ತವದಲ್ಲಿ ಅಗ್ನಿ ಮತ್ತು ಅದರ ಸುಡುವ ಶಕ್ತಿಯು ಸಮಾನವಾಗಿಯೇ, ಈ ಎರಡರ ಸಂಪರ್ಕವೂ ಅವಿಭಾಜ್ಯವಾಗಿದೆ. ವಿಶೇಷ ವಸ್ತುವಿನ



ಸ್ವಂತ ವಿಶೇಷತೆಯು ಯಾವ ಕ್ರಿಯಾಶೀಲ ಶಕ್ತಿಯ ಪ್ರಭಾವವನ್ನು ಅವಲಂಬಿಸಿರುವುದೋ, ಆ ಶಕ್ತಿಯ ಅಭಾವದಲ್ಲಿ ವಸ್ತುವಿನ ಅಸ್ತಿತ್ವವೇ ಸಿದ್ಧವಾಗುವುದಿಲ್ಲ. ಅಂದ ಮೇಲೆ, ಪ್ರಕೃತಿಯ ಅಭಾವದಲ್ಲಿ ಅಣುಚೈತನ್ಯದ ಸತ್ತೆಯೇ ಕಾಣಬಹುದು.

ಗುಣಾನ್ವಿತವಾಗುವುದರಿಂದ, 'ನಾನು ಇದ್ದೇನೆ' ಬೋಧೆಯು ಉತ್ಪನ್ನವಾಗುತ್ತಿರುವಂತೆಯೇ, ಸಾಕ್ಷೀ ಸತ್ತೆಯಾದ ಅಣುಚೈತನ್ಯದಲ್ಲಿ ಅಸ್ತಿತ್ವ ಬೋಧೆಯು ಎದ್ದೇಳುತ್ತದೆ. ಯಾವ ಗುಣದಿಂದ ಗುಣಾನ್ವಿತವಾಗಿ ಪ್ರಕೃತಿಯು ಅಣುಚೈತನ್ಯದಲ್ಲಿ ಅಸ್ತಿತ್ವ ಬೋಧೆಯನ್ನು ಉಂಟು ಮಾಡುವುದೋ, ಅದಕ್ಕೇ ಸತ್ತ್ವಗುಣವೆನ್ನುತ್ತಾರೆ. ಮತ್ತು ಇದರ ಫಲವಾಗಿ ಮನದ ಯಾವ ಅಂಶವು ಸೃಷ್ಟವಾಗುವುದೋ, ಅದಕ್ಕೆ ಮಹತ್ತತ್ತ್ವ ಇಲ್ಲವೆ ಬುದ್ಧಿ ತತ್ತ್ವವೆನ್ನುತ್ತಾರೆ. ಅರ್ಥಾತ್ ಸತ್ತ್ವಗುಣದ ಪ್ರಭಾವದಿಂದಲೇ ಅಣು ಚೈತನ್ಯವು ತನ್ನೊಳಗೆ ಬುದ್ಧಿ ತತ್ತ್ವ ಇಲ್ಲವೆ ಮಹತ್ತತ್ತ್ವವನ್ನು ಸೃಷ್ಟಿಸುತ್ತದೆ.

ಎಲ್ಲ ಕಾರ್ಯಗಳು ಅಸ್ತಿತ್ವ ಸಾಪೇಕ್ಷವಾಗಿವೆ. ಅಂದರೆ ಅಸ್ತಿತ್ವವನ್ನೇ ಅವಲಂಬಿಸಿವೆ. 'ನಾನು'ವಿನ ಅಸ್ತಿತ್ವವು ಇಲ್ಲವಾದರೆ, 'ನಾನು' ಏನನ್ನೂ ಮಾಡಲಾರದಷ್ಟೇ. ಇಲ್ಲಿಯ ತನಕ, 'ನಾನು'ವಿನ ಎರಡೂ ದಿಶೆಗಳಲ್ಲಿ ಹಾಗೂ ಪರಸ್ಪರವಾಗಿ ಸಾಪೇಕ್ಷ ರೂಪವು ಕಂಡುಬರುತ್ತದೆ. ಎಲ್ಲಕ್ಕಿಂತ ಮುನ್ನ, ಸಾಕ್ಷೀ ಸತ್ತೆಯಾದ ಚೈತನ್ಯವು, 'ನಾನು ಇದ್ದೇನೆ' ಬೋಧೆಯನ್ನು ಜಾಗ್ರತಗೊಳಿಸಿ, ತನ್ನ ಅಸ್ತಿತ್ವವನ್ನು ಸಿದ್ಧ ಮಾಡುತ್ತದೆ. ಮತ್ತು ವಿಕಸಿತ 'ನಾನು' ಕಾರ್ಯ ಮಾಡುತ್ತದೆ. 'ನಾನು ಇದ್ದೇನೆ'ಯ 'ನಾನು', ಇಲ್ಲವೆ ಬುದ್ಧಿ ತತ್ತ್ವವು ಕಾರ್ಯ ಮಾಡುವ ಕಾಲಕ್ಕೆ ಅಸ್ತಿತ್ವವನ್ನು ಸಿದ್ಧಪಡಿಸುವುದಲ್ಲದೆ, ಕರ್ಮ ಮಾಡುವ ಭಾರವನ್ನೂ ಸಹ, ಗ್ರಹಿಸುತ್ತದೆ. ಇದೇ ಪ್ರಕಾರ, ಬುದ್ಧಿ ತತ್ತ್ವದ ಮೇಲೆ ಪ್ರಕೃತಿಯ ಪ್ರಭಾವದ ಫಲವಾಗಿ, ಕಾರ್ಯ ಮಾಡುವ ಗುಣವು ಸ್ಪಷ್ಟವಾಗುತ್ತದೆ. ಬುದ್ಧಿ ತತ್ತ್ವವು ಅಣುಚೈತನ್ಯದ ಸ್ಥೂಲ ವಿಕಾಸವೇ ಆಗಿದೆ. ಮತ್ತು ಅಣುಚೈತನ್ಯದ ಸ್ವಂತ ವಿಶೇಷತೆ, ಇಲ್ಲವೆ ಗುಣ ಅರ್ಥಾತ್ ಪ್ರಕೃತಿಯು ಈ ರೂಪಾಂತರಿತ ವಿಕಾಸವಾದ, ಬುದ್ಧಿತತ್ತ್ವದಲ್ಲಿಯೂ ಅಭಿನ್ನ ರೂಪದಿಂದಲೇ ಇರುತ್ತದೆ. ಯಾವ ಗುಣ ಬಂಧನದ ಮೂಲಕ ಬುದ್ಧಿ ತತ್ತ್ವವು ಪ್ರಭಾವಿತವಾಗುವುದೋ, ಅದಕ್ಕೇ ರಜೋಗುಣವೆನ್ನುತ್ತಾರೆ. ಈ ಪ್ರಕಾರ, ಬುದ್ಧಿ ತತ್ತ್ವವು ಪ್ರಕೃತಿಯ ಮೂಲಕ ಪ್ರಭಾವಿತವಾಗಿ ಎರಡೂ ಪ್ರಕಾರದ ಕಾರ್ಯಗಳನ್ನು ಮಾಡುವ ರೂಪವನ್ನು ಗ್ರಹಿ

ಸುತ್ತದೆ. ರಜೋಗುಣದ ಮೂಲಕ ಸ್ಪಷ್ಟವಾದ, ಕಾರ್ಯ ಮಾಡುವ ಗುಣ ಇಲ್ಲವೆ ವಿಶೇಷ ಶಕ್ತಿಗೇ ಅಹಂ ತತ್ತ್ವವೆಂದು ಕರೆಯುತ್ತಾರೆ. ಅರ್ಥಾತ್, ಪ್ರಕೃತಿಯ ರಜೋಗುಣದ ಬಂಧನದ ಕಾರಣ, ಬುದ್ಧಿ ತತ್ತ್ವವು ತನ್ನನ್ನೇ ಅಹಂ ತತ್ತ್ವದಲ್ಲಿ ವಿಕಾಸಗೊಳಿಸುತ್ತದೆ.

ಪ್ರತಿಯೊಂದು ಕರ್ಮದ ಫಲವು ಅವಶ್ಯವಾಗಿ ಆಗಲೇಬೇಕು. ಉದಾಹರಣೆಗೆ ನೋಡಿರಿ; ಪುಸ್ತಕದ ದರ್ಶನದ ಕಾಲಕ್ಕೆ ನೋಡುವ ಕ್ರಿಯೆಯ ಪರಿಣಾಮವಾಯಿತು, ನೋಡಲ್ಪಟ್ಟ ಪುಸ್ತಕ. ನೊಡುವ ಕಾರ್ಯವು ಯಾವ ಪ್ರಕಾರ ಆಗುವುದೆಂಬುದನ್ನು ಮೊದಲೇ ಹೇಳಲಾಗಿದೆ. ಮನದ ಸ್ಥೂಲತಮ ಅಂಶವೇ ಚಿತ್ತ. ತನ್ಮಾತ್ರೆಯ ನೆರವಿನಿಂದ ಅದು ವಸ್ತುವಿನ ರೂಪವನ್ನು ಧಾರಣ ಮಾಡುತ್ತದೆ. ಮತ್ತು ಅಹಂ ತತ್ತ್ವವು ಅದನ್ನು ನೋಡುತ್ತದೆ. ಅಹಂ ತತ್ತ್ವದ ಇಚ್ಛಾನುಸಾರವಾಗಿಯೇ ಚಿತ್ತವು ವಸ್ತುವಿನ ರೂಪದಲ್ಲಿ ಪರಿಣಮಿಸಬಲ್ಲದು. ಅಹಂ ತತ್ತ್ವವು ಯಾವ ಕಾಲಕ್ಕೆ ಪುಸ್ತಕವನ್ನು ನೋಡುವುದೋ, ಚಿತ್ತವು ಅದೇ ಕಾಲಕ್ಕೆ ಪುಸ್ತಕವೇ ಆಗುತ್ತದೆ. ಮತ್ತು ಅಹಂ ತತ್ತ್ವವು ಯಾವಾಗ ಶಬ್ದವನ್ನು ಕೇಳುವುದೋ, ಆ ಕಾಲಕ್ಕೆ ಚಿತ್ತವು ಶಬ್ದ ಸ್ವರೂಪವೇ ಆಗುತ್ತದೆ. ಹೀಗಾಗಲು ಕಾರಣವೆಂದರೆ, ಚಿತ್ತ ಧಾತುವಿನ ಸಂರಚನೆಯು ಪೂರ್ಣವಾಗಿ, ಅಹಂ ತತ್ತ್ವದ ಇಚ್ಛೆಯ ಮೇಲೆ ಅವಲಂಬಿಸಿದೆ. ಇದರಿಂದ, ಚಿತ್ತ ಮತ್ತು ಅಹಂ ತತ್ತ್ವಗಳ ಸಂಪರ್ಕವು ಅತ್ಯಂತ ಘನಿಷ್ಟವಾಗಿದೆ. ಈ ಚಿತ್ತ ಧಾತುವು ಯಾವ ಪ್ರಕಾರ ಸೃಷ್ಟವಾಯಿತೆಂಬುದನ್ನು ಹೇಳುವುದು, ಇಲ್ಲಿ ಅವಶ್ಯವಿದೆ. ಚಿತ್ತವು ಮನದ ಒಂದು ವಿಶೇಷ ಅಂಶವೇ ಆಗಿದೆ. ಮನದ ಬೇರೆ ಎರಡು ಅಂಶಗಳೆಂದರೆ,ಕ್ರಮವಾಗಿ ಅಹಂ ತತ್ತ್ವ ಹಾಗೂ ಮಹತ್ತತ್ತ್ವ. ಪ್ರಕೃತಿಯ ಸತ್ತ್ವಗುಣದ ಪ್ರಭಾವದಿಂದ, ಅಣುಚೈತನ್ಯವು ಮಹತ್ತತ್ತ್ವದಲ್ಲಿ ಮತ್ತು ಪ್ರಕೃತಿಯ ರಜೋಗುಣದ ಪ್ರಭಾವದಿಂದ ಮಹತ್ತತ್ತ್ವವು ಅಹಂ ತತ್ತ್ವದಲ್ಲಿ ಅಭಿವ್ಯಕ್ತವಾಗುತ್ತವೆ. ಇನ್ನಷ್ಟು ಸ್ಪಷ್ಟೀಕರಿಸುವುದಾದರೆ, ಮೌಲಿಕ ಸತ್ತೆಯಾದ ಅಣುಚೈತನ್ಯವೇ ಪ್ರಕೃತಿಯ ಪ್ರಭಾವದಿಂದ ಸ್ಥೂಲತ್ವವನ್ನು ಪಡೆದು, ದ್ವಿತೀಯ ಪರಿವರ್ತನ ಕ್ರಮದಲ್ಲಿ ತನ್ನನ್ನೇ ಅಹಂ ತತ್ತ್ವದಲ್ಲಿ ರೂಪಾಂತರಿಸಿಕೊಳ್ಳುತ್ತದೆ. ಇದರಿಂದ, ಅಹಂ ತತ್ತ್ವದಲ್ಲಿ ಸಹ, ಪ್ರಕೃತಿಯು ಇರುತ್ತದೆ. ಮತ್ತು ಅದನ್ನು ಗುಣಾನ್ವಿತಗೊಳಿಸುತ್ತದೆ. ವಾಸ್ತವದಲ್ಲಿ ಅಹಂ ತತ್ತ್ವದ ಮೇಲೆ, ಪ್ರಕೃತಿಯ ಪ್ರಭಾವದ ಫಲವಾಗಿಯೇ ಚಿತ್ತದ ಸೃಷ್ಟಿಯಾಗುತ್ತದೆ. ಯಾವ ಗುಣದ ಮೂಲಕ ಅಹಂ ತತ್ತ್ವವು



ಗುಣಾನ್ವಿತವಾಗುವುದೋ, ಅದಕ್ಕೆ ತಮೋಗುಣವೆನ್ನುತ್ತಾರೆ. ಈ ತಮೋಗುಣದ ಕಾರಣವಾಗಿಯೇ ಅಹಂ ತತ್ತ್ವವು ತನ್ನ ಕರ್ಮದ ಫಲದ ರೂಪವನ್ನು ಗ್ರಹಿಸಿ, ಚಿತ್ತ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಪ್ರಕಾರ, ಅಣುಚೈತನ್ಯವೇ ಕ್ರಮೇಣ ತನ್ನನ್ನು ಚಿತ್ತದಲ್ಲಿ ವಿಕಾಸಗೊಳಿಸುತ್ತದೆ.

ಆದ್ದರಿಂದ, ಪ್ರಕೃತಿಯ ಗುಣ ಬಂಧನದ ಮೂಲಕ ಸೃಷ್ಟವಾದ ಮನದ ಅಸ್ತಿತ್ವವು, ಅಣುಚೈತನ್ಯದ ಉಪಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ವಾಸ್ತವದಲ್ಲಿ ಆತ್ಮಾ ಇಲ್ಲವೆ ಅಣುಚೈತನ್ಯದ ಅನುಪಸ್ಥಿತಿಯಲ್ಲಿ ಮನದ ಸೃಷ್ಟಿಯಾಗುವುದಿಲ್ಲ. ಆದರೆ, ಪ್ರತಿಯೊಂದು ವ್ಯಷ್ಟಿ ಸತ್ತೆಯಲ್ಲಿ ನಾವು ಮನದ ವಿಕಾಸವನ್ನು ಕಾಣುತ್ತೇವೆ. ಆದ್ದರಿಂದ, ಪ್ರತಿಯೊಂದು ವ್ಯಷ್ಟಿ ಸತ್ತೆಯಲ್ಲಿ ಅಣುಚೈತನ್ಯದ ಉಪಸ್ಥಿತಿಯನ್ನು ಒಪ್ಪಲೇಬೇಕು. ಈ ವಿಶ್ವದಲ್ಲಿ ಅಸಂಖ್ಯ ವ್ಯಷ್ಟಿ ಮನದ ಪ್ರತಿಫಲನಗಳನ್ನು ಕಂಡಾಗ, ಆತ್ಮವೇ ಅನೇಕವಾಗಿದೆಯೆಂದು ಗೊತ್ತಾಗುತ್ತದೆ. ಈ ಎಲ್ಲ ಆತ್ಮಗಳ ಸಾಮೂಹಿಕ ಹೆಸರೇ ಪರಮಾತ್ಮಾ, ಭೂಮಾಚೈತನ್ಯ ಇಲ್ಲವೆ ಭಗವಾನ ಆಗಿದೆ. ಯಾವ ಪ್ರಕಾರ ೧೨ ನ್ನು ಒಂದು ಡರ್ಝುನ್ ಎಂದೂ, ೨೦ ನ್ನು ಒಂದು ಕೋಸವೆಂದೂ ಮತ್ತು ಬಹು ಸಂಖ್ಯಾಕ ಸೇನೆಯನ್ನು ಸೈನ್ಯ ದಲವೆಂದೂ ಕರೆಯುತ್ತೇವೆಯೋ, ಅದೇ ಪ್ರಕಾರ, ಅಣುಚೈತನ್ಯಗಳ ಸಾಮೂಹಿಕ ಹೆಸರೇ ಭೂಮಾಚೈತನ್ಯ, ಬ್ರಹ್ಮ ಇಲ್ಲವೆ ಭಗವಾನ ಎಂದಿದೆ. ಆದ್ದರಿಂದ ಒಂದು ಕೈ ಕಾಲುಗಳುಳ್ಳ, ಶಕ್ತಿಶಾಲಿ ಮಾನವನ ರೂಪದಲ್ಲಿ ಭಗವಾನನನ್ನು ಕಲ್ಪಿಸುವುದು ತುಂಬಾ ತಪ್ಪು. ಆಂಗ್ಲ ಭಾಷೆಯಲ್ಲಿ ಆತ್ಮಾ ಶಬ್ದದ ಪ್ರತಿ ಶಬ್ದವಿಲ್ಲ. ಆದರೆ ಅದಕ್ಕೆ ಅತಿ ಸನಿಹದ ಶಬ್ದದ ರೂಪದಲ್ಲಿ 'ಸೋಲ' (Soul) ಶಬ್ದವನ್ನು ಬಳಸಬಹುದಾಗಿದೆ. ಇದರಿಂದ, ಭಗವಾನದ ಅರ್ಥವು ಭೂಮಾ ಚೈತನ್ಯ ಇಲ್ಲವೆ (universal soul) ಎಂದೇ ಆಗುತ್ತದೆ. ಅಂದ ಮೇಲೆ, ಭಗವಾನನು ಇದ್ದಾನೆ. ಮತ್ತು ಅವನು ಪರಮಾತ್ಮಾ, ಭೂಮಾ ಚೈತನ್ಯ, ಬ್ರಹ್ಮ ಇಲ್ಲವೆ ಆನಂದ ಸ್ವರೂಪನಾಗಿದ್ದಾನೆ.

## ೨

# ವಿಭು ಸತ್ತೆ ಯಾರು?

ಯುಕ್ತಿ-ತರ್ಕದ ಮೂಲಕ, ನಾವು ಬ್ರಹ್ಮನಿದ್ದಾನೆ; ಮತ್ತು ಅವನು ಪರಮಾತ್ಮಾ, ಭೂಮಾ ಚೈತನ್ಯ ಇಲ್ಲವೆ ಚೈತನ್ಯಗಳ ಸಾಮೂಹಿಕ ವಿಶೇಷ ರೂಪವಾಗಿದ್ದಾನೆ, ಎಂಬ ಸಿದ್ಧಾಂತವನ್ನು ತಲುಪಿದ್ದೇವೆ.

ಭೂಮಾ ಚೈತನ್ಯ ಇಲ್ಲವೆ ಸಾಮೂಹಿಕ ಚೈತನ್ಯವನ್ನು ಚಿತ್‌ಶಕ್ತಿ ಇಲ್ಲವೆ ಪುರುಷ ಎಂದೂ ಕರೆಯುತ್ತಾರೆ. ಪ್ರಕೃತಿಯು ಪುರುಷ ಇಲ್ಲವೆ ಚೈತನ್ಯದ ವಿಶೇಷ ಶಕ್ತಿಯಾಗಿದೆ. ಇದು ಪುರುಷನ ಮೇಲೆ ಗುಣಗಳ ಬಂಧನವನ್ನು ಹೇರುತ್ತದೆ. ಅಗ್ನಿ ಮತ್ತು ಅದರ ಸುಡುವ ಶಕ್ತಿಗೆ ಸಮಾನವಾಗಿ, ಪುರುಷ ಮತ್ತು ಪ್ರಕೃತಿಗಳೆರಡೂ ಅವಿಚ್ಛೇದ್ಯವಾಗಿವೆ. ಎಲ್ಲಿ ಪ್ರಕೃತಿ ಇದೆಯೋ, ಅಲ್ಲಿ ಪುರುಷನೂ ಸಹ ಅವಶ್ಯವಾಗಿಯೇ ಇದ್ದಾನೆ. ಮತ್ತು ಇವರ ಸಾಮೂಹಿಕ ಹೆಸರೇ ಬ್ರಹ್ಮ.

ಪುರುಷನು ಜ್ಞಾನ ಇಲ್ಲವೆ ಚೈತನ್ಯ ಸತ್ತೆಯಾಗಿದ್ದಾನೆ. ಜ್ಞಾನ ಇಲ್ಲವೆ ಚೈತನ್ಯ ಎಂದಾಗ, ನಾವು ಯಾವುದೊಂದರ ಅಸ್ತಿತ್ವವನ್ನು ಅವಶ್ಯವಾಗಿಯೇ ತಿಳಿಯುತ್ತೇವೆ. ಆದರೆ, ಅದರ ಆಕಾರ ಇಲ್ಲವೆ ರೂಪದ ಯಾವುದೇ ಧಾರಣೆಯನ್ನು ಪಡೆಯುವುದಿಲ್ಲ. ಭಾವನೆಯ ಮೂಲಕವೇ ನಾವು ಪುರುಷನ ಧಾರಣೆಯನ್ನು ಪಡೆಯುತ್ತೇವೆ. ಅಂದ ಮೇಲೆ, ಪುರುಷ ಇಲ್ಲವೆ ಚೈತನ್ಯವು ಒಂದು ಅವ್ಯಕ್ತ, ಅವಸ್ತು ಸತ್ತೆಯಾಗಿದೆ. ಇದು ಮನದಲ್ಲಿಯೇ ಅನುಭೂತವಾಗಿ ಇರುತ್ತದೆ. ಈ ಅವ್ಯಕ್ತ ಪುರುಷನನ್ನು ಗುಣಾನ್ವಿತಗೊಳಿಸುವ ಸತ್ತೆಯಾದ ಪ್ರಕೃತಿಯ ಅನುಭೂತಿಯೂ ಸಹ, ಕೇವಲ ಬೋಧ ಕ್ರಿಯೆಯ ಮೂಲಕವೇ ಆಗುತ್ತದೆ. ಶಕ್ತಿ, ಗುಣ ಇಲ್ಲವೆ ವಿಶೇಷತೆ, ಇವುಗಳೆಲ್ಲ ಜಡತಮ ಅಭಿವ್ಯಕ್ತಿಗಳಾಗಿವೆ. ಆದರೆ ಇವೆಲ್ಲವುಗಳನ್ನು ಎಂದೂ ನೋಡ



ಲಾರೆವು. ಇವುಗಳ ರೂಪ ರೇಖೆಗಳ ವರ್ಣನೆಯನ್ನು ಮಾಡಲಾರೆವು. ಜಡ ವಸ್ತುವಾದ ಅಗ್ನಿಯ ಜಡವಾದ ಸುಡುವ ಶಕ್ತಿಯನ್ನೂ ನೋಡಲಾರೆವು. ಅರ್ಥಾತ್ ವಸ್ತುವಿನ ಸ್ವಂತ ವಿಶೇಷತೆಯು ಅದೆಷ್ಟೇ ಜಡವಾಗಿರಲೊಲ್ಲದೇಕೆ, ಅದು ಎಂದೆಂದಿಗೂ ಸೂಕ್ಷ್ಮವೇ ಆಗಿರುತ್ತದೆ. ಪುರುಷ ಮತ್ತು ಅವನ ಸ್ವಂತ ವಿಶೇಷತೆಯಾದ ಪ್ರಕೃತಿ, ಈ ಎರಡೂ ಸೂಕ್ಷ್ಮ ಸತ್ತೆಗಳ ಸಾಮೂಹಿಕ ರೂಪವಾದ ಬ್ರಹ್ಮವೂ ಸಹ ಸೂಕ್ಷ್ಮವಾಗಿದೆ. ಇದರಿಂದ, ಅವನ ಅನುಭೂತಿಯು ಕೇವಲ ಬೌದ್ಧಿಕ ಸಂಶ್ಲೇಷಣದ ಚರಮ ಸ್ತರದಲ್ಲಿಯೇ ಆಗಬಲ್ಲದು. ಆದ್ದರಿಂದ, ಬ್ರಹ್ಮನ ಯಾವುದೇ ಆಕಾರವಾಗಲಿ, ರೂಪವಾಗಲಿ ಇಲ್ಲ. ಅವನೋರ್ವ ನಿರಾಕಾರ ಹಾಗೂ ಮಾತು-ಮನಂಗಳಿಗೆ ಅಗೋಚರವಾದ ಸತ್ತೆಯಾಗಿದ್ದಾನೆ.

ಆತ್ಮಾ ಇಲ್ಲವೆ ಅಣುಚೈತನ್ಯದ ಮೇಲೆ, ಪ್ರಕೃತಿಯ ಸತ್ತ್ವ ಗುಣದ ಪ್ರಭಾವದ ಫಲವಾಗಿ ಬುದ್ಧಿ ತತ್ತ್ವವೂ ಹಾಗೂ ಬುದ್ಧಿ ತತ್ತ್ವದ ಮೇಲೆ ರಜೋಗುಣದ ಪ್ರಭಾವದ ಫಲವಾಗಿ ಅಹಂ ತತ್ತ್ವವೂ ಮತ್ತು ಅಹಂ ತತ್ತ್ವದ ಮೇಲೆ ಪ್ರಕೃತಿಯ ತಮೋಗುಣದ ಪ್ರಭಾವದ ಫಲವಾಗಿ ಚಿತ್ತವೂ, ಸೃಷ್ಟಿಯಾಗಿವೆಯೆಂದು ಮೊದಲೇ ಹೇಳಲಾಗಿದೆ. ಈ ಕಾರಣದಿಂದ, ಅಹಂ ತತ್ತ್ವ ಹಾಗೂ ಪ್ರಕೃತಿಯ ತಮೋಗುಣದ ಅಭಾವದ ಅವಧಿಯಲ್ಲಿ ಚಿತ್ತದ ಸೃಷ್ಟಿಯಾಗುವುದಿಲ್ಲ. ಆದರೆ, ಅಹಂ ತತ್ತ್ವ ಇಲ್ಲವೆ ಪ್ರಕೃತಿಯು ಚಿತ್ತದ ಮೇಲೆ ಅವಲಂಬಿಸಿಲ್ಲ. (ಚಿತ್ತದ ಸಾಪೇಕ್ಷವಲ್ಲ) ಇದರಿಂದ, ಚಿತ್ತದ ಅಭಾವದಲ್ಲಿಯೂ ಸಹ, ಇವುಗಳೆಲ್ಲ ಅವಿಕೃತವಾಗಿರುತ್ತವೆ. ಈ ಪ್ರಕಾರ, ಬುದ್ಧಿ ತತ್ತ್ವವು ಅಹಂ ತತ್ತ್ವದ ಸಾಪೇಕ್ಷವಲ್ಲ. ಹಾಗೂ ಅಣುಚೈತನ್ಯವು ಬುದ್ಧಿ ತತ್ತ್ವದ ಮೇಲೆ ಅವಲಂಬಿಸಿಲ್ಲ. ಅರ್ಥಾತ್ ಅಣುಚೈತನ್ಯವು ಬುದ್ಧಿ ತತ್ತ್ವ ನಿರಪೇಕ್ಷವಾಗಿದೆ. ಕಬ್ಬಿಣದಿಂದ ಮಾಡಿದ ಕಡಾಯಿಯ ಅಸ್ತಿತ್ವವು ಕಬ್ಬಿಣದ ಸಾಪೇಕ್ಷವಾಗಿದೆ. ಆದರೆ ಕಬ್ಬಿಣದ ಅಸ್ತಿತ್ವವು ಸಾಪೇಕ್ಷವಾಗಿಲ್ಲ. ಇದೇ ಪ್ರಕಾರ, ಚಿತ್ತ, ಅಹಂ ತತ್ತ್ವ ಹಾಗೂ ಬುದ್ಧಿ ತತ್ತ್ವ-ಇವುಗಳೆಲ್ಲ ಅಣು-ಚೈತನ್ಯದ ಸ್ಥೂಲ ವಿಕಾಸಗಳಾಗಿವೆ. ಆದ್ದರಿಂದ, ಇವೆಲ್ಲವುಗಳ ಅಸ್ತಿತ್ವವು ಅಣು-ಚೈತನ್ಯದ ಸಾಪೇಕ್ಷವಿದೆ. ಆದರೆ ಅಣುಚೈತನ್ಯವು ಸರ್ವ ನಿರಪೇಕ್ಷವಿದೆ.

ಚೈತನ್ಯ ಇಲ್ಲವೆ ಪುರುಷನು ಯಾವುದರ ಸಾಪೇಕ್ಷನೂ ಅಲ್ಲ. ಅವನು ಆದಿ-ಅಂತ್ಯಗಳಿಲ್ಲದ, ಓರ್ವ ಪರಮ, ಬಂಧನ-ಮುಕ್ತ ಸತ್ತೆಯಾಗಿದ್ದಾನೆ. ಪ್ರಕೃತಿಯು ಪುರುಷನ ಸ್ವಂತದ ವಿಶೇಷತೆ ಇಲ್ಲವೆ ಗುಣವಾಗಿದೆ. ಆದ್ದರಿಂದ,

ಇದರ ಸಂಪರ್ಕವು ಪುರುಷನೊಂದಿಗೆ ಅಭಿನ್ನ ಮತ್ತು ಅಪೃಥಕ್ ಆಗಿದೆ. ಆದರೆ, ಹೇಗೆ ಅಗ್ನಿಯು ತನ್ನ ಗುಣ ಇಲ್ಲವೆ ವಿಶೇಷತೆಯ ಸ್ರಷ್ಟಾ ಅಲ್ಲವೋ, ಅದೇ ಪ್ರಕಾರ ಪುರುಷನೂ ಸಹ, ತನ್ನ ಗುಣ ಇಲ್ಲವೆ ವಿಶೇಷತೆಯಾದ ಪ್ರಕೃತಿಯ ಸ್ರಷ್ಟಾ ಅಲ್ಲ. ಇದು ಎಲ್ಲಿಯ ವರೆಗೆ ಇದೆಯೆಂದರೆ, ಪುರುಷನ ನಿಜ ಅಸ್ತಿತ್ವ ಬೋಧೆಯೂ ಸಹ, ಪ್ರಕೃತಿಯ ಪ್ರಭಾವದ ಸಾಪೇಕ್ಷವಿದೆ. ಆದ್ದರಿಂದ, ಅವನ ಮೂಲಕ ಪ್ರಕೃತಿಯು ಹುಟ್ಟುವುದೆಂಬ ಪ್ರಶ್ನೆಯೇ ಏಳದು. ಪುರುಷನಂತೆಯೇ ಪ್ರಕೃತಿಯೂ ಸಹ, ಒಂದು ನಿರಪೇಕ್ಷ ಸತ್ತೆಯಾಗಿದೆ. ಈ ನಿರಪೇಕ್ಷ ಸತ್ತೆಗಳಾದ ಪುರುಷ ಹಾಗೂ ಪ್ರಕೃತಿಯರ ಸಾಮೂಹಿಕ ಹೆಸರೇ ಬ್ರಹ್ಮ ಎಂದಿದೆ. ಆದ್ದರಿಂದ, ಬ್ರಹ್ಮನು ಅವಶ್ಯವಾಗಿಯೇ ಸರ್ವನಿರಪೇಕ್ಷನಾಗಿದ್ದಾನೆ. ಎಲ್ಲ ಬಂಧನಗಳಿಂದಲೂ ಮುಕ್ತನಾದ ಓರ್ವ ಶಾಶ್ವತ ಸತ್ತೆಯಾಗಿದ್ದಾನೆ.

ಬ್ರಹ್ಮನ ಆದಿಯಂತೂ ಇಲ್ಲ. ಹಾಗಾದರೆ ಅವನ ಅಂತವಾದರೂ ಇದೆಯೋ? ಇಲ್ಲವೋ? ಒಂದು ವೇಳೆ ಹಾಗಿದ್ದರೆ, ನಾವು ಅಳತೆ ಮಾಡಿ, ಬ್ರಹ್ಮನು ಎಷ್ಟು ದೊಡ್ಡವನಿರುವನೆಂಬುದನ್ನು ನೋಡಬೇಕು. ಬೇರೆ ಬೇರೆ ವಸ್ತುಗಳ ಅಳತೆಯ ಯಂತ್ರಗಳೂ ಭಿನ್ನ ಭಿನ್ನವಾಗಿರುತ್ತವೆ. ಭೂಮಿಯ ಅಳತೆಗಾಗಿ ಸಾಕಳಿ ಇದೆ. ಕಾಳು–ಕಡಿಯ ಅಳತೆಗಾಗಿ ಪಾವು ಇದೆ. ಉಷ್ಣತೆಯ ಅಳತೆಗಾಗಿ ಉಷ್ಣತಾಮಾಪಕ ಯಂತ್ರವಿದೆ. ಮತ್ತು ವಾಯುವಿನ ಒತ್ತಡದ ಅಳತೆಗಾಗಿ ವಾಯುಭಾರಮಾಪಕ ಯಂತ್ರವಿದೆ. ಅರ್ಥಾತ್ ಯಾವ ವಸ್ತುವು ಹೇಗಿದೆಯೋ, ಅದರ ಅಳತೆಗಾಗಿ ಅದೇ ಪ್ರಕಾರದ ಯಂತ್ರದನ್ನು ಶೋಧ ಮಾಡಬೇಕಾಗುತ್ತದೆ. ಆದ್ದರಿಂದ, ಸೂಕ್ಷ್ಮ ಸತ್ತೆಯಾದ ಬ್ರಹ್ಮನ ಅಳತೆ ಗೋಸ್ಕರ ಬ್ರಹ್ಮನ ಹೊರತಾಗಿ ಬೇರೊಂದು ಸೂಕ್ಷ್ಮ ಸತ್ತೆಯನ್ನು ಹುಡುಕಬೇಕು. ಜಾಗತಿಕ ವಸ್ತು ಸಮೂಹವನ್ನು ನಾವು ಆಕಾಶ, ವಾಯು, ಅಗ್ನಿ, ಜಲ ಮತ್ತು ಕ್ಷಿತಿ ಎಂದು ಭೇದ ಮೂಲಕ ಐದು ಮೂಲ ತತ್ತ್ವಗಳಲ್ಲಿ ವಿಂಗಡಿಸುತ್ತೇವೆ. ತನ್ಮಾತ್ರಗಳ ವಿಚಾರದಿಂದಲೂ, ವಸ್ತುವನ್ನು ಸ್ಥೂಲ ಹಾಗೂ ಸೂಕ್ಷ್ಮವೆಂದು ನಿರೂಪಿಸುತ್ತಾರೆ. ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ ಭೇದ ಮೂಲಕ ತನ್ಮಾತ್ರಗಳ ಸಂಖ್ಯೆಯು ಒಟ್ಟು ಐದು. ಆಕಾಶ ತತ್ತ್ವದಲ್ಲಿ ಶಬ್ದವನ್ನು ಒಯ್ಯುವ ಸಾಮರ್ಥ್ಯವಿದೆ. ವಾಯು ತತ್ತ್ವದಲ್ಲಿ ಶಬ್ದ ಮತ್ತು ಸ್ಪರ್ಶಗಳನ್ನೂ, ಅಗ್ನಿ ತತ್ತ್ವದಲ್ಲಿ ಶಬ್ದ, ಸ್ಪರ್ಶ ಮತ್ತು ರೂಪಗಳನ್ನೂ, ಜಲ ತತ್ತ್ವದಲ್ಲಿ, ಶಬ್ದ, ಸ್ಪರ್ಶ, ರೂಪ ಮತ್ತು ರಸಗಳನ್ನೂ



ಮತ್ತು ಕ್ಷಿತಿ ತತ್ತ್ವದಲ್ಲಿ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ, ಈ ಐದೂ ತನ್ಮಾತ್ರಗಳನ್ನೂ ಒಯ್ಯುವ ಸಾಮರ್ಥ್ಯವಿದೆ. ಆದ್ದರಿಂದ ತನ್ಮಾತ್ರಗಳ ಉಪಸ್ಥಿತಿಯ ಕಾರಣ,ಐದೂ ಮೂಲ ತತ್ತ್ವಗಳಲ್ಲಿ ಯಾವುದೊಂದೂ ಸೂಕ್ಷ್ಮವಲ್ಲ. ಮತ್ತು ಅವುಗಳಿಂದ ಉತ್ಪನ್ನವಾದ ಸ್ಥೂಲ ಜಾಗತಿಕ ವಸ್ತು ಸಮೂಹದಲ್ಲಿ ಯಾವ ವಸ್ತುವೂ ಸೂಕ್ಷ್ಮ ಸತ್ತೆಯಾದ ಬ್ರಹ್ಮನನ್ನು ಅಳೆಯುವಲ್ಲಿ ಉಪಯೋಗಕ್ಕೆ ಬಾರದು. ಜಗತ್ತಿನಲ್ಲಿ ನಾವು ಈ ಸ್ಥೂಲ ಪಾಂಚಭೌತಿಕ ಸತ್ತೆಗಳನ್ನು ಹೊರತು ಪಡಿಸಿ, ಹಾಗೂ ತನ್ಮಾತ್ರಗಳ ಸೀಮೆಯಾಚೆ, ಒಂದು ಸೂಕ್ಷ್ಮ ಮಾನಸ ಸತ್ತೆಯ ಅಸ್ತಿತ್ವವನ್ನು ಕಾಣುತ್ತೇವೆ. ಇದು ಮಾನಸ ಭೂಮಿಯಲ್ಲಿ ಭಾವನೆಯ ಮೂಲಕ ವಸ್ತುವಿನ ರೂಪ ಧಾರಣೆ ಮಾಡುವಲ್ಲಿ ಮತ್ತು ವಸ್ತುವಿನ ಅನುಭೂತಿ ಲಾಭ ಪಡೆಯುವಲ್ಲಿ ಸಮರ್ಥವಿದೆ. ಕೇವಲ ಮನವೇ ತನ್ನ ಭಾವನೆ ಇಲ್ಲವೆ ಅನುಭೂತಿಯ ಮೂಲಕ, ಬ್ರಹ್ಮನನ್ನು ಅಳೆಯಬಲ್ಲದು. ಅಣು ಚೈತನ್ಯದ ಮೇಲೆ, ಪ್ರಕೃತಿಯ ಪ್ರಭಾವದ ಫಲವಾಗಿ ಬುದ್ಧಿ ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತ ತತ್ತ್ವಗಳ ಸಾಮೂಹಿಕ ರೂಪವು ಮನದ ಸೃಷ್ಟಿಯಾಗಿದೆ. ಮನದ ಈ ಮೂರೂ ಅಂಶಗಳೊಳಗಿಂದ ಅಹಂ ತತ್ತ್ವವೇ ಎಲ್ಲ ಕಾರ್ಯಗಳನ್ನು ಮಾಡುತ್ತದೆ. ಆದ್ದರಿಂದ, ಬ್ರಹ್ಮನನ್ನು ಅಳೆಯುವ ಕಾರ್ಯವನ್ನು ಸಹ, ಅಹಂ ತತ್ತ್ವವೇ ಮಾಡುತ್ತದೆ. ಆದರೆ, ಅಹಂ ತತ್ತ್ವವು, ಕಾರ್ಯ ಮಾಡುವ ಮತ್ತು ಬುದ್ಧಿ–ತತ್ತ್ವದಿಂದ ಪರಿವರ್ತಿತವಾದ, ಒಂದು ರೂಪವೇ ಆಗಿದೆ. ಅಣು ಚೈತನ್ಯದ ಸಂಪರ್ಕದಲ್ಲಿ, ಬರುವ ಮುನ್ನವೇ ಅಹಂ ತತ್ತ್ವವು ಬುದ್ಧಿ ತತ್ತ್ವದಲ್ಲಿ ಪರಿಣಮಿಸುತ್ತದೆ. ಅದರ ಕರ್ಮ ಮಾಡುವ ವಿಶೇಷತೆಯು ನಷ್ಟವಾಗುತ್ತದೆ. ಆದ್ದರಿಂದ, ಇಂಥ ಅವಸ್ಥೆಯಲ್ಲಿ, ಅದರ ಮೂಲಕ ಯಾವುದೇ ಕರ್ಮವಾಗುವ ಸಂಭವವಿಲ್ಲ. ಇನ್ನು ಅಣು ಚೈತನ್ಯದ ಅಳತೆಯ ಮಾತಂತೂ ದೂರವೇ ಉಳಿಯಿತು. ಅಣು ಚೈತನ್ಯಗಳ ಸಾಮೂಹಿಕ ಹೆಸರೇ ಬ್ರಹ್ಮ. ಯಾವಾಗ ಮನವು ಯಾವುದೊಂದು ವಿಶೇಷ ಅಣು ಚೈತನ್ಯವನ್ನು ಅಳೆಯುವಲ್ಲಿಯೇ ಅಸಮರ್ಥವಿರುವುದೆಂದ ಮೇಲೆ, ಅದರ ಮೂಲಕ ಸಾಮೂಹಿಕ ಚೈತನ್ಯ ಇಲ್ಲವೆ ಬ್ರಹ್ಮನ ಅಳತೆಯ ಪ್ರಶ್ನೆಯೇ ಏಳದು.

ತೋರು–ಜಗತ್ತು ಬ್ರಹ್ಮನ ಒಂದು ಅಂಶವೇ ಆಗಿದೆ. ಮತ್ತು ಮನದ ಅಸ್ತಿತ್ವವು ಇದೇ ಜಗತ್ತಿನೊಳಗಿದೆ. ಸಂಶ್ಲೇಷಣಾತ್ಮಕ ದೃಷ್ಟಿಯಿಂದ ನೋಡಿದಾಗ, ಕರ್ಮಮಾಡುವ ಮನವನ್ನು (ಅಹಂ ತತ್ತ್ವ) ಅದರ ಉಗಮ ಸ್ಥಳಕ್ಕೆ ಕೊಂಡೊಯ್ದು ಬಳಿಕ ಸಹ, ನಾವು ನೋಡುವುದೇನೆಂದರೆ, ಯಾವುದರ

ಆಳತೆಯು ಮನದಿಂದ ಅಸಂಭವವೋ, ಅಂಥ ಇನ್ನಷ್ಟು ಬಾಕಿ ಉಳಿಯುತ್ತದೆ. ಆದ್ದರಿಂದ, ಸೃಷ್ಟಿಯ ವಿಸ್ತೃತಿಯು ಮನದ ಪರಿಧಿಯಿಂದ ಇನ್ನೂ ಆಚೆಗಿದೆ. ಸೃಷ್ಟಿಯು ಅನಂತವಾಗಿದೆ. ಯಾವಾಗ ಆಂಶಿಕ ಸೃಷ್ಟಿಯೇ ಅನಂತವಾಗಿರುವುದೆಂದ ಮೇಲೆ ಸಾಮಗ್ರಿಕ ಸತ್ತೆಯಾದ ಬ್ರಹನಂತೂ ಅವಶ್ಯವಾಗಿಯೇ ಅನಂತನಾಗಿರುತ್ತಾನೆ. ಬ್ರಹ್ಮ ಸ್ವರೂಪದಲ್ಲಿ, ಪುರುಷ ಮತ್ತು ಪ್ರಕೃತಿಗಳೆರಡೂ ನಿರಪೇಕ್ಷವಾಗಿವೆ. ಹಾಗೂ ಸಕಲ ಬಂಧನಗಳಿಂದ ಮುಕ್ತವಾಗಿರುತ್ತವೆ. ಪ್ರಕೃತಿಯು ಬ್ರಹ್ಮನ ಸ್ವಂತ ವಿಶೇಷತೆಯಾಗಿದೆ. ಇದರ ಕಾರ್ಯವೇ ಪುರುಷನ ಮೇಲೆ ಗುಣದ ಬಂಧನ ಹೇರುವುದಾಗಿದೆ. ಸಂಸ್ಕೃತದಲ್ಲಿ ಗುಣ ಶಬ್ದದ ಅರ್ಥವೆಂದರೆ ಕಟ್ಟುವ ಹಗ್ಗ ಎಂದು. ಆದ್ದರಿಂದ, ಪ್ರಕೃತಿಯು ಪುರುಷನನ್ನು ಗುಣಾನ್ವಿತಗೊಳಿಸುವ ಹೇತುವೆಂಬ ಹಗ್ಗದಿಂದ ತನ್ನ ಇಚ್ಛಾನುಸಾರ ಕಟ್ಟುತ್ತದೆ. ಆದರೆ ಬ್ರಹ್ಮನ ಸ್ವರೂಪಾವಸ್ಥೆಯಲ್ಲಿ, ಅಂದರೆ ಎಲ್ಲಿ ಪುರುಷ ಮತ್ತು ಪ್ರಕೃತಿಗಳೆರಡೂ ನಿರಪೇಕ್ಷವಾಗಿವೆಯೋ, ಅಲ್ಲಿ ಪುರುಷನು ಸ್ವಾಧೀನನಾಗಿದ್ದಾನೆ. ಆದ್ದರಿಂದ, ಪ್ರಕೃತಿಯು ಅವನನ್ನು ಗುಣಾನ್ವಿತಗೊಳಿಸುವುದಿಲ್ಲ. ಆದರೂ ಸಹ, ಅಲ್ಲಿ ಪ್ರಕೃತಿಯು ಅವಶ್ಯವಾಗಿ ಇದ್ದೇ ಇರುತ್ತದೆ. ಸುಷುಪ್ತಾವಸ್ಥೆಯಲ್ಲಿ ಯಾವ ಪ್ರಕಾರ, ಮಾನವನ ಕರ್ಮ ಶಕ್ತಿಯೂ ಸುಷುಪ್ತವಿರುವುದೋ, ಅದೇ ಪ್ರಕಾರ, ಬ್ರಹ್ಮನ ಸ್ವರೂಪಾವಸ್ಥೆಯಲ್ಲಿ ಪ್ರಕೃತಿಯ ಬಂಧನದ ಶಿಥಿಲತೆಯುಂಟಾದ ಬಳಿಕ ಸಹ, ಬಂಧಿಸುವ ಶಕ್ತಿಯು ಮೊದಲಿನಂತೆಯೇ ಉಳಿಯುತ್ತದೆ ಸ್ವರೂಪಾವಸ್ಥೆಯಲ್ಲಿ ಪುರುಷನು ಗುಣಾಧೀನನಿರನು. ಆದರೆ, ಪ್ರಕೃತಿಯು, ಯಾರ ನಿಜ–ವಿಶೇಷತೆಯಾಗಿದೆಯೋ, ಆ ಪುರುಷನ ಮೇಲೆ ಗುಣದ ಬಂಧನ ಹೇರುವುದೆಂದ ಮೇಲೆ ಅದರ ಬಂಧನವು ಶಿಥಿಲವಾಗಿರುವುದಕ್ಕೆ ಅವಶ್ಯವಾಗಿಯೂ ಯಾವುದೋ ಕಾರಣವಿರುತ್ತದೆ. ಇದಕ್ಕೆ ಕೇವಲ ಎರಡು ಕಾರಣಗಳಿರಬಲ್ಲವು. ಪ್ರಕೃತಿಯು ಸುಪ್ತವಾಗಿರುತ್ತದೆ ಮತ್ತು ಅದರಿಂದ, ನಿಷ್ಕ್ರಿಯವಿರುತ್ತದೆ. ಅಥವಾ ಪುರುಷನಿಗಿಂತ ದುರ್ಬಲವಿರುತ್ತದೆ ಮತ್ತು ಇದರಿಂದಾಗಿ, ಪುರುಷನ ಮೇಲೆ ಗುಣದ ಬಂಧನ ಹೇರುವಲ್ಲಿ ಅಸಮರ್ಥವಾಗಿದೆ. ಆದರೆ, ಗುಣದ ಬಂಧನ ಹೇರುವ ಕಾಲಕ್ಕೆ ನಿದ್ರಿತ ಪ್ರಕೃತಿಯನ್ನು ಎಚ್ಚರಿಸುವುದಕ್ಕೋಸುಗ, ಆ ನಿರ್ಗುಣಾವಸ್ಥೆಯ ಪುರುಷನನ್ನು ಬಿಟ್ಟು, ಬೇರಾವ ಸತ್ತೆಯ ಅಸ್ತಿತ್ವವೂ ಇರುವುದಿಲ್ಲ. ಆದ್ದರಿಂದ ಮೊದಲು ಹೇಳಿದ ಸಿದ್ಧಾಂತವು ಯುಕ್ತಿಮೂಲಕ ಗ್ರಾಹ್ಯವಾಗದು. ಪ್ರಕೃತಿಯು ನಿರ್ಗುಣ ಬ್ರಹ್ಮನಲ್ಲಿಯೂ ಸಹ, ಜಾಗ್ರತ ಮತ್ತು ಕ್ರಿಯಾಶೀಲವಾಗಿರುತ್ತದೆ. ಆದರೆ, ಅದು ಪುರುಷನಿಗಿಂತ ಕಡಿಮೆ ಶಕ್ತಿಶಾಲಿಯಾಗಿರುತ್ತದೆ. ಮತ್ತು ಅದು ಪುರುಷನನ್ನು



ಗುಣಾನ್ವಿತಗೊಳಿಸದಿರಲು ಅದೊಂದೇ ಕಾರಣವಿದೆಯಷ್ಟೇ. ಅನಾದಿ, ಅನಂತ ಕಾಲದಿಂದ, ಪುರುಷ ಮತ್ತು ಪ್ರಕೃತಿಗಳು ಈ ಭಾವದಿಂದ ನಡೆದಿರುತ್ತವೆ. ಆದ್ದರಿಂದ, ಪುರುಷನು ಸ್ವಭಾವತಃ ಪ್ರಕೃತಿಗಿಂತ ಹೆಚ್ಚು ಶಕ್ತಿಶಾಲಿಯಾಗಿರುತ್ತಾನೆ. ಮತ್ತು ಪ್ರಕೃತಿಯು ಅವನ ಸ್ವಂತ ವಿಶೇಷತೆ ಇಲ್ಲವೆ ಗುಣವಾಗಿದೆ. ಪುರುಷನ ಈ ಸ್ವರೂಪ ಸ್ಥಿತಿಗೆ ನಿರ್ಗುಣ ಬ್ರಹ್ಮ ಎಂದು ಕರೆಯುತ್ತಾರೆ. ಪ್ರಕೃತಿಯ ಬಂಧನದಿಂದ ಮುಕ್ತನಾದ ಪುರುಷನನ್ನು ನಿರ್ಗುಣ ಪುರುಷ ಇಲ್ಲವೆ ಬ್ರಹ್ಮಸ್ವರೂಪನೆಂದೂ ಮತ್ತು ಪ್ರಕೃತಿಯ ಬಂಧನದಿಂದ ಯುಕ್ತನಾದ ಪುರುಷನನ್ನು ಸಗುಣ ಪುರುಷ ಇಲ್ಲವೆ ಸಗುಣ ಬ್ರಹ್ಮನೆಂದೂ ಕರೆಯುತ್ತಾರೆ. ಈಗ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ನಿರ್ಗುಣ ಬ್ರಹ್ಮ ಸ್ವರೂಪನಿದ್ದರೆ, ಸಗುಣ ಬ್ರಹ್ಮನಿಗೆ ಏನೆನ್ನಬೇಕು? ಇನ್ನೊಂದು ಪ್ರಶ್ನೆಯೂ ಏಳುತ್ತದೆ. ಏನೆಂದರೆ, ಅಧಿಕ ಶಕ್ತಿಶಾಲಿಯಾದ ಪುರುಷನನ್ನು ಪ್ರಕೃತಿಯು ಯಾವ ಪ್ರಕಾರ ಗುಣಾನ್ವಿತ ಮಾಡುತ್ತದೆ? ಇಲ್ಲವೆ ಸಗುಣಬ್ರಹ್ಮನ ಉತ್ಪತ್ತಿಯು ಹೇಗೆಆಗುತ್ತದೆ?

ನಿರ್ಗುಣವಿರಲಿ ಇಲ್ಲವೆ ಸಗುಣವಿರಲಿ, ಎರಡೂ ಆ ಏಕ ಬ್ರಹ್ಮನ ಬೇರೆ ಬೇರೆ ಅವಸ್ಥೆಗಳಷ್ಟೇ. ಯಾವ ಪ್ರಕಾರ, ಯಾವನೊಬ್ಬ ವ್ಯಕ್ತಿಯ ನಿದ್ರಿತ ಅವಸ್ಥೆ ಮತ್ತು ಅವನ ಜಾಗ್ರತ ಅವಸ್ಥೆಗಳಿಂದಾಗಿ ಅವನ ಎರಡು ಅಸ್ತಿತ್ವಗಳುಂಟಾಗುವುದಿಲ್ಲವೋ, ಅದೇ ಪ್ರಕಾರ, ಪ್ರಕೃತಿಯ ಗುಣಬಂಧನ–ಮುಕ್ತ ಇಲ್ಲವೆ ಗುಣಬಂಧನ–ಯುಕ್ತ ಪುರುಷರೂ ಸಹ, ಬ್ರಹ್ಮನ ಎರಡು ಪೃಥಕ್ ಅಸ್ತಿತ್ವಗಳಲ್ಲ.

ಅನಂತ ಸಂಖ್ಯೆಯಲ್ಲಿರುವ ಅಣುಚೈತನ್ಯಗಳ ಸಾಮೂಹಿಕ ಹೆಸರು, ಭೂಮಾ ಚೈತನ್ಯ, ಪರಮ ಪುರುಷ ಇಲ್ಲವೆ ಸಾಮೂಹಿಕ ಚೈತನ್ಯ ಎಂದಿದೆ. ಎರಡರ ಸ್ವಂತ ಗುಣ ಇಲ್ಲವೆ ಧರ್ಮವು ಒಂದೇ ಆಗಿದೆ. ಆದರೆ ಅಣು ಚೈತನ್ಯದಲ್ಲಿ ಅದು ಸೀಮಿತವಿದೆ ಮತ್ತು ಪರಮಪುರುಷನಲ್ಲಿ ಅಸೀಮವಾಗಿದೆ. ಸಾಮೂಹಿಕ ಚೈತನ್ಯ ಇಲ್ಲವೆ ಪರಮಪುರುಷನ ಮೇಲೆ ಪ್ರಕೃತಿಯ ಗುಣ ಬಂಧನದ ಫಲವಾಗಿಯೇ ಜಗತ್ತು ಹಾಗೂ ಸಗುಣ ಬ್ರಹ್ಮಗಳ ಉದ್ಭವವಾಗಿದೆ.

ಸಗುಣ ಬ್ರಹ್ಮನ ಸಾಪೇಕ್ಷವಾದ ಮತ್ತು ಪ್ರತ್ಯಕ್ಷ ಅನುಭೂತಿ–ಸಿದ್ಧವಾದ ತೋರು ಜಗದ ಇರವನ್ನು ಒಪ್ಪದಿರಲಾರೆವು. ಸಗುಣ ಬ್ರಹ್ಮದಲ್ಲಿ ಪುರುಷನನ್ನು ಪ್ರಕೃತಿಯು ಎರಡು ಅವಸ್ಥೆಗಳಲ್ಲಿ ಗುಣಾನ್ವಿತಗೊಳಿಸಬಲ್ಲದು. ಸಗುಣಾವಸ್ಥೆಯಲ್ಲಿ ಪ್ರಕೃತಿಯು ನಿರ್ಗುಣದಲ್ಲಿಗಿಂತ ಹೆಚ್ಚಾಗಿ ಶಕ್ತಿಶಾಲಿಯಾಗಿದೆ. ಅಥವಾ ಸಗುಣ ಪುರುಷನು ನಿರ್ಗುಣನಿಗಿಂತ ಕಡಿಮೆ ಶಕ್ತಿಶಾಲಿಯಾಗಿದ್ದಾನೆ.

ಪ್ರಕೃತಿಯು ಒಂದು ವಿಶೇಷ ಕ್ರಿಯಾಶೀಲ ಶಕ್ತಿಯಾಗಿದೆ. ವಿದ್ಯುತ್ತಿನ ಪ್ರವಾಹದಂತೆ, ಕ್ರಿಯಾ ಭೂಮಿಯಲ್ಲಿ ಎಲ್ಲೆಡೆಗೆ ಅದರ ಕಾರ್ಯಕಾರಿ ಶಕ್ತಿಯು ಒಂದೇ ಸಮವಿದೆ. ಆದ್ದರಿಂದ, ಸಗುಣ ಇಲ್ಲವೆ ನಿರ್ಗುಣ ಭೇದದಿಂದ ಅದರ ಶಕ್ತಿಯಲ್ಲಿ ಅಂತರ ಉಳಿಯುವ ಪ್ರಶ್ನೆಯೇ ಏಳುವುದಿಲ್ಲ. ಆದ್ದರಿಂದ ಪುರುಷನ ಸಘನ ಇಲ್ಲವೆ* ಅಘನ ಅವಸ್ಥೆಯ ಕಾರಣದಿಂದಾಗಿಯೇ ಪ್ರಕೃತಿಯ ಪ್ರಭಾವವು ಶಿಥಿಲ ಇಲ್ಲವೆ ದೃಢವಾಗಿರುತ್ತದೆ.

ಅನಾದಿ, ಅನಂತ ನಿರ್ಗುಣ ಬ್ರಹ್ಮನಲ್ಲಿ ಪ್ರಕೃತಿಯ ಬಂಧನದ ದೃಢತೆಯ ಕಾರಣ ಸಗುಣದ ವಿಕಾಸವಾಗುತ್ತದೆ. ತಂಪು ಹವೆಯ ಕಾರಣ, ಮಹಾ ಸಮುದ್ರದ ವಿಶೇಷ ಭಾಗಗಳಲ್ಲಿ ಸ್ಪಷ್ಟವಾಗಿ ಹರಿಯುವ ಹಿಮ ಖಂಡಗಳಂತೆ, ಸಗುಣನೂ ಅವಶ್ಯವಾಗಿಯೇ ನಿರ್ಗುಣನೊಳಗೇ ಇದ್ದಾನೆ. ಮಹಾಸಮುದ್ರದಲ್ಲಿ ವಿಸ್ತೃತ ಜಲ ರಾಶಿಯು ಉಳಿದ ಭಾಗದ ನೀರು ಯಾವ ಪ್ರಕಾರ ಬರ್ಫದಿಂದ ಅಪ್ರಭಾವಿತ ಮತ್ತು ಅವಿಕೃತವಾಗಿ ಉಳಿಯುವುದೋ, ಸರಿಯಾಗಿ ಅದೇ ರೀತಿ, ಸಗುಣವನ್ನು ಹೊರತುಪಡಿಸಿ ಉಳಿದ ನಿರ್ಗುಣವು ಅವಿಕೃತವಾಗಿಯೇ ಉಳಿದಿರುತ್ತದೆ. ಇದು ಕಾರಣ, ಸಗುಣ ಬ್ರಹ್ಮವು ನಿರ್ಗುಣದೊಳಗೇ ಉಂಟು.

ಪ್ರಕೃತಿಯ ಅಧೀನ ಪುರುಷನನ್ನು ಸಗುಣ ಎನ್ನುತ್ತಾರೆ. ಸ್ವರೂಪಾವಸ್ಥೆಯಲ್ಲಿ ಪ್ರಕೃತಿಯ ಪ್ರಭಾವದಿಂದ ಪುರುಷನು ಮುಕ್ತನಾಗಿದ್ದಾನೆ. ಆದ್ದರಿಂದ, ಸಗುಣಬಹ್ಮನು ಅರ್ಥಾತ್ ಗುಣಾನ್ವಿತ ಪುರುಷನು ಬ್ರಹ್ಮ ಸ್ವರೂಪ

---

*ಟಿಪ್ಪಣಿ: ಪುರುಷನೇಕೆ ಅಘನ ಅವಸ್ಥೆಯಲ್ಲಿರುತ್ತಾನೆ? ಹಾಗೂ ಪ್ರಕೃತಿ ಎಂದಿನಿಂದ ಅವನನ್ನು ಗುಣಾನ್ವಿತಗೊಳಿಸುವ ಪ್ರಯತ್ನವನ್ನು ಮಾಡುತ್ತಿದೆ? ಈ ಪ್ರಕಾರದ ಪ್ರಶ್ನೆಗೆ ಯಾವುದೇ ಅವಕಾಶವಿಲ್ಲ. ಏಕೆಂದರೆ, ಕಾರ್ಯ–ಕಾರಣದ ಆಧಾರವಾದ ವ್ಯಷ್ಟಿಮನ ಇಲ್ಲವೆ ಸಮಷ್ಟಿ ಮನದ ಉತ್ಪತ್ತಿಯು ಸಗುಣಬ್ರಹ್ಮದ ಸಾಪೇಕ್ಷವಿದೆ. ಇದರಿಂದ ಬ್ರಹ್ಮನ ಸೃಷ್ಟಿಯ ಕಾರಣವನ್ನು ಹುಡುಕುವುದು ಮನದ ಪರಿಧಿಯಾಚೆಗಿದೆ. ವೇದದಲ್ಲಿಯೂ (ನಾರದೀಯ ಸೂಕ್ತದಲ್ಲಿ) ಸಹ, ಬ್ರಹ್ಮನೇ ಸ್ವತಃ ತನ್ನ ಸೃಷ್ಟಿಯ ಕಾರಣವನ್ನು ಅರಿಯನು; ಎಂದು ಸರಿಯಾಗಿಯೇ ಹೇಳಲಾಗಿದೆ. ಒಂದು ವೇಳೆ, ಬ್ರಹ್ಮನು ಕಾರಣ–ಹೀನನಾಗಿರದಿದ್ದರೆ, ನಿಶ್ಚಯವಾಗಿಯೂ ಅವನು ಕಾರ್ಯಕಾರಣ ತತ್ತ್ವದೊಳಗೆ ಬರುತ್ತಾನೆ. ಮತ್ತು ಅನಾದಿ, ಅನಂತ, ಎಂಬ ವಿಶೇಷಣಗಳನ್ನು ಕಳೆದುಕೊಳ್ಳುತ್ತಾನೆ.



ನಲ್ಲ. ಆದರೆ ಆಗ ಸಹ, ಪುರುಷ ಮತ್ತು ಪ್ರಕೃತಿ ಇವೆರಡರ ಉಪಸ್ಥಿತಿಯ ಕಾರಣ, ಅವನನ್ನೂ ಬ್ರಹ್ಮ ಎಂದು ಕರೆಯುತ್ತಾರೆ. ಸಗುಣ ಬ್ರಹ್ಮನು ಹೇಗಿರುವನೆಂಬುದನ್ನು ಮಹಾಸಮುದ್ರದಲ್ಲಿ ತೇಲುವ ಹಿಮಖಂಡದ ಉದಾಹರಣೆ ನೀಡಿ, ತಿಳಿಸಿಕೊಡಬಲ್ಲೆವು. ತಂಪು ಹವೆಯ ಕಾರಣ, ಮಹಾಸಮುದ್ರದ ಜಲರಾಶಿಯ ಸ್ವಲ್ಪ ಭಾಗವು ಬರ್ಫದಲ್ಲಿ ರೂಪಾಂತರಿತವಾಗುತ್ತದೆ. ಅಲ್ಲಿ ಮಹಾಸಮುದ್ರವನ್ನು ನಿರ್ಗುಣ ಬ್ರಹ್ಮನೊಂದಿಗೆ ಹೋಲಿಸಲಾಗಿದೆ. ಮತ್ತು ಬ್ರರ್ಫವನ್ನು ಸಗುಣ ಬ್ರಹ್ಮನೊಂದಿಗೆ ಹೋಲಿಸಲಾಗಿದೆ. ಹಾಗೆಯೇ ಅದರ ಕಾರಣವಾದ ತಂಪು ಹವೆಯನ್ನು ಪ್ರಕೃತಿಯೊಂದಿಗೆ ಹೋಲಿಸಬಹುದು. ಮಹಾಸಮುದ್ರದ ಇನ್ನುಳಿದ ಜಲ ರಾಶಿಯು ನಿರ್ಗುಣ ಪುರುಷನಿಗೆ ಸಮಾನವಾಗಿದೆ. ಮಹಾ ಸಮುದ್ರದಲ್ಲಿ ಬರ್ಫ ಮತ್ತು ಅವಿಕೃತ ಜಲ ರಾಶಿಗಳು ಕೇವಲ ನೀರಿನ ಬೇರೆ ಬೇರೆ ಅವಸ್ಥೆಗಳಷ್ಟೇ ಆಗಿವೆ. ಈ ಎರಡರ ನಡುವೆ ಇರುವ ಪಾರ್ಥಕ್ಯವೆಂದರೆ, ವಿಶೇಷ ಸ್ಥಾನದಲ್ಲಿ ಜಲ ವಾಯುವು ಜಲವನ್ನು ಹಿಮದಲ್ಲಿ ರೂಪಾಂತರಿಸಿರುತ್ತದೆ. ಇದನ್ನು ಬೇರೆಡೆಗಳಲ್ಲಿ ರೂಪಾಂತರಿಸಲಾರದು. ಹಿಮವು ನೀರಿನ ಅವಸ್ಥಾ ಭೇದವಷ್ಟೇ ಆಗಿದೆ. ಆದರೂ ಸಹ, ನಾವು ಅದನ್ನು ನೀರು ಎಂದೇನೂ ಕರೆಯುವುದಿಲ್ಲ. ಅದೇ ಪ್ರಕಾರ, ಸಗುಣ ಬ್ರಹ್ಮನನ್ನು ನಾವು ಬ್ರಹ್ಮ ಸ್ವರೂಪನೆಂದು ಕರೆಯಲಾರೆವು. ಏಕೆಂದರೆ, ಸಗುಣ ಬ್ರಹ್ಮನು ಬ್ರಹ್ಮಸ್ವರೂಪದ ಒಂದು ರೂಪಾಂತರಿತ ವಿಶೇಷ ಅವಸ್ಥೆಯಾಗಿದ್ದಾನೆ. ಆದ್ದರಿಂದ ಬ್ರಹ್ಮ ಸ್ವರೂಪನ ಉಪಲಬ್ಧಿಗಾಗಿ, ನಾವು ನಿರ್ಗುಣ ಬ್ರಹ್ಮನನ್ನು ತಿಳಿಯಲೇಬೇಕಾಗುತ್ತದೆ. ಕೇವಲ ವಿಕಲ್ಪಯುಕ್ತ ಸಗುಣದ ಉಪಲಬ್ಧಿಯು ನಮಗೆ ಪರಮ ಸತ್ತೆಯ ಉಪಲಬ್ಧಿಯನ್ನು ಪಡೆದುಕೊಳ್ಳುವಲ್ಲಿ ಮುಂದೆ ಹೋಗಗೊಡದು.

ಭಗವಾನನು ಯಾರು? ಮತ್ತು ಅವನು ಏನಾಗಿದ್ದಾನೆ? ಅವನು ಸಗುಣನೋ ಇಲ್ಲವೆ ನಿರ್ಗುಣನೋ? ಭಗವಾನ–ಇದೊಂದು ಸಂಸ್ಕೃತ ಶಬ್ದವಾಗಿದೆ. ಭಗ ಶಬ್ದದಲ್ಲಿ ಮತುಪ್ ಪ್ರತ್ಯಯ ಹಚ್ಚಿ, ಭಗವಾನ ಶಬ್ದವು ನಿಷ್ಪನ್ನವಾಗಿದೆ. ಭಗ ಶಬ್ದದ ಅರ್ಥವೆಂದರೆ, ಶಾಶ್ವತ ಶಕ್ತಿ, ಪ್ರೇಮ ಹಾಗೂ ಜ್ಯೋತಿ ಮತ್ತು ಇದರಿಂದ ಭಗವಾನದ ಅರ್ಥವೆಂದರೆ ಜ್ಯೋತಿರ್ಮಯ, ಮಂಗಲಮಯ ಹಾಗೂ ಸರ್ವ ಶಕ್ತಿವಂತನಾದ ಓರ್ವ ಸತ್ತೆಯೆಂದು ತಿಳಿಯುತ್ತೇವೆ. ಈ ಎಲ್ಲ ಗುಣ ವಿಶೇಷತೆಗಳ ಕಾರಣ ಭಗವಾನನನ್ನು ಅವಶ್ಯವಾಗಿ ಗುಣಾನ್ವಿತ ಇಲ್ಲವೆ ಗುಣಯುಕ್ತ ಪುರುಷನೆಂದು ಕರೆಯುತ್ತಾರೆ. ನಿರ್ಗುಣಾ

ವಸ್ಥೆಯಲ್ಲಿ ಪುರುಷನು ಗುಣಾನ್ವಿತನಾಗಿರುವುದಿಲ್ಲ. ಸಗುಣಾವಸ್ಥೆಯಲ್ಲಿಯೇ ಅವನು ಗುಣಾನ್ವಿತನಾಗಿರುತ್ತಾನೆ. ಈ ಪ್ರಕಾರ, ಭಗವಾನನನ್ನು ನಿರ್ಗುಣದ ಅವಸ್ಥಾ ಭೇದದಿಂದ,ವಿಕಲ್ಪಯುಕ್ತನಾದ ಸಗುಣ ಬ್ರಹ್ಮನ ಪರ್ಯಾಯವಾಚಕವೆಂದು ಕರೆಯಬಹುದು. ಬ್ರಹ್ಮಸ್ವರೂಪ ಇಲ್ಲವೆ ಪರಮ ಪುರುಷನ ಹೆಸರಿನಿಂದಲ್ಲ. ಮತ್ತು ಇದರಿಂದ, ಅವನನ್ನು ಪಡೆದರೂ ಪರಮಪುರುಷನನ್ನು ಪಡೆದಂತಾಗುವುದಿಲ್ಲ. ಬ್ರಹ್ಮನನ್ನು ತಿಳಿಯುವುದಕ್ಕಾಗಿ ಭಗವಾನನಿಗಿಂತ ಮೇಲೇರಿ, ನಿರ್ಗುಣದ ಉಪಲಬ್ಧಿಯನ್ನು ಮಾಡಿಕೊಳ್ಳಬೇಕು. ಅವನೇ ಎಲ್ಲರ ಆರಾಧ್ಯನಾಗಿದ್ದಾನೆ; ಅವನನ್ನೇ ಪಡೆಯಬೇಕು.

೩

## ಜಗತ್ತು ಏನಿದೆ ?

ಅಣು ಚೈತನ್ಯದ ಸಾಮಗ್ರಿಕತೆಯ ಕಾರಣ ಬ್ರಹ್ಮನನ್ನು ಸಾಮೂಹಿಕ ಚೈತನ್ಯನೆಂದು ಕರೆಯುತ್ತಾರೆ. ಪ್ರತಿಯೊಂದು ಅಣು ಚೈತನ್ಯವು ಹಾಗೂ ಬ್ರಹ್ಮನು ಸರ್ವ–ನಿರಪೇಕ್ಷ ಸತ್ತೆಯಾಗಿದ್ದಾರೆ. ಅಣು ಚೈತನ್ಯದ ಸಂಖ್ಯೆಯು ಅನಂತವಾಗಿದ್ದ ಮೇಲೆ ಅವರೆಲ್ಲರ ಸಾಮಗ್ರಿಕ ರೂಪವಾದ ಬ್ರಹ್ಮನೂ ಅನಂತವಾಗಬಲ್ಲನು. ಇದರಿಂದ ಅಣು ಚೈತನ್ಯಗಳ ಸಂಖ್ಯೆಯು ಅವಶ್ಯವಾಗಿ ಅನಂತವಾಗಿದೆ. ಇಲ್ಲಿ ಈ ಪ್ರಶ್ನೆ ಏಳುತ್ತದೆ. ಏನೆಂದರೆ ಬ್ರಹ್ಮನು ಯಾವ ಪ್ರಕಾರ ಅಣುಚೈತನ್ಯ ಸಮೂಹದ ಸಮಷ್ಟಿಯಾದನೋ ಆಗ ಬ್ರಹ್ಮನು ಅನಂತ ಸಂಖ್ಯೆಯ ಅಣುಚೈತನ್ಯಗಳ ಅಸ್ತಿತ್ವದ ಸಾಪೇಕ್ಷನೇನು? ಇಲ್ಲವೆ ಅಣುಚೈತನ್ಯ ಸಮೂಹವೇ ಬ್ರಹ್ಮನ ಸಾಪೇಕ್ಷವೆ? ಅಣುಚೈನ್ಯವು ಒಂದು ಸರ್ವ ನಿರಪೇಕ್ಷ ಸತ್ತೆಯಾಗಿದೆ ಮತ್ತು ಇದರ ಅಭಿವ್ಯಕ್ತಿಯು ಪ್ರತಿಯೊಂದು ವ್ಯಷ್ಟಿಸತ್ತೆಯಲ್ಲಿದೆ, ಎಂದು ಮೊದಲೇ ಹೇಳಲಾಗಿದೆ. ಆದರೆ ಮಾನವನು ಯಾವುದೇ ನಿರಪೇಕ್ಷ ಸತ್ತೆಯಾಗಿಲ್ಲ. ಎಲ್ಲಿಯವರೆಗೆ ಎಂದರೆ ಈ ಪೃಥ್ವಿಯ ಮೇಲೆ ಸಹ, ಅವನು ಪ್ರಥಮ ಪ್ರಾಣಿಯೂ ಅಲ್ಲ. ಇತಿಹಾಸವೇ ಇದಕ್ಕೆ ಸಾಕ್ಷಿಯಾಗಿದೆ. ಯಾವಾಗ ಸೂರ್ಯನಿಂದ ಪೃಥ್ವಿಯ ಸೃಷ್ಟಿಯಾಯಿತೋ, ಆ ಸಮಯಕ್ಕೆ ಇದೊಂದು ಗೋಲಾಕಾರದ ಅಗ್ನಿ ಪಿಂಡವಷ್ಟೇ ಆಗಿತ್ತು. ಬರ ಬರುತ್ತ ಉಷ್ಣತೆಯು ಕಡಿಮೆಯಾದಂತೆ ಜಲ ಮತ್ತು ನೆಲಗಳ ಸೃಷ್ಟಿಯಾಯಿತು. ಅದಾದ ನಂತರ ಗಿಡಗಂಟಿ, ಜೀವಜಂತು ಈ ಎಲ್ಲವೂ ಆದವು ಮತ್ತು ಎಲ್ಲಕ್ಕಿಂತ ಕೊನೆಗೆ ಮಾನವನ ಸೃಷ್ಟಿಯಾಯಿತು. ಅಂದಮೇಲೆ ಮಾನವನ ಮೂಲ ಅಸ್ತಿತ್ವವು ಪೃಥ್ವಿಯ ಸಾಪೇಕ್ಷವಿದೆ. ಆದ್ದರಿಂದ ಅವನೊಂದು ನಿರಪೇಕ್ಷ ಸತ್ತೆಯಲ್ಲ. ಆದರೆ ಆತ್ಮನ ಸತ್ತೆಯು ಸರ್ವನಿರಪೇಕ್ಷವಾಗಿರುವ

ಕಾರಣ, ಅವನು ಅವಶ್ಯವಾಗಿಯೇ ಮಾನವನ ಸಾಪೇಕ್ಷನಲ್ಲ. ಮಾನವನ ಸೃಷ್ಟಿಗಿಂತ ಪೂರ್ವದಲ್ಲಿಯೇ ಅವನು ಉಪಸ್ಥಿತನಿದ್ದನು; ಎಂಬುದನ್ನು ಅಸ್ವೀಕಾರ ಮಾಡಲಾರೆವು. ಸರ್ವ ನಿರಪೇಕ್ಷವಾದ ಕಾರಣ ಕೇವಲ ಭೂಮಾ ಚೈತನ್ಯವೇ ಪ್ರಾಕ್ ಪಂಚಭೂತ (ಪಂಚಭೂತಗಳಿಗಿಂತ ಪೂರ್ವದಲ್ಲಿದ್ದ) ಅಣುಚೈತನ್ಯದ ಉತ್ಪತ್ತಿಯ ಕಾರಣವಾಗಬಲ್ಲನು. ಮಾನವನ ಸೃಷ್ಟಿಯಾದ ಬಳಿಕ ಅವನಲ್ಲಿ ಅಣು ಚೈತನ್ಯವು ಪ್ರತಿಫಲಿಸಿತು. ಅಣು ಚೈತನ್ಯವು ಭೂಮಾ ಚೈತನ್ಯದ ವಿಶೇಷ ಅಂಶವೇ ಆಗಿದೆ. ಅರ್ಥಾತ್ ಸೃಷ್ಟಿಯ ಆದಿಯಲ್ಲಿ ಅನಂತ ಸಂಖ್ಯೆಯ ಅಣುಚೈತನ್ಯಗಳು ಬೇರೆ ಬೇರೆಯಾಗಿ ಇರಲಿಲ್ಲ. ಬ್ರಹ್ಮನು ತನ್ನನ್ನೇ ಅನಂತ ಸಂಖ್ಯೆಯ ಅಣು ಚೈತನ್ಯಗಳ ರೂಪದಲ್ಲಿ ಪ್ರತಿಫಲಿತಗೊಳಿಸಿದ್ದಾನೆ. ಇದರಿಂದ ಬ್ರಹ್ಮನನ್ನು ಸಮಷ್ಠಿ ಚೈತನ್ಯ ಎಂದು ಕರೆಯುತ್ತಾರೆ. ಇದರಿಂದ ಭೂಮಾ ಚೈತನ್ಯದಿಂದಲೇ ಮಾನವನ ಚೈತನ್ಯ ಇಲ್ಲವೇ ಆತ್ಮನು ಸೃಷ್ಟವಾಗಿದ್ದಾನೆ ಎಂಬುದು ಸಹ ಸಿದ್ಧವಾಗುತ್ತದೆ. ಆದಿ–ಅಂತಗಳನ್ನುಳ್ಳ, ಸಾಂತ ಸೀಮಿತ ಪೃಥ್ವಿಯ ಸಾಪೇಕ್ಷ ಮಾನವ ಶರೀರದ ಅಸ್ತಿತ್ವವು ಯಾವ ಸೂಕ್ಷ್ಮ ಚೈತನ್ಯದ ಮೇಲೆ ಆಧಾರಿತವಾಗಿದೆಯೋ, ಅದರ ಉತ್ಪತ್ತಿಯು ಕ್ಷಿತಿ ತತ್ತ್ವದಿಂದಲೇ ಆಗಿದೆ. ಆದ್ದರಿಂದ ಕ್ಷಿತಿ ತತ್ತ್ವದಲ್ಲಿಯೇ ಚೈತನ್ಯದ ಅಭಿವ್ಯಕ್ತಿಯ ಸಂಭಾವ್ಯತೆ ಇದ್ದಿತೆಂದು ಹೇಳಬೇಕಾಗುತ್ತದೆ. ಉದಾಹರಣೆಗಾಗಿ ನೋಡಿರಿ. ಹಾಲಿನಲ್ಲಿ ಬೆಣ್ಣೆಯ ಸಂಭಾವ್ಯತೆ ಇರುತ್ತದೆ. ಅದರಿಂದಾಗಿಯೇ ಹಾಲನ್ನು ಕಡೆದು ಬೆಣ್ಣೆಯನ್ನು ಹೊರಗೆಡುಹುತ್ತಾರೆ. ಅದೇ ಪ್ರಕಾರ, ಕ್ಷಿತಿ ತತ್ತ್ವದಲ್ಲಿ ಅಣು ಚೈತನ್ಯದ ಉಪಸ್ಥಿತಿಯು ಇಲ್ಲವಾದಲ್ಲಿ,ಅದರ ಸಾಪೇಕ್ಷ ಮಾನವ ಶರೀರದಲ್ಲಿ ಅಣು ಚೈತನ್ಯದ ಅಭಿವ್ಯಕ್ತಿಯನ್ನು ಪಡೆಯುತ್ತಿರಲಿಲ್ಲ. ಹಾಲಿನಲ್ಲಿ ಬೆಣ್ಣೆ ಇದೆ. ಆದರೆ ಕಡೆಗೋಲಿನ ಸಹಾಯವಿಲ್ಲದೆ ಬೆಣ್ಣೆಯನ್ನುಂಟು ಮಾಡಲಾರೆವು. ಅದೇ ಪ್ರಕಾರ, ಕ್ಷಿತಿ ತತ್ತ್ವದಲ್ಲಿ ಅಣು ಚೈತನ್ಯದ ಅಪರಿಸ್ಫುಟ ಹಾಗೂ ಸುಪ್ತ ಸಂಭಾವ್ಯತೆಯು ಅಭಿವ್ಯಕ್ತವಾಗಿ ಕೇವಲ ಮಾನವ ಮನದಲ್ಲಿಯೇ ಪ್ರತಿಫಲಿಸುತ್ತದೆ ಮತ್ತು ಅನುಭವ ಸಿದ್ಧವಾಗುತ್ತದೆ. ಪೃಥ್ವಿಯ ಅಸ್ತಿತ್ವವು ಸೂರ್ಯನ ಸಾಪೇಕ್ಷವಿದೆ. ಸೂರ್ಯನು ಒಂದು ಜ್ವಲಂತ ಬಾಷ್ಪಪಿಂಡವಾಗಿದ್ದಾನೆ. ಅರ್ಥಾತ್ ತೇಜೋಮಾನ ಸತ್ತೆಯಾದ ಸೂರ್ಯನು ವಾಯು ತತ್ತ್ವದ ಸಾಪೇಕ್ಷನಾಗಿದ್ದಾನೆ. ಅದೇ ರೀತಿ, ವಾಯುತತ್ತ್ವವು ವ್ಯೋಮತತ್ತ್ವದ ಸಾಪೇಕ್ಷವಿದೆ. ಏಕೆಂದರೆ ವ್ಯೋಮತತ್ತ್ವವೇ ಇಲ್ಲದಿದ್ದರೆ, ಸ್ಥಾನಾಭಾವದ ಕಾರಣ, ವಾಯು ತತ್ತ್ವವೂ ಇರುತ್ತಿರಲಿಲ್ಲ. ಅರ್ಥಾತ್ ವ್ಯೋಮತತ್ತ್ವದಿಂದಲೇ ವಾಯು ತತ್ತ್ವ,ಸೂರ್ಯ,



ಪೃಥ್ವಿ ಹಾಗೂ ಮನುಷ್ಯರ ಉತ್ಪತ್ತಿಯಾಯಿತು. ಮನುಷ್ಯನೊಳಗೆ ನಾವು ಅಣುಚೈತನ್ಯದ ವಿಕಾಸವನ್ನು ಕಾಣುತ್ತೇವೆ. ಇದರಿಂದ, ಅವನ ಉತ್ಪತ್ತಿಯ ಆಧಾರವಾದ ವ್ಯೋಮತ್ತತ್ತ್ವದಲ್ಲಿ ಅವಶ್ಯವಾಗಿಯೇ ಅಣುಚೈತನ್ಯದ ಅಭಿವ್ಯಕ್ತಿಯುಂಟು. ನಿರಾಕಾರ, ನಿರಾಧಾರವಾಗಿದ್ದರೂ ಸಹ,ಶಬ್ದತನ್ಮಾತ್ರೆಯೊಂದನ್ನು ಒಯ್ಯುವ ಕಾರಣ, ಈ ವ್ಯೋಮತತ್ತ್ವವೂ ಸಹ ಸ್ಥೂಲ ಪಾಂಚಭೌತಿಕ ವಿಕಾಸದೊಳಗೇ ಇದೆ. ಆದರೆ ಸ್ಥೂಲ ಎಂದು ಕರೆಯಲ್ಪಟ್ಟರೂ ಸಹ, ವ್ಯೋಮತತ್ತ್ವವು ಒಂದು ಸೀಮಾ ಹೀನ ಮಹಾ ಶೂನ್ಯವಾಗಿದೆ. ಇದರಲ್ಲಿ ಯಾವುದೇ ಸ್ಥೂಲ ಅಸ್ತಿತ್ವವು ಕಾಣಬರುವುದಿಲ್ಲ. ಮಾನವನ ಚೈತನ್ಯದ ಉತ್ಪತ್ತಿಯ ಆಧಾರವಾದ ಈ ವ್ಯೋಮತತ್ತ್ವದಲ್ಲಿ ಹಿಮದಲ್ಲಿನ ನೀರಿನಂತೆ ಕೇವಲ ಚೈತನ್ಯವೇ ಇರುತ್ತದೆ. ವ್ಯೋಮತತ್ತ್ವದೊಳಗಿರುವ ಈ ಚೈತನ್ಯದ ಉತ್ಪತ್ತಿಯ ಆಧಾರವು ಬ್ರಹ್ಮನಾಗಿದ್ದಾನೆ. ಬ್ರಹ್ಮನಿಂದಲೇ ವ್ಯೋಮತತ್ತ್ವ ಹಾಗೂ ಜಗತ್ತಿನ ಸೃಷ್ಟಿಯಾಗಿದೆ. ವಾಯು, ಅಗ್ನಿ, ಜಲ, ಪೃಥ್ವಿ, ಪೃಥ್ವಿಯ ಮೇಲಿನ ವನಸ್ಪತಿ ಮತ್ತು ಪ್ರಾಣಿಗಳ ವಿಕಾಸದ ಆಧಾರದ ಮೇಲೆ ವ್ಯೋಮತತ್ತ್ವವಾಗಿದೆ. ಅಂದ ಮೇಲೆ, ವ್ಯೋಮತತ್ತ್ವ ಹಾಗೂ ಬ್ರಹ್ಮನಿಂದಲೇ ಜಗತ್ತು ಸೃಷ್ಟವಾಯಿತು. ಹೀಗೆ ಬ್ರಹ್ಮನೇ ಜಗತ್ತಿನ ಸೃಷ್ಟಿಯ ಕಾರಣಭೂತ ಸತ್ತೆಯಾಗಿದ್ದಾನೆ.

ಗುಣಾನ್ವಿತ ಪುರುಷ ಇಲ್ಲವೆ ಸಗುಣಬ್ರಹ್ಮನೇ ಜಗತ್ತಿನ ಸೃಷ್ಟಿಯನ್ನು ಮಾಡಿದ್ದಾನೆ. ಅಥವಾ ಸಗುಣ ಬ್ರಹ್ಮನಿಂದಲೇ ಜಗತ್ತು ಉತ್ಪನ್ನವಾಗಿದೆ. ಆದರೆ ಸಗುಣ ಬ್ರಹ್ಮನು ಒಂದು ವೇಳೆ, ಸೃಷ್ಟಿಯ ರಚನೆಯನ್ನು ಮಾಡಿದ್ದರೆ ಅದರ ಉಪಾದಾನವನ್ನು ಅವನು ಎಲ್ಲಿಂದ ಪಡೆದನು? ಎಂಬ ಪ್ರಶ್ನೆ ಏಳುತ್ತದೆ. ಕುಂಬಾರನು ತನ್ನ ಗಡಿಗೆಯನ್ನು ನಿರ್ಮಿಸುವುದಕ್ಕೋಸುಗ ಪೃಥ್ವಿಯಿಂದ ಮಣ್ಣನ್ನು ತೆಗೆದುಕೊಳ್ಳುತ್ತಾನೆ. ಹಾಗಾದರೆ, ಸಗುಣ ಬ್ರಹ್ಮನೂ ಸಹ, ಎಲ್ಲಿಂದಾದರೂ ಸೃಷ್ಟಿಯ ಉಪಾದಾನವನ್ನು ತೆಗೆದುಕೊಂಡನೇನು? ಒಂದು ವೇಳೆ ಹೀಗಿದ್ದರೆ, ಈ ಉಪಾದಾನವು ತನ್ನ ಸಗುಣ ಬ್ರಹ್ಮನಿಗಿಂತ ದೊಡ್ಡದಿರುತ್ತದೆ. ಮತ್ತು ಸಗುಣ ಬ್ರಹ್ಮನಿಗಿಂತ ಪೂರ್ವದಿಂದಲೇ ಇರುತ್ತದೆ. ಎಂಬ ಈ ಮಾತನ್ನು ಅವಶ್ಯವಾಗಿಯೇ ಒಪ್ಪಬೇಕಾಗುತ್ತದೆ. ಆದರೆ ಬ್ರಹ್ಮನು ಒಬ್ಬ ನಿರಪೇಕ್ಷ ಸತ್ತೆಯಾಗಿದ್ದಾನೆ, ಎಂಬುದನ್ನು ಮೊದಲೇ ಸಿದ್ಧಪಡಿಸಲಾಗಿದೆ. ಬ್ರಹ್ಮಾತೀತವಾದ ಇಲ್ಲವೆ ಬ್ರಹ್ಮನನ್ನು ಹೊರತು ಪಡಿಸಿ, ಯಾವುದನ್ನು ಜಗತ್ತಿನ ಸೃಷ್ಟಿಗೋಸುಗ ಮೂಲ ಉಪಾದಾನ ರೂಪದಲ್ಲಿ ಒಪ್ಪಿಕೊಳ್ಳ

ಬಹುದೋ, ಅಂಥ ಬೇರಾವ ಅಸ್ತಿತ್ವಕ್ಕಾಗಿ ಅವಕಾಶವೇ ಇಲ್ಲ. ಇನ್ನು ತೋರು ಜಗತ್ತು ಏನೂ ಇಲ್ಲದುದರಿಂದ ಸೃಷ್ಟವಾಗಿದೆ; ಎಂಬೀ ಮಾತು ಸಹ ಯುಕ್ತಿ ಮೂಲಕ ಗ್ರಾಹ್ಯವಾಗದು. ಆದ್ದರಿಂದ ಸಗುಣ ಬ್ರಹ್ಮನು ತನ್ನ ದೇಹದಿಂದಲೇ ಜಗತ್ತಿನ ಸೃಷ್ಟಿ ಮಾಡಿದನು. ಅರ್ಥಾತ್ ಜಾಗತಿಕ ವಿಕಾಸವು ಸಗುಣ ಬ್ರಹ್ಮನ ಸ್ಥೂಲ ರೂಪಾಂತರವಷ್ಟೇ; ಎಂಬೀ ಮಾತು ಅಸ್ವೀಕಾರವಾಗಲಾರದು.

ಹಾಗಾದರೆ,ಭಗವಾನನು ಎಲ್ಲ ವಸ್ತುಗಳಲ್ಲಿ ಇದ್ದಾನೆ,ಎಂದು ಹೇಳುವುದು ಅಯುಕ್ತಿ ಸಂಗತವಲ್ಲವೇನು? ಬ್ರಹ್ಮನು ಒಂದು ಪುಸ್ತಕದಲ್ಲಿ ಇದ್ದಾನೆ. ಈ ಹೇಳಿಕೆಯಿಂದಲೇ ಬ್ರಹ್ಮ ಮತ್ತು ಪುಸ್ತಕಗಳ ಬೇರೆ ಬೇರೆ ಅಸ್ತಿತ್ವಗಳು ಸೂಚಿತವಾಗುತ್ತವೆ. ಅರ್ಥಾತ್ ಪುಸ್ತಕವೆಂದರೆ ಸಗುಣ ಬ್ರಹ್ಮನಿಂದ ಬೇರೆ ಇರುವ ಯಾವುದೋ ಸತ್ತೆಯಾಗಿದೆ. ಇದು ಸಂಪೂರ್ಣ ತಪ್ಪು. ಏಕೆಂದರೆ ಎಲ್ಲ ಜಾಗತಿಕ ವಸ್ತುಗಳು ಬ್ರಹ್ಮ ಧಾತುವಿನಿಂದಲೇ ನಿರ್ಮಿತವಾಗಿವೆ. ಬ್ರಹ್ಮನೇ ಸರ್ವ ಪ್ರಕಾರದ ರೂಪಗಳನ್ನು ಧಾರಣ ಮಾಡಿದನು. ಅರ್ಥಾತ್ ಪುಸ್ತಕ ಮತ್ತು ಬ್ರಹ್ಮ ಇವೆರಡೂ ಪೃಥಕ್ ಸತ್ತೆಗಳಲ್ಲ. ಮತ್ತು ಪುಸ್ತಕವು ಬ್ರಹ್ಮಾತೀತವೂ ಅಲ್ಲ. ಬ್ರಹ್ಮನು ಅನಾದಿಯಾಗಿದ್ದಾನೆ ಮತ್ತು ಅನಂತನಾಗಿದ್ದಾನೆ. ಆದ್ದರಿಂದ, ಬ್ರಹ್ಮಾತೀತವಾದ ಯಾವುದೂ ಇರಲಾರದು. ಅಂದ ಮೇಲೆ, ತೋರು ಜಗತ್ತಿನ ಸಕಲ ಸತ್ತೆಗಳ ಅಸ್ತಿತ್ವವು ಬ್ರಹ್ಮನಲ್ಲಿಯೇ ಇದೆ. ಸೂಕ್ಷ್ಮದಿಂದ ಹಿಡಿದು ಜಡತಮದವರೆಗಿನ ಜಗತ್ತಿನ ವಿಕಾಸವೆಲ್ಲವೂ ಬ್ರಹ್ಮಮಯವಾಗಿದೆ.

ಪ್ರಕೃತಿಯ ಗುಣ ಬಂಧನದ ಕಾರಣ, ಸೂಕ್ಷ್ಮ ಭಾವ ಗ್ರಾಹಿಯಾದ ಪುರುಷ ಸತ್ತೆಯ ಸ್ಥೂಲ ವಿಕಾಸದ ಕ್ರಮದಲ್ಲಿ, ಚಂದ್ರ–ಸೂರ್ಯ, ಗ್ರಹ–ನಕ್ಷತ್ರ, ವಾಯು ಮಂಡಲ ಹಾಗೂ ಪೃಥ್ವಿಯ ಮೇಲೆ ಪಸರಿಸಿದ ಜಗತ್ತಿನ ಸೃಷ್ಟಿಯಾಯಿತು. ಹಾಲಿನಲ್ಲಿಯ ಬೆಣ್ಣೆಯ ಹಾಗೆ, ಒಂದು ವೇಳೆ, ಪುರುಷನೇ ಜಗತ್ತಿನ ಕಾರಣನಾಗಿದ್ದರೆ, ಕೇವಲ ಒಂದು ಶಬ್ದ ತನ್ಮಾತ್ರೆಯನ್ನು ಒಯ್ಯುವ, ಆಕಾಶ ತತ್ತ್ವವನ್ನು ಸೂಕ್ಷ್ಮವೆಂದು ಕರೆಯದಿರುವಂತೆ, ಅವನನ್ನು ಸಹ ಸೂಕ್ಷ್ಮವೆಂದು ಕರೆಯಲಾರೆವು. ಆದರೆ, ಪುರುಷನು ಸೂಕ್ಷ್ಮನಿದ್ದಾನೆ; ಎಂಬುದು ಈ ಮೊದಲೇ ಸಿದ್ಧವಾಗಿದೆ. ಅಂದ ಮೇಲೆ, ಸೃಷ್ಟಿಯ ಬೀಜವು ಅವನಲ್ಲಿ ಅಡಗಿರುವ ಸಂಭವವಿಲ್ಲ. ಸೃಷ್ಟಿಯ ಬೀಜವು ಅವನಲ್ಲಿ ಇಲ್ಲವಾದ ಬಳಿಕ ಅವನಿಂದ ಜಗತ್ತು ಸೃಷ್ಟವಾಗುವುದೆಂದರೆ, ಅದು ಸ್ವ–ವಿರೋಧಿ



ಉಕ್ತಿಯಾಗುತ್ತದೆ. ಆದ್ದರಿಂದ, ತರ್ಕ ಮತ್ತು ಯುಕ್ತಿಯ ಮೂಲಕ, ಸ್ಥೂಲ ಜಗತ್ತಿನ ಯಾವುದೇ ವಾಸ್ತವಿಕ ಅಸ್ತಿತ್ವವು ಇಲ್ಲವೆಂದು ಒಪ್ಪಬೇಕಾಗುತ್ತದೆ. ಪ್ರಕೃತಿಯ ಗುಣಬಂಧನದ ಮೂಲಕ ಪುರುಷನ ಮಾನಸ ಸ್ತರದಲ್ಲಿ ಯಾವ ಕಲ್ಪನಾ ತರಂಗಗಳು ಉತ್ಪನ್ನವಾಗುವವೋ, ಅದರಿಂದಲೇ ಈ ವಿಚಿತ್ರ ಕಾಲ್ಪನಿಕ ಜಗತ್ತು ಹುಟ್ಟುತ್ತದೆ. ಕಾಲ್ಪನಿಕ ಸತ್ತೆಯು ವಾಸ್ತವಿಕ ಜಗತ್ತಿನ ಜಡವಸ್ತುವಿನ ಸಾಪೇಕ್ಷವಲ್ಲ. ಆದ್ದರಿಂದ, ಸೂಕ್ಷ್ಮ ಪುರುಷನು ತನ್ನ ದೇಹದಿಂದ, ಅನಾಯಾಸವಾಗಿಯೇ ಈ ಕಾಲ್ಪನಿಕ ಜಗತ್ತಿನ ಸೃಷ್ಟಿಯನ್ನು ಮಾಡಬಲ್ಲನು. ಸೃಷ್ಟಿಯನ್ನು ಕೇವಲ ಒಂದು ಕಲ್ಪನಾ ತರಂಗವೆಂದು ಒಪ್ಪುವುದರಿಂದ, ಕೆಳಗೆ ಬರೆದ ಎರಡು ಸಂಶಯಗಳೇಳುವ ಸಂಭವವಿದೆ.

೧) ಒಂದು ವೇಳೆ, ಜಗತ್ತಿನ ವಾಸ್ತವಿಕ ಅಸ್ತಿತ್ವವು ಇಲ್ಲವಾದರೆ, ನಮಗೆ ಇದೇಕೆ ಸತ್ಯವೆಂದು ತೋರುತ್ತದೆ?

೨) ಪುರುಷನ ಕಲ್ಪನಾ ತರಂಗಗಳು ನಿಂತ ಬಳಿಕ, ಅದರೊಂದಿಗೇ ಸೃಷ್ಟಿಯೂ ಸಹ ಸಮಾಪ್ತವಾಗುತ್ತದೆ. ಕಲ್ಪನಾ–ತರಂಗ ಮತ್ತು ಕಾಲ್ಪನಿಕ ಸತ್ತೆಗಳು ಕ್ಷಣಿಕವಾಗಿವೆ. ಮತ್ತು ಅವುಗಳ ವಿನಾಶವೆಂದರೆ, ಜಗತ್ತಿನ ಪ್ರಳಯ.

ಕಲ್ಪನೆಯು ಯಾವುದೇ ಸಮಯಕ್ಕೆ ಮಾನವನ ಮನದಲ್ಲಿ ಯಾವುದೇ ಕಾಲ್ಪನಿಕ ರೂಪದ ಸೃಷ್ಟಿಯನ್ನು ಮಾಡುವುದೋ, ಆ ಸಮಯಕ್ಕೆ ಅದು ಕೇವಲ ಕಾಲ್ಪನಿಕವಾಗಿ ಉಳಿಯದು. ಕಲ್ಪನೆಯನ್ನು ಮಾಡುವ ಮನುಷ್ಯನಿಗೆ ತನ್ನ ಸ್ವಂತದ ಯಾವತ್ತೂ ಕಾಲ್ಪನಿಕ ಸೃಷ್ಟಿಯು ಯಥಾರ್ಥವಾಗಿಯೇ ಕಂಡುಬರುತ್ತದೆ. ಕಲ್ಪನೆಯ ಪ್ರಭಾವವು ಸಮಾಪ್ತವಾದ ಬಳಿಕವೇ, ಅದೊಂದು ಕೇವಲ ಕಲ್ಪನೆಯಾಗಿತ್ತು; ಎಂದವನು ಅರಿತುಕೊಳ್ಳುತ್ತಾನೆ.

ಈಗ ಕಲ್ಪನೆಯನ್ನು ವಿಶ್ಲೇಷಿಸೋಣ. ಮತ್ತು ಕಲ್ಪನೆಯ ಸಮಯದಲ್ಲಿ ಕಲ್ಪನೆಯು ಯಥಾರ್ಥವಾಗಿ ಹೇಗೆ ಪ್ರತೀತವಾಗುವುದೆಂಬುದನ್ನು ನೋಡೋಣ. ಈ ಮೊದಲಿನ ಅಧ್ಯಾಯದಲ್ಲಿ, ಮನದ ಯಾವ ಅಂಶವು ಎಲ್ಲ ಕಾರ್ಯಗಳನ್ನು ಜೋಡಿಸುವುದೋ,ಅದು ಅಹಂ ತತ್ತ್ವವಾಗಿದೆ. ಮತ್ತು ಯಾವ ಅಂಶವು ಕಾರ್ಯದ ಫಲದಲ್ಲಿ ರೂಪಾಂತರಗೊಳ್ಳುವುದೋ, ಅದು ಚಿತ್ತವಾಗಿದೆ. ಅರ್ಥಾತ್ ಮಾನವನು ಯಾವುದೇ ಕಾಲಕ್ಕೆ ಯಾವುದಾದರೂ ವಸ್ತುವಿನ ಕಲ್ಪನೆಯನ್ನು ಮಾಡುವನೋ, ಆ ಸಮಯಕ್ಕೆ ಅಹಂ ತತ್ತ್ವವು ಕಾರ್ಯ ಮಾಡುತ್ತದೆ. ಮತ್ತು ಚಿತ್ತವು ಆ ವಸ್ತುವಿನ ರೂಪವನ್ನು ಗ್ರಹಿಸುತ್ತದೆ. ಹೇಗೆ ಭಾಗಲಪುರದಲ್ಲಿ ಕುಳಿತುಕೊಂಡು ಯಾವನೊಬ್ಬನು ಕಲಕತ್ತೆಯ

ಚೌರಂಗಿಯ ಕಲ್ಪನೆಯನ್ನು ಮಾಡುತ್ತಾನೆ. ಮತ್ತು ಚಿತ್ತವು ಚೌರಂಗಿಯ ರೂಪವನ್ನು ಗ್ರಹಿಸುತ್ತದೆ. ಚಿತ್ತವು ರೂಪ ಗ್ರಹಣ ಮಾಡುತ್ತಿದ್ದಂತೆಯೇ ಅಹಂ ತತ್ತ್ವದ ಕಾಲ್ಪನಿಕ ದರ್ಶನ ಕ್ರಿಯೆಯು ಪ್ರಾರಂಭವಾಗುತ್ತದೆ.

ವಿಷಯದ ರೂಪವನ್ನು ಗ್ರಹಿಸುವುದಕ್ಕಾಗಿ ಚಿತ್ತವು ಮೊತ್ತಮೊದಲು ತನ್ಮಾತ್ರೆಯ ಅನುಸಾರ, ವಿಷಯದ ಮೂಲ ಧಾತು ( ಭೂತ ) ವಿನಲ್ಲಿ ರೂಪಾಂತರಗೊಳ್ಳುತ್ತದೆ. ಉದಾಹರಣೆಗಾಗಿ ನೋಡಿರಿ : ಪುಸ್ತಕವನ್ನು ನೋಡುವ ಸಮಯಕ್ಕೆ ಚಿತ್ತವು ರೂಪ ತನ್ಮಾತ್ರೆಗಳನ್ನು ಗ್ರಹಿಸುತ್ತದೆ. ಆದರೆ, ಮನದಲ್ಲಿ ಪುಸ್ತಕದ ಯಥಾರ್ಥ ರೂಪವನ್ನು ಗ್ರಹಣ ಮಾಡುವುದಕ್ಕಿಂತ ಮೊದಲು ಚಿತ್ತವು ಪುಸ್ತಕದ ಮೂಲ ಧಾತುವಾದ ಕ್ಷಿತಿ ತತ್ತ್ವದಲ್ಲಿ ಅಂತರ್ಗತವಾದ ಕಾಗದದಲ್ಲಿ ರೂಪಾಂತರಗೊಳ್ಳಬೇಕಾಗುತ್ತದೆ. ಕಾಲ್ಪನಿಕ ರೂಪವು ಯಾವ ಪ್ರಕಾರ ತೈಯಾರಾಗುವುದೆಂಬುದನ್ನು ತಿಳಿದ ಮೇಲೆಯೇ ಕಾಲ್ಪನಿಕ ಸತ್ತೆಯು ಯಥಾರ್ಥವಾಗಿ ಏಕೆ ಪ್ರತೀತವಾಗುತ್ತದೆಯೆಂಬುದನ್ನೂ ತಿಳಿಯಬಹುದಾಗಿದೆ.

ಚಿತ್ತದ ಎಲ್ಲ ಕಾರ್ಯಗಳು ಇಂದ್ರಿಯಗಳ ಮಾಧ್ಯಮದಿಂದ ಕೂಡಿರುತ್ತವೆ. ಅಹಂ ತತ್ತ್ವದ ಇಚ್ಛಾನುಸಾರ ಮತ್ತು ಇಂದ್ರಿಯಗಳ ಮಾಧ್ಯಮದಿಂದ, ಚಿತ್ತವು ತನ್ಮಾತ್ರೆಗಳೊಂದಿಗೆ ಸಂಪರ್ಕವನ್ನು ಸ್ಥಾಪಿಸಿಕೊಂಡು ವಸ್ತುವಿನ ರೂಪವನ್ನು ಧಾರಣ ಮಾಡುತ್ತದೆ. ಆದರೆ, ಭಾಗಲಪುರದಲ್ಲಿ ಕುಳಿತುಕೊಂಡು ಕಲಕತ್ತೆಯ ಚೌರಂಗಿಯನ್ನು ಕಲ್ಪಿಸಿಕೊಳ್ಳುವುದು ಇಂದ್ರಿಯದ ಸಾಪೇಕ್ಷವಿಲ್ಲ. ಏಕೆಂದರೆ, ೨೫೦ ಮೈಲು ದೂರದಲ್ಲಿರುವ ಕಲಕತ್ತೆಯು ಇಂದ್ರಿಯಗಳ ಸೀಮೆಯಾಚೆಗಿದೆ. ಮತ್ತು ಇದರಿಂದ ಚಿತ್ತವು ಇಂದ್ರಿಯಗಳಿಂದ ದೂರ ಸರಿದು ತಾನೇ ಚೌರಂಗಿಯ ರೂಪವನ್ನು ತಾಳುತ್ತದೆ. ಚಿತ್ತ ಮತ್ತು ಇಂದ್ರಿಯಗಳ ಸಂಪರ್ಕವು ತಪ್ಪಿ ಹೋಗುವುದರಿಂದ, ಇಂದ್ರಿಯಗಳು ನಿಷ್ಕ್ರಿಯವಾಗುತ್ತವೆ. ಮತ್ತು ಈ ಕಾರಣದಿಂದ ಮಾನವನಿಗೆ ದೇಶ, ಕಾಲ ಹಾಗೂ ಪಾತ್ರಗಳ ಸಂಬಂಧ ಮತ್ತು ಅದರ ಪಾರ್ಥಕ್ಯ-ಬೋಧೆಯು ಇರುವುದಿಲ್ಲ. ಭಾಗಲಪುರದ ಯಾವನೊಬ್ಬ ವ್ಯಕ್ತಿಯು, ತನ್ನ ಚಕ್ಷುರಿಂದ್ರಿಯ ಒಂದರಿಂದಲೇ ತಾನು ಭಾಗಲಪುರದಲ್ಲಿ ಇರುವೆನೆಂಬುದನ್ನು ಅರಿಯುತ್ತಾನೆ. ಆದರೆ, ಒಂದು ವೇಳೆ, ಚಿತ್ತವು ಎಲ್ಲ ಇಂದ್ರಿಯಗಳಿಂದ ದೂರವಾಗಿ, ಚೌರಂಗಿಯ ರೂಪವನ್ನು ಗ್ರಹಿಸಿದರೆ, ಅಂಥ ಅವಸ್ಥೆಯಲ್ಲಿ ಚಕ್ಷುರಿಂದ್ರಿಯವು ತನ್ನ ಸುತ್ತು ಮುತ್ತಿನ ವಸ್ತುಗಳ ತನ್ಮಾತ್ರೆಗಳನ್ನು ಗ್ರಹಿಸಲಾರದು. ತತ್ಫಲವಾಗಿ ಆ ವ್ಯಕ್ತಿಯು



ಆ ವೇಳೆಯಲ್ಲಿ, ಭಾಗಲ ಪುರದಲ್ಲಿ ಕುಳಿತುಕೊಂಡೇ ಕಲ್ಪನೆಯ ಮೂಲಕ ಚೌರಂಗಿಯನ್ನು ನೋಡುತ್ತಿರುತ್ತಾನೆ. ಇಂದ್ರಿಯದ ಕರ್ಮದ ನಿಂತಮೇಲೆ ಚಿತ್ತವು ಭಾಗಲಪುರದ ರೂಪವನ್ನು ಗ್ರಹಿಸಲಾರದು. ಮತ್ತು ಇದರಿಂದ, ಅಹಂ ತತ್ತ್ವವು ಭಾಗಲ ಪುರದ ಯಾವುದೇ ಭಾಗವನ್ನು ನೋಡಲಾರದು. ಅದು ಕೇವಲ ಚೌರಂಗಿಯನ್ನಷ್ಟೇ ನೋಡುತ್ತದೆ ಮತ್ತು ಮನದಲ್ಲಿ ತಾನು ಚೌರಂಗಿಯಲ್ಲಿಯೇ ಇದ್ದೇನೆ; ಎಂದು ತಿಳಿಯುತ್ತದೆ. ಚಿತ್ತವು ತಾನೇ ಯಾವ ಕಲ್ಪನೆಯನ್ನೂ ಮಾಡುವುದಿಲ್ಲ. ಕಲ್ಪನೆಯನ್ನು ಅಹಂ ತತ್ತ್ವವೇ ಮಾಡುತ್ತದೆ. ಮತ್ತು ಚಿತ್ತವು ಅಹಂ ತತ್ತ್ವದ ಕಲ್ಪನೆಗನುಸರಿಸಿ, ವಸ್ತು ಭಾವವನ್ನು ಹೊಂದುತ್ತದೆ. ಅಹಂ ತತ್ತ್ವದ ಕಲ್ಪನೆಯು ಕೊನೆಗೊಂಡ ಕೂಡಲೇ ಚಿತ್ತದ ಕಾಲ್ಪನಿಕ ರೂಪವೂ ಸಹ ಕೊನೆಗೊಳ್ಳುತ್ತದೆ. ಮತ್ತು ಇಂದ್ರಿಯಗಳು ಸಕ್ರಿಯವಾಗುತ್ತವೆ. ಆಗ ಆ ವ್ಯಕ್ತಿಯು, ಇಷ್ಟು ಹೊತ್ತಿನ ವರೆಗೆ ತಾನು ಯಾವ ಚೌರಂಗಿಯನ್ನು ನೋಡುತ್ತಿದ್ದನೋ, ಅದು ಕಾಲ್ಪನಿಕವಿತ್ತು ಎಂದು ಅರಿಯುತ್ತಾನೆ. ಇದೇ ಕಾರಣಗಳಿಂದ ಕಲ್ಪನಾಧೀನ ವ್ಯಕ್ತಿಗೆ ಕಾಲ್ಪನಿಕ ವಸ್ತುಗಳು ಯಥಾರ್ಥವಾಗಿ ಪ್ರತೀತವಾಗುತ್ತವೆ.

ಅಹಂ ತತ್ತ್ವದ ಇಚ್ಛಾನುಸಾರ, ಚಿತ್ತವು ತನ್ಮಾತ್ರೆಗಳಿಗಿಂತ ಮೇಲಿನ ವಸ್ತುವಿನ ಕಾಲ್ಪನಿಕ ರೂಪವನ್ನು ಗ್ರಹಿಸಬಲ್ಲದು. ಒಂದು ವೇಳೆ, ಇಂಥ ವಸ್ತುವು ವಾಸ್ತವವಾಗಿ ಇಲ್ಲದಿದ್ದರೂ ಸಹ, ಚಿತ್ತದ ರೂಪ-ಗ್ರಹಣ ಕ್ರಿಯೆಯಂತೂ ಯಥಾರ್ಥವಿದೆ.

ಕಲ್ಪನೆ ಮತ್ತು ಅದರ ವಾಸ್ತವಿಕ ರೂಪವನ್ನು ಗ್ರಹಿಸುವ ಸಂಬಂಧದಲ್ಲಿ ವಿವೇಚಿಸಿದ್ದಾಯಿತು. ಈಗ ಜಗತ್ತು ಸಗುಣ ಬ್ರಹ್ಮನ ಕಲ್ಪನೆಯಿಂದ ಉತ್ಪನ್ನವಾಗಿದೆಯೋ? ಇಲ್ಲವೋ? ಎಂಬುದನ್ನು ನೋಡಬೇಕಾಗಿದೆ. ಪ್ರಕೃತಿಯ ಪ್ರಭಾವದ ಕಾರಣ, ಸಗುಣ ಬ್ರಹ್ಮನು ತನ್ನ ದೇಹದಿಂದ ಜಗತ್ತನ್ನು ರಚಿಸಿದ್ದಾನೆ; ಎಂದು ಹೇಳಲಾಗಿದೆಯಷ್ಟೇ. ಅರ್ಥಾತ್ ಮನದ ಅಸ್ತಿತ್ವವನ್ನು ಪ್ರಥಮವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಮನದ ಹೊರತು, ಯಾವುದೇ ಕ್ರಿಯೆಯು ಘಟಿಸುವ ಸಂಭವವಿಲ್ಲ. ಪ್ರಕೃತಿಯ ಪ್ರಭಾವದಿಂದ ಪ್ರತಿಯೊಂದು ಅಣುಚೈತನ್ಯದಲ್ಲಿ ಮನದ ಸ್ಫುರಣವಾಗುತ್ತದೆ. ಅದೇ ರೀತಿ ಸಾಮಾಜಿಕ ಚೈತನ್ಯ ಇಲ್ಲವೆ ಸಗುಣ ಪುರುಷನಲ್ಲಿಯೂ ಸಹ, ಪ್ರಕೃತಿಯ ಪ್ರಭಾವದಿಂದ ಅನಂತ ಸಂಖ್ಯೆಯ ವ್ಯಷ್ಟಿ ಮನಗಳ ಸಮನ್ವಯದಿಂದ ಸಾಮೂಹಿಕ ಮನ ಇಲ್ಲವೆ ಭೂಮಾ ಮನದ ಸ್ಫುರಣವಾಗುತ್ತದೆ. ಪ್ರತಿಯೊಂದು

ಅಣು-ಚೈತನ್ಯವು ಯಾವ ಪ್ರಕಾರ, ಭೂಮಾ ಚೈತನ್ಯದ ಅಂಶವಾಗಿದೆಯೋ, ಅದೇ ಪ್ರಕಾರ, ಪ್ರತಿಯೊಂದು ಅಣು ಮನವೂ ಸಹ, ಭೂಮಾ ಮನದ ಅಂಶವಾಗಿದೆ. ಅಣು ಮಾನಸದ ಸಾಮಗ್ರಿಕ ರೂಪವಾದ ಕಾರಣ, ಭೂಮಾ ಮನವು ಸಹ, ಬುದ್ಧಿ ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತ,–ಈ ಮೂರರ ಸಮನ್ವಯವಾಗಿದೆ. ಆದ್ದರಿಂದ ಜಗತ್ತು ಭೂಮಾ ಮನದ ಕರ್ಮ ಮಾಡುವ ಅಂಶವಾದ ಅಹಂ ತತ್ತ್ವದಿಂದ ಉತ್ಪನ್ನವಾದ ಚಿತ್ತವಾಗಿದೆ. ಅಹಂ ತತ್ತ್ವದ ಇಚ್ಛಾನುಸಾರ, ಇಂದ್ರಿಯಗಳು ತನ್ಮಾತ್ರೆಗಳನ್ನು ಗ್ರಹಿಸುತ್ತ ಹಾಗೂ ತನ್ಮಾತ್ರೆಗಳಿಂದ ದೂರವಿದ್ದು, ಅಹಂ ತತ್ತ್ವದ ಕಲ್ಪನಾ ತರಂಗದಲ್ಲಿ, ಈ ಉಭಯ ಉಪಾಯಗಳಿಂದ ಚಿತ್ತದ ಸೃಷ್ಟಿಯಾಗುತ್ತದೆ. ಸಗುಣ ಬ್ರಹ್ಮನಿಗಿಂತ ಮೇಲೆ ಇಲ್ಲವೆ ಸಗುಣ ಬ್ರಹ್ಮನನ್ನು ಹೊರತುಪಡಿಸಿ, ಯಾವುದೇ ವಸ್ತುವಿನ ರೂಪವನ್ನು ಗ್ರಹಿಸುವ ಪ್ರಶ್ನೆಯೇ ಏಳದು. ಆದ್ದರಿಂದ, ಸಗುಣ ಬ್ರಹ್ಮನ ಚಿತ್ತವು ತನ್ನ ಅಹಂ ತತ್ತ್ವದ ಕಲ್ಪನಾ ತರಂಗಕ್ಕನುಸರಿಸಿ, ರೂಪವನ್ನು ಗ್ರಹಿಸುತ್ತದೆ. ಅಂದ ಮೇಲೆ, ಈ ಜಗತ್ತು ಸಗುಣ ಬ್ರಹ್ಮನ ಅಹಂ ತತ್ತ್ವದ ಕಾರ್ಯದ ಫಲ ಇಲ್ಲವೆ ವಿಶೇಷ ಚಿತ್ತವಾಗಿದೆ. ಚಿತ್ತದ, ಈ ಪ್ರಕಾರದ ರೂಪ ಗ್ರಹಣದ ಕ್ರಿಯೆಗೆ ಕಲ್ಪನೆ ಎನ್ನುತ್ತಾರೆ. ಇದರಿಂದ, ಜಗತ್ತು ಸಗುಣ ಬ್ರಹ್ಮನ ಕಲ್ಪನೆಯಾಗಿದೆ.

ಅಣು ಮಾನಸದ ಸಾಮಗ್ರಿಕತೆಯ ಕಾರಣ, ಭೂಮಾ ಮನಕ್ಕೂ ಸಹ, ಅದರ ಸ್ವಂತ ಕಲ್ಪನೆಯು ಯಥಾರ್ಥವಾಗಿ ಪ್ರತೀತವಾಗುತ್ತದೆ. ಆದ್ದರಿಂದ, ಭೂಮಾ ಮನದ ಕಲ್ಪನೆಯನ್ನು ಅದರ ಸಾಪೇಕ್ಷ ಅಣು ಮಾನಸವು ಒಂದು ಧ್ರುವ ಸತ್ಯದ ರೂಪದಲ್ಲಿ ಗ್ರಹಿಸುತ್ತದೆ.

ಬಹುಶಃ ನೀವು ಕಂಡಿರಬಹುದು: ಏನೆಂದರೆ, ಜಾದೂಗಾರನು ಆಟವನ್ನು ಪ್ರದರ್ಶಿಸುವ ಕಾಲಕ್ಕೆ ಪ್ರೇಕ್ಷಕ ಗಣದೆದುರು ಒಂದು ಹಗ್ಗವನ್ನು ಬಯಲಲ್ಲಿ ತೂರುತ್ತಾನೆ. ಮತ್ತು ಆ ಹಗ್ಗವು ಶೂನ್ಯದಲ್ಲಿಯೇ ಹೊಯ್ದಾಡುತ್ತಿರುತ್ತದೆ. ಅವನ ಸಹಾಯಕನು ಖಡ್ಗವನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ಆ ಹಗ್ಗವನ್ನು ಹಿಡಿದು ಮೇಲೇರುತ್ತಾನೆ. ಮತ್ತು ಅದೃಶ್ಯನಾಗುತ್ತಾನೆ. ಕೆಲವು ಕ್ಷಣಗಳ ನಂತರ, ಅವನ ಕೊಯ್ದು ಹಾಕಿದ ತಲೆ, ಅಂಗ ಪತ್ಯಂಗ ಹಾಗೂ ದಿಡಗಳು ರಕ್ತದಿಂದ ಲತಪತ ತೊಯ್ದ ಅವಸ್ಥೆಯಲ್ಲಿ ಒಂದೊಂದಾಗಿ ಕೆಳಗೆ ಬೀಳತೊಡಗುತ್ತವೆ. ಮತ್ತು ಪ್ರೇಕ್ಷಕರು ಆಶ್ಚರ್ಯ ಚಕಿತರಾಗುತ್ತಾರೆ. ಆಗ ಜಾದೂಗಾರನು ಗೋಗರೆಯುತ್ತ, ತನ್ನ ಸಹಕಾರಿಯ ಕಡಿದೊಗೆದ ಅಂಗ–



ಪ್ರತ್ಯಂಗಗಳನ್ನು ಒಟ್ಟಿಗೆ ಸೇರಿಸಿ, ಒಂದು ಚೀಲದಲ್ಲಿ ತುಂಬತೊಡಗುತ್ತಾನೆ. ಮತ್ತು ಪ್ರೇಕ್ಷಕ ಗಣದ ಸಹಾನುಭೂತಿಯನ್ನು ಪಡೆಯುತ್ತಾನೆ. ಈ ಪ್ರಕಾರ ಕರುಣೆಯಿಂದ ತುಂಬಿದ ಪ್ರೇಕ್ಷಕರಿಂದ ಅವನು ನಾಲ್ಕು ಪಟ್ಟು ಹಣ ಪಡೆದುಕೊಳ್ಳುತ್ತಾನೆ. ಇದಾದ ಕೆಲವೇ ಕ್ಷಣಗಳಲ್ಲಿ ಅವನ ಆ ಸಹಾಯಕನೇ ಪ್ರೇಕ್ಷಕರ ಸಮೂಹದಿಂದ ಹೊರಬೀಳುವುದನ್ನೂ ಕಾಣಬಹುದು. ಪ್ರೇಕ್ಷಕರೆದುರು ಇಂಥ ಆಟವನ್ನು ಜಾದೂಗಾರನು ಹೇಗೆ ತೋರಿಸುತ್ತಾನೆ? ಇಷ್ಟೊಂದು ಜನರು ಆ ಆಟವನ್ನು ಕಣ್ಣಾರೆ ಕಂಡು ಅದನ್ನೆಂತು ಮಿಥ್ಯೆಯೆಂದು ಕರೆಯಬಲ್ಲರು? ಮತ್ತು ಜೊತೆಗೇ, ಯಾರ ಮನವೂ ಸಹ, ಇದನ್ನು ಸತ್ಯವೆಂದು ಒಪ್ಪಲು ಸಿದ್ಧವಿಲ್ಲ. ಜಾದೂಗಾರನು ಅಂಗ–ಪ್ರತ್ಯಂಗಗಳನ್ನು ಕೊಯ್ದುಕೊಂಡ ತನ್ನ ಸಹಾಯಕನನ್ನು ಮರಳಿ ಜೀವಂತಗೊಳಿಸಿದನೇನು? ಈ ತರದ ಅಸ್ವಾಭಾವಿಕ ಅಂಶವನ್ನು ಸತ್ಯವೆಂದು ತಿಳಿಯುವ ಕಾರಣವೇನಿರಬಲ್ಲದು? ಇದನ್ನು ವಿಚಾರಿಸಿ ನೋಡಿರಿ. ಎಲ್ಲಕ್ಕಿಂತ ಮೊದಲು ಶೂನ್ಯದಲ್ಲಿ ಹಗ್ಗವು ಹೊಯ್ದಾಡುತ್ತ ನಿಲ್ಲುವ ಸಂಭವವಿಲ್ಲ. ಮತ್ತು ಅದನು ಹಿಡಿದುಕೊಂಡು ಯಾವ ಮನುಷ್ಯನೂ ಮೇಲೆ ಏರಲಾರನು. ಇನ್ನು ಮರಳಿ ಶರೀರದಿಂದ ಮಸ್ತಕ ಹಾಗೂ ಬೇರೆ ಬೇರೆ ಅಂಗ ಪ್ರತ್ಯಂಗಗಳನ್ನು ಕಡಿದು ಹಾಕಿದ ಬಳಿಕ ಅದನ್ನು ಮತ್ತೆ ಜೀವಂತಗೊಳಿಸುವುದು ಯಾವನ ಮಾನವನಿಗೂ ಸಾಧ್ಯವಿಲ್ಲ. ಅಂದಮೇಲೆ, ಮಾನವನು ಇಂಥ ಘಟನೆಗಳನ್ನು ಹೇಗೆ ನೋಡುತ್ತಾನೆ? ಯಾರೇ ಇರಲಿ, ಎಲ್ಲರೂ ತಮ್ಮ ಚಕ್ಷುರಿಂದ್ರಿಯದ ಸಹಾಯದಿಂದಲೇ ನೋಡುವರಷ್ಟೇ. ನಾವು ಮೊದಲೇ ಕಂಡುಕೊಂಡಂತೆ, ದರ್ಶನ ಕ್ರಿಯೆಯ ಕರ್ತ್ರಾ ಅಹಂ ತತ್ತ್ವವಾಗಿದೆ. ಮತ್ತು ಚಿತ್ತವು ಅಹಂ ತತ್ತ್ವದ ಇಚ್ಛಾನುಸಾರ ವಸ್ತುವಿನ ರೂಪವನ್ನು ಗ್ರಹಿಸುತ್ತದೆ. ಅಂದ ಮೇಲೆ, ಜಾದೂಗಾರನು ಅಧ್ಯಾತ್ಮ ಸಾಧನೆಯ ಮೂಲಕ ಗಳಿಸಿದ ಅಲೌಕಿಕ ಶಕ್ತಿಯಿಂದ, ತನ್ನ ಮನದ ವಿಸ್ತಾರವನ್ನು ಉಪಸ್ಥಿತ ಪ್ರೇಕ್ಷಕ ಗಣದ ಅಹಂ ತತ್ತ್ವದ ಮೇಲೆ, ಮಾಡಿದರೆ, ಪ್ರೇಕ್ಷಕರ ಅಹಂ ತತ್ತ್ವದಲ್ಲಿ ಕರ್ಮ ಮಾಡುವ ಕ್ಷಮತೆಯು ಉಳಿಯುವುದಿಲ್ಲ. ಜಾದೂಗಾರನು ಪ್ರಸಾರಗೊಳಿಸಿದ ಮನವೇ ಆಗ ದರ್ಶಕರ ಸಾಮೂಹಿಕ ಮನವಾಗುತ್ತದೆ. ಆದ್ದರಿಂದ, ಜಾದೂಗಾರನು ಮೇಲೆ ಹೇಳಿದ ದೃಶ್ಯವನ್ನು ಕಲ್ಪಿಸಿಕೊಂಡನೆಯೇ, ಅವನ ಚಿತ್ತವು ಅದೇ ಭಾವವನ್ನು ತಾಳುತ್ತದೆ. ಹೀಗೆ ಉಪಸ್ಥಿತ ಪ್ರೇಕ್ಷಕರು ಜಾದೂಗಾರನ ಭಾವನೆಯಿಂದ ಪ್ರಭಾವಿತರಾಗಿ, ಅದನ್ನೇ ನೋಡುತ್ತಾರೆ. ಒಂದು ವೇಳೆ, ಜಾದೂಗಾರನು ತನ್ನ ಮಾನಸಿಕ ಶಕ್ತಿಯ

ವಿಸ್ತಾರವನ್ನು ೩೦೦ ಅಡಿಯ ಪರಿಧಿಯಲ್ಲಿ ಮಾಡಬಲ್ಲನಾದರೆ, ಅವನ ಪ್ರಸಾರಿತ ಮಾನಸ ಭೂಮಿಯೊಳಗೆ ಎಷ್ಟೇ ಜನರಿರಲಿ, ಅವರೆಲ್ಲರೂ ಈ ಭಾವನೆಯಿಂದ ಪ್ರಭಾವಿತರಾಗುತ್ತಾರೆ. ಒಂದು ವೇಳೆ, ಯಾರಾದರೂ ಆ ಪರಿಧಿಯಾಚೆಗೆ ಯಾವುದೋ ಸ್ಥಾನದಿಂದ ನೋಡಿದರೆ, ಈ ಘಟನೆಯ ಯಾವುದೇ ದೃಶ್ಯವನ್ನು ಕಾಣಲಾರರು. ಅವರು ಕೇವಲ ಜಾದೂಗಾರನು ಕಣ್ಣು ಮುಚ್ಚಿಕೊಂಡು ಕೈಮೇಲೆ ಕೈ ಇಟ್ಟುಕೊಂಡು ಸುಮ್ಮನೆ ನಿಂತಿರುತ್ತಾನೆ ಮತ್ತು ಏನೋ ಕಲ್ಪಿಸುತ್ತಾನೆ; ಎಂಬುದನ್ನು ನೋಡುವರು. ಜಾದೂಗಾರನ ಈ ಕಲ್ಪನೆಯೇ ಅವನ ಪ್ರಸಾರಿತ ಮಾನಸ ಭೂಮಿಯೊಳಗಿನ ಎಲ್ಲ ಪ್ರೇಕ್ಷಕರಿಗೂ ಸತ್ಯವೆಂದು ಕಂಡು ಬರುತ್ತದೆ. ಇದೇ ಯಥಾರ್ಥವಾಗಿದೆ. ಈ ಪ್ರಕಾರ, ಯೋಗ ಭ್ರಷ್ಟ ವ್ಯಕ್ತಿಯೂ ಸಹ, ತನ್ನ ಅಲೌಕಿಕ ಮಾನಸಿಕ ಶಕ್ತಿಯ ಮೂಲಕ ಧೂಳಿಯಿಂದ ಅನೇಕ ಪ್ರಕಾರದ ಮುದ್ರೆಗಳನ್ನೂ, ಸಿಹಿ ತಿಂಡಿಗಳನ್ನೂ, ಇನ್ನಿತರ ವಸ್ತುಗಳನ್ನೂ ತೈಯಾರಿಸಿ ಮೋಜು ತೋರಿಸುತ್ತ ತಿರುಗುತ್ತಾನೆ. ವಾಸ್ತವದಲ್ಲಿ ಅಲ್ಲಿ ಮುದ್ರೆಯೂ ಇರದು; ಮೃಷ್ಟಾನ್ನವೂ ಇರದು.

ತೋರು ಜಗತ್ತು ಸಗುಣ ಬ್ರಹ್ಮನ ಕಲ್ಪನೆಯಾಗಿದ್ದರೂ ಸಹ, ನಮಗಾಗಿ ಅದೊಂದು ವಿರಾಟ ಸತ್ಯವಾಗಿದೆ. ಜಾದೂಗಾರನ ತಮಾಶೆಯಿಂದ ಈ ತಥ್ಯದ ಸಮರ್ಥನೆಯಾಗುತ್ತದೆ. ಜಾದೂಗಾರನ ಕಾಲ್ಪನಿಕ ದೃಶ್ಯವನ್ನು ನಾವು ಹೇಗೆ ಯಥಾರ್ಥವೆಂದು ತಿಳಿಯುತ್ತೇವೆಯೋ, ಅದೇ ಪ್ರಕಾರ, ಸಗುಣ ಬ್ರಹ್ಮನ ಕಲ್ಪನೆಯನ್ನೂ ಸಹ ನಾವು ಸತ್ಯವೆಂದು ಒಪ್ಪುತ್ತೇವೆ. ಜಾದೂಗಾರನ ವಿಸ್ತಾರಿತ ಮನದ ಸೀಮೆಯ ಹೊರಗಿನ ಯಾವುದೇ ಸ್ಥಾನದಿಂದ ನೋಡುವವರಾರೂ ಅವನಿಂದ ಪ್ರದರ್ಶಿತ ಆಟವನ್ನು ನೋಡರು. ಆದೇ ಪ್ರಕಾರ, ಸಾಧನೆ ಇಲ್ಲವೆ ಆಧ್ಯಾತ್ಮಿಕ ಅನುಶೀಲನೆಯ ಮೂಲಕ, ಯಾರು ಭೂಮಾ ಮಾನಸದ ಪ್ರಭಾವದಿಂದ ಹೊರನಡೆದಿರುವರೋ, ಅವರು ಸಹ, ತೋರು ಜಗತ್ತಿನ ಹಿಂದೆ, ಸತ್ಯ ಸ್ವರೂಪನಾದ ಬ್ರಹ್ಮನನ್ನೇ ನೋಡುತ್ತಾರೆ. ಭೂಮಾ ಮನದ, ಕಾಲ್ಪನಿಕ ಜಡ ಜಗತ್ತು, ಪರಮ ಸತ್ಯವಲ್ಲದಿದ್ದರೂ ಸಹ, ಭೂಮಾ ಮನದ ಅಧೀನನಾದ ಮಾನವನು ಇದನ್ನು ಅರಿಯುವುದಿಲ್ಲ. ಇದರ ಉಪಲಬ್ಧಿಯು ಭೂಮಾ ಮನದಿಂದ ಮೇಲೇರಿದ ಮೇಲೆಯೇ ಆಗಬಲ್ಲದು. ಆಧ್ಯಾತ್ಮದ ಅನುಶೀಲನೆಯ ಮೂಲಕ, ಇದರ ಉಪಲಬ್ಧಿಯೇ ಪರಮ ಸತ್ಯದ ಉಪಲಬ್ಧಿಯಾಗಿದೆ. ಮತ್ತು ಯಾರು ಈ ಪರಮ ಶಾಶ್ವತ ಸತ್ಯವನ್ನು ತಿಳಿದಿರುವರೋ, ಅವರನ್ನೇ ಸತ್ಯ ದ್ರಷ್ಟಾ ಋಷಿ ಎನ್ನುತ್ತಾರೆ.



ಬ್ರಹ್ಮನಷ್ಟೇ ಸತ್ಯ; ಜಗತ್ತು ಮಿಥ್ಯೆ; ಎಂದು ಕೆಲವು ಜನರು ಹೇಳುತ್ತಾರೆ. ಆ ಜನರ ಈ ಮಾತು ಎಲ್ಲಿಯವರೆಗೆ ಸರಿಯಿದೆಯೆಂಬುದನ್ನು ನೋಡುವಾ: ಜಗತ್ತು ಸಗುಣ ಬ್ರಹ್ಮನ ಒಂದು ಕಾಲ್ಪನಿಕ ರೂಪವಾಗಿದೆ. ಕಾಲ್ಪನಿಕ ರೂಪವು ಸತ್ಯವಾಗಿರದಿದ್ದರೂ, ಒಂದು ರೂಪವಂತೂ ಆಗಿದೆ. ಮತ್ತು ಬ್ರಾಹ್ಮೀ ಚಿತ್ತದಲ್ಲಿ ಜಗತ್ತಿನ ರೂಪವನ್ನು ಗ್ರಹಿಸುವ ಕ್ರಿಯೆಯೂ ಸಹ, ಮಿಥ್ಯೆಯಾಗಿಲ್ಲ. ಜಗತ್ತಿನ ಒಂದು ರೂಪವಿದೆಯೆಂದ ಬಳಿಕ ಅದನ್ನು ಮಿಥ್ಯೆಯೆಂದು ಕರೆದು. ಸರಿಸಿ ಬಿಡಲಾರೆವು. ಆದರೆ ಈ ರೂಪವನ್ನು, ಬ್ರಹ್ಮನ ಕಲ್ಪನಯಾದ ಕಾರಣ, ಸತ್ಯವೆಂದೂ ಹೇಳಲಾರೆವು. ಅಂದಮೇಲೆ, ಜಗತ್ತು ಸತ್ಯವೂ ಅಲ್ಲ; ಮಿಥ್ಯೆಯೂ ಅಲ್ಲ. ಇದು ಆಪೇಕ್ಷಿಕ ಸತ್ಯವಷ್ಟೇ ಆಗಿದೆ.

ಜಗತ್ತು ಬ್ರಹ್ಮನ ಒಂದು ಕಲ್ಪನೆಯಾಗಿದೆ. ಇದರಿಂದ ಕಲ್ಪನೆಯ ಪರಿಸಮಾಪ್ತಿಯೊಂದಿಗೇನೇ ಜಗತ್ತಿನ ಪರಿಸಮಾಪ್ತಿಯೂ ಆಗುತ್ತದೆ. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ಒಂದು ವೇಳೆ, ಜಗತ್ತು ನಾಶಹೊಂದುವಂಥಹದಿದ್ದರೆ, ಅದು ಯಾವಾಗ ನಾಶವಾಗುತ್ತದೆ? ಮತ್ತು ಇಂದಿನ ವರೆಗೆ ಅದೇಕೆ ನಷ್ಟವಾಗಿಲ್ಲ? ಅಘನ ಪುರುಷ ಸತ್ತೆಯ ಮೇಲೆ ಪ್ರಕೃತಿಯ ಗುಣ ವಿಸ್ತಾರದ ಫಲವಾಗಿ ಕಲ್ಪನಾ ತರಂಗ ಹಾಗೂ ಜಗತ್ತಿನ ಸೃಷ್ಟಿಯಾಯಿತು. ಅರ್ಥಾತ್ ಪ್ರಕೃತಿಯೇ ಜಗತ್ತನ್ನು ಸೃಷ್ಟಿಸಿದೆ. ಯಾವ ಕ್ಷಣದಲ್ಲಿ ಪುರುಷನು ಪ್ರಕೃತಿಯ ಪ್ರಭಾವವನ್ನು ಕಡಿದೊಗೆದು, ಹೊರಬೀಳಬಲ್ಲನೋ, ಅದೇ ಕ್ಷಣದಲ್ಲಿ, ಕಲ್ಪನಾ ಚಕ್ರದ ಕೊನೆಯೂ ಆಗುತ್ತದೆ. ಮತ್ತು ಜೊತೆ ಜೊತೆಗೇ, ಜಗತ್ತಿನ ಅಸ್ತಿತ್ವವೂ ನಷ್ಟವಾಗುತ್ತದೆ. ಗುಣಾನ್ವಿತನಾದ ಸಗುಣ ಪುರುಷನು ತನ್ನನ್ನು ಅನಂತ ಸಂಖ್ಯೆಯ ಅಣು ಚೈತನ್ಯಗಳಲ್ಲಿ ವಿಭಜಿಸುತ್ತಾನೆ. ಇದರಿಂದ, ಬ್ರಹ್ಮನು ಇವರೆಲ್ಲರ (ಅಣು ಚೈತನ್ಯ ಸಮೂಹ) ಸಮಷ್ಟಿಯಾಗಿದ್ದಾನೆ. ಪ್ರಕೃತಿಯ ಪ್ರಭಾವದಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳಲಿಕ್ಕಾಗಿ, ಸಗುಣ ಬ್ರಹ್ಮನಿಗೆ ಮೊತ್ತಮೊದಲು ತನ್ನ ಅಣು ಚೈತನ್ಯ ಸಮೂಹವನ್ನು ಪ್ರಕೃತಿಯ ಬಂಧನದಿಂದ ಮುಕ್ತಗೊಳಿಸಬೇಕಾಗುತ್ತದೆ. ಮತ್ತು ಕೇವಲ ಆಗ ಮಾತ್ರ, ಸೃಷ್ಟಿಯ ಲಯವಾಗುವ ಸಂಭವವಿದೆ. ಅನಂತ ಸಂಖ್ಯೆಯ ಅಣು ಚೈತನ್ಯ ಸಮೂಹಗಳ ಸಾಮೂಹಿಕ ರೂಪವಾದ ಕಾರಣ, ಕೋಟಿ ಕೋಟಿ ಅಣು ಚೈತನ್ಯಗಳು ಮುಕ್ತವಾಗುವುದರಿಂದ ಸಹ, ಸಗುಣ ಬ್ರಹ್ಮನ ಮುಕ್ತಿಯಾಗದು. ಏಕೆಂದರೆ, ಆ ಕಾಲದಲ್ಲಿಯೂ ಸಹ, ಅನಂತ ಸಂಖ್ಯೆಯ ಮುಮುಕ್ಷು ಅಣು ಚೈತನ್ಯರು ಉಳಿದೇ ಉಳಿಯುತ್ತಾರೆ. ಅನಂತದಿಂದ ಯಾವುದೇ ಸಂಖ್ಯೆಯನ್ನು

ಯನ್ನು ಕಳೆದರೂ ಸಹ, ಶೇಷಫಲವು ಅನಂತವಾಗಿಯೇ ಇರುತ್ತದೆ. ಆದ್ದರಿಂದ, ಲಕ್ಷ-ಲಕ್ಷ ಕೋಟಿ ಅಣು ಚೈತನ್ಯರ ಮುಕ್ತಿಯಾದ ಮೇಲೂ ಸಹ, ಇನ್ನುಳಿದ ಅನಂತ ಸಂಖ್ಯೆಯ ಗುಣಾಧೀನ ಅಣುಚೈತನ್ಯರನ್ನು ತೆಗೆದುಕೊಂಡು, ಸಗುಣ ಬ್ರಹ್ಮನ ಕಲ್ಪನಾ ತರಂಗವು ಅದೇ ರೀತಿ, ನಡೆದಿರುತ್ತದೆ. ಅರ್ಥಾತ್, ಎಲ್ಲಿಯ ತನಕ ಪ್ರತಿಯೊಂದು ಅಣುವು ಮುಕ್ತವಾಗುವುದಿಲ್ಲವೋ, ಅಲ್ಲಿಯ ತನಕ ಪುರುಷನ ಕಲ್ಪನಾ ತರಂಗವು ನಡೆದೇ ಇರುತ್ತದೆ. ಮತ್ತು ಸೃಷ್ಟಿಯ ಲಯವು ಸಹ ಆಗದು.

ಜಗತ್ತು ಸಗುಣ ಬ್ರಹ್ಮನ ಒಂದು ಕಾಲ್ಪನಿಕ ಸೃಷ್ಟಿಯಾಗಿದೆ. ಸಗುಣ ಬ್ರಹ್ಮನ ಕಲ್ಪನೆಯಲ್ಲಿ ಇದರ ಸೃಷ್ಟಿಯು ಹೇಗೆ ಆಯಿತು? ಎಂಬುದನ್ನು ಹೇಳ ಬೇಕಾದ ಆವಶ್ಯಕತೆ ಇದೆ. ಅಹಂ ತತ್ತ್ವದ ಇಚ್ಛಾನುಸಾರ, ಚಿತ್ತವು ರೂಪ ತಾಳಿದ ಮೇಲೆ, ಯಾವನೊಬ್ಬ ವ್ಯಕ್ತಿಯು ಭಾಗಲಪುರದಲ್ಲಿಯೇ ಕುಳಿತು, ಯಾವ ಪ್ರಕಾರ ಕಲಕತ್ತೆಯ ಚೌರಂಗಿಯ ಅನುಭೂತಿಯನ್ನು ಮನದಲ್ಲಿಯೇ ಪಡೆಯಬಲ್ಲನೋ, ಅದೇ ಪ್ರಕಾರ, ಸಗುಣ ಬ್ರಹ್ಮನ ಅಹಂ ತತ್ತ್ವದ ನಿರ್ದೇಶನಾನುಸಾರ, ಅವನ ಚಿತ್ತವು ತೋರು ಜಗತ್ತಿನ ರೂಪವನ್ನು ಗ್ರಹಿಸುತ್ತದೆ. ಚಿತ್ತವು ಮನದ ಒಂದಂಶವೇ ಆಗಿದೆ. ಆದ್ದರಿಂದ ಜಗತ್ತು ಸಗುಣನ ಒಂದು ಮಾನಸಿಕ ಅಭಿವ್ಯಕ್ತಿಯಾಗಿದೆ. ಚೌರಂಗಿಯ ರೂಪವನ್ನು ತಾಳುವ ಕಾಲಕ್ಕೆ ಸೂಕ್ಷ್ಮ ಸತ್ತೆಯಾದ ಚಿತ್ತವು ಯಾವ ಪ್ರಕಾರ, ಸ್ಥೂಲ ಚೌರಂಗಿಯಲ್ಲಿ ರೂಪಾಂತರಿತವಾಗುವುದೋ, ಅದೇ ಪ್ರಕಾರ, ಯಾವುದೇ ಸ್ಥೂಲ ಸತ್ತೆಯ ರೂಪವನ್ನು ಗ್ರಹಿಸುವುದಕ್ಕಾಗಿ,ಚಿತ್ತವು ಸೂಕ್ಷ್ಮತೆಯಿಂದ ಸ್ಥೂಲದಲ್ಲಿ ಪರಿವರ್ತಿತ ವಾಗಬೇಕಾಗುತ್ತದೆ. ಈ ಪರಿವರ್ತನೆಯ ಕ್ರಿಯೆಯು ಒಮ್ಮಿಂದೊಮ್ಮೆ ಆಗುವುದಿಲ್ಲ. ಚಿತ್ತವು ಕ್ರಮೇಣ ಸ್ಥೂಲತ್ವವನ್ನು ಹೊಂದುತ್ತದೆ. ಆದ್ದರಿಂದ, ಅದು ಸ್ಥೂಲದ ರೂಪವನ್ನು ಯಥಾರ್ಥ ಭಾವದಿಂದ ಗ್ರಹಿಸುತ್ತದೆ. ಹಾಲಿನಿಂದ ಖೀರು ತೈಯಾರಿಸುವ ಕಾಲಕ್ಕೆ ಯಾವ ಪ್ರಕಾರ ಹಾಲು ಕ್ರಮೇಣ ಗಟ್ಟಿಗೊಳ್ಳುತ್ತ ಖೀರಿನಲ್ಲಿ ಪರಿಣಮಿಸುವುದೋ, ಅದೇ ಪ್ರಕಾರ, ಸಗುಣ ಬ್ರಹ್ಮನ ಸೂಕ್ಷ್ಮ ಚೈತನ್ಯ ಸತ್ತೆಯೂ ಸಹ, ಪ್ರಕೃತಿಯ ಬಂಧನದ ದೃಢತೆಯ ಕಾರಣ, ಸಾವಕಾಶವಾಗಿ ಜಡತ್ವವನ್ನು ಹೊಂದಿ, ಕ್ಷಿತಿ ತತ್ತ್ವದಲ್ಲಿ ರೂಪಾಂತರಗೊಳ್ಳುತ್ತದೆ. ಅಂದ ಮೇಲೆ, ಸೃಷ್ಟಿಯು ಯಾವ ಚಿತ್ತದ ಕೇವಲ ರೂಪಾಂತರವಷ್ಟೇ ಆಗಿದೆಯೋ, ಅದು ಬರುಬರುತ್ತ ಸೂಕ್ಷ್ಮದಿಂದ ಸ್ಥೂಲದಲ್ಲಿ ಬಂದಿದೆ.

ಆದರೆ ಸೃಷ್ಟಿಯು ಹೇಗೆ ಸೂಕ್ಷ್ಮದಿಂದ ಸ್ಥೂಲವಾಯಿತು? ಸಗುಣ



ಬ್ರಹ್ಮನಲ್ಲಿ ಪ್ರಕೃತಿಯು ಪುರುಷನನ್ನು ಗುಣಾನ್ವಿತಗೊಳಿಸುತ್ತದೆ. ಅದರ ಫಲವಾಗಿ, ಜಗತ್ತಿನ ಸೃಷ್ಟಿಯಾಗುತ್ತದೆ. ಅಣು ಚೈತನ್ಯದಲ್ಲಿ ಪ್ರಕೃತಿಯ ಸತ್ತ್ವ ಗುಣದ ಬಂಧನದಿಂದ ಹಾಗೂ ಬುದ್ಧಿ ತತ್ತ್ವದ ಸ್ಫುರಣದಿಂದ ಪುರುಷನಲ್ಲಿ 'ನಾನು ಇದ್ದೇನೆ'ಯ ಬೋಧೆಯು ಜಾಗ್ರತವಾಗುತ್ತದೆ. ಪುನಃ ಬುದ್ಧಿ ತತ್ತ್ವದ ಮೇಲೆ ಪ್ರಕೃತಿಯ ರಜೋಗುಣದ ಬಂಧನದ ಕಾರಣ, ಅಹಂ ತತ್ತ್ವವೂ, ಮತ್ತು ಅಹಂ ತತ್ತ್ವದ ಮೇಲೆ ಪ್ರಕೃತಿಯ ತಮೋಗುಣದ ಬಂಧನದಿಂದ ಚಿತ್ತದ ಸೃಷ್ಟಿಯೂ ಆಗುತ್ತದೆ. ಬುದ್ಧಿ ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತ ಈ ಮೂರು ಸೂಕ್ಷ್ಮ ಸತ್ತೆಗಳಿಂದ ಮನವು ನಿರ್ಮಾಣವಾಗಿದೆ. ಸೂಕ್ಷ್ಮ ಭಾವಮಯ ಜಗತ್ತು ಇಲ್ಲವೆ ಸಗುಣ ಬ್ರಹ್ಮನ ಮನವು ಇದೇ ಪ್ರಕಾರ, ಪ್ರಕೃತಿಯ ಗುಣ ಬಂಧನದ ಮೂಲಕ ಸೃಷ್ಟವಾಗಿದೆ. ಬುದ್ಧಿ ತತ್ತ್ವ, ಅಹಂ ತತ್ತ್ವ ಹಾಗೂ ಚಿತ್ತಗಳು ಪುರುಷ ಇಲ್ಲವೆ ಚೈತನ್ಯದ ಕ್ರಮೇಣ ರೂಪಾಂತರ ಗಳೇ ಆಗಿವೆ. ಇವುಗಳಲ್ಲಿ ಎಲ್ಲಕ್ಕಿಂತ ಸೂಕ್ಷ್ಮವಾದುದೆಂದರೆ, ಬುದ್ಧಿ ತತ್ತ್ವ. ಅಹಂ ತತ್ತ್ವವು ಅದಕ್ಕಿಂತ ಕಡಿಮೆ ಸೂಕ್ಷ್ಮವಾಗಿದೆ. ಮತ್ತು ಅಹಂ ತತ್ತ್ವದ ವಿಷಯ ಭಾವವಾದ ಚಿತ್ತವು ಅದಕ್ಕಿಂತಲೂ ಕಡಿಮೆ ಸೂಕ್ಷ್ಮವಿದೆ. ಬುದ್ಧಿ ತತ್ತ್ವದಲ್ಲಿ ಕೇವಲ ಅಸ್ತಿತ್ವ ಬೋಧೆಯಿರುತ್ತದೆ. ಮತ್ತು ಅಹಂ ತತ್ತ್ವದಲ್ಲಿ ಇದಲ್ಲದೆ ಕರ್ತೃತ್ವಾಭಿಮಾನವೂ ಇರುತ್ತದೆ. ಒಂದಕ್ಕಿಂತ ಹೆಚ್ಚು ಗುಣಗಳ ಉಪಸ್ಥಿತಿಯ ಕಾರಣ, ಅಹಂ ತತ್ತ್ವವು ಬುದ್ಧಿ ತತ್ತ್ವಕ್ಕಿಂತ ಸ್ಥೂಲವಾಗಿದೆ. ಚಿತ್ತವು ಅಹಂ ತತ್ತ್ವದ ಕಾರ್ಯದ ಫಲದ ರೂಪವನ್ನು ಗ್ರಹಿಸುತ್ತದೆ. ಇದರಿಂದ, ಅಹಂ ತತ್ತ್ವಕ್ಕಿಂತ ಚಿತ್ತವು ಅವಶ್ಯವಾಗಿಯೇ, ಸ್ಥೂಲವಾಗಿದೆ. ಅಂದ ಮೇಲೆ, ಸೃಷ್ಟಿಯ ವಿಕಾಸ ಕ್ರಮವು ಸೂಕ್ಷ್ಮದಿಂದ ಸ್ಥೂಲದತ್ತ ಇರುವುದನ್ನು ನಾವು ನೋಡುತ್ತೇವೆ.

ಜಗತ್ತು ಭೂಮಾ ಮಾನಸದ ಕಲ್ಪನೆಯಾಗಿದೆ; ಎಂದು ಹೇಳಿಬಿಟ್ಟಿದ್ದೇವೆ. ಸಗುಣ ಬ್ರಹ್ಮನ ಅಹಂ ತತ್ತ್ವದ ಕಲ್ಪನೆಯ ಮೇಲೆ, ರಜೋಗುಣದ ಬಂಧನದ ಫಲವಾಗಿ, ಅದರ ವಿಷಯ ಭಾವವಾದ ಚಿತ್ತವು ಸ್ಥೂಲ ಜಗತ್ತಿನ ರೂಪವನ್ನು ಧರಿಸುತ್ತದೆ. ಅರ್ಥಾತ್ ಸ್ವರೂಪತಃ ಸೂಕ್ಷ್ಮವಾದ ಚಿತ್ತವು ಸ್ಥೂಲದಲ್ಲಿ ಪರಿಣಮಿಸುತ್ತದೆ. ಸ್ಥೂಲದತ್ತ ವಿಕಾಸದ ಹಾದಿಯಲ್ಲಿ ಚಿತ್ತವು ಬರು ಬರುತ್ತ, ವ್ಯೋಮ, ಮರುತ್, ತೇಜ, ಜಲ ಮತ್ತು ಕ್ಷಿತಿ-ಈ ಐದು ಮೂಲ ತತ್ತ್ವಗಳ ರೂಪವನ್ನು ಗ್ರಹಿಸುತ್ತದೆ. ಈ ಐದು ಮೂಲ ತತ್ತ್ವ ಸಮೂಹವು ಸ್ಥೂಲ ವಾಗಿದೆ. ಜಗತ್ತು ಇವೇ ಮೂಲ ತತ್ತ್ವಗಳ ಸಮೂಹದಿಂದ ಸ್ಪಷ್ಟವಾಗಿದೆ.

ಇವುಗಳ ನೆರವಿನಿಂದ, ಇಂದ್ರಿಯಗಳ ಸೂಕ್ಷ್ಮ ಭಾವದಿಂದ ವಸ್ತುವನ್ನು ಗ್ರಹಿಸುತ್ತವೆ. ಅದನ್ನೇ ನಾವು ತನ್ಮಾತ್ರೆ ಎಂದು ಕರೆಯುತ್ತೇವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮುಂತಾದ ಭೇದಗಳಿಂದ ತನ್ಮಾತ್ರೆಗಳೂ ಐದು ಬಗೆಯಾಗಿವೆ. ಸೂಕ್ಷ್ಮದ ಸ್ತರದಲ್ಲಿ ಒಂದಕ್ಕಿಂತ ಹೆಚ್ಚು ತತ್ತ್ವಗಳಿರುವ ಕಾರಣ, ಯಾವ ಪ್ರಕಾರ ಅಹಂ ತತ್ತ್ವವು ಬುದ್ಧಿ ತತ್ತ್ವಕ್ಕಿಂತ ಸ್ಥೂಲವಾಗಿರುವುದೋ, ಅದೇ ಪ್ರಕಾರ, ಸ್ಥೂಲ ಸ್ತರದಲ್ಲಿ ಯಾವ ವಸ್ತುವಿನಲ್ಲಿ ಎಷ್ಟು ಹೆಚ್ಚು ತನ್ಮಾತ್ರೆಗಳಿವೆಯೋ, ಅದು ಅಷ್ಟು ಹೆಚ್ಚು ಸ್ಥೂಲವೆಂದು ಹೇಳುತ್ತಾರೆ. ತನ್ಮಾತ್ರೆಯ ಅನುಪಸ್ಥಿಯೆಂದರೆ,ಚರಮ ಸೂಕ್ಷ್ಮತ್ವವೆಂದು ಅರ್ಥ. ಅರ್ಥಾತ್, ಸೂಕ್ಷ್ಮದ ಉಪಲಬ್ಧಿಯಲ್ಲಿ, ತನ್ಮಾತ್ರೆಗಳು ನಮಗೆ ಯಾವುದೇ ಸಹಾಯ ಸಲ್ಲಿಸಲಾರವು. ಏಕೆಂದರೆ, ಅಲ್ಲಿ ತನ್ಮಾತ್ರೆಗಳಿಗೆ ಯಾವ ಸ್ಥಾನವೂ ಇಲ್ಲ. ಕೇವಲ ಭಾವನಾಧಾರೆಯೊಂದೇ. ಅಂದರೆ ವಿಷಯದಲ್ಲಿ ಲೀನವಾದ ಮನವನ್ನು ಸ್ವರೂಪದಲ್ಲಿ ಕರೆದೊಯ್ಯುವ ಕ್ರಿಯೆಯ ಮೂಲಕವೇ ಅದರ ಉಪಲಬ್ಧಿಯಾಗಬಲ್ಲದು. ಚಿತ್ತವು ಜಡ ಜಗತ್ತಿನ ರೂಪವನ್ನು ಗ್ರಹಿಸುತ್ತದೆ. ಆದ್ದರಿಂದ ಚಿತ್ತದಲ್ಲಿ ಅವಶ್ಯವಾಗಿ ತನ್ಮಾತ್ರೆಗಳಿವೆ ಮತ್ತು ಇದು ತನ್ಮಾತ್ರೆಗಳಲ್ಲಿ ರೂಪಾಂತರಗೊಳ್ಳುತ್ತಲೂ ಇದೆ. ಏಕೆಂದರೆ, ಬೇರಾವ ಮಾಧ್ಯಮದಿಂದಲೂ ಸಹ, ಇದಕ್ಕೆ ತನ್ಮಾತ್ರೆಗಳನ್ನು ಗ್ರಹಿಸುವ ಉಪಾಯವಿಲ್ಲ. ಅಂದಮೇಲೆ, ಚಿತ್ತದಿಂದಲೇ ಕ್ರಮೇಣವಾಗಿ ಪಾಂಚತನ್ಮಾತ್ರಿಕ ಮತ್ತು ಪಾಂಚಭೌತಿಕ ಜಗತ್ತಿನ ವಿಕಾಸವಾಗಿದೆ. ಗ್ರಹ, ನಕ್ಷತ್ರ ಮುಂತಾದವುಗಳಿಂದ ತುಂಬಿರುವ, ಸೀಮೆಯಿಲ್ಲದ ಶೂನ್ಯವೇ ವ್ಯೋಮತತ್ತ್ವ ಇಲ್ಲವೆ ಆಕಾಶ ತತ್ತ್ವವೆನಿಸಿದೆ. ಈ ಶೂನ್ಯವನ್ನು 'ಏನೂ ಅಲ್ಲ'ದ ಒಂದೆಂದು ಹೇಳಿದ ಮೇಲೆ ಸಹ, ಕೇವಲ ಒಂದೇ ಸಬ್ದ ತನ್ಮಾತ್ರೆಯನ್ನುಳ್ಳ ಕಾರಣದಿಂದ ಆಕಾಶವನ್ನು ಸ್ಥೂಲವೆನ್ನುತ್ತೇವೆ. ವಿಜ್ಞಾನಿಗಳು ಇದನ್ನು ಈಥರ (Ether) ಎಂದು ಕರೆಯುತ್ತಾರೆ. ಶೂನ್ಯ ಇಲ್ಲವೆ ಈಥರದ ಯಾವುದೇ ಆಕೃತಿಯು ಇಲ್ಲ. ಇದಕ್ಕಾವ ತೂಕವೂ ಇಲ್ಲ. ಆದರೆ ಇದರಲ್ಲಿ ಶಬ್ದ ತನ್ಮಾತ್ರೆಯು ಬರಬಲ್ಲದು. ಆದ್ದರಿಂದ, ಅವಶ್ಯವಾಗಿ ಇದರೊಳಗೆ, ಯಾವುದರ ಸಹಾಯ ಪಡೆದು ಶಬ್ದ ತನ್ಮಾತ್ರೆಯ ಬರು-ಹೋಗುಗಳು ಸಾಧ್ಯವೋ, ಅಂಥ ಏನೋ ಸ್ವಲ್ಪ ಇದೆ. ಇದರಿಂದ, ನಾವು ಈಥರನ್ನೂ ಸಹ ಸ್ಥೂಲವೆಂದು ಕರೆಯುತ್ತೇವೆ. ಆದರೆ, ಸ್ಥೂಲಗಳಲ್ಲಿ ಇದು ಎಲ್ಲಕ್ಕಿಂತ ಸೂಕ್ಷ್ಮವಾಗಿದೆ. ಏಕೆಂದರೆ, ಇದರಲ್ಲಿ ಕೇವಲ ಒಂದೇ ತನ್ಮಾತ್ರೆ ಇದೆ. ಅಂದಮೇಲೆ, ಜಗತ್ತಿನ ವಿಕಾಸದ ಮೊದಲನೆಯ ಸ್ತರದಲ್ಲಿ ಶಬ್ದ ತನ್ಮಾತ್ರೆ ಹಾಗೂ ಆಕಾಶ ತತ್ತ್ವಗಳ ರಚನೆಯಾಗಿತ್ತು.



ಚಿತ್ತವು ಆಕಾಶ ತತ್ತ್ವದಲ್ಲಿ ರೂಪಾಂತರಗೊಂಡ ಬಳಿಕ, ತನ್ನನ್ನು ವಾಯು ತತ್ತ್ವದಲ್ಲಿ ರೂಪಾಂತರಿಸಿಕೊಂಡಿತು. ಈ ವಾಯು ತತ್ತ್ವ ಶಬ್ದ ಮತ್ತು ಸ್ಪರ್ಶ ತನ್ಮಾತ್ರೆಗಳಿಂದ ಯುಕ್ತವಾಗಿ ಇನ್ನೂ ಹೆಚ್ಚು ಸ್ಥೂಲವಾಯಿತು. ಶಬ್ದ ತನ್ಮಾತ್ರೆಯನ್ನು ವಾಯುವು ಒಂದು ಸ್ಥಾನದ ತನಕ ಹೊತ್ತೊಯ್ಯುತ್ತದೆ. ಮತ್ತು ವಾಯುವಿನ ಉಪಸ್ಥಿತಿಯನ್ನು ನಾವು ಸ್ಪರ್ಶದ ಮೂಲಕವೇ ತಿಳಿಯುತ್ತೇವೆ. ಅಂದ ಮೇಲೆ, ವಾಯು ತತ್ತ್ವದಿಂದ ನಾವು ಶಬ್ದ ಮತ್ತು ಸ್ಪರ್ಶ ಈ ಎರಡೂ ತನ್ಮಾತ್ರೆಗಳನ್ನೂ ಪಡೆಯುತ್ತೇವೆ. ಆದ್ದರಿಂದ ವಾಯು ತತ್ತ್ವವು ಆಕಾಶ ತತ್ತ್ವ (ಯಾವುದರಲ್ಲಿ ಕೇವಲ ಶಬ್ದ ತನ್ಮಾತ್ರೆ ಇದೆಯೋ) ಕ್ಕಿಂತ ಅವಶ್ಯವಾಗಿ ಸ್ಥೂಲವಾಗಿದೆ.

ಸ್ಥೂಲದತ್ತಣ ವಿಕಾಸ ಧಾರೆಯಲ್ಲಿ ಕ್ರಮೇಣ ವಾಯುತತ್ತ್ವದ ನಂತರ ಚಿತ್ತವು ತೇಜಸ್ ತತ್ತ್ವದಲ್ಲ ರೂಪಾಂತರಗೊಂಡಿತು. ಅಗ್ನಿಯಲ್ಲಿ ಶಬ್ದ ಮತ್ತು ಸ್ಪರ್ಶಗಳಲ್ಲದೆ ರೂಪ ತನ್ಮಾತ್ರೆಯೂ ಸಹ ಇದೆ. ಏಕೆಂದರೆ ನಾವು ಅಗ್ನಿಯನ್ನು ನೋಡಲಬಲ್ಲೆವು. ಇದರಿಂದ ತನ್ಮಾತ್ರೆಯ ವಿಚಾರದಿಂದ ತೇಜಸ್ಸತ್ತ್ವವು ವಾಯು ತತ್ತ್ವಕ್ಕಿಂತಲೂ ಸ್ಥೂಲವಾಗಿದೆ.

ತೇಜಸ್ತತ್ವದ ನಂತರ, ಚಿತ್ತವು ಇನ್ನೂ ಹೆಚ್ಚು ಸ್ಥೂಲವಾಗಿ ಜಲ ತತ್ತ್ವದಲ್ಲಿ ರೂಪಾಂತರಗೊಂಡಿತು. ಜಲವು ದ್ರವ ಪದಾರ್ಥವಿದೆ. ಇದರಲ್ಲಿ ಒಂದು ಸ್ವಾದವಿದೆ. ಜಲದಲ್ಲಿ ನಾವು ಶಬ್ದವನ್ನು ಕೇಳುತ್ತೇವೆ, ಜಲವನ್ನು ಸ್ಪರ್ಶಿಸಬಲ್ಲೆವು. ಜಲವನ್ನು ನೋಡಬಲ್ಲೆವು. ಮತ್ತು ಅದರಲ್ಲಿ ರಸ ತನ್ಮಾತ್ರೆಯನ್ನು ಪಡೆಯುತ್ತೇವೆ. ಆದ್ದರಿಂದ, ಈ ನಾಲ್ಕು ತನ್ಮಾತ್ರೆಗಳ ಉಪಸ್ಥಿತಿಯ ಕಾರಣ, ಜಲ ತತ್ತ್ವವು ತೇಜಸ್ತತ್ತ್ವಕ್ಕಿಂತ ಹೆಚ್ಚು ಸ್ಥೂಲವಿದೆ.

ಇನ್ನೂ ಹೆಚ್ಚು ಸ್ಥೂಲತ್ವವನ್ನು ಹೊಂದಿ ಚಿತ್ತವು ಕ್ಷಿತಿ ತತ್ತ್ವದಲ್ಲಿ ರೂಪಾಂತರಗೊಂಡಿತು. ಕ್ಷಿತಿ ತತ್ತ್ವ ಇಲ್ಲವೆ ಪೃಥ್ವೀ ತತ್ತ್ವದಲ್ಲಿ ಶಬ್ದ, ಸ್ಪರ್ಶ, ರೂಪ ಮತ್ತು ರಸಗಳನ್ನು ಹೊರತುಪಡಿಸಿ, ಗಂಧ ತನ್ಮಾತ್ರೆಯೂ ಇರುತ್ತದೆ. ಕ್ಷಿತಿ ತತ್ತ್ವದಲ್ಲಿ ಅಂತರ್ಗತವಾದ ದೂರವಾಣಿಯ ತಂತಿಯ ಮೂಲಕ, ಶಬ್ದ ತನ್ಮಾತ್ರೆಯು ಅತಿಕ್ರಮಿಸುತ್ತದೆ. ಕ್ಷಿತಿಯನ್ನು ಸ್ಪರ್ಶಿಸುತ್ತೇವೆ; ನೋಡುತ್ತೇವೆ. ಇದರಲ್ಲೊಂದು ಸ್ವಾದವನ್ನೂ ಪಡೆಯುತ್ತೇವೆ. ಇದರ ಹೊರತು, ಇದರಿಂದ ಒಂದು ಗಂಧವನ್ನೂ ಪಡೆಯುತ್ತೇವೆ. ಅಂದಮೇಲೆ, ಪಂಚ ತನ್ಮಾತ್ರೆಯುಕ್ತವಾದ ಈ ಕ್ಷಿತಿ ತತ್ತ್ವ ಇಲ್ಲವೆ ಕ್ಷಿತಿ

ಭೂತವೇ ಚಿತ್ತದ ಜಡತಮ ಅಭಿವ್ಯಕ್ತಿಯಾದಂತಾಯಿತು.

ಸಗುಣ–ಬ್ರಹ್ಮನ ಇಚ್ಛೆಯ ಕಾರಣದಿಂದ, ಅವನ ಅಹಂ ತತ್ತ್ವದ ಕಲ್ಪನಾ–ಧಾರೆಯಲ್ಲಿ ಚಿತ್ತವು ಕ್ರಮೇಣ ಸೂಕ್ಷ್ಮದಿಂದ ಜಡತಮ ವಿಕಾಸ ಅರ್ಥಾತ್ ಕ್ಷಿತಿ ತತ್ತ್ವದ ರೂಪವನ್ನು ಧಾರಣ ಮಾಡಿದೆ.

ಪ್ರಕೃತಿಯ ಚರಮ ಬಂಧನದ ಫಲವಾಗಿ, ಸೂಕ್ಷ್ಮ ಸತ್ತೆಯಾದ ಚೈತನ್ಯವು ಜಡ ಕ್ಷಿತಿ ತತ್ತ್ವದಲ್ಲಿ ರೂಪಾಂತರಿತವಾಗಿ, ಅವಶ್ಯವಾಗಿ ಸ್ಥೂಲತೆಯ ಚರಮ ಸೀಮೆಯನ್ನು ಹೊಂದಿದೆ. ಪುರುಷ ಇಲ್ಲವೆ ಭೂಮಾ ಚೈತನ್ಯದ ಮೇಲೆ, ಅಂತಿಮ ಗುಣಬಂಧನದ ವಿಸ್ತಾರ ಮಾಡಿದ ಬಳಿಕ, ಪ್ರಕೃತಿಯು ಬಂಧನದ ಶಕ್ತಿಯಿಂದ, ವರ್ಜಿತವಾಗುತ್ತದೆ. ಇದರಿಂದ, ಅದು ಪುರುಷನನ್ನು ಇನ್ನೂ ಹೆಚ್ಚು ಜಡತೆಯ ದಿಶೆಯಲ್ಲಿ ತರಲಾರದು. ಈ ಪ್ರಕಾರ, ಕ್ಷಿತಿ ತತ್ತ್ವದಲ್ಲಿ ಬಂದು, ಪ್ರಕೃತಿ ಮತ್ತು ಪುರುಷರೀರ್ವರೂ ಜಡವಾಗಿ ಬಿಡುತ್ತಾರೆ. ಪುರುಷನು ಇದಕ್ಕಿಂತ ಹೆಚ್ಚು ಸ್ಥೂಲವಾಗಲಾರನು. ಅದೇ ರೀತಿ, ಪ್ರಕೃತಿಯೂ ಸಹ, ಅವನನ್ನು ಇನ್ನೂ ಹೆಚ್ಚು ಸ್ಥೂಲ ದಿಶೆಯಲ್ಲಿ ತರುವಲ್ಲಿ ಸಾಮರ್ಥ್ಯಹೀನ ವಾಗುತ್ತದೆ. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಅದೆಂದರೆ, ಪುರುಷ ಮತ್ತು ಪ್ರಕೃತಿಯರು ಜಡತೆಯ ಚರಮ ಬಿಂದುವಿನಲ್ಲಿ ಪರಿಣಮಿಸುವುದೇ ಸೃಷ್ಟಿಯ ಕೊನೆಯೇನು? ಆದರೆ ಗಿಡ–ಗಂಟಿ, ಕೀಟ–ಪತಂಗ ಮತ್ತು ಪಶು–ಪಕ್ಷಿ ಮುಂತಾದ ಚೇತನ ಜೀವಿಗಳನ್ನು ಕಂಡು, ಜಾಗತಿಕ ವಿಕಾಸದ ಕ್ರಮದಲ್ಲಿ ಯಾದರೂ ಇವುಗಳ ಸ್ಥಾನವೆಲ್ಲಿಯೂ ಕಂಡು ಬರುವುದಿಲ್ಲವಲ್ಲ? ಎಂಬೀ ಪ್ರಶ್ನೆಯೂ ಏಳುತ್ತದೆ. ಆಗ ಇವೆಲ್ಲವುಗಳ ಉತ್ಪತ್ತಿಯು ಹೇಗೆ ಆಯಿತು?

ಗುಣ ಬಂಧನದ ದೃಢತೆ ಇಲ್ಲವೆ ಶಿಥಿಲತೆಯ ಮೂಲಕವೇ ಜಡತೆ ಇಲ್ಲವೆ ಸೂಕ್ಷ್ಮತ್ವಗಳು ನಿರ್ಧರಿಸಲ್ಪಡುತ್ತವೆ. ಇದು ಕಾರಣ, ಕ್ಷಿತಿ ತತ್ತ್ವ ದಲ್ಲಿ, ಗುಣಬಂಧನದ ಚರಮಾವಸ್ಥೆಯಲ್ಲಿ, ಸೂಕ್ಷ್ಮ ಪುರುಷನು ನಿಷ್ಪ್ರಾಣ, ಜಡ ರೂಪದಲ್ಲಿ ಪರಿಣಮಿಸುವುದನ್ನು ನಾವು ನೋಡುತ್ತೇವೆ. ಆದರೆ ಕ್ಷಿತಿ ತತ್ತ್ವದ ಅನಂತರದ ಸ್ತರದಲ್ಲಿ ಗಿಡಗಂಟಿ, ಜೀವ-ಜಂತು ಸಮೂಹವನ್ನು, ಪಾಂಚ ಭೌತಿಕ ವಿಕಾಸವೇ ಆಗಿದ್ದರೂ, ನಾವು ಅಚೇತನ ಇಲ್ಲವೆ ನಿಷ್ಪ್ರಾಣದ ಕೋಟಿಯಲ್ಲಿ ಇರಿಸಲಾರೆವು. ಏಕೆಂದರೆ, ಇವೆಲ್ಲವುಗಳಲ್ಲಿ, ಸುಸ್ಪಷ್ಟವಾಗಿ, ಚೈತನ್ಯದ ಅಭಿವ್ಯಕ್ತಿಯನ್ನು ಪಡೆಯುತ್ತೇವೆ. ಇವೆಲ್ಲವುಗಳ ವಿಕಾಸವು ಕ್ಷಿತಿ ತತ್ತ್ವದ ನಂತರ ಆಯಿತು. ಆದ್ದರಿಂದಲೇ, ಕ್ಷಿತಿ ತತ್ತ್ವಕ್ಕಿಂತ ಮುನ್ನ ಇವುಗಳ ಯಾವ ರೂಪವೂ ಕಾಣಬರುವುದಿಲ್ಲ. ಅಂದಮೇಲೆ, ಭೂಮಾಚಿತ್ತವು



ಸ್ಥೂಲತೆಯ ಚರಮಾವಸ್ಥೆಯನ್ನು (ಕ್ಷಿತಿ ತತ್ತ್ವ) ಪಡೆದ ಬಳಿಕ, ಮರಳಿ ವಿಪರೀತ ಧಾರೆಯಲ್ಲಿ ಗಿಡಗಂಟಿ, ಜೀವ-ಜಂತುಗಳ ಸ್ತರದಿಂದ ಮೇಲೆದ್ದು ಕ್ರಮೇಣ ಸೂಕ್ಷ್ಮದತ್ತ ಮುನ್ನಡೆಯುತ್ತಿದೆ.

ಭೂಮಾ ಚಿತ್ತದ ಸೂಕ್ಷ್ಮದತ್ತಣ ವಿಕಾಸವೂ ಸಹ, ಅದರ ಜಡತ್ವ ಪ್ರಾಪ್ತಿಯಂತೆಯೇ ಕ್ರಮೇಣ ಆಗುತ್ತದೆ. ಕೂಡಿಬಿದ್ದ ತುಪ್ಪವು ಯಾವ ರೀತಿ ಒಮ್ಮಿಂದೊಮ್ಮೆಯೇ ಕರಗುವುದಿಲ್ಲವೋ, ಅದೇ ಪ್ರಕಾರ, ಜಡ ಕ್ಷಿತಿ ತತ್ತ್ವವೂ ಸಹ, ಒಮ್ಮಿಂದೊಮ್ಮೆಯೇ ಸೂಕ್ಷ್ಮವಾಗುವುದಿಲ್ಲ. ಗಿಡ-ಗಂಟಿ, ಹಾಗೂ ಪಶು ಜೀವನದ ಕ್ರಮೇಣ ವಿಕಾಸವನ್ನು ನೋಡುವುದರಿಂದಲೇ, ಭೂಮಾ ಚಿತ್ತವು ಕ್ರಮೇಣ ಸೂಕ್ಷ್ಮತ್ವವನ್ನು ಗಳಿಸಿದೆಯೆಂಬುದು ಗೊತ್ತಾಗುತ್ತದೆ. ಪೃಥ್ವಿಯ ಮೇಲೆ ಉದ್ಭಿದ್ (ಸಸ್ಯಾದಿ) ಜೀವಿಗಳಲ್ಲಿ ಮೊತ್ತ ಮೊದಲು ಯಾವುದೋ ಒಂದು ಪ್ರಕಾರದ, ಯಾವುದೋ ಹೆಸರಿನ ಉದ್ಭಿಜ್ಜ ಉತ್ಪನ್ನ ವಾಯಿತು. ಇದರಲ್ಲಿ ಚೈತನ್ಯದ ವಿಕಾಸವು, ಅದೆಷ್ಟೋ ಅಸ್ಪಷ್ಟವಾಗಿರಲೊಲ್ಲ ದೇಕೆ, ಅಂತೂ ಇದೆ. ಮತ್ತು ಇದೇ ಕಾರಣದಿಂದಾಗಿ ಇದಕ್ಕೆ ಅಚೇತನ ಪದಾರ್ಥವೆಂದು ಕರೆಯಲಾರೆವು. ಇದಾದ ಬಳಿಕ, ಹಣ್ಣು–ಎಲೆಗಳಿಂದ ತುಂಬಿ ಸೂಸುವ ಸಸ್ಯಾದಿಗಳು ಹುಟ್ಟಿದವು. ಇವುಗಳೊಳಗೆ ಚೈತನ್ಯದ ವಿಕಾಸವು ಇನ್ನಷ್ಟು ಸ್ಪಷ್ಟವಾಯಿತು. ಇದಾದ ಬಳಿಕ ಕ್ರಮೇಣ, ವಿಕಾಸದ ಧಾರೆಯಲ್ಲಿ, ಸರಿಯಾದ ಕ್ರಮದಲ್ಲಿ, ನಿಮ್ನಕೋಟಿ ಹಾಗೂ ಉಚ್ಚಕೋಟಿಯ ಪ್ರಾಣಿ ಸಮೂಹಗಳು ಹುಟ್ಟಿ ಬಂದವು. ಸೃಷ್ಟಿಯ ಈ ಸೂಕ್ಷ್ಮಾಭಿಮುಖೀ ಗತಿಯ ಅಂತಿಮ ಕ್ರಮದಲ್ಲಿ ಮಾನವನ ಆವಿರ್ಭಾವವಾಯಿತು. ಈ ಪ್ರಕಾರ ನಾವು ಸೃಷ್ಟಿಯ ಪ್ರಾರಂಭಿಕ ಸ್ತರದಲ್ಲಿ, ಏನನ್ನು ಪಡೆಯುತ್ತೇವೆಯೋ, ಅದರಲ್ಲಿ ಚೈತನ್ಯದ ಕ್ಷೀಣ ಅಭಿವ್ಯಕ್ತಿ ಇವೆ. ಮತ್ತು ಎಲ್ಲಕ್ಕಿಂತ ಕೊನೆಗೆ ಯಾರಲ್ಲಿ ಚೈತನ್ಯದ ವ್ಯಾಪಕ ವಿಕಾಸವಾಗಿದೆಯೋ, ಅಂಥ ಮಾನವನನ್ನು ಪಡೆಯುತ್ತೇವೆ. ಸೃಷ್ಟಿಯು ಕ್ರಮೇಣ ವಿಕಾಸವಾಗುತ್ತ ಯಾವುದರಿಂದಲೋ ಮಾನವನ ಸ್ತರದ ವರೆಗೆ ಬಂದಿದೆ. ಚೈತನ್ಯದ ಪ್ರತಿಫಲನವು ಜಡ ಸತ್ತೆಗಿಂತ ಸೂಕ್ಷ್ಮ ಸತ್ತೆಯಲ್ಲಿಯೇ ಹೆಚ್ಚಾಗಿರುತ್ತದೆ. ಅರ್ಥಾತ್, ಸೂಕ್ಷ್ಮತೆ ಹಾಗೂ ಜಡತೆಗಳ ಪರಿಮಾಣದ ಮೇಲೆಯೇ ಪ್ರತಿಫಲನವು ಘನ ಇಲ್ಲವೆ ಅಘನವಾಗು ವುದು ಅವಲಂಬಿಸಿದೆ. ಈ ವಿಚಾರದಿಂದ ಪ್ರಾಣಿಗಳ ವಿಕಾಸದಲ್ಲಿ ಯಾವುದೋ ಒಂದು ಎಲ್ಲಕ್ಕಿಂತ ಜಡವಾಯಿತು. ಹಾಗೆಯೇ ಮಾನವನು ಸೂಕ್ಷ್ಮತಮ ಅಭಿವ್ಯಕ್ತಿಯಾದನು.

ಜಡದಿಂದ ಸೂಕ್ಷ್ಮದ ದಿಶೆಯ ಗತಿಯಲ್ಲಿ ಸೃಷ್ಟಿಯು ಸೂಕ್ಷ್ಮ ಹಾಗೂ ಬಂಧನ ಮುಕ್ತ ಚೈತನ್ಯದತ್ತ ಇನ್ನೂ ಮುಂದೆ ಮುನ್ನಡೆದಿದೆ. ಅರ್ಥಾತ್ ಸೃಷ್ಟಿಯ ಮೊದಲನೆಯ ಹೆಜ್ಜೆಯಲ್ಲಿ, ಪ್ರಕೃತಿಯ ಬಂಧನದ ಕಾರಣ, ಪುರುಷನು ಜಡದಲ್ಲಿ ಪರಿಣಮಿಸಿದ್ದಾನೆ. ಆದಾದ ನಂತರ, ಜಡ ಸತ್ತೆಯು ಸೂಕ್ಷ್ಮ ಹಾಗೂ ಸರ್ವಾನುಸ್ಯೂತ (transcendental) ಪುರುಷನ ಕಡೆಗೆ ಸಾಗುತ್ತದೆ. ಈ ತೆರನಾದ ಸ್ಥೂಲ ವಿಕಾಸ ಹಾಗೂ ಸೂಕ್ಷ್ಮ ವಿಕಾಸಗಳ ವಿಚಾರದಿಂದ ಸೃಷ್ಟಿ ಚಕ್ರದಲ್ಲಿ ಎರಡು ಧಾರೆಗಳು ಸ್ಪಷ್ಟವಾಗಿ ಕಾಣಬರುತ್ತವೆ.

ಸೃಷ್ಟಿಯು ಸಗುಣ ಬ್ರಹ್ಮನ ಒಂದು ಮಾನಸಿಕ ರಚನೆಯಾಗಿದೆ. ಪ್ರಕೃತಿಯ ಗುಣಬಂಧನದ ಮೂಲಕ ಸಗುಣ ಪುರುಷನು ಸ್ಥೂಲತೆಯ ಚರಮ ಅವಸ್ಥೆಯಾದ ಕ್ಷಿತಿ ತತ್ತ್ವದಲ್ಲಿ ರೂಪಾಂತರಗೊಳ್ಳುತ್ತಾನೆ. ಮರಳಿ ವಿಪರೀತ ಗತಿಯ ಮೂಲಕ, ಸ್ಥೂಲತೆಯ ಅಂತಿಮ ಕ್ರಮದಿಂದ ಉನ್ನತವಾಗಿ ವಿಕಸಿತ ಚೈತನ್ಯದಿಂದ ಒಡಗೂಡಿದ, ಮಾನವ ಸತ್ತೆಯನ್ನು ಹೊಂದುತ್ತಾನೆ. ಚೈತನ್ಯವು ಕ್ರಮೇಣ ಹ್ರಾಸವಾಗುವ ಧಾರೆಯಲ್ಲಿ, ಸೃಷ್ಟಿಯು ಕ್ಷಿತಿ ತತ್ತ್ವದ ತನಕ ಇಳಿಯುತ್ತದೆ. ಮತ್ತು ಚೈತನ್ಯದ ಕ್ರಮೇಣ ವರ್ಧಮಾನ ಪ್ರತಿ ಪ್ರವಾಹದಲ್ಲಿ ಸೃಷ್ಟಿಯು ಮುಂದೆ ಸಾಗುತ್ತವೆ. ಮಾನವೀಯ ಸ್ತರದಲ್ಲಿ ಇದರ ಮೂಲಕ, ಮಾನವನು ಸಗುಣ ಬ್ರಹ್ಮನ ಕಲ್ಪನಾ-ತರಂಗದ ಚರಮ ಹಾಗೂ ಪರಮ ಅಭಿಪ್ರಕಾಶವಾಗಿದ್ದಾನೆ; ಎಂಬ ಸಿದ್ಧಾಂತಕ್ಕೆ ಬಂದು ತಲುಪುತ್ತೇವೆ. ಹಾಗೂ ಇದರ ನಂತರದ ಸ್ತರವೆಂದರೆ, ಸೂಕ್ಷ್ಮ ಹಾಗೂ ಭಾವಮಯ ಭೂಮಾ ಪುರುಷನಲ್ಲಿ ಲೀನವಾಗಿ ಹೋಗುವುದೇ ಆಗಿದೆ. ಅರ್ಥಾತ್ ಸೃಷ್ಟಿಯ ಉನ್ನಯನದ ಕ್ರಮದಲ್ಲಿ ಮಾನವನು ಪ್ರಾಣಿಗಳಲ್ಲಿಯೇ ಸರ್ವ—ಶ್ರೇಷ್ಠನಾಗಿದ್ದಾನೆ.

ಈ ಪ್ರಕಾರ ವ್ಯೋಮತತ್ತ್ವ ಹಾಗೂ ಮಾನವನು, ಸರಿಯಾದ ಕ್ರಮದಿಂದ, ಸಗುಣ ಬ್ರಹ್ಮನ ಮಾನಸ ಅಭಿವ್ಯಕ್ತಿಯ ಪ್ರಥಮ ಹಾಗೂ ಅಂತಿಮ ಸಾರವಾಗಿದ್ದಾರೆ. ಜಗತ್ತಿನಲ್ಲಿ ಕೋಟಿ ಕೋಟಿ ಮಾನವರನ್ನು ಹೊರತು ಪಡಿಸಿಯೂ ಸಹ, ಜೀವ–ಜಂತು, ಗಿಡಗಂಟಿ ಹಾಗೂ ಇನ್ನಷ್ಟು ಅಸಂಖ್ಯ ಪ್ರಕಾರದ ಪಾಂಚ-ಭೌತಿಕ ವಿಕಾಸಗಳು ಕಾಣಬರುತ್ತವೆ. ಇಂದಿನ ವ್ಯಾಪಕ ರೂಪದಿಂದ ಚೈತನ್ಯಯುಕ್ತ ಮಾನವೀಯ ಸತ್ತೆಯ ಸಂಭಾವ್ಯತೆಯು ಪ್ರಾರಂಭಿಕ ಸ್ತರದಲ್ಲಿಯೇ ಅರ್ಥಾತ್ ವ್ಯೋಮತತ್ತ್ವದಲ್ಲಿಯೇ ಅಡಗಿದೆ. ವಾಯು, ಅಗ್ನಿ, ಜಲ ಹಾಗೂ ಕ್ಷಿತಿ ತತ್ತ್ವಗಳ ವರೆಗೆ ಬಂದು, ಅದೇ



ಪ್ರಸುಪ್ತ ಸಂಭಾವ್ಯತೆಯ ಸ್ಫುರಣವು ಬರು-ಬರುತ್ತ ಹೆಚ್ಚು ಹೆಚ್ಚು ಸ್ಪಷ್ಟವಾಗಿದೆ. ಸೃಷ್ಟಿಯ ವಿಕಾಸ ಕ್ರಮದಲ್ಲಿ ವ್ಯೋಮ ತತ್ತ್ವವು ವಾಯು ತತ್ತ್ವದಲ್ಲಿ ರೂಪಾಂತರಗೊಂಡ ಮೇಲೆ, ಭೂಮಾ ಮನದ ಕಲ್ಪನೆಯಲ್ಲಿ ಪುನಃ ಹೊಸ ವ್ಯೋಮ ತತ್ತ್ವವು ಸೃಷ್ಟವಾಗಿ ತೆರವಾದ ಸ್ಥಾನವನ್ನು ತುಂಬುತ್ತದೆ. ಪ್ರತಿಯೊಂದು ತತ್ತ್ವವು ಒಂದೇ ಪದ್ಧತಿಯಿಂದ ಕ್ರಮೇಣ ಆ ಮುಂದಿನ ಸ್ಥೂಲತರ ತತ್ತ್ವದಲ್ಲಿ ರೂಪಾಂತರಗೊಳ್ಳುತ್ತದೆ. ಮತ್ತು ಅದರ ಸಂರಚನೆಯು ಪೂರ್ವದಲ್ಲಿದ್ದ ಸೂಕ್ಷ್ಮತರ ತತ್ತ್ವದಲ್ಲಿ ಹುದುಗಿದ ಸಂಭಾವ್ಯತೆಯಿಂದ ಆಗುತ್ತದೆ. ಅಂದ ಮೇಲೆ, ಬ್ರಾಹ್ಮೀ ಕಲ್ಪನೆಯ ಮೊದಲನೆಯ ಸ್ತರವಾದ ವ್ಯೋಮ ತತ್ತ್ವದಲ್ಲಿ ಯಾವ ಚೈತನ್ಯ ಸತ್ತೆಯು ಪ್ರಸುಪ್ತವಾಗಿದ್ದಿತೋ, ಅದುವೇ ಸೃಷ್ಟಿಯ ಸ್ಥೂಲ ಹಾಗೂ ಸೂಕ್ಷ್ಮದತ್ತಣ ಧಾರಾ ಪ್ರವಾಹಗಳಲ್ಲಿ ಮುಂದಾಗಿ,ಇಂದಿನ ಮಾನವೀಯ ಚೈತನ್ಯದ ರೂಪವನ್ನು ತಾಳಿದೆ. ಚೈತನ್ಯವು ಅಭಿವ್ಯಕ್ತವಾಗದಿರುವ ಕಾರಣ ನಾವಿಂದು ಯಾವ ಮಳಲಿನ ಕಣವನ್ನು ಉಪೇಕ್ಷೆಯ ದೃಷ್ಟಿಯಿಂದ ನೋಡುತ್ತಿರುವೆವೋ, ಕ್ರಮೇಣ ಮುಂದೆ ಸಾಗಿದ ಸೃಷ್ಟಿಯಾ ಧಾರೆಯಲ್ಲಿ ಅದೂ ಸಹ, ಒಂದು ದಿನ ವ್ಯಾಪಕ ರೂಪದಿಂದ ವಿಕಸಿತ ಚೈತನ್ಯಯುಕ್ತ ಮಾನವೀಯ ಆಧಾರವನ್ನು ಪಡೆಯುತ್ತದೆ.

ಸಗುಣ ಬ್ರಹ್ಮನ ಸೂಕ್ಷ್ಮತ್ವ ಹಾಗೂ ಸೃಷ್ಟಿ ಚಕ್ರದಲ್ಲಿ ಸ್ಥೂಲದಿಂದ ಸೂಕ್ಷ್ಮದತ್ತಣ ಗತಿ ಪ್ರವಾಹವನ್ನು ಕಂಡು, ಸೃಷ್ಟಿಯ ಉತ್ಪತ್ತಿಯು ಸಗುಣ ಬ್ರಹ್ಮನಿಂದ ಆಗಿದೆ ಮತ್ತು ಅದರ ಲಯವೂ ಸಹ, ಸಗುಣ ಬ್ರಹ್ಮನಲ್ಲಿಯೇ ಆಗುತ್ತದೆ; ಎಂಬ ಸಿದ್ಧಾಂತವನ್ನು ತಲುಪುತ್ತೇವೆ.

ಪುರುಷನು ಸ್ವರೂಪತಃ ಸೂಕ್ಷ್ಮನಿದ್ದಾನೆ. ಕ್ಷಿತಿ ತತ್ತ್ವದಲ್ಲಿ, ಪ್ರಕೃತಿಯ ಬಂಧನದ ಚರಮಾವಸ್ಥೆಯಲ್ಲಿ, ಪುರುಷನು ಚರಮ ಜಡತೆಯನ್ನು ಹೊಂದುತ್ತಾನೆ. ಮರಳಿ ಸೃಷ್ಟಿಯ, ಇದರ ನಂತರದ ಅವಸ್ಥೆಯಲ್ಲಿ ಅರ್ಥಾತ್ ಜಡತೆಯು ಹ್ರಾಸಗೊಳ್ಳುವ ಕ್ರಮದಲ್ಲಿ ಅಂದರೆ, ನಿರ್ಗುಣಾಭಿಮುಖೀ ಗತಿ ಪ್ರವಾಹದಲ್ಲಿ, ಪುರುಷನು ಕ್ರಮೇಣ, ಪ್ರಕೃತಿಯ ಬಂಧನದಿಂದ ಮುಕ್ತನಾಗುತ್ತ ಹೋಗುತ್ತಾನೆ. ಅರ್ಥಾತ್ ಸೂಕ್ಷ್ಮದತ್ತಣ ಗತಿಯಲ್ಲಿ ಪುರುಷನು ಯಾವ ಪ್ರಕಾರ ಪ್ರಕೃತಿಯ ಬಂಧನದಿಂದ ಮುಕ್ತನಾಗುತ್ತ ಹೋಗುವನೋ, ಅದೇ ಪ್ರಕಾರ, ಸ್ಥೂಲದತ್ತಣ ಗತಿಯಲ್ಲಿ ಪುರುಷನ ಮೇಲೆ ಪ್ರಕೃತಿಯ ಬಂಧನವು ಹೆಚ್ಚು ಹೆಚ್ಚು ದೃಢವಾಗುತ್ತ ಹೋಗುತ್ತದೆ. ಮತ್ತು ಕ್ಷಿತಿ ತತ್ತ್ವದಲ್ಲಿ ಬಂದು, ಅದು ಎಲ್ಲಿ ಪುರುಷನು ತನ್ನ ವಿಶೇಷತೆಯನ್ನು ಕಳೆದುಕೊಂಡು,

ನಿಷ್ಪ್ರಾಣ ಜಡ ಪದಾರ್ಥದಲ್ಲಿ ಪರಿಣತಗೊಳ್ಳುವನೋ, ಅಂಥ ಅವಸ್ಥೆಯನ್ನು ತಲುಪುತ್ತಾನೆ. ಇನ್ನೊಂದು ಕಡೆಗೆ ಸ್ಥೂಲದ ದಿಶೆಯಲ್ಲಿ ಚರಮಾವಸ್ಥೆಯನ್ನು ತಲುಪಿ, ಬಂಧಿಸುವ ಶಕ್ತಿಯ ಕೊನೆಯ ಪ್ರಯೋಗ ಮಾಡಿದ ಬಳಿಕ, ಪ್ರಕೃತಿಯೂ ಸಹ, ಬಂಧನ ಶಕ್ತಿವರ್ಜಿತವಾಗುತ್ತದೆ. ಆದರೆ ಸೃಷ್ಟಿ ಚಕ್ರದ ಎರಡನೆಯ ಸ್ತರದಲ್ಲಿ ಅರ್ಥಾತ್ ಸೂಕ್ಷ್ಮದ ದಿಶೆಯ-ಹಾದಿಯಲ್ಲಿ ಪುರುಷನ ಪ್ರತಿಫಲನವು ಕ್ರಮೇಣ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತ ಹೋಗುತ್ತದೆ. ಹಾಗೂ ಪುರುಷನು ಕ್ರಮವಾಗಿ ಪ್ರಕೃತಿಯ ಪ್ರಭಾವದಿಂದ ಮುಕ್ತನಾಗುತ್ತ ಹೋಗುತ್ತಾನೆ. ಪುರುಷನು ಕ್ರಮೇಣ ಮುಕ್ತನಾಗುವ ಕಾರಣ, ಪ್ರಕೃತಿಯು ಈಗ ಅವನ ಮೇಲೆ ಮತ್ತಷ್ಟು ತನ್ನ ಗುಣ ಬಂಧನದ ಆರೋಪವನ್ನು ವ್ಯಾಪಕ ಭಾವದಿಂದ ಮಾಡಲಾರದು. ಇಲ್ಲಿ ಇದೊಂದು, ಪ್ರಶ್ನೆ ಏಳುತ್ತದೆ, ಏನೆಂದರೆ, ಪುರುಷನ ಮೇಲೆ ಬಂಧನವನ್ನು ವಿಸ್ತರಿಸುವುದೇ ಪ್ರಕೃತಿಯ ವಿಶೇಷತೆ ಎಂದಾದರೆ, ಪುರುಷನು ಬಂಧನ-ಮುಕ್ತನಾಗುವ ಸಾಧವವೆಂತು?

ಪ್ರಕೃತಿಯ ಪ್ರಭಾವದ ಮೂಲಕ ಭೂಮಾ ಚೈತನ್ಯ ಇಲ್ಲವೆ ಸಮಷ್ಟಿ ಚೈತನ್ಯವು ತನ್ನನ್ನು, ಯಾವ ಅನಂತ ಸಂಖ್ಯೆಯ ಅಣುಚೈತನ್ಯಗಳಲ್ಲಿ ವಿಭಕ್ತವಾಗಿಸಿಕೊಂಡಿದೆಯೋ, ಅದರ ಒಂದಿನಿತು ಅಂಶವು ಕ್ಷಿತಿ ತತ್ತ್ವದ ರೂಪ ಗ್ರಹಿಸಿರುತ್ತದೆ. ಹಾಗೂ ಸೃಷ್ಟಿಯ ಸೂಕ್ಷ್ಮಾಭಿಮುಖೀ ಗತಿಯಲ್ಲಿ ಇದು ಕ್ರಮೇಣ ಪ್ರಕೃತಿಯ ಪ್ರಭಾವದಿಂದ ಮುಕ್ತವಾಗುತ್ತಿರುತ್ತದೆ. ಸೃಷ್ಟಿ ಚಕ್ರದ ಮೂಲ ಸತ್ತೆಯಾಗಿದ್ದಾನೆ,ಸಗುಣ ಬ್ರಹ್ಮ. ಆದ್ದರಿಂದ, ಅಣುಚೈತನ್ಯವು ಜಡತೆಯನ್ನು ಹೊಂದುವುದು ಇಲ್ಲವೆ ಗುಣ ಬಂಧನದಿಂದ ಮುಕ್ತವಾಗುವುದು, ಸಂಪೂರ್ಣ ರೂಪದಿಂದ ಅವನನ್ನೇ ಅವಲಂಬಿಸಿದೆ. ಒಂದು ವೇಳೆ, ಸಗುಣ ಬ್ರಹ್ಮನು ತಾನೇ ಮುಕ್ತ ಪುರುಷನಲ್ಲವಾದರೆ, ಅಣುವಿನ ಮುಕ್ತಿಯು ಅವನ ಮುಖಾಂತರ ಆಗುವುದೆಂತು ಸಂಭವಿಸುತ್ತದೆ? ಯಾವ ವ್ಯಕ್ತಿಯು ತಾನೇ ಬಂಧಿತನಾಗಿರುವನೋ, ಅವನು ಎರಡನೆಯವರ ಬಂಧನವನ್ನು ಅದೆಂತು ಬಿಡಿಸಬಲ್ಲನು? ಆದರೆ ಬಂಧನದಿಂದ ಮುಕ್ತನಾದ ವ್ಯಕ್ತಿಯು ಈ ಕಾರ್ಯವನ್ನು ಸಲೀಸಾಗಿ ಮಾಡಬಲ್ಲವನಾಗಿದ್ದಾನೆ. ಆದ್ದರಿಂದ ಅಣುವಿಗೆ ಮುಕ್ತಿಯನ್ನೀಯುವ ಸಗುಣ ಬ್ರಹ್ಮನು ಅವಶ್ಯವಾಗಿ ಮುಕ್ತ ಪುರುಷನಾಗಿದ್ದಾನೆ.

ಮುಕ್ತ ಪುರುಷನು ಏನಿದ್ದಾನೆ? ಇಲ್ಲವೆ ಮುಕ್ತ ಪುರುಷನೆಂದು ಯಾರನ್ನು ಕರೆಯಬೇಕು? ನಿರ್ಗುಣ ಬ್ರಹ್ಮನಲ್ಲಿ ಪುರುಷ ಮತ್ತು ಪ್ರಕೃತಿಗಳೆರಡೂ ತಮ್ಮ ತಮ್ಮ ಸ್ವಾಧೀನವಾಗಿವೆ. ಸ್ವಾಧೀನ ಪುರುಷನನ್ನು ಪ್ರಕೃ



ತಿಯು ಗುಣಾನ್ವಿತಗೊಳಿಸದು. ಅರ್ಥಾತ್ ನಿರ್ಗುಣ ಪುರುಷನು ಪ್ರಕೃತಿಯ ಪ್ರಭಾವದಿಂದ ಮುಕ್ತನಾಗಿದ್ದಾನೆ. ಆದ್ದರಿಂದ, ಆಧ್ಯಾತ್ಮಿಕ ಸಾಧನೆಯ ಮೂಲಕ ಯಾವನು ನಿರ್ಗುಣ ಪದವನ್ನು ಪಡೆಯುವನೋ, ಅವನೇ ಮುಕ್ತನಾಗಿದ್ದಾನೆ. ಬೇರೆಯವರನ್ನು ಮುಕ್ತಗೊಳಿಸುವ ಉದ್ದೇಶದಿಂದ ಯಾವಾಗ ಅವನು ತನ್ನ ಇಚ್ಛೆಯಿಂದ ನಿರ್ದಿಷ್ಟ ಸಮಯಕ್ಕಾಗಿ, ಪ್ರಕೃತಿಯ ಬಂಧನದಲ್ಲಿ ಬರುವನೋ, ಆ ಸಮಯದಲ್ಲಿಯೂ ಸಹ, ಅವನನ್ನು ಮುಕ್ತ ಪುರುಷನೆಂದೇ ಕರೆಯುತ್ತಾರೆ. ಏಕೆಂದರೆ, ಈ ನಿರ್ದಿಷ್ಟ ಸಮಯವು ಕಳೆದು ಹೋದ ಮೇಲೆ ಪ್ರಕೃತಿಯು ಅವನ ಮೇಲೆ ಯಾವುದೇ ಬಂಧನದ ಆರೋಪವನ್ನು ಮಾಡಲಾರದು. ಇದರಿಂದ - ಸಾಧನೆಯ ಬಲದಿಂದ ಯಾರು ನಿರ್ಗುಣತ್ವವನ್ನು ಸಂಪಾದಿಸಿರುವರೋ, ಹಾಗೂ ಜನ ಕಲ್ಯಾಣದ ಉದ್ದೇಶದಿಂದ ತಮ್ಮ ಇಚ್ಛೆಯಿಂದ ದೇಹ ಧರಿಸಿ ಪ್ರಕೃತಿಯ ಬಂಧನಕ್ಕೆ ಅಧೀನರಾಗಿರುವರೋ, ಅವರೇ ಮುಕ್ತ ಪುರುಷರು.

ತಾನು ಗುಣಾಧೀನನಲ್ಲದ ಕಾರಣ, ಮುಕ್ತ ಪುರುಷನು ಎರಡನೆಯವರ ಬಂಧನಕ್ಕೆ ಕಾರಣವಾಗಲಾರನು. ಏಕೆಂದರೆ, ಎರಡನೆಯವರ ಬಂಧನದ ಕಾರಣವಾಗುವುದರಿಂದ, ಅವನು ಪ್ರಕೃತಿಯ ಬಂಧನದ ಅಧೀನನಾಗಬೇಕಾಗುತ್ತದೆ. ಸಗುಣ ಬ್ರಹ್ಮನೇ ಮುಕ್ತ ಪುರುಷನಾಗಿದ್ದಾನೆ. ಆದ್ದರಿಂದ, ಅವನು ಎರಡನೆಯವರ ಬಂಧನದ ಕಾರಣನಾಗಲಾರನು. ಆದರೆ ಸಗುಣ ಬ್ರಹ್ಮನು ತಾನೇ ಮುಕ್ತ ಪುರುಷನಾಗಿದ್ದರೂ ಸಹ, ಅವನಿಂದ ಉತ್ಪನ್ನವಾದ ಅಣು ಸಮೂಹಗಳು ವ್ಯಕ್ತಿಗತ ರೂಪದಿಂದ ಮುಕ್ತವಾಗಿಲ್ಲ. ಸಗುಣ ಬ್ರಹ್ಮನ ಇಚ್ಛೆಯಿಂದಲೇ ಅದನ ಮೇಲೆ ಪ್ರಕೃತಿಯ ಬಂಧನದ ವಿಸ್ತಾರವಾಗುತ್ತದೆ. ಮತ್ತು ಇದರಿಂದ ಸಗುಣ ಬ್ರಹ್ಮನು ಪರೋಕ್ಷ ಭಾವದಿಂದ ಅಣುವಿನ ಬಂಧನದ ಕಾರಣನಾಗುತ್ತಾನೆ. ಹಾಗೂ ತಾನೂ ಸಹ ಬದ್ಧನಾಗುತ್ತಾನೆ. ಆದರೆ ಈ ಅಣು ಸಮೂಹವು, ಪ್ರಕೃತಿಯ ಅಧೀನ ಹೇಗೆ ಬಂದಿತು? ಮತ್ತು ಜಗತ್ತು ಇಲ್ಲವೆ ಸೃಷ್ಟಿಯು ಏಕೆ ಆಯಿತು? ಮೊದಲೇ ನಾವು ಕಂಡುಕೊಂಡಿರುವಂತೆ, ಯಾರು ನಿರ್ಗುಣತ್ವವನ್ನು ಅರ್ಜಿಸಿ, ಸ್ವ-ಇಚ್ಛೆಯಿಂದ ಜನ ಕಲ್ಯಾಣದ ಉದ್ದೇಶಕ್ಕಾಗಿ, ಪ್ರಕೃತಿಯ ಪ್ರಭಾವಕ್ಕೊಳಗಾಗುವರೋ, ಅವರನ್ನು ಮುಕ್ತ ಪುರುಷರೆಂದೇ ಕರೆಯುತ್ತಾರೆ. ಸಗುಣ ಬ್ರಹ್ಮನೂ ಸಹ ಮುಕ್ತ ಪುರುಷನಾಗಿದ್ದಾನೆ. ನಿರ್ಗುಣತ್ವವನ್ನು ಗಳಿಸಿದ ಬಳಿಕ, ಅವನೂ ಸಹ ಸ್ವೇಚ್ಛೆಯಿಂದ, ಜನ ಕಲ್ಯಾಣದ ಉದ್ದೇಶದಿಂದ ಪ್ರಕೃತಿಯ ಗುಣಾಧೀನನಾಗಿದ್ದಾನೆ. ಅಣು

ಚೈತನ್ಯವನ್ನು ಅದರ ಪ್ರಾರಂಭಿಕ ಸ್ವರೂಪಾವಸ್ಥೆಯಲ್ಲಿ ಮರಳಿ ಕರೆದೊಯ್ಯು ವುದರಿಂದ ಅದರ ಕಲ್ಯಾಣವಾಯಿತು. ಅಲ್ಲಿ ಅವನ ಮೇಲೆ ಪ್ರಕೃತಿಯ ಯಾವ ಪ್ರಭಾವವೂ ವಿಸ್ತರಿಸದು. ಅಂದಮೇಲೆ, ಪ್ರಕೃತಿಯ ಬಂಧನದಿಂದ ಬಿಡುಗಡೆ ಪಡೆಯುವುದಕ್ಕಾಗಿ, ಪುರುಷನಲ್ಲಿ ಯಥಾರ್ಥ ಕಲ್ಯಾಣದ ಬೀಜವು ಹುದುಗಿರುತ್ತದೆ. ಏಕೆಂದರೆ, ಆಗ ಮಾತ್ರ ಪುರುಷನು ಪರಮ ಪದವನ್ನು ಪ್ರಾಪ್ತ ಮಾಡಿಕೊಳ್ಳುವನಲ್ಲವೇ! ಆದ್ದರಿಂದ, ಸಗುಣ ಬ್ರಹ್ಮನು ಪ್ರತಿಯೊಂದು ಅಣು ಚೈತನ್ಯವನ್ನು ಮುಕ್ತ ಪುರುಷನನ್ನಾಗಿ ಮಾಡುವ ಮಹಾ ಉದ್ದೇಶ ದಿಂದ ತಾನೇ ಪ್ರಕೃತಿಯ ಗುಣಗಳಿಗಧೀನನಾಗುತ್ತಾನೆ. ಅವನೊಂದಿಗೇನೇ, ಅಣು ಚೈತನ್ಯ ಸಮೂಹವೂ ಸಹ, ಪ್ರಕೃತಿಯ ಅಧೀನವಾಗಿಬಿಡುತ್ತದೆ. ಪ್ರತಿ ಯೊಂದು ಅಣು ಚೈತನ್ಯವನ್ನು ಮುಕ್ತಗೊಳಿಸುವ ಉದ್ದೇಶದಿಂದಲೇ ಯಾವಾಗ ಸಗುಣ ಬ್ರಹ್ಮನು ಪ್ರಕೃತಿಯ ಅಧೀನನಾಗುವನೋ, ಹಾಗೂ ಎಲ್ಲಿಯ ತನಕ ಪ್ರತಿಯೊಂದು ಅಣು ಚೈತನ್ಯವು ಮುಕ್ತವಾಗುವುದಿಲ್ಲವೋ, ಇಲ್ಲವೆ ಅವನ ಸಮಾನ ಪ್ರತಿಯೋರ್ವನೂ ಮುಕ್ತ ಪುರುಷನಾಗಿ ನಿರ್ಮಾಣ ವಾಗುವುದಿಲ್ಲವೋ, ಅಲ್ಲಿಯ ತನಕ ಅವನ ಈ ಪ್ರಯತ್ನದಲ್ಲಿ ವಿರಾಮವಿರದು. ಅಂದರೆ ಅವನ ಈ ಪ್ರಯತ್ನವು ನಿಲ್ಲದು; ನಡೆದೇ ಇರುತ್ತದೆ.

ಈಗ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ಪ್ರಕೃತಿಯ ಬಂಧನ ರಹಿತ ಮುಕ್ತ ಪುರುಷನಾದ ಸಗುಣ ಬ್ರಹ್ಮನು ಸರ್ವಶಕ್ತಿವಂತನಾಗಿರುವ ಕಾರಣ, ಅವನು ತನ್ನ ಕೇವಲ ಇಚ್ಛೆಯಿಂದಲೇ ಅಣು ಸಮೂಹವನ್ನು ಮುಕ್ತ ಪುರುಷರನ್ನಾಗಿಸಬಲ್ಲನು. ಆದರೆ ಅವನು ಹಾಗೆ ಮಾಡದೆ, ಆ ಜನರನ್ನು ಪ್ರಕೃತಿಗೆ ಅಧೀನರನ್ನಾಗಿ ಏಕೆ ಇರಿಸುತ್ತಾನೆ? ಹೀಗೆ ಮಾಡಿ, ಸೃಷ್ಟಿಯ ರಚನೆ ಯನ್ನಾದರೂ ಏಕೆ ಮಾಡಿದನು?

ಪ್ರತಿಯೊಂದು ಅಣುವನ್ನು ಮುಕ್ತಗೊಳಿಸುವ ಉದ್ದೇಶದಿಂದ ಸಗುಣ ಬ್ರಹ್ಮನು ತನ್ನನ್ನು ಬಹು ಸಂಖ್ಯೆಯ ಅಣುಗಳಲ್ಲಿ ವಿಭಜಿಸಿಕೊಳ್ಳುವುದರಲ್ಲಿಯೇ ಪ್ರಯೋಜನವನ್ನು ಕಂಡುಕೊಂಡನು. ಮತ್ತು ಇದನ್ನೇ ಮಾಡುವುದಕ್ಕೋಸುಗ ಅವನು ಜಡತ್ವದ ವರೆಗೆ ಅವತರಿಸಬೇಕಾಯಿತು. ಏಕೆಂದರೆ ಸೂಕ್ಷ್ಮಸ್ತರದಲ್ಲಿ ವಿಭಜನದ ಕ್ರಿಯೆಯು ಸಂಭವಿಸದು. ಉದಾಹರಣೆಗೆ ನೋಡಿರಿ. ಯಾವುದು ಕ್ಷಿತಿ ತತ್ತ್ವಕ್ಕಿಂತ ಸೂಕ್ಷ್ಮವಾಗಿದೆಯೋ ಹಾಗೂ ತೇಜಸ್ತತ್ತ್ವದಲ್ಲಿ ಅಂತರ್ಗತ ವಾಗಿದೆಯೋ, ಅದರ ವಿಭಜನವನ್ನು ಮಾಡಬಲ್ಲೆವೇನು? ಬೇರೆ ಬೇರೆ ಎರಡು ದೀಪದ ಬತ್ತಿಗಳ ನೆರವಿನಿಂದ ಪ್ರಜ್ವಲಿಸುತ್ತಿರುವ ಅಗ್ನಿಯನ್ನು ಬದಿ-ಬದಿಗೆ



ಇರಿಸಿದಾಗ, ಎರಡರ ಅಗ್ನಿ ಶಿಖೆಗಳೂ ಸೇರಿ, ಒಂದಾಗುತ್ತವೆ. ಮತ್ತು ನಾವೆಷ್ಟೇ ಪ್ರಯತ್ನಬಟ್ಟರೂ ಸಹ, ಅವುಗಳ ಅಸ್ತಿತ್ವವನ್ನು ಪೃಥಕ್ ರೂಪ ದಿಂದ ನಿರೂಪಿಸಲಾರೆವು. ಆದರೆ, ಹಿಡಿ ತುಂಬ ಧೂಳನ್ನು ಸೇರಿಸಿದ್ದರೂ ಸಹ, ಅದನ್ನು ಎರಡು ಭಾಗಗಳಲ್ಲಿ ವಿಂಗಡಿಸಬಲ್ಲೆವು. ಬೇಕಾದಷ್ಟು ಸೂಕ್ಷ್ಮ ವಾದ ಜಲ, ಅಗ್ನಿ, ವಾಯು, ವ್ಯೋಮ ಇಲ್ಲವೆ ಇವುಗಳಿಗಿಂತಲೂ ಸೂಕ್ಷ್ಮ ವಾದ ಭೂಮಾ ಚೈತನ್ಯದ ಪೃಥಕೀಕರಣವು ಯಾವುದೇ ಪ್ರಕಾರದಿಂದಲೂ ಸಂಭವಿಸದು. ಕೇವಲ ಕ್ಷಿತಿ ತತ್ತ್ವದ ವಿಭಜನೆಯನ್ನು ಮಾತ್ರ ಇಚ್ಛಾನುಸಾರ ಮಾಡಬಲ್ಲೆವು. ಆದ್ದರಿಂದ, ತನ್ನನ್ನು ಅನಂತ ಸಂಖ್ಯೆಯ ಅಣು ಚೈತನ್ಯ ಗಳಲ್ಲಿ ವಿಭಜಿಸಿಕೊಳ್ಳುವ ಉದ್ದೇಶದಿಂದಲೇ ಸಗುಣ ಬ್ರಹ್ಮನು ಸೂಕ್ಷ್ಮದಿಂದ ಚರಮ ಜಡತ್ವದ ವರೆಗೆ ಇಳಿದು, ಕ್ಷಿತಿ ತತ್ತ್ವದ ರೂಪವನ್ನು ಗ್ರಹಿಸಿದನೆಂಬ ಮಾತು ಯುಕ್ತಿ-ಸಂಗತವಾಗಿದೆ.

ಕ್ಷಿತಿ ತತ್ತ್ವದಲ್ಲಿಯೇ ಅಣು ಚೈತನ್ಯದ ಅಭಿವ್ಯಕ್ತಿಯಾಗುತ್ತದೆ. ಆದ್ದ ರಿಂದ, ಪ್ರಕೃತಿಯ ಗುಣ ಬಂಧನದ ಅಂತಿಮ ಸೀಮೆ ಇಲ್ಲವೆ ಸಂಚರ ಧಾರೆ ಯಲ್ಲಿ, ಕ್ಷಿತಿ ತತ್ತ್ವದಲ್ಲಿ, ಸಗುಣ ಬ್ರಹ್ಮನು ಪರಿಣಮಿಸುತ್ತಾನೆ. ಹಾಗೆಯೇ ಮರಳಿ ಸೂಕ್ಷ್ಮಾಭಿಮುಖೀ ಗತಿಯಲ್ಲಿ ಇಲ್ಲವೆ ಪ್ರತಿಸಂಚರ ಧಾರೆಯಲ್ಲಿ, ಬಂಧನ ದಿಂದ ಮುಕ್ತಿಯ ದಿಶೆಯಲ್ಲಿ ಮುಂದೆ ಸಾಗುತ್ತಾನೆ, ಪ್ರಕೃತಿಯ ಬಂಧನದಿಂದ ಚೈತನ್ಯನು ಮುಕ್ತವಾಗುವನೆಂಬುದರ ಅರ್ಥವೆಂದರೆ, ಸೂಕ್ಷ್ಮತೆಯ ವಿಕಾಸ ವಷ್ಟೇ. ಹಾಗೂ ಇದರ ಪರಿಣಾಮವು ಸ್ವರೂಪವಾದ ನಿರ್ಗುಣ ಬ್ರಹ್ಮನಲ್ಲಿ ಮರಳಿ ಬರುವುದೇ ಆಗಿದೆ. ಸೃಷ್ಟಿಯ ಮೊದಲನೆಯ ಸ್ತರದಲ್ಲಿ ಅರ್ಥಾತ್ ಸೂಕ್ಷ್ಮದಿಂದ ಸ್ಥೂಲದ ದಿಶೆಯ ಗತಿಯಲ್ಲಿ, ಭೂಮಾ ಚೈತನ್ಯವು ತನ್ನನ್ನು ಅನಂತ ಸಂಖ್ಯೆಯ ಅಣು ಚೈತನ್ಯಗಳಲ್ಲಿ ವಿಭಜಿಸಿಕೊಳ್ಳುತ್ತದೆ. ಹಾಗೂ ಎರಡನೆಯ ಸ್ತರದಲ್ಲಿ ಅರ್ಥಾತ್ ಸ್ಥೂಲದಿಂದ ಸೂಕ್ಷ್ಮ ದಿಶೆಯ ಗತಿಯಲ್ಲಿ ಅಣು ಚೈತನ್ಯ ಸಮೂಹವನ್ನು ಪ್ರಕೃತಿಯ ಬಂಧನದಿಂದ ಮುಕ್ತ ಗೊಳಿಸಲಾಗುತ್ತದೆ. ಸಗುಣ ಬ್ರಹ್ಮನು ಪ್ರತಿಯೊಂದು ಅಣುವಿನ ಮುಕ್ತಿ ಯನ್ನು ಬಯಸುತ್ತಾನೆ. ಹಾಗೆಯೇ ತನ್ನ ಈ ಇಚ್ಛೆಯ ಪೂರ್ತಿಗಾಗಿ ಅವನು ಸಂಚರ ಮತ್ತು ಪ್ರತಿ-ಸಂಚರ ಧಾರೆಯಿಂದ ಕೂಡಿದ ಸೃಷ್ಟಿ ಚಕ್ರವನ್ನು ನಿರ್ಮಿಸಬೇಕಾಗುತ್ತದೆ. ಆದ್ದರಿಂದ ಪ್ರತಿಯೋರ್ವ ಅಣು ಚೈತನ್ಯನನ್ನು ಮುಕ್ತ ಪುರುಷನನ್ನಾಗಿಸಿ, ಉದ್ಧರಿಸುವ ಉದ್ದೇಶದಿಂದಲೇ ಸಗುಣ ಬ್ರಹ್ಮನು ಸೃಷ್ಟಿಯ ವಿಕಾಸವನ್ನು ಮಾಡಿದ್ದಾನೆ. ಇಲ್ಲವೆ ಜಗತ್ತಿನ ರಚನೆಯನ್ನು

ಮಾಡಿದ್ದಾನೆ.

ಮುಕ್ತ ಪುರುಷನಾಗಬೇಕಾದರೆ, ನಿರ್ಗುಣತ್ವವನ್ನು ಅವಶ್ಯವಾಗಿ ಸಂಪಾದಿಸಲೇಬೇಕು. ಮತ್ತು ಆಗ ಮಾತ್ರ, ನಿರ್ಗುಣ ಬ್ರಹ್ಮನ ಇಚ್ಛೆಯು ಈಡೇರುತ್ತದೆ. ಈಗ, ಅಣು ಚೈತನ್ಯ ಸಮೂಹವು ನಿರ್ಗುಣತ್ವವನ್ನು ಅರ್ಜಿಸುವ ಕಾರ್ಯದಲ್ಲಿ ಸಗುಣ ಬ್ರಹ್ಮನ ಕೈವಾಡವೇನು? ಮತ್ತು ಅದು ಎಲ್ಲಿಯ ವರೆಗೆ ಇರುತ್ತದೆ?

ಸಗುಣ ಬ್ರಹ್ಮನ ಕಲ್ಪನೆಯ ಮೂಲಕ ಸೃಷ್ಟವಾದ ಜಗತ್ತಿನಲ್ಲಿ, ಅನಂತ ಸಂಖ್ಯೆಯ ಅಣು ಚೈತನ್ಯಗಳ ಅಭಿವ್ಯಕ್ತಿಯು. ಅವನ ಮಾನಸಿಕ ಸಂವೇದನೆಯಲ್ಲಿಯೇ ಇದೆ. ವಿಶೇಷ ವ್ಯಕ್ತಿಯ ಕಾಲ್ಪನಿಕ ಸೃಷ್ಟಿಯು ಯಾವ ಪ್ರಕಾರ ಅವನ ಮನದಲ್ಲಿಯೇ ಸೀಮಿತವಾಗಿರುವುದೋ, ಮತ್ತು ಬೇರೊಬ್ಬ ವ್ಯಕ್ತಿಯ ಮನಸ್ಸು, ಯಾವ ಪ್ರಕಾರ ಅದನ್ನು ಕಾಣುವುದಿಲ್ಲವೋ, ಸರಿಯಾಗಿ ಅದೇ ರೀತಿ, ಸಗುಣ ಬ್ರಹ್ಮನ ಕಲ್ಪನೆಯ ಮೂಲಕ ಸೃಷ್ಟವಾದ ಅಣು ಚೈತನ್ಯವೂ ಸಹ, ಅವನ ಮನದಲ್ಲಿಯೇ ಸೀಮಿತವಾಗಿರುತ್ತದೆ. ಅಣು ಚೈತನ್ಯ ಸಮೂಹಕ್ಕಾಗಿ, ಭೂಮಾ ಮಾನಸದ ಸೀಮೆಯಿಂದ ಆಚೆಗೆ ಹೋಗಿ, ನಿರ್ಗುಣತ್ವವನ್ನು ಸಂಪಾದಿಸುವ ಸಂಭವವಿಲ್ಲ. ಮತ್ತು ಇದಕ್ಕಾಗಿ ಅಣುವಿನ ಮುಕ್ತಿಯ ಪ್ರಯತ್ನವೂ ಸಹ ಸಿದ್ಧವಾಗುವುದಿಲ್ಲ. ಅರ್ಥಾತ್ ಪ್ರತಿಯೊಂದು ಅಣುವನ್ನು ಮುಕ್ತ ಮಾಡಬೇಕೆಂಬ ಸಗುಣಬ್ರಹ್ಮನ ಇಚ್ಛೆಯೂ ಸಹ ಅರ್ಥಹೀನವಾಗುತ್ತದೆ. ಆಗ ಸಗುಣ ಬ್ರಹ್ಮನ ಇಚ್ಛೆಯು ಹೇಗೆ ಪೂರ್ಣವಾಗಬಲ್ಲದೆಂಬುದನ್ನೂ ನೋಡಬೇಕಾಗಿದೆ.

ಬ್ರಹ್ಮ ಮತ್ತು ಪ್ರಕೃತಿ ಎರಡೂ ಅನಾದಿ, ಅನಂತ ಸತ್ತೆಗಳಾಗಿವೆ. ಪುರುಷನು ಅಘನನಾಗುವ ಕಾರಣವೆಂದರೆ, ಪ್ರಕೃತಿಯ ಪ್ರಭಾವವು ಪ್ರಬಲಿಸಿ, ಅವನನ್ನು ಗುಣಾನ್ವಿತಗೊಳಿಸುವುದೇ ಆಗಿದೆ. ಮತ್ತು ಬ್ರಹ್ಮನು ಸಗುಣ ಅವಸ್ಥೆಯನ್ನು ಹೊಂದುತ್ತಾನೆ. ಅನಾದಿ, ಅನಂತ ಬ್ರಹ್ಮನಲ್ಲಿ ಅಘನ ಪುರುಷನೂ ಸಹ, ಅನಾದಿ ಕಾಲದಿಂದಲೂ ಇದ್ದಾನೆ. ಮತ್ತು ಪ್ರಕೃತಿಯೂ ಸಹ. ಆ ಅಘನ ಪುರುಷನನ್ನು ಅನಾದಿ ಕಾಲದಿಂದ ಗುಣಾನ್ವಿತಗೊಳಿಸುತ್ತ ಬಂದಿದೆ. ಈ ಪ್ರಕಾರ, ಅನಾದಿ, ಅನಂತ ಕಾಲದಿಂದಲೇ ಸಗುಣ ಬ್ರಹ್ಮನು ಓರ್ವ ಗುಣಾನ್ವಿತ ಸತ್ತೆಯಾಗಿದ್ದಾನೆ. ಆದರೆ, ಇದಕ್ಕಿಂತ ಮೊದಲೇ ನಾವು ಸಗುಣ ಬ್ರಹ್ಮನನ್ನು ಮುಕ್ತ ಪುರುಷನೆಂದು ಒಪ್ಪಿದ್ದೇವೆ. ಅಂದ ಮೇಲೆ, ಸಗುಣ ಬ್ರಹ್ಮನು ಮೊದಲು ಬದ್ಧ ಪುರುಷನಿದ್ದನು. ಹಾಗೂ ಆ ನಂತರ ಅವನು



ಮುಕ್ತಿ ಲಾಭ ಹೊಂದಿದನು, ಎಂದು ಹೇಳಬೇಕಾಗುತ್ತದೆ. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಏನಂದರೆ, ಬದ್ಧ ಪುರುಷನನ್ನು ಮುಕ್ತಗೊಳಿಸಲು ಪ್ರಕೃತಿ ಮತ್ತು ಪುರುಷನನ್ನು ಬಿಟ್ಟು ಬೇರಾವ ಮೂರನೆಯ ಸತ್ತೆಯಿದೆ? ಆದರೆ ಇದಕ್ಕಾಗಿ ಮೂರನೆಯ ಯಾವುದೇ ಸತ್ತೆಯ ಸಂಭಾವ್ಯತೆಯೇ ಇಲ್ಲ. ಅಂದ ಮೇಲೆ, ಪುರುಷನ ಸ್ವಂತ ಇಚ್ಛೆ ಮತ್ತು ಪ್ರಯತ್ನಗಳೇ ಅವನ ಮುಕ್ತಿಯ ಏಕಮಾತ್ರ ಉಪಾಯ ಅಥವಾ ಆಧಾರವಾಗಿದೆ. ಈ ಪ್ರಕಾರ, ಪ್ರಕೃತಿಯ ಪ್ರಭಾವದಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳುವ ಪ್ರಯತ್ನವನ್ನು ಸಾಧನೆ ಎನ್ನುತ್ತೇವೆ.

ಮುಕ್ತಿ ಲಾಭ ಮಾಡಿಕೊಳ್ಳುವುದಕ್ಕಿಂತ ಮುನ್ನ, ಸಗುಣ ಬ್ರಹ್ಮನನ್ನು ಪ್ರಜಾಪತಿ ಎನ್ನುತ್ತಿದ್ದರು. ಮತ್ತು ಸಾಧನೆಯ ಮೂಲಕ ಮುಕ್ತಿಯನ್ನು ಸಂಪಾದಿಸಿದ ಬಳಿಕ ಅವನಿಗೆ ಹಿರಣ್ಯಗರ್ಭ ಎನ್ನುತ್ತಾರೆ.

ತನ್ನ ಪ್ರತಿಯೊಂದು ಅಣುವೂ ಪ್ರಜಾಪತಿಯಂತೆ ಸಾಧನ ಮಾಡಿ, ಮುಕ್ತ-ಪುರುಷನಾಗಲಿ, ಎಂದೇ ಸಗುಣ ಬ್ರಹ್ಮನು ಬಯಸುತ್ತಾನೆ. ಆದರೆ, ಅವನು ತಾನೇ ಅಣು–ಸಮೂಹಕ್ಕಾಗಿ ನಿರ್ಗುಣತ್ವವನ್ನು ಸಂಪಾದಿಸಲಾರದವನಾಗಿದ್ದಾನೆ. ಮತ್ತು ಇದಕ್ಕಾಗಿ ಅವನ ಉದ್ದೇಶವೂ ಸಹ ಸಿದ್ಧವಾಗುವುದಿಲ್ಲ. ಮುಕ್ತಿ ಲಾಭಕ್ಕಾಗಿ ಅಣು ಚೈತನ್ಯ ಸಮೂಹದ ಪ್ರಾಥಮಿಕ ಪ್ರಯೋಜನವೆಂದರೆ–ತನ್ನ ಅವಸ್ಥೆಯ ಸಂಬಂಧದಲ್ಲಿ ಯಾವಾಗಲೂ ಸಚೇತನನಾಗಿರುವುದು ಹಾಗೂ ಮುಕ್ತಿಗಾಗಿ ಪ್ರಬಲ ಆಕಾಂಕ್ಷೆ ಇರುವುದು. ಯಾರಿಗೆ ತನ್ನ ಬದ್ಧ ಅವಸ್ಥೆ ಇಲ್ಲವೆ ಪರಾವಲಂಬನೆಯ ಅರಿವೇ ಇಲ್ಲವೋ, ಅವನ ಮುಕ್ತಿಯ ಪ್ರಶ್ನೆಯೂ ಏಳದು. ಬಂಧನ ಹಾಗೂ ಬೇರೆಯವರ ಮುಖ ನೋಡುತ್ತ ಕುಳಿತುಕೊಳ್ಳಬೇಕಾದ ಗ್ಲಾನಿಯನ್ನು ತಿಳಿದುಕೊಂಡ ಮೇಲೆ ಮಾತ್ರ, ಮಾನವನು ಮುಕ್ತಿ ಹೇತು–ತತ್ಪರನಾಗುತ್ತಾನೆ. ಎಲ್ಲಿಯ ತನಕ ಅಣು ಚೈತನ್ಯದ ವ್ಯಾಪಕ ವಿಕಾಸವಾಗುವುದಿಲ್ಲವೋ, ಅಲ್ಲಿಯ ತನಕ ಬಂಧನದ ಜ್ಞಾನವೂ ಸಹ ಚೆನ್ನಾಗಿ ಆಗದು. ಮತ್ತು ಮುಕ್ತಿಯ ಪ್ರಯತ್ನವೂ ಸಹ ಚನ್ನಾಗಿ ಆಗದು. ಆದ್ದರಿಂದ, ಮುಮುಕ್ಷುವಿನಲ್ಲಿ ಅಣು ಚೈತನ್ಯದ ವ್ಯಾಪಕ ವಿಕಾಸವಾಗುವುದು ತುಂಬಾ ಅಗತ್ಯವಾಗಿದೆ. ಕ್ಷಿತಿ ತತ್ತ್ವದಲ್ಲಿ ಚರಮ ಜಡತೆಯ ಕಾರಣ, ನಿಷ್ಪ್ರಾಣ ಅಣು ಸಮೂಹದಲ್ಲಿ ಅಸ್ತಿತ್ವದ ಜ್ಞಾನವಾಗಲಾರದು. ಅಂದ ಮೇಲೆ, ಕ್ಷಿತಿ ತತ್ತ್ವದಲ್ಲಿ ಅಣು ಚೈತನ್ಯಕ್ಕೋಸುಗ ತನ್ನ ಮುಕ್ತಿಯನ್ನು ಗಳಿಸುವುದು ಎಂದಿಗೂ ಸಂಭವವಾಗಲಾರದು. ಆದ್ದರಿಂದ, ಸಗುಣ ಬ್ರಹ್ಮನೇ ಆ ಎಲ್ಲರನ್ನು,

ಸಾಧ್ಯವಿರುವಷ್ಟು ಮಟ್ಟಿಗೆ ಬಂಧನದಿಂದ ಮುಕ್ತಗೊಳಿಸುತ್ತಾನೆ. ಸಗುಣ ಬ್ರಹ್ಮನ ಈ ಪ್ರಯತ್ನದ ಕ್ರಮದಲ್ಲಿ ಮಾನವನ ಆವಿರ್ಭಾವವಾಗಿದೆ. ಇದರಲ್ಲಿ ನಾವು ಪ್ರತಿಫಲಿತ ಚೈತನ್ಯದ ವ್ಯಾಪಕ ವಿಕಾಸವನ್ನು ಕಾಣುತ್ತೇವೆ. ಮಾನವನು ತನ್ನ ಬಂಧನದ ವಿಷಯದಲ್ಲಿ ಚನ್ನಾಗಿ ಸಚೇತನಾಗಿದ್ದಾನೆ. ಮತ್ತು ಮುಕ್ತಿ ಲಾಭ ಮಾಡಿಕೊಳ್ಳುವುದಕ್ಕಾಗಿ, ಸಹ ಅವನು ಚನ್ನಾಗಿ ತತ್ಪರನಾಗಿದ್ದಾನೆ. ಮಾನವನಲ್ಲಿಯೂ ಸಹ ಚೈತನ್ಯದ ಪೂರ್ಣ ಅಭಿವ್ಯಕ್ತಿಯಾಗದಿದ್ದರೂ ಸಹ, ಅಭಿವ್ಯಕ್ತ ಚೈತನ್ಯದಿಂದ ಅವನು ಸಾಧನೆಯ ಪ್ರೇರಣೆಯನ್ನು ಪಡೆಯುತ್ತಾನೆ. ಹಾಗೂ ಸಾಧನೆಯ ಮೂಲಕ ಮುಕ್ತನಾಗಲು ಬೇಕಾದ ಯೋಗ್ಯತೆಯನ್ನು ಅರ್ಜಿಸುತ್ತಾನೆ. ಅಂದ ಮೇಲೆ, ಸಾಧನೆಯ ಬಲದ ಮೇಲೆ, ಮುಕ್ತಿಯನ್ನು ಸಂಪಾದಿಸಲು ಯೋಗ್ಯನಾದ ವಯನವನನ್ನು ಸೃಷ್ಟಿಸುವ ಉದ್ದೇಶದಿಂದಲೇ ಸಗುಣ ಬ್ರಹ್ಮನು ಜಗತ್ತನ್ನು ರಚಿಸಿದ್ದಾನೆ. ಅರ್ಥಾತ್ ಸಾಧನೆಯನ್ನು ಮಾಡಿ ಮುಕ್ತಿ ಲಾಭ ಪಡೆಯಲಿಕ್ಕೋಸುಗ ಮಾನವನು ಸೃಷ್ಟಿಗೊಂಡಿದ್ದಾನೆ. ಯಾರು ಈ ಸಾಧನೆಯನ್ನು ಮಾಡುವುದಿಲ್ಲವೋ, ಅವರು ಭೂಮಾನ ಇಚ್ಛೆಯ ವಿರುದ್ಧ ಆಚರಿಸುತ್ತಾರೆ. ಅವರ ಮಾನವ ಜನ್ಮವು ವ್ಯರ್ಥವಾಗುತ್ತದೆ.

ಅಣು ಚೈತನ್ಯ ಹಾಗೂ ಮಾನವೀಯ ಚೈತನ್ಯಗಳು, ಒಂದು ಪಾಂಚಭೌತಿಕ ಆಧಾರದ ಮೇಲೆ, ಅವಲಂಬನೆಗೊಂಡ ಮಾನಸ ಪಟದ ಮೇಲೆ ಪ್ರತಿಫಲಿಸುತ್ತವೆ. ಆದರೆ, ಭೂಮಾ ಚೈತನ್ಯಕ್ಕೋಸುಗ ಸ್ಥೂಲ ಆಧಾರದ ಪ್ರಯೋಜನವೇನೂ ಇಲ್ಲ. ಮಾನವನಿಗಿರುವಂತೆ ಸಗುಣ ಬ್ರಹ್ಮನಿಗೆ ಯಾವುದೇ ಆಧಾರವಿರುವುದಿಲ್ಲ. ಮಾನವನು ಸಗುಣ ಬ್ರಹ್ಮನ ಮನದ ಒಂದು ವಿಶೇಷ ಕಲ್ಪನೆಯಾಗಿದ್ದಾನೆ. ಮತ್ತು ಇವನ ಅಸ್ತಿತ್ವವೂ ಸಹ, ಸಗುಣ ಬ್ರಹ್ಮನ ಮನದ ಒಳಗೇ ಇದೆ. ಒಂದು ವೇಳೆ, ಸಗುಣ ಬ್ರಹ್ಮನು ಬೇರೊಂದು ಸತ್ತೆಯ ಕಲ್ಪನೆಯಾಗಿದ್ದರೆ, ಅಥವಾ ಮನದ ಸಾಪೇಕ್ಷನಾಗಿದ್ದರೆ, ಅವನಿಗೂ ಸಹ ಸ್ಥೂಲ ಆಧಾರದ ಆವಶ್ಯಕತೆ ಉಂಟಾಗುತ್ತಿತ್ತು. ಆದರೆ, ಯಾವ ಕಾರಣದಿಂದ, ಅವನು ದೇಶ, ಕಾಲ, ಪಾತ್ರಗಳಿಂದ ಆಚೆಗಿರುವ ಅನಾದಿ,–ಅನಂತ ಸತ್ತೆಯಾಗಿರುವನೋ, ಅದೇ ಕಾರಣದಿಂದ, ಅವನ ಸಂಬಂಧದಲ್ಲಿ ಸಾಪೇಕ್ಷಿಕತೆಯ ಇಲ್ಲವೆ ಆಧಾರದ ಪ್ರಶ್ನೆಯೇ ಏಳುವುದಿಲ್ಲ. ಅಣು ಮಾನಸದ ಸಾಕ್ಷೀ ಸತ್ತೆಯಾದ ಅಣು ಚೈತನ್ಯವು ಭೂಮಾ ಮನದ ಸಾಕ್ಷೀ ಸತ್ತೆಯಾದ ಭೂಮಾ ಚೈತನ್ಯದ ಪ್ರತಿಫಲನವೇ ಆಗಿದೆ. ಸಗುಣ ಬ್ರಹ್ಮನಂತೆಯೇ, ಮಾನವನ ಅಂತಃಕರಣದಲ್ಲಿಯೂ ಸಹ, ವಿಕಾಸವಾಗುತ್ತದೆ. ಸಗುಣ ಬ್ರಹ್ಮನು ಯಾವ ಪ್ರಕಾರ,



ಕಲ್ಪನಾ ತರಂಗದಲ್ಲಿ ಸೃಷ್ಟಿ ಮಾಡುವನೋ, ಮಾನವನು ಸಹ, ಅದೇ ಪ್ರಕಾರ, ತನ್ನ ಕಲ್ಪನಾ ತರಂಗದಲ್ಲಿ ಸೃಷ್ಟಿ ಮಾಡುತ್ತಿರುತ್ತಾನೆ. ಭಾಗಲಪುರದಲ್ಲಿ ಕುಳಿತು, ಯಾವನೊಬ್ಬ ವ್ಯಕ್ತಿಯು ತನ್ನ ಕಲ್ಪನಾ ತರಂಗದಲ್ಲಿ ಚೌರಂಗಿಯ ಸೃಷ್ಟಿಯನ್ನು ಮಾಡಬಲ್ಲನು. ಆದರೆ ಅವನ ಈ ಕಲ್ಪನೆಯು ಕ್ಷಣ ಭಂಗುರವಾಗಿರುತ್ತದೆ. ಮತ್ತು ಕೇವಲ ಅವನ ವ್ಯಷ್ಟಿ ಮನದಲ್ಲಿಯೇ 'ಇದು ವಾಸ್ತವವಾಗಿದೆ' ಎಂಬ ಅನುಭೂತಿಯನ್ನು ಉಂಟು ಮಾಡುತ್ತದೆ. ಮತ್ತು ಸಗುಣ ಬ್ರಹ್ಮನ ಕಾಲ್ಪನಿಕ ಸೃಷ್ಟಿಯಾದ ಜಗತ್ತು ಅವನ ಕಲ್ಪನಾ ತರಂಗದ ಪ್ರಭಾವದಿಂದ ಅವನ ಸಾಪೇಕ್ಷ ಅಣು ಸಮೂಹವನ್ನು ಒಂದು ಶಾಶ್ವತ ಸತ್ತೆಯ ರೂಪದಲ್ಲಿ ಅನುಭೂತಗೊಳಿಸುತ್ತದೆ. ರಾಮನ ಕಲ್ಪನಾ ತರಂಗದ ವಿಸ್ತೃತಿಯು ಅವನ ವ್ಯಷ್ಟಿ ಮನದ ವರೆಗೆ ಸೀಮಿತವಿರುತ್ತದೆ. ಆದ್ದರಿಂದ ಶ್ಯಾಮನ ಮನವು ಅದನ್ನು ವಾಸ್ತವವಾಗಿ ತಿಳಿದು ಗ್ರಹಿಸಿಕೊಳ್ಳದು. ಆದರೆ, ಒಂದು ವೇಳೆ, ಶ್ಯಾಮನ ಮನವು ರಾಮನ ಮನದ ಪರಿಧಿಯ ಅಂತರ್ಗತವಾದರೆ, ರಾಮನ ಕಲ್ಪನಾ ತರಂಗವು ಶ್ಯಾಮನಿಗೂ ಸಹ, ರಾಮನಂತೆಯೇ ಸತ್ಯವೆಂದು ಪ್ರತೀತವಾಗುತ್ತಿತ್ತು. ಮೊದಲೇ ನಾವು ಕಂಡುಕೊಂಡಿರುವಂತೆ, ಮನದ ವಿಸ್ತಾರದ ಮೂಲಕ ಒಬ್ಬ ಮನುಷ್ಯನು ಇನ್ನೋರ್ವನ ಮನದ ಮೇಲೆ ಪ್ರಭಾವ ಬೀರುತ್ತಾನೆ. ಮತ್ತು ಅಂಥ ಅವಸ್ಥೆಯಲ್ಲಿ ಪ್ರಭಾವಕ್ಕೊಳಗಾದ ವ್ಯಕ್ತಿಯು ಆ ಮನುಷ್ಯನ ಕಲ್ಪನೆಯನ್ನು ವಾಸ್ತವವೆಂದೇ ಬಗೆಯುತ್ತಾನೆ. ಈ ತೆರದಿಂದ, ಮಾನವನು ತನ್ನ ಕಲ್ಪನೆಯ ಮೂಲಕ ಸೃಷ್ಟಿಯನ್ನು ಮಾಡಬಲ್ಲವನಾಗಿದ್ದಾನೆ. ಆದರೆ ಅವನ ಆ ಸೃಷ್ಟಿಯು ಪೂರ್ವ–ಅನುಭೂತಿಯ ಮೇಲೆಯೇ ಅವಲಂಬಿಸಿರುತ್ತದೆ. ತನ್ನ ಕಾಲ್ಪನಿಕ ಸೃಷ್ಟಿಯನ್ನು ಅವಶ್ಯವಾಗಿಯೇ ಅವನು ನೋಡುತ್ತಾನೆ. ಆದರೆ, ಬ್ರಹ್ಮನು ಸರ್ವನಿರಪೇಕ್ಷ ಸತ್ತೆಯಾಗಿದ್ದಾನೆ. ಆದ್ದರಿಂದ, ಅವನ ಹೊರಗೆ ಇಲ್ಲವೆ ಅವನಿಗಿಂತ ಮೊದಲಿನಿಂದಲೂ, ಯಾವುದರ ಪ್ರತಿಮೆಯನ್ನು ಅವನು ತನ್ನ ಕಲ್ಪನೆಯಲ್ಲಿ ಮಾಡಬಹುದೋ, ಅಂಥ ಬೇರೆ ಸತ್ತೆಯು ಇರುವ ಸಂಭಾವ್ಯತೆಯಿಲ್ಲ. ಆದ್ದರಿಂದ ಬ್ರಹ್ಮನ ಕಲ್ಪನಾ ತರಂಗವು ಮಾನವನ ಹಾಗೆ, ಪೂರ್ವಗ್ರಹೀತ ಅನುಭೂತಿಯ ಮೇಲೆ ಅವಲಂಬಿಸಿದುದಾಗಿಲ್ಲ. ಅದು ಯಾವಾಗಲೂ ಹೊಸದಾಗಿದೆ; ನಿತ್ಯನೂತನವಾಗಿದೆ. ಮಾನವ ಹಾಗೂ ಬ್ರಹ್ಮರಲ್ಲಿಯ ಮುಖ್ಯ ಪಾರ್ಥಕ್ಯವೆಂದರೆ ಅವರ ಧರ್ಮ ಅಥವಾ ಸ್ವಂತ ವಿಶೇಷತೆ. ಮಾನವನ ಧರ್ಮ ಅಥವಾ

ವಿಶೇಷತೆಯೆಂದರೆ, ಸಾಧನೆ ಮಾಡಿ ಮುಕ್ತಿ ಪಡೆಯುವುದೇ ಆಗಿದೆ; ಇನ್ನು ಬ್ರಹ್ಮನ ಧರ್ಮ ಅಥವಾ ವಿಶೇಷತೆಯೆಂದರೆ, ತನ್ನ ಪ್ರತಿಯೊಂದು ಅಣುವಿಗೆ ಮುಕ್ತ ಪುರುಷನಾಗಲು ಪ್ರೇರಣೆ ನೀಡುವುದಾಗಿದೆ. ವಾಸ್ತವದಲ್ಲಿ ಜಗತ್ ಹಾಗೂ ಮಾನವರ ಸೃಷ್ಟಿಯ ಹಿಂದೆ, ಸಗುಣ ಬ್ರಹ್ಮನ ಸಕಲ ಪ್ರಯತ್ನಗಳ ಒಂದೇ ಮೂಲ ಉದ್ದೇಶವಿದೆ. ಅದೆಂದರೆ, ತನ್ನ ಪ್ರತಿಯೊಂದು ಅಣುವಿಗೆ ಮುಕ್ತಿಯನ್ನು ದೊರಕಿಸಿ ಕೊಡುವುದಾಗಿದೆ.

೪

# ನಾನು ಯಾರು ಮತ್ತು ಏನಿರುವೆ?

ವಿಕಾಸದ ಕ್ರಮದಲ್ಲಿ ಎಲ್ಲಕ್ಕಿಂತ ಕೊನೆಗೆ ಮಾನವನ ಆವಿರ್ಭಾವವಾಗಿದೆ. ಸಗುಣ ಬ್ರಹ್ಮನ ಮಾನಸಿಕ ದೇಹದಿಂದ ಉತ್ಪನ್ನವಾದ ಅವನ ಪಾಂಚಭೌತಿಕ ದೇಹದಲ್ಲಿ, ಚೈತನ್ಯದ ವಿಕಾಸವು ವ್ಯಾಪಕ ರೂಪದಲ್ಲಿ ಆಗಿರುತ್ತವೆ. ಹೀಗೆ ವ್ಯಾಪಕ ರೂಪದಿಂದ ವಿಕಾಸಿತಗೊಂಡ ಚೈತನ್ಯದ ಪ್ರತಿಫಲನವನ್ನೇ ಅಣು ಚೈತನ್ಯ ಇಲ್ಲವೆ ಆತ್ಮಾ ಎಂದು ಕರೆಯುತ್ತಾರೆ. ಮತ್ತು ಈ ಪಾಂಚಭೌತಿಕ ದೇಹವನ್ನು ಮಾನವ ದೇಹವೆನ್ನುತ್ತಾರೆ. ಅರ್ಥಾತ್ ಮಾನವನಿಗೆ ಅಣು ಚೈತನ್ಯ ಮತ್ತು ದೇಹ ಎರಡೂ ಇವೆ. ಆದರೆ ಅವನು ಮಾತ್ರ ಈ ಎರಡರಲ್ಲಿ ಯಾವುದೂ ಅಲ್ಲ. ಏಕೆಂದರೆ ಅವನು ಆತ್ಮನೇ ಆಗಿದ್ದರೆ,'ನನ್ನ ಆತ್ಮಾ' ಎಂದು ಹೇಳುತ್ತಿರಲಿಲ್ಲ. ಇನ್ನು ಒಂದುವೇಳೆ, ಅವನು ದೇಹವೇ ಆಗಿದ್ದರೆ 'ನನ್ನ ದೇಹ' ಎಂದು ಹೇಳುತ್ತಿರಲಿಲ್ಲ. ಆದ್ದರಿಂದ, ಅವನು ಆತ್ಮ ಮತ್ತು ದೇಹ, ಇವುಗಳಿಂದಾಚೆ ಓರ್ವ ಒಡೆತನವನ್ನು ಹೊಂದುವ ಸತ್ತೆಯಾಗಿದ್ದಾನೆ. ಈಗ ಈ ಹೆಚ್ಚಿನ ಸತ್ತೆ ಯಾವುದು? ಎಂಬುದನ್ನು ಕುರಿತು ನೋಡಬೇಕಷ್ಟೇ

ಸೂಕ್ಷ್ಮ ನಾನುತನದ ಬೋಧೆಯು ಒಂದು ಭಾವಮಯ ಸತ್ತೆಯಾಗಿದೆ. ಸ್ವಲ್ಪ ಗಂಭೀರವಾಗಿ ವಿಚಾರಿಸಿದಾಗ ತಿಳಿದುಬರುವುದೇನೆಂದರೆ, ಭಾವನೆಯ ಮೂಲಕವೇ ನಾನುತನ ಬೋಧೆಯು ಉತ್ಪನ್ನವಾಗುತ್ತದೆ. ಕರ್ಮದ ಭಾವನೆ ಯಾಗಲಿ, ಕರ್ಮವಾಗುವುದಾಗಲಿ, ಚೈತನ್ಯದ ಸಾಪೇಕ್ಷವಾಗಿದೆ. ಆದ್ದರಿಂದ 'ನಾನು'ವಿನ ಬೋಧೆಯು ಚೈತನ್ಯವನ್ನೇ ಅವಲಂಬಿಸಿದೆ. ಅರ್ಥಾತ್ 'ನಾನು' ವಿನ ಬೋಧೆಯು,ಚೈತನ್ಯದ ಒಂದು ಮಾನಸಿಕ ಅಭಿವ್ಯಕ್ತಿಯಾಗಿದೆ. ಚೈತನ್ಯವೇ ಇಲ್ಲವಾದರೆ, ಅಸ್ತಿತ್ವ ಬೋಧೆಯು ಹಾಗೂ ಅದರ ಸಾಪೇಕ್ಷದಲ್ಲಿ ಬೋಧೆಯ ಉನ್ನತ್ಪವಾಗುವುದೂ ಸಂಭವವಿಲ್ಲ. ನಾವು ಅಣು ಚೈತನ್ಯ ಇಲ್ಲವೆ ಅಣು

ಪುರುಷ ಎಂದು ಕರೆಯುವ ಆತ್ಮಾ ಸಹ,ಸಗುಣ ಬ್ರಹ್ಮನೊಳಗೇ ಇರುವ ಕಾರಣ, ಅವನಂತೆಯೇ ಪ್ರಕೃತಿಯ ಗುಣದ ಅಧೀನನಾಗಿದ್ದಾನೆ. ಪ್ರಕೃತಿಯ ಸತ್ತ್ವ ಗುಣದ ಪ್ರಭಾವದ ಮೂಲಕ ಆತ್ಮನಲ್ಲಿ ಅಸ್ತಿತ್ವ ಬೋಧೆಯುಂಟಾಗುತ್ತದೆ. ಮತ್ತು ಈ ಅಸ್ತಿತ್ವ ಬೋಧೆಯಿಂದಲೇ 'ನಾನು ತನ'ವು ಉತ್ಪನ್ನವಾಗುತ್ತದೆ. ಆದ್ದರಿಂದ, ವ್ಯಕ್ತಿಗತ ನಾನು, ಭಾವನಾತ್ಮಕವಾಯಿತು. ಇದರ ವಿಕಾಸವು, ಅಣು ಚೈತನ್ಯದ ಮೇಲೆ, ಪ್ರಕೃತಿಯ ಸತ್ತ್ವ ಗುಣದ ಪ್ರಭಾವದಿಂದ ಆಗುತ್ತದೆ. ಆದ್ದರಿಂದ,ಮಾನವನ ಅಸ್ತಿತ್ವ ಬೋಧೆ ಇಲ್ಲವೆ 'ನಾನು–ಬೋಧೆ'ಯು ಮತ್ತು ಆತ್ಮಾ ಇಲ್ಲವೆ ಅಣು ಚೈತನ್ಯವು ಒಂದೇ ವಸ್ತುವಾಗಿಲ್ಲ. ಹೇಗೆ ಒಂದು ಕಟ್ಟಿಗೆಯ ತುಂಡು ಗಿಡದ ಸಾಪೇಕ್ಷವಾಗಿದೆಯೋ, ಅದೇ ರೀತಿ, ಪ್ರಕೃತಿಯ ಸತ್ತ್ವ ಗುಣದ ಪ್ರಭಾವದಿಂದ ಉತ್ಪನ್ನವಾದ ಈ ನಾನುವಿನ ಬೋಧೆಯೂ ಸಹ, ಸ್ವಯಂ ಆತ್ಮವಲ್ಲ. ಆದರೆ, ಅದರ ಅಸ್ತಿತ್ವವು ಮಾತ್ರ ಅವಶ್ಯವಾಗಿಯೇ ಆತ್ಮನ ಮೇಲೆ ಅವಲಂಬಿಸಿದೆ.

ಈ ಮುನ್ನವೇ ಸಿದ್ಧ ಪಡಿಸಿದಂತೆ, ಅಣು ಚೈತನ್ಯದ ಮೇಲೆ, ಪ್ರಕೃತಿಯ ಸತ್ತ್ವ ಗುಣದ ಬಂಧನದ ಫಲವಾಗಿ ಬುದ್ಧಿ ತತ್ತ್ವದ ವಿಕಾಸವಾಯಿತು. ಇದರಿಂದ, ಅಣು ಚೈತನ್ಯದಲ್ಲಿ ಅಸ್ತಿತ್ವ ಬೋಧೆ ಮತ್ತು 'ನಾನು'ವಿನ ಬೋಧೆಯು ಜಾಗ್ರತವಾಯಿತು. ಇದರಿಂದ, ವಿಶೇಷ ವ್ಯಕ್ತಿಯ 'ನಾನು' ಅವನ ಅಣು ಚೈತನ್ಯವಲ್ಲ. ಅದು ಅವನ ಮನದೊಳಗೆ ಅದೇ ಮನದ ಒಂದಂಶವಾದ ಬುದ್ಧಿ ತತ್ತ್ವವಾಗಿದೆ.

ಮಾನವನ ಸತ್ತಾ ಬೋಧೆ ಇಲ್ಲವೆ ನಾನು' ಬೋಧೆಯು,ಬುದ್ಧಿ ತತ್ತ್ವದಿಂದಲೇ ಉತ್ಪನ್ನವಾಗುತ್ತದೆ. ಅಹಂ ತತ್ತ್ವ ಇಲ್ಲವೆ ಚಿತ್ತ ತತ್ತ್ವಕ್ಕಿಂತ ಬುದ್ಧಿ ತತ್ತ್ವವು ಸೂಕ್ಷ್ಮವಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಹೇಳಿದಂತೆ, ಬುದ್ಧಿ ತತ್ತ್ವದ ಮೇಲೆ ಪ್ರಕೃತಿಯ ರಜೋ ಗುಣದ ಬಂಧನದಿಂದ, ಅಹಂ ತತ್ತ್ವವೂ, ಹಾಗೂ ಅಹಂ ತತ್ತ್ವದ ಮೇಲೆ ಪ್ರಕೃತಿಯ ತಮೋಗುಣದ ಬಂಧನದಿಂದ ಚಿತ್ತದ ಉತ್ಪತ್ತಿಯೂ ಆಗುತ್ತದೆ. ಅರ್ಥಾತ್ ಬುದ್ದಿ ತತ್ತ್ವವೇ ಪ್ರಕೃತಿಯ ರಜೋಗುಣದ ಹಾಗೂ ತಮೋ ಗುಣದ ಬಂಧನದ ಕಾರಣ, ಅಹಂ ತತ್ತ್ವ ಮತ್ತು ಚಿತ್ತಗಳಲ್ಲಿ ಪರಿಣಮಿಸುತ್ತದೆ. ಭೂಮಾ ಮಾನಸದಿಂದ ಸೃಷ್ಟವಾದ ಪಾಂಚಭೌತಿಕ ದೇಹದಲ್ಲಿಯೇ ಆತ್ಮಾ ಇಲ್ಲವೆ ಅಣು ಚೈತನ್ಯದ ಪ್ರತಿಫಲನವಾಗುತ್ತದೆ. ಅಣು ಚೈತನ್ಯದ ಮೇಲೆ ಪ್ರಕೃತಿಯ ಸತ್ತ್ವಗುಣದ ಪ್ರಭಾವದಿಂದ ಬುದ್ಧಿ ತತ್ತ್ವದ ವಿಕಾಸವಾಗುತ್ತದೆ. ಆದ್ದರಿಂದ ಬುದ್ಧಿ ತತ್ತ್ವ



ಇಲ್ಲವೆ ನಾನು ತನದ ಬೋಧೆಯು ಸ್ಥೂಲ ದೇಹದ ಸಾಪೇಕ್ಷವಾಗಿದೆ. ಸ್ಥೂಲ ದೇಹದ ಪ್ರತಿಯೊಂದು ಅಣು ಪರಮಾಣುವಿನಲ್ಲಿ, ನಾನು–ತನದ ಬೋಧೆಯು ಪಸರಿಸಿರುತ್ತದೆ. ಆದ್ದರಿಂದ, ಮಾನವನು ತನ್ನ ದೇಹದ ಪ್ರತಿಯೊಂದು ಅಂಶವನ್ನು 'ನಾನು' ಎಂದು ತಿಳಿಯುತ್ತಾನೆ. ಆದರೆ, ಈ ಮುನ್ನವೇ ತಿಳಿಸಿ ಕೊಟ್ಟಂತೆ, ಈ 'ನಾನು'ವಿನ ಬೋಧೆಯು ಮತ್ತು ಸ್ಥೂಲ ದೇಹವು, ಒಂದೇ ವಸ್ತುವಲ್ಲ. 'ನಾನು'ವಿನ ಬೋಧೆಯು ಬುದ್ಧಿ ತತ್ತ್ವವಾಯಿತು. ಇನ್ನು ಸ್ಥೂಲ ದೇಹವು ಅದಕ್ಕೆ ಇರಲು ಆಶ್ರಯ ಇಲ್ಲವೆ ವಿಶೇಷ ಆಧಾರವಾಯಿತು. ಅಂದಮೇಲೆ, ಮಾನವನ ನಾನುವಿನ ಬೋಧೆಯು ಅವನ ಅಣು ಚೈತನ್ಯವೂ ಅಲ್ಲ; ಮತ್ತು ಅವನ ದೇಹವೂ ಅಲ್ಲ. ಇದು ಅಣು ಚೈತನ್ಯದ ಒಂದು ಮಾನಸಿಕ ಅಭಿವ್ಯಕ್ತಿಯಾಗಿದೆ. ಇದರ ಹೆಸರು ಬುದ್ಧಿ ತತ್ತ್ವ ಎಂದಾಯಿತು. ಹಾಗೂ ಇದರವೇ ಆದ ಇನ್ನೂ ಎರಡು ಸ್ಥೂಲ ಅಭಿವ್ಯಕ್ತಿಗಳಿವೆ: ಅವು ಕ್ರಮಶಃ ಅಹಂ ತತ್ತ್ವ ಮತ್ತು ಚಿತ್ತ.

೫

# ಜಗತ್ತು ಮತ್ತು ಭೂಮಾ ಸತ್ತೆಗಳೊಂದಿಗೆ ನನ್ನ ಸಂಬಂಧವೇನು?

ಪುರುಷ ಇಲ್ಲವೆ ಚೈತನ್ಯವು ಪ್ರಕೃತಿಯ ಬಂಧನದಿಂದ ಮುಕ್ತವಾಗಿ, ನಿರ್ಗುಣತ್ವ ಇಲ್ಲವೆ ಬ್ರಹ್ಮಸ್ವರೂಪವನ್ನು ಸಂಪಾದಿಸುತ್ತದೆ. ಪ್ರಕೃತಿಯ ಬಂಧನಕ್ಕೊಳಗಾದ ಪರಮ, ಗುಣಾನ್ವಿತ, ಸತ್ತೆಯಾದ ಸಗುಣ ಬ್ರಹ್ಮನಿಗೆ ಭಗವಾನ ಎಂದೂ ಕರೆಯುತ್ತಾರೆ. ಈ ವಿಚಾರದಿಂದ, ಸಗುಣನೊಳಗಿನ ಆತ್ಮಾ ಇಲ್ಲವೆ ಅಣು ಚೈತನ್ಯವನ್ನೂ ಸಹ ಭಗವಾನ ಎಂದು ಕರೆಯಬಲ್ಲೆವು. ಬಂಧನ ಮುಕ್ತ ಅಣು ಚೈತನ್ಯ ಇಲ್ಲವೆ ಭಗವಾನನು ನಿರ್ಗುಣ ಬ್ರಹ್ಮನಲ್ಲಿ ಲೀನವಾಗಿ ಪರಮ ಸ್ಥಿತಿಯನ್ನು ಸಂಪಾದಿಸುತ್ತಾನೆ.

ಮಾನವನ ನಾನು-ತನದ ಬೋಧೆಯು ಅವನ ಆತ್ಮಾ ಇಲ್ಲವೆ ಅಣು ಚೈತನ್ಯವಲ್ಲ. ಇದು ಅಣು ಚೈತನ್ಯದ ಒಂದು ಸ್ಥೂಲ ಅಭಿವ್ಯಕ್ತಿಯಷ್ಟೇ. ಆದ್ದರಿಂದ, ಆ ಮಾನವನ 'ನಾನು'-ಬೋಧೆಯು ಭಗವಾನ ಅಲ್ಲ. ಇದು ಭಗವಾನನ ಕೇವಲ ಒಂದು ಪರಿವರ್ತಿತ ಇಲ್ಲವೆ ವಿಕೃತ ಅವಸ್ಥೆಯಾಗಿದೆ. ಉದಾಹರಣೆಗೆ ನೋಡಿರಿ: ರಾಮ ಎಂಬ ಹೆಸರಿನ ವ್ಯಕ್ತಿಯೊಬ್ಬ ಯಾವಾಗ ಶಾಹಜಹಾನನ ಪಾತ್ರವನ್ನು ಅಭಿನಯಿಸುತ್ತಿರುವನೋ, ಆ ಕಾಲಕ್ಕೆ ಅವನನ್ನು ಶಾಹಜಹಾನ ಎಂದೇ ಕರೆಯುತ್ತಾರೆ. ವಾಸ್ತವದಲ್ಲಿ ಅವನು ರಾಮನೇ ಆಗಿದ್ದರೂ ಸಹ, ಅಭಿನಯಿಸುವ ಸಮಯಕ್ಕೆ ರಾಮ ಎಂದು ಕರೆಯುವುದಿಲ್ಲ. ಅದೇ ಪ್ರಕಾರ, 'ನಾನು'ವಿನ ಬೋಧೆಯು, ಎಲ್ಲಿಯ ತನಕ ಯಾವನೊಬ್ಬ ವಿಶೇಷ ಮನುಷ್ಯನ ಪರಿಚಯ ಹಿಡಿದು ಇರುವುದೋ; ಅಲ್ಲಿಯ ತನಕ, ಆತ್ಮಾ ಇಲ್ಲವೆ ಭಗವಾನನೊಂದಿಗೆ ಅವನ ಅಸ್ತಿತ್ವವು ಪೃಥಕ್ ಆಗಿಯೇ ಇರುತ್ತದೆ.



ಆದ್ದರಿಂದ ಮಾನವನ ನಾನು-ಬೋಧೆಯೇ ಅವನನ್ನು ತನ್ನ ಆತ್ಮ ಇಲ್ಲವೆ ಭಗವಾನನಿಂದ ಬೇರೆಯಾಗಿ ಇರಿಸುತ್ತದೆ. ಅಭಿನಯವು ಕೊನೆಗೊಂಡ ಮೇಲೆ, ಯಾವ ಪ್ರಕಾರ ಶಾಹಜಹಾನನು ಮರಳಿ ರಾಮನ ರೂಪಕ್ಕೆ ಐತರುವನೋ, ಅದೇ ಪ್ರಕಾರ, ಗುಣ ಬಂಧನದಿಂದ ಮುಕ್ತನಾದ ಅಣು ಚೈತನ್ಯನು ನಾನುತನ-ರಹಿತನಾಗಿ ನಿರ್ಗುಣ ಬ್ರಹ್ಮದಲ್ಲಿ ಒಂದಾಗುತ್ತಾನೆ. ಆದ್ದರಿಂದ ಮನುಷ್ಯನನ್ನು ನಾನು-ತನದ ಬೋಧೆಯೇ ಅವನ ಅಣು ಚೈತನ್ಯದಿಂದ ಭಿನ್ನವಾಗಿರಿಸುತ್ತದೆ.

ನಾನುತನ-ಬೋಧೆಯು ಅಣು ಚೈತನ್ಯದ ಸ್ಥೂಲ ಅಭಿವ್ಯಕ್ತಿಯಾದ ಮೇಲೂ ಸಹ, ಅಣು ಚೈತನ್ಯ ಇಲ್ಲವೆ ಭಗವಾನನಿಂದ ಪೃಥಕ್ ಆಗಿಯೇ ಇರುತ್ತದೆ. ಆದ್ದರಿಂದ, ಈ 'ನಾನು'ವಿನ ಕರ್ಮಕ್ಕೋಸುಗ ಅಣು ಚೈತನ್ಯವು ಹೊಣೆಗಾರವಲ್ಲ. ಅಟ್ಟದ ಮೇಲೆ ಶಾಹಜಹಾನನ ಪಾತ್ರದಲ್ಲಿ ರಾಮನ ಅಭಿನಯವು ಯಾವ ಪ್ರಕಾರ, ರಾಮನ ಚರಿತ್ರ-ಚಿತ್ರಣ ನೀಡದೆ, ಶಾಹಜಹಾನನ ಚರಿತ್ರವನ್ನೇ ಚಿತ್ರಿಸುತ್ತಿರುವುದೋ, ಅದೇ ಪ್ರಕಾರ, ಎಲ್ಲ ಕರ್ಮಗಳ ಕರ್ತ್ತಾನು, ವ್ಯಕ್ತ ರೂಪದಿಂದ, 'ನಾನು'ವೇ ಇದೆ. ಮತ್ತು ಫಲಭೋಗವನ್ನೂ ಸಹ, ಅದುವೇ ಅನುಭವಿಸುತ್ತದೆ. ಆತ್ಮಾನು ತಾನೇ ಏನನ್ನೂ ಮಾಡುವುದಿಲ್ಲ. ಫಲ ಭೋಗವನ್ನೂ ಅನುಭವಿಸುವುದಿಲ್ಲ. ಅವನು ಬರೀ ಈಕ್ಷಿಸುತ್ತಿರುತ್ತಾನೆ.

ಅಣು ಚೈತನ್ಯವು ಕೇವಲ ಸಾಕ್ಷೀ ಸತ್ತೆಯಾಗಿದೆ. ಮತ್ತು ಕೇವಲ ಸಾಕ್ಷೀ ಸತ್ತೆಯ ರೂಪದಲ್ಲಿಯೇ ಅವನ ಅನುಭವವನ್ನು ಪಡೆಯಬಹುದು. ನಾನುವಿನ ಕರ್ತೃತ್ವವು ಅಣು ಚೈತನ್ಯವನ್ನು ಕೇಂದ್ರವಾಗಿಸಿಕೊಂಡು, ಏನೆಲ್ಲ ಕರ್ಮಗಳನ್ನು ಮಾಡುತ್ತಿರುವುದೋ, ಆ ಕರ್ಮಗಳ ಮೂಲಕ ಅಣು ಚೈತನ್ಯವು ಪ್ರಭಾವಿತವಾಗಿಲ್ಲ. ಸಾಕ್ಷೀ-ಸತ್ತೆ ಇಲ್ಲವೆ ಜ್ಞಾತೃ ಸತ್ತೆಯು ಕೇವಲ ದರ್ಶಕನ ರೂಪದಲ್ಲಿ ಇರುತ್ತದೆ. ಅವನ ಕರ್ಮದ ಕರ್ತ್ತಾನೂ ಅಲ್ಲ. ಫಲಗಳ ಭೋಕ್ತಾನೂ ಅಲ್ಲ. ಉದಾಹರಣೆಗಾಗಿ ಹೀಗೆ ವಿವರಿಸಬಹುದು: ಕಾಲು ಚೆಂಡಿನಾಟದ ಪಂದ್ಯದಲ್ಲಿ ದರ್ಶಕರಿಗಾಗಿ ಆಟದ ಗೆಲುವಿಗೆ ಯಾವ ಮಹತ್ತ್ವವೂ ಇಲ್ಲ. ಆಟಗಾರರಿಗೇ ಗೆಲುವಿನ ಮಹತ್ತ್ವವಾಗಲಿ ಇಲ್ಲವೆ ಸೋಲಿನ ಗ್ಲಾನಿಯಾಗಲಿ ಉಂಟು. ದರ್ಶಕರು ಸೋಲು-ಗೆಲುವುಗಳ ಸಾಕ್ಷಿಯಂತೂ ಅವಶ್ಯವಾಗಿ ಆಗುತ್ತಾರೆ. ಅದೇ ರೀತಿ, ಅಣು ಚೈತನ್ಯ ಇಲ್ಲವೆ ಆತ್ಮಾ ಸಹ, ಅಣು ಮಾನಸದ ಎಲ್ಲ ಕಾರ್ಯಗಳ ಹಾಗೂ ಸುಖ-ದುಃಖ ಭೋಗಗಳ ಸಾಕ್ಷಿಯಾಗಿರುತ್ತಾನೆ.

ಮಾನವನ ನಾನು-ಬೋಧೆಯಾಯಿತು, ಅವನ ಬುದ್ಧಿ ತತ್ತ್ವ. ಈ ನಾನು

ಕೇವಲ ಅಸ್ತಿತ್ವ ಬೋಧೆಯನ್ನು ಜಾಗ್ರತಗೊಳಿಸುತ್ತದೆ. ಆದರೆ, ಕೇವಲ ಅಸ್ತಿತ್ವ ಬೋಧೆಯಿಂದಲೇ ಯಾವ ಕಾರ್ಯವೂ ಕೈಗೂಡದು. ಬುದ್ಧಿ ತತ್ತ್ವದ ಇನ್ನಷ್ಟು ಹೆಚ್ಚಿನ ಜಡಾಭಿವ್ಯಕ್ತಿಯಾದ ಅಹಂ ತತ್ತ್ವವೇ ಕರ್ಮ ಮಾಡುತ್ತದೆ. ಮತ್ತು ಕರ್ಮದ ಫಲವನ್ನೂ ಭೋಗಿಸುತ್ತದೆ. ವಿಶುದ್ಧ ನಾನುವಿನ ಬೋಧೆಯನ್ನುಂಟು ಮಾಡುವ ಬುದ್ಧಿ ತತ್ತ್ವವು ತಾನೇ ಯಾವ ಕರ್ಮವನ್ನೂ ಮಾಡುವುದಿಲ್ಲ. ಮತ್ತು ಇದರಿಂದಾಗಿಯೇ ಕರ್ಮ ಫಲ ಭೋಗವನ್ನು ಸಹ ಮಾಡುವುದಿಲ್ಲ. ಆದರೆ, ಈ ಬುದ್ಧಿ ತತ್ತ್ವದಿಂದ ಉತ್ಪನ್ನವಾದ ನಾನು–ಬೋಧೆಯ ಅಭಾವದಲ್ಲಿ, ಅಹಂ ತತ್ತ್ವವು ಯಾವುದೇ ಕರ್ಮಗೆಯ್ಯುವ ಪ್ರೇರಣೆಯನ್ನು ಪಡೆಯದು. ಬುದ್ಧಿ ತತ್ತ್ವವೇ ಅಹಂ ತತ್ತ್ವವನ್ನು ಕಾರ್ಯಾನ್ವಿತಗೊಳಿಸುವುದು. ಆದ್ದರಿಂದ, ಬುದ್ಧಿ ತತ್ತ್ವವು ಪ್ರತ್ಯಕ್ಷ ಭಾವದಿಂದ ಕರ್ಮವನ್ನು ಮಾಡುವುದಿಲ್ಲವಾದರೂ ಸಹ, ಅಹಂ ತತ್ತ್ವದ ಮಾಧ್ಯಮದಿಂದ, ಪರೋಕ್ಷ ಭಾವದಿಂದ ಕರ್ಮ ಮತ್ತು ಕರ್ಮ ಫಲದೊಂದಿಗೆ ಸಂಪರ್ಕ ಹೊಂದಿರುತ್ತದೆ; ಎಂದು ಹೇಳಬಹುದು. ಉದಾಹರಣಾರ್ಥ ಹೇಳುವುದಾದರೆ, ಇಬ್ಬರು ಜಮೀನುದಾರರ ಮಧ್ಯೆ ಯಾವುದೋ ಮತ ಭೇದದ ಕಾರಣ, ಅವನ ಕರ್ಮಚಾರಿಗಳಲ್ಲಿ ಯಾವುದೋ ಸಂಘರ್ಷ ಉಂಟಾದರೆ, ಅದರ ಫಲಾಫಲಗಳಿಗೆ, ಯಾವ ಪ್ರಕಾರ, ಇಬ್ಬರೂ ಜಮೀನದಾರರೇ ಭಾಗಿಯಾಗುವರೋ, ಅದೇ ಪ್ರಕಾರ, ವಿಶೇಷ ವ್ಯಕ್ತಿಯ ಬುದ್ಧಿ ತತ್ತ್ವವು ಪ್ರತ್ಯಕ್ಷ ಭಾವದಿಂದ ಯಾವುದೇ ಕರ್ಮವನ್ನು ಮಾಡದಿದ್ದರೂ ಸಹ, ಪರೋಕ್ಷ ಭಾವದಿಂದ ಅಹಂ ತತ್ತ್ವದ ಎಲ್ಲ ಕರ್ಮಗಳಿಗಾಗಿ ಮತ್ತು ಕರ್ಮ ಫಲಕ್ಕಾಗಿ ಭಾಗಿಯಾಗುತ್ತದೆ. ಅಹಂ ತತ್ತ್ವದ ಮೇಲೆ, ಪ್ರಕೃತಿಯ ತಮೋಗುಣದ ಬಂಧನದ ಕಾರಣ, ಚಿತ್ತದ ಸೃಷ್ಟಿಯಾಗುತ್ತದೆ. ಅರ್ಥಾತ್ ಅಹಂ ತತ್ತ್ವವೇ ತನ್ನನ್ನು ಮತ್ತಷ್ಟು ಜಡವಾಗಿಸಿ ಚಿತ್ತದ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ಮೊದಲೇ ಹೇಳಿದಂತೆ ಚಿತ್ತವು ಹತ್ತು ಇಂದ್ರಿಯಗಳ ಮಾಧ್ಯಮದಿಂದ ಬುದ್ಧಿ ತತ್ತ್ವ ಇಲ್ಲವೆ ಅಹಂ ತತ್ತ್ವದ ಕಾರ್ಯಾನುಸಾರ ರೂಪವನ್ನು ಗ್ರಹಿಸುತ್ತದೆ. ಉದಾಹರಣೆಗೆ, ನೋಡಿರಿ: ಅಹಂ ತತ್ತ್ವದ, ಪುಸ್ತಕವನ್ನು ನೋಡುವ ಕ್ರಿಯೆಯಲ್ಲಿ, ಸಹಾಯವನ್ನು ನೀಡುವುದಕ್ಕಾಗಿ ಚಿತ್ತಕ್ಕೆ ಪುಸ್ತಕದ ರೂಪವನ್ನು ಗ್ರಹಿಸಬೇಕಾಗುತ್ತದೆ. ಶಬ್ದವನ್ನು ಕೇಳುವುದಕ್ಕಾಗಿ ಶಬ್ದವಾಗಬೇಕಾಗುತ್ತದೆ. ಚಿತ್ತವು ಅಹಂ ತತ್ತ್ವದ ಸ್ಥೂಲ ಅಭಿವ್ಯಕ್ತಿಯಾಗಿದೆ. ಮತ್ತು ಅಹಂ ತತ್ತ್ವವು ಬುದ್ಧಿ ತತ್ತ್ವದ ಸ್ಥೂಲ ಅಭಿವ್ಯಕ್ತಿಯಾಗಿದೆ. ಇದರಿಂದ ಚಿತ್ತವು ಬುದ್ಧಿ ತತ್ತ್ವದ್ದೇ ಸ್ಥೂಲತಮ ಅಭಿವ್ಯಕ್ತಿಯಾಗಿದೆ. ಚಿತ್ತವು ಬುದ್ಧಿ ತತ್ತ್ವ ಮತ್ತು



ಅಹಂ ತತ್ತ್ವಗಳ ವಿಶೇಷ ರೂಪಾಂತರವಾಗಿದೆ. ಇದರಿಂದ ಶಬ , ಸ್ಪರ್ಶ, ರೂಪ, ರಸ ಮತ್ತು ಗಂಧ ತನ್ಮಾತ್ರೆಗಳ ಸ್ಪಂದನದಿಂದ ಉತ್ಪನ್ನವಾದ ಚೈತ್ತಿಕ ಸ್ಫುರಣವು, ಅವಶ್ಯವಾಗಿಯೇ, ಬುದ್ಧಿ ತತ್ತ್ವ ಹಾಗೂ ಅಹಂ ತತ್ತ್ವಗಳ ಕಾರ್ಯಕ್ಕನುಸರಿಸಿ, ಕೇವಲ ಬೇರೆ ಬೇರೆ ರೂಪವಷ್ಟೇ.

ಬುದ್ಧಿ ತತ್ತ್ವವು ಪ್ರೇರಣೆ ನೀಡುತ್ತದೆ. ಅಹಂ ತತ್ತ್ವವು ಕರ್ಮ ಮಾಡುತ್ತದೆ. ಮತ್ತು ಚಿತ್ತವು ಅದೇ ಕರ್ಮದ ಫಲದ ರೂಪವನ್ನು ಧಾರಣ ಮಾಡುತ್ತದೆ. ಬುದ್ಧಿ ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತ, ಈ ಮೂರೂ ಸೇರಿಯೇ ಮನವಿದೆ. ಅಂದ ಮೇಲೆ, ಮನವೇ ಕರ್ಮವನ್ನು ಮಾಡುತ್ತದೆ ಮತ್ತು ಮನವೇ ಅದರ ಫಲವನ್ನೂ ಭೋಗಿಸುತ್ತದೆ. ಅಣು ಚೈತನ್ಯದ ಸ್ಥಿತಿಯು ಮನಕ್ಕಿಂತ ಮೇಲಿದೆ. ಇದರಿಂದ, ಅದು ಕರ್ಮವನ್ನೂ ಮಾಡುವುದಿಲ್ಲ. ಮತ್ತು ಕರ್ಮದ ಫಲವನ್ನೂ ಭೋಗಿಸುವುದಿಲ್ಲ. ಅದು ಕೇವಲ ಸಾಕ್ಷಿಯಾಗಿದ್ದುಕೊಂಡೇ ದೇಹದಲ್ಲಿ ವಾಸಿಸುತ್ತದೆ.

ಬ್ರಹ್ಮನ ಸ್ವರೂಪಾವಸ್ಥೆಯಲ್ಲಿ ಅರ್ಥಾತ್ ನಿರ್ಗುಣ ಬ್ರಹ್ಮನಲ್ಲಿ ಪುರುಷ ಮತ್ತು ಅವನ ಸ್ವಂತ ವಿಶೇಷತೆಯಾದ ಪ್ರಕೃತಿಗಳೆರಡೂ ಪರಸ್ಪರ ಪ್ರಭಾವದಿಂದ ಮುಕ್ತವಾಗಿವೆ. ಆದರೆ ಸಗುಣ ಬ್ರಹ್ಮನಲ್ಲಿ ಪುರುಷನು ಪ್ರಕೃತಿಯ ಅಧೀನನಾಗಿರುತ್ತಾನೆ. ಪುರುಷನ ಮೇಲಿನ ಪ್ರಕೃತಿಯ ಈ ಪ್ರಕಾರದ ಪ್ರಭುತ್ವದ ಕಾರಣದಿಂದಾಗಿಯೇ ಜಗತ್ತಿನ ಸೃಷ್ಟಿಯಾಯಿತು. ಸಗುಣದ ಪುರುಷನು ಪ್ರಕೃತಿಯ ಅನುಮತಿ ಇಲ್ಲದೆ ಯಾವುದೇ ಕರ್ಮವನ್ನು ಮಾಡಲಾರನು. ಸ್ವತಂತ್ರವಾಗಿ ಕಾರ್ಯ ಮಾಡುವ ಪುರುಷ ಪ್ರಯತ್ನಕ್ಕೆ ಪ್ರಕೃತಿಯು ಬಾಧೆಯೊಡ್ಡಿ ನಷ್ಟಗೊಳಿಸಲು ಹೆಣಗುತ್ತದೆ. ಚೈತನ್ಯಪೂರ್ಣ ಮಾನವನು, ತನ್ನ ಈ ಬಂಧನದ ದಾಸ್ಯದಿಂದ ಬಿಡುಗಡೆ ಹೊಂದುವ ಉದ್ದೇಶದಿಂದ ಪ್ರಕೃತಿಯ ಪ್ರಭಾವವನ್ನು ನಷ್ಟಗೊಳಿಸುವುದಕ್ಕಾಗಿ ಪ್ರಯತ್ನಿಸಲು ಮುಂದಾಗುತ್ತಾನೆ. ಮತ್ತು ಇದಕ್ಕಾಗಿ ಅವನು ಪ್ರಕೃತಿಯ ವಿರುದ್ಧ ಕರ್ಮ ಮಾಡುವಲ್ಲಿ ಪ್ರಯತ್ನಶೀಲನಾಗಿ ಮುಂದಾಗುತ್ತಾನೆ. ಪ್ರಕೃತಿಯೂ ಸಹ, ತನ್ನ ಆಧಿಪತ್ಯವನ್ನು ಶಾಶ್ವತಗೊಳಿಸಲಿಕ್ಕೋಸುಗ, ವಿಶೇಷ ರೂಪದಿಂದ ತತ್ಪರವಾಗುತ್ತದೆ. ಆದ್ದರಿಂದ, ಮಾನವನ, ಸಕಲ ಕರ್ಮಗಳನ್ನು ಮಾಡುವ ಪ್ರಯತ್ನದ ಹಿನ್ನೆಲೆಯಲ್ಲಿ, ಪ್ರಕೃತಿಯ ಬಂಧನದಿಂದ ಮುಕ್ತಿ ಪಡೆಯುವದಕ್ಕಾಗಿ ಚೈತನ್ಯದ ಪ್ರೇರಣೆ ಇರುತ್ತದೆ. ಮತ್ತು ಯಾವ ಕರ್ಮಫಲವನ್ನು ಮಾನವನು ಭೋಗಿಸಬೇಕಾಗಿದೆಯೋ, ಅದೆಂದರೆ, ಪ್ರಕೃತಿಯ ಮೂಲಕ ತನ್ನ ಬಂಧನವನ್ನು

ಮುರಿಯದಂತೆ ಇರಿಸಲಿಕ್ಕಾಗಿ ಯಾವ ಪ್ರಕೃತಿಯು ತತ್ಪರವಿರುವುದೋ, ಅದರ ಪ್ರತಿಕ್ರಿಯೆಯಷ್ಟೇ.

ಈಗ ಕರ್ಮವು ಹೇಗೆ ಆಗುತ್ತದೆ? ಮತ್ತು ಕರ್ಮದ ಫಲವನ್ನು ಮಾನವನು ಏಕೆ ಭೋಗಿಸಬೇಕು? ಎಂಬುದನ್ನು ನೋಡುವಾ: ಎಲ್ಲ ಕರ್ಮಗಳೂ ಮನದಲ್ಲಿಯೇ ಭಾವ–ತರಂಗಗಳ ರೂಪದಲ್ಲಿ ಉತ್ಪನ್ನವಾಗುತ್ತವೆ. ಮತ್ತು ಮನವು, ಅರ್ಥಾತ್ ಬುದ್ಧಿ ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತ--ಈ ಮೂರರ ಒಟ್ಟಾರೆ ರೂಪವು, ಎಲ್ಲ ಕರ್ಮಗಳನ್ನು ಮಾಡುತ್ತದೆ. ಈ ಮೊದಲೇ ಹೇಳಿದಂತೆ, ಕರ್ಮದ ತರಂಗಗಳನ್ನು ಅನುಸರಿಸಿ, ಕರ್ಮದ ಫಲದ ರೂಪವವನ್ನು ಹೊಂದುತ್ತದೆ. ಅರ್ಥಾತ್ ಕರ್ಮದ ತರಂಗಗಳ ಪರಿವರ್ತನೆಯೊಂದಿಗೇ ಚಿತ್ತದ ಪರಿವರ್ತನೆಯೂ ಸಹ ಆಗುತ್ತಿರುತ್ತದೆ. ಉದಾಹರಣೆ ನೋಡಿರಿ: ಪುಸ್ತಕವನ್ನು ನೋಡಲೋಸುಗ, ಚಿತ್ತವು ಪುಸ್ತಕದ ರೂಪವನ್ನು ಹೊಂದುತ್ತದೆ. ಈ ಪ್ರಕಾರ, ಯಾವುದೇ ಕರ್ಮವನ್ನು ಮಾಡಿದ ಮೇಲೆ ಮನವು ತನ್ನ ಸ್ವಾಭಾವಿಕ ರೂಪವನ್ನು ತೊರೆದು, ವಿಕೃತವಾಗುತ್ತದೆ. ಮನದ ಉತ್ಪತ್ತಿ ಹಾಗೂ ಅದರ ಅಸ್ತಿತ್ವಗಳು, ಪುರುಷನ ಮೇಲೆ ಪ್ರಕೃತಿಯ ಪ್ರಭಾವದ ಸಾಪೇಕ್ಷವಿವೆ. ಆದ್ದರಿಂದ ಪುರುಷನು ಕರ್ಮದ ಪ್ರೇರಣೆ ನೀಡಿ, ಮನವನ್ನು ಸ್ವಾಭಾವಿಕ ಗತಿಯತ್ತ, ತಿರುಗಿಸಲಿ; ಎಂಬುದು ಪ್ರಕೃತಿಯ ಇಚ್ಛೆಯಲ್ಲ. ಮನದ ಮೇಲೆ ಪ್ರಕೃತಿಯ ಪ್ರಭಾವವು ಬೇಕಾದುದಕ್ಕಿಂತ ಹೆಚ್ಚಿಗೆ ಆಗಿರುವ ಕಾರಣ, ಪ್ರತಿಯೊಂದು ಕರ್ಮಕ್ಕಾಗಿ, ಪ್ರಕೃತಿಯು ಒಂದು ಪ್ರತಿಕರ್ಮದ ಸೃಷ್ಟಿ ಮಾಡಿ ಮನವನ್ನು ಅದರ ಪೂರ್ವಾವಸ್ಥೆಗೆ ಮರಳಿ ತರುತ್ತದೆ. ಇದನ್ನೇ ಕರ್ಮ ಫಲವೆನ್ನುತ್ತಾರೆ. ಇದರಿಂದ, ಮನವನ್ನು ಮರಳಿ ತರುವ ಮಾಧ್ಯಮಕ್ಕೆ ಕರ್ಮ ಫಲವೆನ್ನಬಹುದು.

ವಿಕೃತ ಮನವು ಕರ್ಮದ ಪ್ರತಿಕ್ರಿಯೆಯನ್ನು ಅಥವಾ ಕರ್ಮಫಲವನ್ನು ಭೋಗಿಸಿ, ಪೂರ್ವದ ಅವಸ್ಥೆಗೆ ಮರಳುತ್ತದೆ. ಕರ್ಮದ ಯಾವ ಗತಿಯಿಂದ ಮನವು ವಿಕೃತವಾಗುವುದೋ, ಪ್ರತಿಕರ್ಮ ಇಲ್ಲವೆ ಕರ್ಮಫಲದ ಗತಿಯೂ ಸಹ, ಅದೇ ಇರುತ್ತದೆ. ಅರ್ಥಾತ್ ಮನದ ವಿಕೃತಿಯು ಕಾಲಕ್ಕೆ ಪ್ರಕೃತಿಗೆ ಎಷ್ಟೊಂದು ಪೆಟ್ಟು ತಾಕುವುದೋ, ಅಷ್ಟೇ ಪೆಟ್ಟನ್ನು ಪ್ರಕೃತಿಯೂ ಸಹ, ಮನಕ್ಕೆ, ಸ್ವಾಭಾವಿಕ ಅವಸ್ಥೆಗೆ ಹಿಂತಿರುಗುವ ಕಾಲಕ್ಕೆ ಕೊಡುತ್ತದೆ. ಉದಾಹರಣೆ ನೋಡಿರಿ: ರಬ್ಬರಿನ ಚೆಂಡೊಂದನ್ನು ಕೈಬೆರಳುಗಳಿಂದ ಒತ್ತಿದರೆ, ಅದರಲ್ಲಿ ವಿಕೃತಿ ಉಂಟಾಗುತ್ತದೆ. ಆದರೆ ಬೆರಳನ್ನು ಸರಿಸುತ್ತ ಹೋದಂತೆಲ್ಲ



ಅಷ್ಟೇ ಶಕ್ತಿಯ ವಿಪರೀತ ಗತಿಯು ಹುಟ್ಟಿ ಅದರ ಪೂರ್ವಾವಸ್ಥೆಗೆ ಕರೆದೊಯ್ಯುತ್ತದೆ. ಮತ್ತು ಬೆರಳು ಈ ಪ್ರತಿಕ್ರಿಯೆಯ ಅನುಭವ ಪಡೆಯುತ್ತದೆ. ಇಲ್ಲಿ, ರಬ್ಬರಿನ ಚೆಂಡನ್ನು ಮಾನವ ಮನಕ್ಕೆ ಹೋಲಿಸಲಾಗಿದೆ. ಮತ್ತು ಬೆರಳನ್ನು ಅದರ ನಾನು-ಬೋಧೆಗೆ ಹೋಲಿಸಲಾಗಿದೆ. ಆದ್ದರಿಂದ ವಿಕೃತಿಯು ಉಂಟಾಗುವ ಸಮಯಕ್ಕೆ ಮನದ ಮೇಲೆ ಯಾವ ಪ್ರಕಾರದ ಎಷ್ಟೊಂದು ಒತ್ತಡವು ಬೀಳುವುದೋ, ಅಷ್ಟೇ ಮತ್ತು ಅದೇ ಪ್ರಕಾರದ ಒತ್ತಡವು, ವಿಕೃತಿಯಿಂದ ಮತ್ತೆ ಸ್ವಾಭಾವಿಕ ಅವಸ್ಥೆಗೆ ಮರಳುವ ಕಾಲಕ್ಕೆ ಹತ್ತುತ್ತದೆ. ಮನವನ್ನು ಸ್ವಾಭಾವಿಕ ಅವಸ್ಥೆಗೆ ಹಿಂತಿರುಗಿಸುವುದು ಮತ್ತು ಹಾಗೆಯೇ ಮನದ 'ಕರ್ತ್ರ ನಾನು'ವನ್ನು ದಂಡಿಸುವುದು,– ಪ್ರಕೃತಿಯ ಈ ಎರಡೂ ಉದ್ದೇಶಗಳು ಪ್ರತಿಕರ್ಮದ ಭೋಗದ ಮಾಧ್ಯಮದಿಂದ ಪೂರ್ತಿಗೊಳ್ಳುತ್ತವೆ. ಪ್ರಕೃತಿಯ ವಿಧಾನಕ್ಕನುಸರಿಸಿ,ಮನದ ಸ್ವಭಾವವೇ, ಪ್ರತಿಕ್ರಿಯೆಯ ಫಲವಾಗಿ, ಸ್ವಾಭಾವಿಕ ಅವಸ್ಥೆಗೆ ಮರುಳುವುದಾಗಿದೆ. ಆದ್ದರಿಂದ, ಮಾನವನಿಗೆ ತನ್ನ ಸಮಸ್ತ ಒಳಿತು–ಕೇಡು ಕರ್ಮಗಳ ಫಲವನ್ನು ಭೋಗಿಸಬೇಕಾಗುತ್ತದೆ. ಉದಾಹರಣೆಗೆ ನೋಡಿರಿ. ಯಾವನೊಬ್ಬನು ಯಾರೊಬ್ಬರ ವಸ್ತುವನ್ನು ಕಳವು ಮಾಡಿ ಅವನ ಮನಸ್ಸಿಗೆ ಕಷ್ಟ ಕೊಡುತ್ತಾನೆ. ಹೀಗಾಗಿ, ಈ ಕಳವಿನ ಕರ್ಮದಿಂದ ಅವನ ಮನದಲ್ಲಿ ವಿಕೃತಿಯುಂಟಾಗುತ್ತದೆ. ಈ ವಿಕೃತ ಮನವು ಸ್ವರೂಪಾವಸ್ಥೆಗೆ ಮರಳಿ ಬರುವ ಪ್ರಯತ್ನವನ್ನು ಅವಶ್ಯವಾಗಿಯೇ ಮಾಡುತ್ತದೆ. ಮತ್ತು ಅದರ ಫಲವಾಗಿ, ಈ ವ್ಯಕ್ತಿಯ ಮನವಲ್ಲಿ ಅಷ್ಟೇ ಕಷ್ಟ ಭೋಗವಾಗುತ್ತದೆ. ಅದೇ ಪ್ರಕಾರ, ಒಂದು ವೇಳೆ, ಯಾರೊಬ್ಬರು, ತನ್ನ ಕರ್ಮದ ಮೂಲಕ ಎರಡನೆಯವರ ಮನಕ್ಕೆ ಸುಖ ನೀಡಿದರೆ, ಪ್ರಕೃತಿಯ ನಿಯಮಾನುಸಾರ, ಮನವು ಸ್ವರೂಪಾವಸ್ಥೆಗೆ ಮರಳುವ ಸಮಯದಲ್ಲಿ, ಅವನು ಸಹ, ತನ್ನ ಮನದಲ್ಲಿ ಅಷ್ಟೇ ಸುಖವನ್ನು ಅನುಭವಿಸುತ್ತಾನೆ. ಈ ಪ್ರಕಾರ, ಪ್ರಕೃತಿಯು ಮಾನವನನ್ನು ಎಲ್ಲ ಒಳ್ಳೆಯ ಕೆಟ್ಟ ಕರ್ಮಗಳ ಪ್ರತಿಕ್ರಿಯೆಯ ಸಂವೇದನೆಯನ್ನು ಅವನ ಮನದಲ್ಲಿಯೇ ಜಾಗ್ರತಗೊಳಿಸುತ್ತದೆ. ಮತ್ತು ಅದರ ಮಾಧ್ಯಮದಿಂದಲೇ ಭೋಗವುಂಟಾಗುತ್ತದೆ.

ಕರ್ಮ ಮಾಡದೆ ಯಾರೂ ಇರಲಾರರು. ಸುಮ್ಮನೆ ಕುಳಿತುಕೊಂಡಾಗಲೂ ಕರ್ಮವು ಆಗುತ್ತಿರುತ್ತದೆ. ಶರೀರದಿಂದ ಯಾವುದೇ ಕರ್ಮವನ್ನು ಮಾಡದಿದ್ದರೂ, ಸ್ವಭಾವತಃ ಚಂಚಲವಿರುವ ಮನವು ಕರ್ಮ ಮಾಡದೇ ಇರಲಾರದು. ದೇಹವು ಅಲುಗಾಡದಿದ್ದರೂ ಸಹ, ಮನವು ಚಿಂತಿಸಬಲ್ಲದು.

ಇಲ್ಲವೆ ಕಲ್ಪಿಸಬಲ್ಲದು. ಈ ಚಿಂತನ ಇಲ್ಲವೆ ಕಲ್ಪನೆಯು ಒಳ್ಳೆಯದಿರಲೂ ಬಹುದು ಕೆಟ್ಟದಿರಲೂಬಹುದು. ಆದರೆ ಇವುಗಳೆಲ್ಲ ಕ್ರಿಯೆಗಳೇ ಆಗಿವೆ. ಮತ್ತು ಇವುಗಳಿಗಾಗಿ ದೇಹದಿಂದೇನನ್ನೂ ಮಾಡುವ ಆವಶ್ಯಕತೆಯಿಲ್ಲ. ದೈಹಿಕ ಕಾರ್ಯವೂ ಸಹ, ಮಾನಸಿಕ ಕರ್ಮದ ಹೊರಗಿನ ವಿಕಾಸವಷ್ಟೇ ಸರಿ. ಈ ಮುನ್ನ ಹೇಳಿದಂತೆ, ಮನವೇ ಎಲ್ಲ ಕರ್ಮಗಳನ್ನು ಮಾಡುತ್ತದೆ. ಹತ್ತೂ ಇಂದ್ರಿಯಗಳು ಚಿತ್ತದ ಅಭಿಪ್ರಕಾಶಗಳೇ ಆಗಿವೆ. ಮತ್ತು ಇವುಗಳೇ ಎಲ್ಲ ಮಾನಸಿಕ ಕ್ರಿಯೆಗಳನ್ನು ಸ್ಥೂಲ ಕ್ರಿಯೆಗಳಲ್ಲಿ ರೂಪಾಂತರಿಸುತ್ತವೆ. ದೈಹಿಕ ಮತ್ತು ಮಾನಸಿಕ ಭೇದಗಳಿಂದ ಕರ್ಮಗಳು ಎರಡು ಪ್ರಕಾರದವಿವೆ. ಇಂದ್ರಿಯಗಳ ಮೂಲಕ ಯಾವ ಸಮಸ್ತ ಕರ್ಮಗಳು ಸಂಪನ್ನವಾಗಿವೆಯೋ, ಅವುಗಳೆಲ್ಲ ದೈಹಿಕ ಕರ್ಮಗಳಾಗಿವೆ. ಇನ್ನು ಇಂದ್ರಿಯಗಳ ಸಹಾಯವಿಲ್ಲದೆ, ಯಾವ ಕರ್ಮಗಳನ್ನು ಮನವು ತಾನೇ ಮಾಡುವುದೋ, ಅವುಗಳಿಗೆ ಮಾನಸಿಕ ಕರ್ಮಗಳೆನ್ನುತ್ತಾರೆ. ಎರಡು ಪ್ರಕಾರದ ಕರ್ಮಗಳೂ ಮನದಲ್ಲಿ ವಿಕೃತಿಯನ್ನು ಉಂಟು ಮಾಡುತ್ತವೆ. ಮನವು ಈ ವಿಕೃತಿಯಿಂದ, ಒಂದು ಪ್ರತಿಕ್ರಿಯೆಯ ಮಾಧ್ಯಮದಿಂದ ಮುಕ್ತವಾಗುತ್ತದೆ. ಮತ್ತು ಆ ಪ್ರತಿಕ್ರಿಯೆಯು ಭೋಗವನ್ನು ಮನವು ಆವಶ್ಯವಾಗಿ ಅನುಭವಿಸಬೇಕಾಗುತ್ತದೆ. ಆದ್ದರಿಂದ, ಕರ್ಮವು ಮಾನಸಿಕವಿರಲಿ, ದೈಹಿಕವಿರಲಿ, ಅದರ ಕರ್ತ್ತೃನಿಗೆ ಕರ್ಮ ಫಲವನ್ನು ಭೋಗಿಸಲೇಬೇಕಾಗುತ್ತದೆ.

ಚೈತನ್ಯದ ವ್ಯಾಪಕ ವಿಕಾಸವು, ಪ್ರಕೃತಿಯು ಬಂಧನದ ಕಾರಣ, ಮಾನವನ ಮನದಲ್ಲಿ ಅಶಾಂತಿಯನ್ನು ಉಂಟು ಮಾಡುತ್ತದೆ. ಅದು ಈ ದಾಸ್ಯತ್ವದ ಸರಪಳಿಯಿಂದ ಕಟ್ಟಿಸಿಕೊಂಡಿರಲು ಬಯಸುವುದಿಲ್ಲ. ಇದರಿಂದ, ಸ್ವಾಧೀನ ರೂಪದಿಂದ, ಪ್ರಕೃತಿಯ ವಿರುದ್ಧದ ಹೋರಾಟವಲ್ಲಿ ನಿರತವಾಗುತ್ತದೆ. ಇದರ ಫಲವಾಗಿ, ಪ್ರಕೃತಿಯೂ ಸಹ, ಅದಕ್ಕೆ ಪ್ರತಿಕ್ರಿಯೆ ಇಲ್ಲವೆ ಕರ್ಮಫಲ ಭೋಗದ ಮಾಧ್ಯಮದಿಂದ ದಂಡಿಸುತ್ತದೆ. ಪೃಥ್ವಿಯ ಮೇಲೆ, ಕೇವಲ ಮಾನವನೇ ಪೂರ್ಣ ರೂಪದಿಂದ, ವಿಕಸಿತ ಚೈತನ್ಯದ ಅಧಿಕಾರಿಯಾಗಿದ್ದಾನೆ. ಆದ್ದರಿಂದ, ಮಾನವನ ಹೊರತಾಗಿ, ಬೇರಾವ ಪ್ರಾಣಿಯೂ ಸ್ವಾಧೀನ ರೂಪದಿಂದ ಕರ್ಮವನ್ನು ಮಾಡಲಾರದು. ಸ್ವತಂತ್ರ ರೂಪದಿಂದ ಮಾಡಿದ ಕರ್ಮ ಇಲ್ಲವೆ ಪ್ರಕೃತಿಯ ಇಚ್ಛೆಯ ವಿರುದ್ಧ ಮಾಡಿದ ಕರ್ಮಕ್ಕಾಗಿ ದಂಡಿಸುವುದು ಪ್ರಕೃತಿಯ ನಿಯಮವಾಗಿದೆ. ಇದರಿಂದ, ಸ್ವತಂತ್ರವಾಗಿ, ಯಾವನು ಕರ್ಮ ಮಾಡುವ ಅಧಿಕಾರಿಯಲ್ಲವೋ, ಅವನು ಪ್ರಕೃತಿಯ



ಮೂಲಕ ದಂಡನೆಯನ್ನು ಪಡೆಯನು. ಈ ವಿಚಾರದಿಂದ ನೋಡಿದಾಗ, ಮಾನವನನ್ನು ಬಿಟ್ಟು, ಬೇರಾವ ಪ್ರಾಣಿಯೂ ಕರ್ಮಫಲ ಭೋಗ ರೂಪದಲ್ಲಿ ದಂಡನೆಯನ್ನು ಪಡೆಯುವುದಿಲ್ಲ.

ಒಳ್ಳೆಯದೇ ಇರಲಿ; ಕೇಡೇ ಇರಲಿ; ಎಲ್ಲ ಕರ್ಮಗಳ ಫಲವನ್ನೂ ಭೋಗಿಸಲೇಬೇಕಾಗುತ್ತದೆ. ಮಾನವನು ಕರ್ಮ ಮಾಡದೆ ಒಂದರೆಕ್ಷಣವಾದರೂ ಇರಲಾರನು. ಆದ್ದರಿಂದ, ಅವನು ಸಾಯುವ ಪೂರ್ವದ ಕ್ಷಣದ ವರೆಗೆ ಕರ್ಮವನ್ನು ಮಾಡುತ್ತಿರುತ್ತಾನೆ. ಮರಣಿಸಿದ ಬಳಿಕ ಬೇರಾರೂ ಅವನ ಕರ್ಮದ ಪ್ರತಿಕರ್ಮವನ್ನು ಭೋಗಿಸಲಾರರು. ಏಕೆಂದರೆ, ಯಾರು ಕರ್ಮವನ್ನು ಮಾಡುವರೋ, ಅವರೇ ಅದರ ಪ್ರತಿಕರ್ಮವನ್ನು ಭೋಗಿಸಬೇಕಾಗುತ್ತದೆ. ಆದ್ದರಿಂವ, ಸತ್ತ ವ್ಯಕ್ತಿಯು; ಯಾರ ದೇಹವನ್ನು ಮಣ್ಣಿನಲ್ಲಿ ಮುಚ್ಚುವರೋ ಇಲ್ಲವೆ ಅಗ್ನಿಯಲ್ಲಿ ಸುಟ್ಟು ಹಾಕುವರೋ ಅವನು-ಅವನೆಂತು ಕರ್ಮಫಲವನ್ನು ಭೋಗಿಸಬಲ್ಲನು? ಇದರ ಚರ್ಚೆಯನ್ನು ಮುಂದೆ ಮಾಡುತ್ತೇವೆ.

ಆತ್ಮ ಇಲ್ಲವೆ ಅಣು-ಚೈತನ್ಯವು ಅಮರವಾಗಿದೆ. ಇದರಲ್ಲಾವ ಪರಿವರ್ತನೆಯಾಗುವುದಿಲ್ಲ. ಸ್ಥೂಲದಿಂದ ಸೂಕ್ಷ್ಮದ ದಿಶೆಯ ಗತಿಯಲ್ಲಿ ಭೂಮಾದಿಂದ ಸೃಷ್ಟವಾದ ಪಾಂಚಭೌತಿಕ ಆಧಾರದಲ್ಲಿ ಅಣುಚೈತನ್ಯದ ಪೂರ್ಣಾಭಿವ್ಯಕ್ತಿಯಾಗುತ್ತದೆ. ಪುರುಷ ಮತ್ತು ಪ್ರಕೃತಿಗಳು ಭಿನ್ನ ಭಿನ್ನ ಸತ್ತೆಗಳಲ್ಲ. ಪರಸ್ಪರ ವಿಭಿನ್ನವಾಗಿವೆ. ಮಾನವ ಆಧಾರದಲ್ಲಿ ನೆಲೆಸಿದ ಅಣುಚೈತನ್ಯದಲ್ಲಿ ಸಹ, ಅದರ ಸ್ವಂತ ಗುಣವಾದ ಪ್ರಕೃತಿಯು ಉಪಸ್ಥಿತವಿದೆ. ಮತ್ತು ಅದರ ಮೇಲೆ ತನ್ನ ಪ್ರಭಾವ ಬೀರಿ, ಮನವನ್ನು ಸೃಷ್ಟಿಸುತ್ತದೆ. ಮನದ ಸೃಷ್ಟಿಯು ಪುರುಷ ಮತ್ತು ಪ್ರಕೃತಿಗಳೆರಡರ ಒಟ್ಟಾರೆ ರೂಪದಿಂದ ಆಗುವ ಕಾರಣ, ಇದರ ಅಸ್ತಿತ್ವವು ಪುರುಷ ಮತ್ತು ಪ್ರಕೃತಿಗಳ ಸಾಪೇಕ್ಷವಿದೆ. ಅಣುಚೈತನ್ಯ ಮತ್ತು ಪ್ರಕೃತಿಗಳೆರಡೂ ಪರಸ್ಪರ ಅಭಿನ್ನ ಸತ್ತೆಗಳಾಗಿವೆ. ಇದರಿಂದ ಮನವು ಅಣುಚೈತನ್ಯದೊಂದಿಗೇ ಇರುತ್ತದೆ. ಮಾನವನ, ನಾನು ತನ ಬೋಧೆಯು ಮನವನ್ನು ಬಿಟ್ಟು ಬೇರೇನೂ ಅಲ್ಲ. ಮತ್ತು ಎಲ್ಲಿಯ ವರೆಗೆ ಮನವು ಇರುವುದೋ, ಅಲ್ಲಿಯ ವರೆಗೆ ನಾನು-ಬೋಧೆಯೂ ಇರುತ್ತದೆ. ಅಣು ಚೈತನ್ಯವು ಒಂದು ಶಾಶ್ವತ ಸತ್ತೆಯಾಗಿದೆ. ಆದ್ದರಿಂದ, ಅದರ ಸಾಪೇಕ್ಷ ಮನವಿದೆ ಮತ್ತು ಮನದ ಸಾಪೇಕ್ಷ ನಾನುತನ ಬೋಧೆಯೂ ಸಹ ನಸ್ಯಾತ್ ಆಗಲಾರದು. ಈ ತೆರನಾಗಿ ನೋಡಿದಾಗ, ಯಾವಾಗ ಅಣು ಚೈತನ್ಯವು

ಯಾವುದೊಂದು ಮಾನವ ಆಧಾರದ ಆಶ್ರಯವನ್ನು ತೆಗೆದುಕೊಂಡಾಗ, ನಾನು–ತನದ ಬೋಧೆಯು ಸ್ಥೂಲ ದೇಹವನ್ನು ಸಹ ಪ್ರಭಾವಿತಗೊಳಿಸುತ್ತದೆ. ಅಣು ಚೈತನ್ಯವು ದೇಹತ್ಯಾಗ ಮಾಡಿದೊಡನೆಯೇ, ಅದರೊಂದಿಗೆ ಅಪೃಥಕ್ ಸತ್ತೆಯಾದ ಪ್ರಕೃತಿಯೂ ಸಹ, ದೇಹತ್ಯಾಗ ಮಾಡುತ್ತದೆ. ಪ್ರಕೃತಿಯ ಮೂಲಕ ಹುಟ್ಟಿದ ಮನವು ಸಹ, ಸ್ವಾಭಾವಿಕ ನಿಯಮದಿಂದ ಪ್ರಕೃತಿಯೊಂದಿಗೆ ದೇಹ ತ್ಯಾಗ ಮಾಡುತ್ತದೆ. ಇದರ ಫಲವಾಗಿ ಸ್ಥೂಲ ದೇಹದ ಮೃತ್ಯುವು ಸಂಭವಿಸುತ್ತದೆ. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ಅಣು ಚೈತನ್ಯವಾದರೋ, ಒಂದೇ ಆಧಾರದ ಮಾಧ್ಯಮದಿಂದ, ಸೂಕ್ಷ್ಮಾತಿಸೂಕ್ಷ್ಮ ಭೂಮಾ ಚೈತನ್ಯವನ್ನು ಪ್ರಾಪ್ತಮಾಡಿಕೊಳ್ಳುವ ತನಕ ತನ್ನ ವಿಜಯ ಯಾತ್ರೆಯನ್ನು ಮುಂದುವರಿಸುತ್ತದೆ. ಮೊದಲೇ ಹೇಳಿದಂತೆ ಮಾನವ ದೇಹವು ಪಂಚ ಮೂಲ ತತ್ತ್ವಗಳಿಂದ ನಿರ್ಮಾಣವಾದ ಒಂದು ಸ್ಥೂಲ ಭೂಮಾ ಮಾನಸದ ಅಭಿವ್ಯಕ್ತಿಯಾಗಿದೆ. ಭೂಮಾ ಚೈತನ್ಯದ, ಸೂಕ್ಷ್ಮದಿಂದ ಸ್ಥೂಲದ ದಿಶೆಯ ಧಾರೆಯಲ್ಲಿ, ಐದು ಮೂಲ ತತ್ತ್ವಗಳ ಸೃಷ್ಟಿಯಾಗುತ್ತಿರುತ್ತದೆ. ಮತ್ತು ಪ್ರಕೃತಿಯ ಇಚ್ಛಾನುಸಾರ ಇದೇ ಸ್ಥೂಲದತ್ತಣ ಗತಿ ಪ್ರವಾಹದಲ್ಲಿ ಬಹಳಷ್ಟು ಅಣುಗಳನ್ನು ಸೇರಿಸಿ, ಜಡ ಮಾನವ ದೇಹದ ಸಂರಚನೆಯು ಕ್ರಮೇಣವಾಗಿ ಆಗುತ್ತಿರುತ್ತದೆ. ಇದರಲ್ಲಿ ಸೂಕ್ಷ್ಮ ವ್ಯೋಮತತ್ತ್ವವು ಕ್ರಮೇಣ ವಾಯು ತತ್ತ್ವದಲ್ಲಿ ವಾಯು ತತ್ತ್ವವು ಕ್ರಮೇಣ ತೇಜಸ್ತತ್ತ್ವದಲ್ಲಿ, ತೇಜಸ್ತತ್ತ್ವವು ಕ್ರಮೇಣ ಜಲ ತತ್ತ್ವದಲ್ಲಿ, ಜಲ ತತ್ತ್ವವು ಕ್ರಮೇಣ ಕ್ಷಿತಿ ತತ್ತ್ವದಲ್ಲಿ ರೂಪಾಂತರಗೊಳ್ಳುತ್ತಿರುತ್ತದೆ. ಇದುವೇ ಪ್ರಕೃತಿಯ ಇಚ್ಛೆಯಾಗಿದೆ. ಮತ್ತು ಸೃಷ್ಟಿ ಚಕ್ರದಲ್ಲಿ ಭೂಮಾ ಚೈತನ್ಯವು ಇದೇ ಪ್ರಕಾರ, ಸ್ಥೂಲತ್ವವನ್ನು ಪ್ರಾಪ್ತ ಮಾಡಿಕೊಳ್ಳುತ್ತಿರುತ್ತದೆ. ಪ್ರಕೃತಿಯ ಈ ನಿಯಮಾನುಸಾರ, ಮಾನವ ದೇಹದಲ್ಲಿ ಪರಿವರ್ತನೆಯು ಅವಶ್ಯವಾಗಿ ಆಗುವುದು. ಮತ್ತು ಈ ಪರಿವರ್ತನೆಗಾಗಿಯೇ ಮೃತ್ಯುವಿನ ಅವಶ್ಯಕತೆಯಿದೆ. ಒಂದು ವೇಳೆ, ಈ ಮಾತನ್ನು ಒಪ್ಪಿಕೊಂಡರೆ, ಅಣುಚೈತನ್ಯವು ಮೋಕ್ಷ ಪ್ರಾಪ್ತಿ ಮಾಡಿಕೊಂಡ ಬಳಿಕ, ಒಂದೇ ಆಧಾರವನ್ನು ಆಶ್ರಯಿಸಿಕೊಂಡಿರಬಲ್ಲದು. ಹಾಗಾದರೆ, ಲಕ್ಷಾಂತರ ವರ್ಷಗಳ ವರೆಗೆ ಯಾವುದೇ ಆಧಾರವು, ಕರ್ಮ–ಪ್ರತಿಕರ್ಮಗಳ ಚಕ್ರದಲ್ಲಿ ಬಿದ್ದುಕೊಂಡಿರುತ್ತದೆ. ಅದರ ಫಲವಾಗಿ, ದೀರ್ಘ ಕಾಲದ ವರೆಗೆ ಅದನ್ನೇ ಆಶ್ರಯಿಸಿದ ಅಣು ಸಮೂಹದ (ಅರ್ಥಾತ್ ಜೀವಿಯ ಮನ ಅಥವಾ ಅಣುಚೈತನ್ಯ) ಕರ್ಮ ವಿಕಾಸವು ನಿಂತು ಹೋಗುವುದು. ಇದರಿಂದ, ಸೃಷ್ಟಿ



ಚಕ್ರದಲ್ಲಿ ಹಾಗೂ ಪ್ರಕೃತಿಯ ನಿಯಮದಲ್ಲಿ ಸ್ವೈರವು ಬಂದು ಸೇರುತ್ತದೆ. ಪ್ರಕೃತಿಯ ನಿಯಮಾನುಸಾರ, ಹುಟ್ಟಿದ ಜಗತ್ತು, ಸ್ಥೂಲದಿಂದ ಸೂಕ್ಷ್ಮದಲ್ಲಿ ಪರಿವರ್ತನವಾಗುತ್ತದೆ, ಮತ್ತು ಸಮಯದ ಪ್ರವಾಹದಲ್ಲಿ ಮನುಷ್ಯನಿಗೆ ತನ್ನ ಸ್ಥೂಲ ಶರೀರವನ್ನು ಒಂದು ದಿನ ತ್ಯಜಿಸಲೇಬೇಕಾಗುತ್ತದೆ. ಅರ್ಥಾತ್ ಅಸಂಖ್ಯ ಅಣು ಚೈತನ್ಯಗಳ ಸಮಷ್ಟಿಯಿಂದ ಸೃಷ್ಟವಾದ ಮಾನವ ದೇಹದಿಂದಲೇ ಒಂದು ದಿನ, ಪೂರ್ಣ ಚೈತನ್ಯದಿಂದ ಕೂಡಿದ ಅಸಂಖ್ಯ ಮಾನವ ದೇಹಗಳ ವಿಕಾಸವಾಗುತ್ತದೆ.

ಅಂದ ಮೇಲೆ, ಮೃತ್ಯುವು ಅವಶ್ಯವಾಗಿ ಬಂದೇ ಬರುವುದು, ಎಲ್ಲರೂ ಒಂದಿಲ್ಲೊಂದು ದಿನ ತಮ್ಮ ದೇಹವನ್ನು ತ್ಯಜಿಸಲೇಬೇಕಾಗುತ್ತದೆ. ಅಣು ಚೈತನ್ಯ ಹಾಗೂ ಮನಗಳು ದೇಹದಿಂದ ಅಗಲುವುದೇ ಮೃತ್ಯುವಿನ ಅರ್ಥವಾಗಿದೆ. ಪ್ರಕೃತಿಯ ಮೂಲಕ ಸೃಷ್ಟವಾದ ಮನವು ಯಾವಾಗಲೂ ಅಣು ಚೈತನ್ಯದೊಂದಿಗೆ ಇರುತ್ತದೆ. ಮಾನವನ ನಾನು–ತನ ಬೋಧೆಯು ಮನದ ಒಂದು ಅಂಶವೇ ಆಗಿದೆ. ಇದರಿಂದ, ಅದು ಮನದ ಜೊತೆಯಾಗಿಯೇ ಇರುತ್ತದೆ. ಮೊದಲೇ ಹೇಳಿದಂತೆ, ಮನವು ದೇಹದಿಂದ ಅಗಲುವುದೇ ಮೃತ್ಯುವಾಗಿದೆ. ಮನದ ಮೃತ್ಯುವೇ ಅಲ್ಲ. ಆದ್ದರಿಂದ, ಮಾನವನ ವೈಯಕ್ತಿಕ ಸತ್ತೆ ಅಂದರೆ ಅವನ ನಾನು ಬೋಧೆಯೂ ಸಹ. ಅಣು ಚೈತನ್ಯದ ಜೊತೆಗೇ ಸಂಲಗ್ನವಾಗಿರುತ್ತದೆ. ಯಾವ ಕ್ಷಣದಲ್ಲಿ ಪ್ರಕೃತಿಯು ಪುರುಷನ ಮೇಲೆ ಗುಣ ಬಂಧನದ ವಿಸ್ತಾರವನ್ನು ಮಾಡಲಾರದೋ, ಹಾಗೂ ಮನದ ಅಸ್ತಿತ್ವವನ್ನು ಶಾಶ್ವತಗೊಳಿಸುವಲ್ಲಿ ಅಸಮರ್ಥವಾಗುವುದೋ, ಅದೇ ಕ್ಷಣದಲ್ಲಿ, ಈ ನಾನುವಿನ ಕೊನೆಯೂ ಸಹ ಆಗುತ್ತದೆ. ಅರ್ಥಾತ್ ವೈಯಕ್ತಿಕ ಜೀವನವು ಲಯಿಸುತ್ತದೆ. ಮತ್ತು ಇದನ್ನೇ ಮುಕ್ತಿ ಎನ್ನುತ್ತಾರೆ.

ಮಾನವನು ತನ್ನ ಮನದ ಮೂಲಕವೇ ಕರ್ಮವನ್ನು ಮಾಡುತ್ತಾನೆ. ಹಾಗೂ ಪ್ರತಿಕರ್ಮವನ್ನು ಭೋಗಿಸುತ್ತಾನೆ. ಮನವೇ ಇಂದ್ರಿಯಗಳ ಮಾಧ್ಯಮದಿಂದ ಮಾನಸಿಕ ಸಂವೇದನೆಯನ್ನು ಸ್ಥೂಲ ಕರ್ಮದಲ್ಲಿ ರೂಪಾಂತರಿಸುತ್ತದೆ. ಮತ್ತು ಸುಖ ಇಲ್ಲವೆ ದುಃಖವನ್ನು ನೀಡುವ ಪ್ರತಿಕ್ರಿಯೆಯನ್ನು ಭೋಗಿಸುತ್ತದೆ. ಮೃತ್ಯುವಿನ ಅರ್ಥವೆಂದರೆ, ಸ್ಥೂಲ ದೇಹದ ಮೃತ್ಯು; ಮನದ ಮೃತ್ಯುವಲ್ಲ. ಮನವು ಕೇವಲ ದೇಹವನ್ನು ತ್ಯಜಿಸುತ್ತದೆ. ಮನವೇ ಸಕಲ ಕಾರ್ಯಗಳ ಕರ್ತಾ ಆಗಿದೆ. ಮೃತ್ಯುವಿನ ಮುಂಚಿನ ಕ್ಷಣದ ವರೆಗೂ, ಅದರ ಮೂಲಕ ಮಾಡಿದ ಕರ್ಮಗಳ ಫಲಭೋಗಕ್ಕಾಗಿ ಅದು

ಉಳಿಯಬೇಕಾಗುವುದರಿಂದ ಅದರ ಅಂತ್ಯವಾಗಲಾರದು. ಅಂದ ಮೇಲೆ, ಕೃತ ಕರ್ಮಗಳ ಫಲವನ್ನು ಭೋಗಿಸುವವರಾರು? ಎಂಬೀ ಪ್ರಶ್ನೆಯೇ ಏಳದು. ಕರ್ಮ ಮಾಡುವ ಮನದ ಮೃತ್ಯುವು ಘಟಿಸದು. ಕರ್ಮಫಲವನ್ನು ಅದುವೇ ಭೋಗಿಸುತ್ತದೆ.

ಕರ್ಮ ಮಾಡಬೇಕಾದರೆ, ಸೂಕ್ಷ್ಮಕ್ಕೆ ಸ್ಥೂಲ ಆಧಾರದ ಸಹಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಸ್ಥೂಲ ಆಧಾರವೇ ಮಸ್ತಿಷ್ಕವಾಗಿದೆ. ಇದರ ಸಹಾಯದಿಂದ ಮನವು ಕರ್ಮ ಮಾಡುತ್ತದೆ. ಮನ ಮತ್ತು ಮಸ್ತಿಷ್ಕಗಳ ಸಂಬಂಧವು ಎಷ್ಟೊಂದು ಘನಿಷ್ಠವಾಗಿದೆಯೆಂದರೆ, ಒಂದು ಇಲ್ಲದೆ ಇನ್ನೊಂದು ಕರ್ಮ ಮಾಡಲಾರದು. ಮೃತ ವ್ಯಕ್ತಿಯ ಮಸ್ತಿಷ್ಕವು ವಿಕೃತವಾಗುತ್ತದೆ. ಆದ್ದರಿಂದ, ಅಲ್ಲಿ ಮನವೂ ಇರಲಾರದು. ಯಾವಾಗ ಯಾವನೊಬ್ಬ ವ್ಯಕ್ತಿಯು ಮೂರ್ಛಿತನಾದರೆ, ಇಲ್ಲವೆ ಸಂಜ್ಞೆ ತಪ್ಪಿಸುವ ಯಾವುದೋ ವಸ್ತುವಿನಿಂದ ಅವನನ್ನು ಕೆಲವು ಸಮಯದ ವರೆಗೆ ಜ್ಞಾನ-ಶೂನ್ಯನನ್ನಾಗಿ ಮಾಡಿದರೆ, ಆ ಕಾಲಕ್ಕೆ ಅವನ ಮಸ್ತಿಷ್ಕವು ಕೆಲವು ಕಾಲಕ್ಕೋಸುಗ ನಿಷ್ಕ್ರಿಯವಾಗುತ್ತದೆ. ಆದ್ದರಿಂದ, ಅದನ್ನು ಆಶ್ರಯಿಸಿದ ಮನವು ಸಹ, ಸ್ಥೂಲ ಆಧಾರದ ನಿಷ್ಕ್ರಿಯತೆಯ ಕಾರಣ, ಯಾವುದೇ ಕರ್ಮವನ್ನು ಮಾಡಲಾರದು. ಈ ಚೇತನಾ ವಿಹೀನ ಅವಸ್ಥೆಯು ಮೃತ್ಯುವಿನ ಅವಸ್ಥೆಯೇನಲ್ಲ. ಆದ್ದರಿಂದ, ಚೈತನ್ಯ ಇಲ್ಲವೆ ಅಣು ಮನವು ದೇಹ ತ್ಯಾಗವನ್ನು ಮಾಡದಿದ್ದರೂ ಸಹ, ಮಸ್ತಿಷ್ಕದ ಸಿಷ್ಕ್ರಿಯತೆಯ ಕಾರಣ, ತಾನೂ ನಿಷ್ಕ್ರಿಯವಾಗುತ್ತದೆ. ಅಂದ ಮೇಲ, ಕರ್ಮವನ್ನು ಮಾಡುವುದಕ್ಕೋಸುಗ ಹಾಗೂ ಕರ್ಮಫಲವನ್ನು ಭೋಗಿಸಲಿಕ್ಕೋಸುಗ, ಮನಕ್ಕೆ ಅವಶ್ಯವಾಗಿ ಮಸ್ತಿಷ್ಕದ ಆಶ್ರಯವನ್ನು ಗ್ರಹಿಸಲೇ ಬೇಕಾಗುತ್ತದೆ. ಮೃತ್ಯುವಿನ ನಂತರ ಮನವು ಸ್ಥೂಲ ದೇಹವನ್ನು ಮತ್ತು ಸ್ಥೂಲ ಆಧಾರವಾದ ಮಸ್ತಿಷ್ಕವನ್ನು ತ್ಯಾಗ ಮಾಡುತ್ತದೆ.ಆದರೆ, ಮೃತ್ಯುವಿಗಿಂತ ಮುಂಚಿನ ಕ್ಷಣದ ವರೆಗೆ ಅದು ಒಂದಿಲ್ಲೊಂದು ಕರ್ಮವನ್ನು ಮಾಡುತ್ತಲೇ ಇರುತ್ತದೆ. ಇದರ ಫಲವನ್ನು ಅದು ಅವಶ್ಯವಾಗಿ ಭೋಗಿಸಲೇಬೇಕಾಗುತ್ತದೆ. ಈ ಕರ್ಮ ಫಲವನ್ನು ಭೋಗಿಸಲಿಕ್ಕೋಸುಗ, ಮತ್ತು ಮಸ್ತಿಷ್ಕವು ಇಲ್ಲದಿರುವಾಗ, ಭೋಗಿಸುವ ಸಂಭವವಿಲ್ಲವಾದುದರಿಂದ, ಮನಕ್ಕೆ ಹೊಸ ಆಧಾರದಲ್ಲಿ ಮರಳಿ ಜನ್ಮವೆತ್ತಬೇಕಾಗುತ್ತದೆ. ಅಣು-ಚೈತನ್ಯದ ಮೇಲೆ ಪ್ರಕೃತಿಯ ಗುಣ ಬಂಧನದ ಫಲವಾಗಿ, ಮನದ ಉತ್ಪತ್ತಿಯಾಗುತ್ತದೆ. ಮತ್ತು ಯಾವ ಕಾರಣದಿಂದ ಇವೆರಡರ ಸಂಪರ್ಕವು ಅಭಿನ್ನವಾಗಿರು



ವುದೋ, ಅದೇ ಕಾರಣದಿಂದ, ಪ್ರಕೃತಿಯ ಮೂಲಕ ಸೃಷ್ಟವಾದ ಮನದೊಂದಿಗೆ ಅಣು ಚೈತನ್ಯದ ನೂತನ ಆಧಾರದ ಆಶ್ರಯವನ್ನು ಗ್ರಹಿಸಬೇಕಾಗುತ್ತದೆ. ಅರ್ಥಾತ್ ಮನಸ್ಸು ಮತ್ತು ಅಣು ಚೈತನ್ಯಗಳೆರಡರ ಪುನರ್ಜನ್ಮವಾಗುತ್ತದೆ. ಪೂರ್ವ ಜನ್ಮದಲ್ಲಿ ಮಾಡಿದ ಕರ್ಮಗಳ ಫಲವನ್ನು ಭೋಗಿಸಲು, ಅವುಗಳಿಗೆ ಪುನರ್ಜನ್ಮವೆತ್ತಬೇಕಾಗುತ್ತದೆ. ಈ ಪ್ರಕಾರ, ಯಾರ ಜನ್ಮವಾಗಿದೆಯೋ, ಅವರ ಮೃತ್ಯುವು ಅವಶ್ಯವಾಗಿ ಆಗುವುದು. ಮತ್ತು ಮೃತ್ಯುವಿನ ನಂತರ ಭೋಗಿಸಲಾರದೆ ಉಳಿದ ಸಂಸ್ಕಾರಗಳನ್ನು ಭೋಗಿಸುವುದಕ್ಕೋಸುಗ, ಪುನರ್ಜನ್ಮವೂ ಸಹ ಅವಶ್ಯವೇ ಆಗಿದೆ. ಅಣು ಚೈತನ್ಯವು ಸ್ಥೂಲದಿಂದ ಸೂಕ್ಷ್ಮದ ಧಾರೆಯ ಚರಮ ಬಿಂದುವಿನ ತನಕ ಕ್ರಮೇಣ ಇದೇ ಜನನ-ಮರಣ ಚಕ್ರದಲ್ಲಿ ತಿರುಗುತ್ತಿರುತ್ತದೆ. ಅಣು ಚೈತನ್ಯವು ಅನಂತ ಕಾಲದ ತನಕವೂ ಈ ಜನನ-ಮರಣ ಚಕ್ರದಲ್ಲಿ ತಿರುಗುತ್ತಿರಬಲ್ಲದು.

ಮೃತ್ಯುವಿನ ನಂತರ ಸ್ಥೂಲ ಆಧಾರವಾದ ಮಸ್ತಿಷ್ಕದ ಅಭಾವದಲ್ಲಿ, ಮನಕ್ಕೆ ಕರ್ಮ ಮಾಡುವ ಸಂಭವವಿರುವುದಿಲ್ಲ. ಆದ್ದರಿಂದ ಮೊದಲು ಮಾಡಿದ ಕರ್ಮಫಲ ಭೋಗಕ್ಕೋಸುಗ ಜನ್ಮವೆತ್ತಬೇಕಾಗುತ್ತದೆ. ಅಂದ ಮೇಲೆ, ಮೃತ್ಯುವಿನ ನಂತರ, ಸ್ವರ್ಗ ಮತ್ತು ನರಕಗಳ ಕಲ್ಪನೆಯು ಪೂರ್ಣವಾಗಿ ತಪ್ಪಾಗಿದೆ. ಮತ್ತು ಮಾಡಿದ ಕರ್ಮಗಳ ಶುಭಾಶುಭ ಕರ್ಮಗಳಿಗಾಗಿ, ಸ್ವರ್ಗ ಸುಖದ ಇಲ್ಲವೆ ನರಕ ಯಾತನೆಯ ಭೋಗದ ಕಲ್ಪನೆಯು ಸಹ, ಪೂರ್ಣವಾಗಿ ತಪ್ಪಾಗಿದೆ. ಏಕೆಂದರೆ, ಪುನರ್ಜನ್ಮವಾಗದಿರುವ ವರೆಗೆ, ಸ್ಥೂಲ ಆಧಾರವಾದ ಮಸ್ತಿಷ್ಕದ ಅಭಾವದಲ್ಲಿ ಸುಖ-ದುಃಖಗಳ ಅನುಭೂತಿಯಾಗುವ ಸಂಭವವೂ ಇಲ್ಲ. ಸ್ವರ್ಗ ಇಲ್ಲವೆ ನರಕಗಳ ಹೆಸರಿನ ಯಾವುದೇ ಬೇರೆ ರಾಜ್ಯವಿಲ್ಲ. ಈ ಮರ್ತ್ಯ ಲೋಕದಲ್ಲಿಯೇ, ಮಾನವನು ತಾನು ಮಾಡಿದ ಶುಭಾಶುಭ ಕರ್ಮಗಳಿಗಾಗಿ, ಸ್ವರ್ಗೀಯ ಸುಖ ಇಲ್ಲವೆ ನಾರಕೀಯ ಯಾತನೆಯನ್ನು ಭೋಗಿಸುತ್ತಿರುತ್ತಾನೆ.

ಪುನರ್ಜನ್ಮದಿಂದ, ಭೂತ-ಪ್ರೇತಗಳ ಹೆಸರಿನ ಏನೊಂದೂ ಇಲ್ಲವೆಂಬ ಮಾತು ಸಹ ಸ್ಪಷ್ಟವಾಗುತ್ತದೆ. ಯುಕ್ತಿ-ತರ್ಕಗಳ ಮೂಲಕ ಪುನರ್ಜನ್ಮ ವಾದವನ್ನು ಒಪ್ಪಿಕೊಳ್ಳುವುದು ಮತ್ತು ಮರಳಿ ಭೂತ ಪ್ರೇತಗಳಲ್ಲಿ ವಿಶ್ವಾಸವಿಡುವುದು, ಇವೆರಡೂ ಪರಸ್ಪರ ವಿರೋಧಿಯಾಗಿವೆ. ಪುನರ್ಜನ್ಮದ ಮಾಧ್ಯಮದಿಂದ ಹೊಸ ಆಧಾರವನ್ನೂ ಮತ್ತು ಮಸ್ತಿಷ್ಕವನ್ನೂ ಪಡೆಯುವ ತನಕ, ವಿದೇಹಿ ಮನಕ್ಕೋಸುಗ ಯಾವುದೇ ಕರ್ಮವನ್ನು ಮಾಡುವ ಇಲ್ಲವೆ

ತನ್ನ ಕೃತ ಕರ್ಮಗಳ ಫಲವನ್ನು ಭೋಗಿಸುವ ಸಂಭವವಿಲ್ಲದ ಕಾರಣ, ಪುನರ್ಜನ್ಮವು ಆಗಿಯೇ ತೀರುವುದೆಂಬ ಮಾತನ್ನು ಯುಕ್ತಿಯ ಆಧಾರದ ಮೇಲೆ ಒಪ್ಪಲೇಬೇಕಾಗುತ್ತದೆ. ಒಂದು ವೇಳೆ, ಮನವು ಮಸ್ತಿಷ್ಕದ ಅನುಪಸ್ಥಿತಿಯಲ್ಲಿ ಕರ್ಮವನ್ನು ಮಾಡಬಲ್ಲದಾದರೆ, ಮೃತ್ಯುವಿನ ನಂತರ ಸಹ, ಅದು ಭೂಮಾ ಚೈತನ್ಯದಲ್ಲಿ ಲೀನವಾಗುವ ಸಾಧನೆಯನ್ನು ಮುಂದುವರಿಸುತ್ತಿತ್ತು. ಆದರೆ, ಮನವು ಎಂದೆಂದೂ ಮಸ್ತಿಷ್ಕದ ಅಭಾವದಲ್ಲಿ ಕರ್ಮವನ್ನು ಮಾಡಲಾರದು. ಮನದ ಈ ವಿಶೇಷ ಧರ್ಮದ ಕಾರಣದಿಂದಾಗಿಯೇ ಪುನರ್ಜನ್ಮವನ್ನು ಒಪ್ಪದಿರಲಾರೆವು. ಮತ್ತು ಇದರಿಂದ, ಭೂತ–ಪ್ರೇತ ಇತ್ಯಾದಿಗಳೂ ಸಹ, ಕಾಲ್ಪನಿಕ ವಸ್ತುಗಳಷ್ಟೇ. ಮರಣದ ಕಾಲಕ್ಕೆ ಅಣು ಚೈತನ್ಯ ಮತ್ತು ಮನಗಳು, ಸ್ಥೂಲ ಆಧಾರವನ್ನು ತ್ಯಾಗ ಮಾಡಿ ಬಿಡುವುದರಿಂದ, ನಿಷ್ಕ್ರಿಯವಾಗುತ್ತವೆ. ಜೀವಂತವಿರುವ ಕಾಲದಲ್ಲಿಯೂ ಸಹ, ಜ್ಞಾನ ಹೀನ ಅವಸ್ಥೆಯಲ್ಲಿ ಮಸ್ತಿಷ್ಕದ ನಿಷ್ಕ್ರಿಯತೆಯ ಕಾರಣ, ಮನವು ಸಹ ಅಷ್ಟು ಸಮಯದವರೆಗೆ ನಿಷ್ಕ್ರಿಯವಾಗಿರುತ್ತದೆ. ಅಚೇತನ ಅವಸ್ಥೆ ಮತ್ತು ಮೃತ್ಯು ಇವೆರಡರಲ್ಲಿ ಇರುವ ಭೇದವೆಂದರೆ ಹೀಗೆ: ಮೊದಲನೆಯದರಲ್ಲಿ,ಮನವು ಸ್ವಲ್ಪ ಕಾಲದವರೆಗೆ ಸ್ತಬ್ಧವಾಗಿರುವುದು ಆದರೆ, ದೇಹತ್ಯಾಗ ಮಾಡದಿರುವುದು; ಇನ್ನು ಎರಡನೆಯದರಲ್ಲಿ, ದೀರ್ಘಕಾಲದ ವರೆಗೆ ಮನವು ಸ್ತಬ್ಧವಾಗುವುದು ಹಾಗೂ ನಿಷ್ಕ್ರಿಯ ಮನವು ದೇಹವನ್ನು ತ್ಯಜಿಸಿ ಹೊರಟು ಹೋಗುವುದು.

ಪುರುಷ ಮತ್ತು ಪ್ರಕೃತಿಯರ ಸಂಬಂಧಗಳು ಕಡಿದೊಗೆಯದಂತಿವೆ. ಆದ್ದರಿಂದ, ಅಣು ಚೈತನ್ಯವು ಸ್ಥೂಲ ದೇಹದ ತ್ಯಾಗವನ್ನು ಮಾಡುತ್ತಿದ್ದಂತೆಯೇ ಪ್ರಕೃತಿಯಿಂದ ಹುಟ್ಟಿದ ಮನವೂ ಸಹ, ದೇಹತ್ಯಾಗ ಮಾಡಿ, ಅಣು ಚೈತನ್ಯದ ಆಶ್ರಯವನ್ನು ಗ್ರಹಿಸುತ್ತದೆ. ಮೃತ್ಯುವಾಗುವುದಕ್ಕಿಂತ ಮುಂಚಿನ ಕಾಲದ ವರೆಗೆ ಮಾಡಿದ ಕರ್ಮಗಳ ಕಾರಣ, ಮನವು ಈ ಅವಸ್ಥೆಯಲ್ಲಿಯೂ ಸಹ ವಿಕೃತವಿರುತ್ತದೆ. ಕರ್ಮಗಳ ಪ್ರತಿಕ್ರಿಯೆಯ ರೂಪದಲ್ಲಿ ಸುಖ ಇಲ್ಲವೆ ದುಃಖವನ್ನು ಭೋಗಿಸಿಯೇ, ಅದು ಸ್ವಾಭಾವಿಕ ಅವಸ್ಥೆಯಲ್ಲಿ ಮರಳಿ ಹೋಗಬಲ್ಲದು. ಮೃತ್ಯುವಾದ ಬಳಿಕ, ಮಸ್ತಿಷ್ಕದ ಅಭಾವದಲ್ಲಿ ಮನವು ನಿಷ್ಕ್ರಿಯವಾಗಿರುತ್ತದೆ. ಮತ್ತು ಇದರಿಂದ ಪ್ರತಿಕರ್ಮದ ಸಂಭಾವ್ಯತೆಯಿಂದ ಕೂಡಿದ ಈ ಮನವು ತಾತ್ಕಾಲಿಕವಾಗಿ ವಿಕೃತ ಅವಸ್ಥೆಯಲ್ಲಿಯೇ ಇರಬೇಕಾಗುತ್ತದೆ. ಪ್ರತಿಕರ್ಮದ ಸಂಭಾವ್ಯತೆಯನ್ನೇ ಸಂಸ್ಕಾರವೆನ್ನುತ್ತಾರೆ. ಮನದ ನಿಷ್ಕ್ರಿಯತೆಯಿಂದ ಸಂಸ್ಕಾರದ ಸ್ಫುರಣೆಯು ತಡೆಹಿಡಿಯಲ್ಪಡುತ್ತದೆ.



ಆದ್ದರಿಂದ ಮಸ್ತಿಷ್ಕದಿಂದೊಡಗೂಡಿದ ಹೊಸ ಆಧಾರದಲ್ಲಿ ಪುನರ್ವಿಕಾಸದ ಸುಸಂಧಿಯು ದೊರೆಯುವ ತನಕ, ಸಂಸ್ಕಾರವು ವಿದೇಹಿ ಆತ್ಮದೊಂದಿಗೇ ಇರುತ್ತದೆ. ಈ ಪ್ರಕಾರ, ಪ್ರತಿಕರ್ಮದ ಸಂಭಾವ್ಯತೆಯ ಪೂರ್ಣ ಸ್ಫುರಣಕ್ಕಾಗಿಯೇ ಪುನರ್ಜನ್ಮದ ಆವಶ್ಯಕತೆ ಇದೆಯೆಂಬುದನ್ನು ಮನಗಾಣಬಹುದಾಗಿದೆ. ಈ ಸ್ಫುರಣವು ಹಾಗೂ ಕರ್ಮಫಲ ಭೋಗವು ಜನ್ಮದೊಂದಿಗೇನೇ ಪ್ರಾರಂಭವಾಗುತ್ತದೆ. ಮೃತ್ಯು ಕಾಲದಲ್ಲಿ ಮನವು ಸಂಕುಚಿತವಾಗಿ, ಬೀಜಾತ್ಮಕ ಅವಸ್ಥೆಯಲ್ಲಿ ಪರಿಣಮಿಸುತ್ತದೆ. ಒಂದು ರಬ್ಬರಿನ ಚೆಂಡಿನೊಂದಿಗೆ ಇದನ್ನು ಉಪಮಿಸಬಹುದಾಗಿದೆ. ಒಂದು ವೇಳೆ, ರಬ್ಬರಿನ ಚೆಂಡನ್ನು ಒಂದು ಇಂಚಿನಷ್ಟು ಒತ್ತಿದರೆ, ಅದರಿಂದ ಯಾವ ತಾತ್ಕಾಲಿಕ ವಿಕೃತಿಯು ಅದರಲ್ಲಿ ಉಂಟಾಗುವುದೋ, ಪ್ರಕೃತಿಯ ನಿಯಮಾನುಸಾರ,ಚೆಂಡಿನಲ್ಲಿ ಆ ವಿಕೃತಿಯಿಂದ ಪಾರಾಗುವುದಕ್ಕಾಗಿ ಒಂದು ಪ್ರಯತ್ನವು ನಡೆಯುತ್ತದೆ. ಅದೇ ಪ್ರಕಾರ, ಜನನ–ಮರಣಗಳೂ ಸಹ, ಮನವನ್ನು ಪ್ರಸಾರಿತ ಮತ್ತು ಆಕುಂಚಿತಗೊಳಿಸುತ್ತವೆ. ಪ್ರತಿಕರ್ಮದ ಮಾಧ್ಯಮದಿಂದ ವಿಕೃತ ಮನವು ತನ್ನ ಸ್ವಾಭಾವಿಕ ಅವಸ್ಥೆಯಲ್ಲಿ ಮರಳಿ ಬರಬಲ್ಲದು. ಆದರೆ, ಪ್ರತಿಕರ್ಮವನ್ನು ಭೋಗಿಸುವುದಕ್ಕಿಂತ ಮುನ್ನವೇ ಮೃತ್ಯುವಾಗುವ ಕಾರಣ, ಆ ಆಧಾರದಲ್ಲಿ ಇದು ಸಂಭವಿಸುವುದಿಲ್ಲ. ಇದುವೇ ಭೋಗಿಸದೆ ಉಳಿದ, ಕರ್ಮ ಫಲ ಭೋಗಗಳ ಬೀಜ. ಬೇರೇ ಶಬ್ದಗಳಲ್ಲಿ ಹೇಳುವುದಾದರೆ, ಸಂಸ್ಕಾರವೇ ವಿದೇಹಿ ಆತ್ಮನ ಆಶ್ರಯವನ್ನು ಹೊಂದುತ್ತದೆ. ಮತ್ತು ಅಭುಕ್ತ ಸಂಸ್ಕಾರಗಳ ಭೋಗಕ್ಕಾಗಿಯೇ ಆತ್ಮನು ಪುನರ್ಜನ್ಮ ಹೊಂದಿ, ಹೊಸ ಆಧಾರದ ಆಶ್ರಯವನ್ನು ಪಡೆಯಬೇಕಾಗುತ್ತದೆ.

ಒಳ್ಳೆಯವೇ ಇರಲಿ; ಕೆಟ್ಟವೇ ಇರಲಿ, ಎಲ್ಲ ಕರ್ಮಗಳೂ ಮನದಲ್ಲಿ ವಿಕೃತಿಗಳನ್ನು ಹುಟ್ಟಿಸುತ್ತವೆ. ಮತ್ತು ಆ ವಿಕೃತಿಗಳಿಂದ ಪಾರುಗಾಣುವ ಹಾದಿಯಲ್ಲಿ ಮಾನವನು ತನ್ನ ಒಳಿತು ಇಲ್ಲವೆ ಕೇಡು ಫಲಗಳನ್ನು ಅವಶ್ಯವಾಗಿಯೇ ಭೋಗಿಸಬೇಕಾಗುತ್ತದೆ. ಮರಣಿಸಿದ ಬಳಿಕ, ಮನವು ಬೀಜ ರೂಪದಿಂದ ಆತ್ಮನ ಆಶ್ರಯವನ್ನು ಗ್ರಹಿಸುತ್ತದೆ. ಮತ್ತು ಇದೇ ಬೀಜಾತ್ಮಕ ಮನದ ಸ್ಫುರಣಕ್ಕಾಗಿ ಆತ್ಮನು ಉಪಯುಕ್ತ ಆಧಾರವನ್ನು ಗ್ರಹಿಸಬೇಕಾಗುತ್ತದೆ. ವಿಶೇಷ ವ್ಯಕ್ತಿಯ ಚಿಕ್ಕ–ದೊಡ್ಡ ಪ್ರತಿಯೊಂದು ಸುಖಾತ್ಮಕ ಅನುಭೂತಿಯೊಂದಿಗೇನೇ ಅವನ ಸಂಚಿತ ಸಂಸ್ಕಾರದ ಒಂದು ಸಾಮಂಜಸ್ಯವಿರುತ್ತದೆ. ಈ ವಿಷಯದಲ್ಲಿ, ಯಾವುದೇ ಕರ್ಮದ ಪ್ರತಿಕರ್ಮವು ನಿರ್ದಿಷ್ಟವಾಗಿ ಇರದು;

ಎಂಬ ಮಾತನ್ನು ತಿಳಿಯಬೇಕು. ಆದರೆ, ವಿಕೃತಿಯಿಂದ ಮುಕ್ತವಾಗುವ ಕಾಲಕ್ಕೆ, ಮಾನವನು, ಮಾನಸಿಕ ಆಳತೆಯಂತೆ, ತಾನು ಮಾಡಿದ ಕರ್ಮಗಳಿಗನುಸರಿಸಿ, ಪ್ರತಿಕರ್ಮವನ್ನು ಭೋಗಿಸಬೇಕಾಗುತ್ತದೆ. ಎಂದೂ ಹೇಳಬಹುದಾಗಿದೆ. ಉದಾಹರಣೆಗೆ ನೋಡಿರಿ. ಒಂದು ವೇಳೆ, ಒಬ್ಬ ವ್ಯಕ್ತಿಯು ಕಳವು ಮಾಡಿದರೆ, ಪ್ರತಿಕರ್ಮ ರೂಪದಲ್ಲಿ ಅಷ್ಟೇ ಬೆಲೆಯ ಅವನ ವಸ್ತುವಿನ ಕಳವೇ ಆಗುವುದೆಂಬುದೇನೂ ನಿಶ್ಚಿತವಿಲ್ಲ. ಚೌರ್ಯ ಕರ್ಮದ ಮೂಲಕ ಎರಡನೆಯವರ ಮನದಲ್ಲಿ ಎಷ್ಟು ಕ್ಲೇಶವನ್ನು ಉಂಟುಮಾಡಿದನೋ, ಅಷ್ಟೇ ಕ್ಲೇಶವನ್ನು ಅಪರಾಧಿಯು ಮಾನಸಿಕ ಆಳತೆಗನುಸಾರ ಭೋಗಿಸಬೇಕಾಗುತ್ತದೆ. ಆದ್ದರಿಂದ, ಕರ್ಮದ ವಿಷಯದಲ್ಲಿ ಎಲ್ಲಕ್ಕಿಂತ ದೊಡ್ಡ ಮಾತೆಂದರೆ, ಆ ಕರ್ಮದ ಮೂಲಕ ಮಾನಸಿಕ ಆಳತೆಯಲ್ಲಿ ಯಾರಿಗೆ, ಎಷ್ಟು, ನೋವು ಇಲ್ಲವೆ ನಲಿವು ನೀಡಿದ್ದಾನೆ; ಎಂಬುದು. ಕರ್ಮ ಮಾಡಿದವನಿಗೆ ತಾನು ಮಾಡಿದ ಪ್ರತಿಯೊಂದು ಕರ್ಮದ ಫಲಭೋಗವನ್ನು ಸರಿಯಾಗಿ ಅದೇ ರೂಪದಲ್ಲಿ ಮಾಡಬೇಕಾಗುತ್ತದೆ. ಇದರಿಂದ ಯಾರೊಬ್ಬರೂ ತಪ್ಪಿಸಿಕೊಳ್ಳಲಾರರು. ಮೃತ್ಯುವಿನ ನಂತರ ಅಣು ಚೈತನ್ಯಕ್ಕಾಗಿ, ಹೊಸ ಆಧಾರದ ನಿಶ್ಚಯವೂ ಸಹ,ಇದೇ ಆಧಾರದ ಮೇಲೆಯೇ ಆಗುತ್ತದೆ. ಅರ್ಥಾತ್ ಅಣು ಚೈತನ್ಯ ಹಾಗೂ ಅದರ ಬೀಜಾತ್ಮಕ ಸಂಸ್ಕಾರಗಳು, ಅನಾಯಾಸವಾಗಿ ಯಾವುದೇ ಆಧಾರವನ್ನು ಗ್ರಹಿಸಲಾರವು. ಏಕೆಂದರೆ, ಹೀಗಾಗುವುದರಿಂದ ಸಂಸ್ಕಾರದ ಸ್ಫುರಣವಾಗಲಾರದು.

ಈಗ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ–ಅಣು ಚೈತನ್ಯ ಹಾಗೂ ಅದರೊಂದಿಗೆ ಸಂಬಂಧಿಸಿದ ಸಂಸ್ಕಾರಗಳಿಗಾಗಿ ಆಧಾರವನ್ನು ಆಯ್ಕೆ ಮಾಡುವವರು ಯಾರು? ಸಾಕ್ಷೀ ಸತ್ತೆಯಾದ ಅಣು ಚೈತನ್ಯನು ತಾನೇ ಯಾವ ಕರ್ಮವನ್ನೂ ಮಾಡಲಾರನು. ಮತ್ತು ಬೀಜಾತ್ಮಕ ಮನವು ಸಹ, ನಿಷ್ಕ್ರಿಯ ಅವಸ್ಥೆಯಲ್ಲಿ ಇರುತ್ತದೆ. ಮೊದಲೇ ಹೇಳಿದಂತೆ, ಮಾನವನು ಪ್ರಕೃತಿಯ ನಿಯಮಾನುಸಾರ, ಪ್ರತಿಕರ್ಮವನ್ನು ಭೋಗಿಸುತ್ತಾನೆ. ಆದ್ದರಿಂದ, ನಮ್ಮ ಭೋಗಿಸದೆ ಉಳಿದ ಪ್ರತಿಕರ್ಮಗಳನ್ನು ಭೋಗಿಸುವಲ್ಲಿ ಸಹ, ಪ್ರಕೃತಿಯೇ ಕಾರಕ ಸತ್ತೆಯಾಗಿದೆ. ಅರ್ಥಾತ್, ಪ್ರಕೃತಿಯ ನಿಯಮಾನುಸಾರವಾಗಿಯೇ ಪುನರ್ಜನ್ಮವಾಗುತ್ತದೆ ಹಾಗೂ ಸಂಸ್ಕಾರದ ಸ್ಫುರಣವಾಗುತ್ತದೆ. ಆದ್ದರಿಂದ, ಮರಣಾ ನಂತರ, ಪ್ರಕೃತಿಯೇ ಸಂಸ್ಕಾರಕ್ಕೆ ಅನುಸರಿಸಿ, ಕ್ಷೇತ್ರವನ್ನು ಆಯ್ಕೆ ಮಾಡುತ್ತದೆ. ಈ ಕ್ಷೇತ್ರದ ಆಯ್ಕೆಯು ಒಂದು ದಿನದಲ್ಲಾದರೂ ಆಗಬಹುದು. ಇಲ್ಲವೆ ಲಕ್ಷ ಲಕ್ಷ ವರ್ಷಗಳೂ ಇದಕ್ಕೆ ಹಿಡಿಯಬಹುದು. ಉಪಯುಕ್ತ



ಕ್ಷೇತ್ರವು ಸಿಕ್ಕದಿದ್ದರೆ, ಪ್ರತಿಕರ್ಮದ ಬೀಜವು ಆಧಾರವನ್ನು ಗ್ರಹಿಸಲಾರದು. ಆದ್ದರಿಂದ, ಮೃತ್ಯುವಿನ ನಂತರ, ಯಾವಾಗ, ಇನ್ನೆಲ್ಲಿಯೋ ಜನ್ಮವಾಗುವುದೆಂಬುದನ್ನು ಹೇಳಲಾರೆವು. ಈ ನಿಖಿಲ ವಿಶ್ವದಲ್ಲಿ ಜೀವಿಗಳಿಗೆ ವಾಸ ಯೋಗ್ಯವಾದ ಅಸಂಖ್ಯ ಗ್ರಹ ನಕ್ಷತ್ರಗಳಲ್ಲಿ, ಯಾವುದೊಂದರಲ್ಲಿ ಸಹ ಅಣು ಚೈತನ್ಯವು ತನ್ನ ಉಪಯುಕ್ತ ಆಧಾರವನ್ನು ಪಡೆಯಬಲ್ಲದು. ಅಂದ ಮೇಲೆ, ಮೃತ್ಯುವಿನ ನಂತರ ಮರಳಿ ಇದೇ ಪೃಥ್ವಿಯ ಮೇಲೆ, ಜನ್ಮವಾಗುವುದೆಂಬುದು ನಿಶ್ಚಿತವಿಲ್ಲ. ಯಾರ ಪೂರ್ವ ಕೃತ ಕರ್ಮಗಳು ಈ ಪೃಥ್ವಿಯ ಮೇಲೆ ಜನ್ಮ ತಾಳಲು ಅನುಕೂಲವಾಗಿವೆಯೋ, ಅವರು ಮಾತ್ರ ಇಲ್ಲಿ ಜನ್ಮ ತಾಳುತ್ತಾರೆ. ಪ್ರತಿಕರ್ಮ ಭೋಗದೊಂದಿಗೆ ಮಾನವನು ಅಭ್ಯಾಸ ಮೂಲಕ ಕರ್ಮವನ್ನೂ ಮಾಡುತ್ತಿರುತ್ತಾನೆ. ಪೂರ್ವಕೃತ ಕರ್ಮ ಫಲ ಭೋಗಕ್ಕೆ ಅದೃಷ್ಟವೆನ್ನುತ್ತಾರೆ. ಪೂರ್ವಜನ್ಮದ ಸಂಚಿತ ಸಂಸ್ಕಾರಕ್ಕೆ ಅನುಸರಿಸಿ, ಮಾನವನು ತನ್ನ ಮನದಲ್ಲಿ, ಯಾವಾಗ ಸುಖ ಇಲ್ಲವೆ ದುಃಖವನ್ನು ಹೊಂದುವನೋ, ಆ ಕಾಲಕ್ಕೆ ನೆನಪು ಕಡಿಮೆ ಇರುವ ಕಾರಣ, ಅವನು ಈ ಎಲ್ಲ ಅನುಭೂತಿಗಳ ಕಾರಣವನ್ನು ಹುಡುಕಿ ತೆಗೆಯುವ ಸಂಭವವಿಲ್ಲ. ಆದ್ದರಿಂದ ಅದಕ್ಕೆ ಭಾಗ್ಯ ಇಲ್ಲವೆ ಅದೃಷ್ಟವೆನ್ನುತ್ತಾರೆ. ಮಾನವನು ತನ್ನ ದುಃಖಗಳಿಗಾಗಿ ಭಗವಾನನಿಗೆ ದೋಷ ಕೊಡಬೇಕಾಗಿಲ್ಲ. ಆದರೆ, ವಾಸ್ತವದಲ್ಲಿ ಕರ್ಮಗಳ ಕರ್ತಾನ ರೂಪದಲ್ಲಿ, ಅವನು ತಾನೇ ತನ್ನ ಭಾಗ್ಯ ಇಲ್ಲವೆ ಅದೃಷ್ಟವನ್ನು ನಿಯಂತ್ರಿಸುತ್ತಾನೆ. ಇದಕ್ಕಾಗಿ ಭಗವಾನನಿಗೆ ದೋಷ ಹೊರಿಸುವುದು ಅರ್ಥ ಹೀನವಾಗಿದೆ.

ಭಾಗ್ಯ ಇಲ್ಲವೆ ಅದೃಷ್ಟದ ಕರ್ತಾ ಇಲ್ಲವೆ ದ್ರಷ್ಟಾ ಆಗುವ ಸಂಬಂಧದಿಂದ ಮಾನವನು ಅವಶ್ಯವಾಗಿಯೇ ಅದರ ಫಲವನ್ನು ಭೋಗಿಸಬೇಕಾಗುತ್ತದೆ. ಅರ್ಥಾತ್ ಪ್ರತಿಯೊಂದು ಒಳ್ಳೆಯ ಮತ್ತು ಕೆಟ್ಟ ಕರ್ಮಗಳಿಗಾಗಿ, ಅವನೇ ಒಳ್ಳೆಯ ಇಲ್ಲವೆ ಕೆಟ್ಟ ಫಲಗಳನ್ನು ಭೋಗಿಸಬೇಕಾಗುತ್ತದೆ. ಇದುವೇ ಪ್ರಕೃತಿಯ ಬದಲಾಗದ ನಿಯಮವಾಗಿದೆ. ಯಾವುದೇ ಕ್ಷೇತ್ರದಲ್ಲಿಯೂ ಇದರಿಂದಾವ ಬಿಡುಗಡೆಯಾಗಲಾರದು.

೬

# ಈ ಜಗತ್ತಿನಲ್ಲಿ ಮಾನವನು ಹೇಗಿರಬೇಕು?

ಚೈತನ್ಯದ ಪೂರ್ಣ ಅಭಿವ್ಯಕ್ತಿಯ ಕಾರಣ, ಮಾನವನು ಒಳಿತು ಕೇಡುಗಳನ್ನು ಅರಿತು ಸ್ವತಂತ್ರವಾಗಿ ಕರ್ಮ ಮಾಡಬಲ್ಲನು. ಒಳಿತು ಕೇಡುಗಳು ಆಪೇಕ್ಷಿಕ ವಿಷಯಗಳಾಗಿವೆ. ಒಳಿತು ಯಾವುದು? ಮತ್ತು ಕೆಟ್ಟದ್ದೆಂದು ಯಾವುದಕ್ಕೆ ಕರೆಯುತ್ತಾರೆ? ಇದನ್ನು ವಿಚಾರಪೂರ್ವಕವಾಗಿ ನೋಡಬೇಕು.

ಸಗುಣ ಬ್ರಹ್ಮನು ತನ್ನ ಪ್ರತಿಯೊಂದು ಅಣುವನ್ನು ತನ್ನ ಸಮಾನ ಮುಕ್ತ ಪುರುಷನನ್ನಾಗಿಸುವ ಮಹಾ ಉದ್ದೇಶದಿಂದ ಜಗತ್ತಿನ ಸೃಷ್ಟಿಯನ್ನು ಮಾಡಿದನು. ಆದ್ದರಿಂದ, ಸ್ಥೂಲದಿಂದ ಸೂಕ್ಷ್ಮದತ್ತಣ ಧಾರಾ ಪ್ರವಾಹದ ಕೊನೆಯ ಹಂತದಲ್ಲಿ ಬಹು ಅಣುಗಳಿಂದ ಕೂಡಿದ ಚೈತನ್ಯಪೂರ್ಣ ಮಾನವನ ಆವಿರ್ಭಾವವಾಯಿತು. ಸೃಷ್ಟಿಯ ವಿಕಾಸದ ಕ್ರಮದಲ್ಲಿ ಸೂಕ್ಷ್ಮದ ದಿಶೆಯಲ್ಲಿ ಹೇಗೆ ಮುನ್ನಡೆಯುವನೋ ಹಾಗೆ, ಅಣು ಚೈತನ್ಯನ ಮೇಲೆ ಪ್ರಕೃತಿಯ ಪ್ರಭಾವವು ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆ. ಉದಾಹರಣೆ ನೋಡಿರಿ: ಮಾನವೀಯ ಚೈತನ್ಯದ ಮೇಲೆ ಪ್ರಕೃತಿಯ ಪ್ರಭಾವವು ಪಶು ಚೈತನ್ಯಕ್ಕಿಂತಲೂ ತುಲನಾತ್ಮಕವಾಗಿ ಕಡಿಮೆಯಿರುತ್ತದೆ. ಪ್ರಕೃತಿಯ ಪ್ರಭಾವದಲ್ಲಿ ಈ ಪ್ರಕಾರದ ಕಡಿಮೆ ಇಲ್ಲವೆ ಹೆಚ್ಚು ಮೊತ್ತವು ಅವಶ್ಯವಾಗಿಯೇ ಸಗುಣ ಬ್ರಹ್ಮನ ಇಚ್ಛೆಯಿಂದಾಗುತ್ತವೆ. ಈ ವಿಷಯದಲ್ಲಿ ಪ್ರಕೃತಿ ಮತ್ತು ಪುರುಷರಲ್ಲಿ, ಸೃಷ್ಟಿಯ ಆದಿಯಲ್ಲಿಯೇ, ಯಾವುದೋ ತಿಳಿವಳಿಕೆಯಾಗಿದೆ. ಇಲ್ಲವಾದರೆ, ಪ್ರಕೃತಿಯು, ತಾನು ಯಾವ ಪುರುಷನ ವಿಶೇಷತೆಯಾಗಿದೆಯೋ ಆ ಪುರುಷನ ಮೇಲೆ, ಸಾಕಷ್ಟು ಶಕ್ತಿಯಿಂದ ಗುಣಬಂಧನವನ್ನು ವಿಸ್ತರಿಸುತ್ತದೆ; ಮತ್ತು ಪುರುಷನನ್ನು ತನ್ನ ಗುಣ ಬಂಧನದಿಂದ ಎಂದೆಂದಿಗೂ ಬಿಡುಗಡೆಯಾಗಗೊಡುವುದಿಲ್ಲ.



ಸೃಷ್ಟಿಯ ಸೂಕ್ಷ್ಮಾಭಿಮುಖಿ ಗತಿಯಲ್ಲಿ ಪುರುಷನ ಮೇಲೆ ಪ್ರಕೃತಿಯ ಬಂಧನವು ಶಿಥಿಲವಾದ ಮೇಲೂ ಸಹ ಸೃಷ್ಟಿಯ ಲಯವಾಗುವುದಿಲ್ಲ. ಇದರಿಂದ, ಪುರುಷನು ಪ್ರಕೃತಿಯ ಬಂಧನದ ಸೀಮೆಯಲ್ಲಿ ಉಳಿಯುತ್ತಾನೆ. ಒಂದು ವೇಳೆ, ಈ ಅವಸ್ಥೆಯಲ್ಲಿ ಯಾವುದೊಂದು ವಿಕಸಿತ ಚೈತನ್ಯ ಸತ್ತೆಯು ಸ್ವತಂತ್ರವಾಗಿ ಕರ್ಮ ಮಾಡುತ್ತಿದ್ದರೆ, ಅದನ್ನು ದಂಡಿಸುವುದು ಪ್ರಕೃತಿಯ ಸ್ವಾಭಾವಿಕ ಧರ್ಮವಾಗಿದೆ. ದಂಡದ ಫಲವಾಗಿ ಅಣುಚೈತನ್ಯದ ಸೂಕ್ಷ್ಮಾಭಿಮುಖಿ ಗತಿಯು ಸ್ವಲ್ಪ ಸಮಯದ ವರೆಗೆ ನಿಂತು ಬಿಡುತ್ತದೆ. ಎಲ್ಲಿ ಚೈತನ್ಯದ ಪ್ರಕಾಶವು ಹೆಚ್ಚಾಗಿದೆಯೋ, ಅಲ್ಲಿ ಪ್ರಕೃತಿಯ ಪ್ರಭಾವವು ತುಲನಾತ್ಮಕವಾಗಿ ಕಡಿಮೆ ಇರುತ್ತದೆ. ಒಂದು ವೇಳೆ, ಅಣುವಿಗಾಗಿ ಚೈತನ್ಯದ ವ್ಯಾಪಕತೆಯನ್ನು ವಿಸ್ತರಿಸುವ ಸಂಭವವಿದ್ದರೆ, ಸೂಕ್ಷ್ಮದ ದಿಶೆಯತ್ತ ಅದರ ಯಾತ್ರೆಯು ಹೆಚ್ಚು ಸುಗಮ ಮತ್ತು ಹೆಚ್ಚು ತ್ವರಿತವಾಗುತ್ತದೆ. ಅಂದ ಮೇಲೆ, ಪ್ರಕೃತಿಯ ವಿರುದ್ಧ ಆಚರಿಸದೆ, ಯಾವ ಕರ್ಮಗಳ ಮೂಲಕ ಚೈತನ್ಯದ ವಿಕಾಸವು ಹೆಚ್ಚಾಗುವುದೋ, ಆ ಕರ್ಮಗಳ ಅನುಶೀಲನೆ ಮಾಡುವುದು ಉತ್ತಮ ಕರ್ಮವೆಂದು ಹೇಳಬಹುದು. ಪ್ರಕೃತಿಯ ನಿಯಮಗಳ ಅನುಶೀಲನೆ ಮಾಡುವುದು ಹಾಗೂ ಪ್ರಕೃತಿಯ ನಿರ್ದೇಶನಗಳಿಗೆ ಅನುಸಾರವಾಗಿ ಕರ್ಮಗಳನ್ನು ಮಾಡುವುದರಿಂದ ಕರ್ಮಫಲ ಭೋಗದಿಂದ ಬಿಡುಗಡೆ ಪಡೆಯಬಹುದು. ಮತ್ತು ಚೈತನ್ಯದ ವ್ಯಾಪಕ ವಿಕಾಸಕ್ಕೋಸುಗ ಪ್ರಯತ್ನ ಮಾಡಿ, ಪ್ರಕೃತಿಯ ಬಂಧನ ಶಕ್ತಿಯನ್ನು ಶಿಥಿಲಗೊಳಿಸಬಹುದು. ಮತ್ತು ಇದರಿಂದಾಗಿಯೇ ಮಾನವನಿಗೆ ಪರಮ ಪದದ ಪ್ರಾಪ್ತಿಯು ಸಹ ಶೀಘ್ರವಾಗಿ ಆಗುತ್ತದೆ. ಇಂಥ ಕರ್ಮವನ್ನು ಉತ್ತಮ ಕರ್ಮ ಹಾಗೂ ವಿವೇಕ ಮತ್ತು ವೈರಾಗ್ಯಗಳಿಂದ ಕೂಡಿದ ವಿದ್ಯಾಮಾಯೆ ಎನ್ನುತ್ತಾರೆ.

ಸರ್ವ ಸಾಮಾನ್ಯವಾಗಿ ರೂಢಿಯಲ್ಲಿರುವ ಅರ್ಥದ ಮೇರೆಗೆ, ವೈರಾಗ್ಯದ ಅರ್ಥವು ಸಾಂಸಾರಿಕ ಆಸಕ್ತಿಯಿಂದ ರಹಿತವಾದ ತಪಸ್ಯೆಯ ಕಷ್ಟ ಹಾಗೂ ಕಠೋರ ಆತ್ಮ ನಿಗ್ರಹದ ಮೂಲಕ ಇರುವ ಪದ್ಧತಿ ಎಂದು ತಿಳಿಯಲಾಗುತ್ತಿದೆ. ಆದರೆ, ವಾಸ್ತವದಲ್ಲಿ ವೈರಾಗ್ಯಕ್ಕೆ ಈ ಅರ್ಥವೇನೂ ಇಲ್ಲ. ವೈರಾಗ್ಯದ ಮೂಲಕ, ಮಾನವನು ವಸ್ತುವಿನ ಯೋಗ್ಯ ಬಳಕೆಯನ್ನು ಕಲಿಯುತ್ತಾನೆ ಮತ್ತು ಮನವನ್ನು ಜಡದ ನಿಯಂತ್ರಣದಿಂದ ಮುಕ್ತಗೊಳಿಸುತ್ತಾನೆ. ಉದಾಹರಣೆಗೆ ನೋಡಿರಿ: ಮಾದಕ ದ್ರವ್ಯವು ಮನಸ್ಸು ಮತ್ತು ಶರೀರಗಳೆರಡಕ್ಕೂ ಒಂದು ಉತ್ತೇಜಕ ವಸ್ತುವಾಗಿದೆ. ಇದರಿಂದ, ಉತ್ತೇಜನವಾಗುವುದರಿಂದ,

ಇದರ ಬಳಕೆಯು ಅವಶ್ಯವಾಗಿ ತ್ಯಾಜ್ಯವಾಗಿದೆ. ಆದರೆ, ಚಿಕಿತ್ಸಕನ ನಿರ್ದೇಶನೆಗೆ ಅನುಸರಿಸಿ ರೋಗದಿಂದ ಬಿಡುಗಡೆ ಪಡೆಯಲೋಸುಗ ಔಷಧಿಯ ರೂಪದಲ್ಲಿ ಇದನ್ನು ಬಳಸುವುದರಲ್ಲಿ ಯಾವುದೇ ದೋಷವಿಲ್ಲ. ಅಂದ ಮೇಲೆ, ಒಂದೇ ಮಾದಕ ದ್ರವ್ಯವು ಬಳಕೆಗೆ ಅನುಸರಿಸಿ, ಎಲ್ಲಿಯೋ ಉತ್ತೇಜಕವಾಗುಗತ್ತದೆ. ಮತ್ತೆಲ್ಲಿಯೋ ರೋಗದಿಂದ ಪಾರುಮಾಡುವಂಥದಾಗುತ್ತದೆ. ಔಷಧಿಯ ರೂಪದಲ್ಲಿ ಇದರ ಬಳಕೆಯು ಯೋಗ್ಯ ಬಳಕೆಯಾಗಿದೆ. ಮತ್ತು ಇದರಿಂದ ಮಾನವನು ಅದರ ವಶದಲ್ಲಿ ಬೀಳುವುದಿಲ್ಲ. ವಸ್ತುವಿನ ಈ ಪ್ರಕಾರದ ಸರಿಯಾದ ಬಳಕೆಯೇ ವೈರಾಗ್ಯವಾಗಿದೆ. ಸರಿಯಾದ ಬಳಕೆಯ ಪುನರಾವೃತ್ತಿಯಿಂದ ಮಾನವನ ಮನವು ವಸ್ತುವಿನ ದಾಸನಾಗುವದಿಲ್ಲ. ಪ್ರತಿಯಾಗಿ, ವಸ್ತುವನ್ನು ಕುರಿತು ಮನಸ್ಸು ಅನಾಸಕ್ತವಾಗಿಯೇ ಉಳಿಯುತ್ತದೆ. ನಿಸ್ಪೃಹತೆಯ ಬುದ್ಧಿ ಹಾಗೂ ವಸ್ತುವಿನ ಬಗೆಗೆ ಅನಾಸಕ್ತವಾಗಿ ಉಳಿಯುವ ಅಭ್ಯಾಸದಿಂದ ಮಾನವನ ಮನವು ಸೂಕ್ಷ್ಮವಾಗುತ್ತದೆ. ಸೂಕ್ಷ್ಮತೆಯ ವಿಕಾಸದ ಅರ್ಥವೆಂದರೆ, ಪ್ರಕೃತಿಯ ಪ್ರಭಾವವು ಕಡಿದೆಯಾಗುವುದು ಮತ್ತು ಇದೇ ಪ್ರಕೃತಿಯ ಪ್ರಭಾವದಿಂದ ಮುಕ್ತನಾಗುವ ಹಾದಿಯಲ್ಲಿ ಮಾನವನು ಮುಕ್ತಿಯ ದಿಶೆಯಲ್ಲಿ ಒಂದೊಂದು ಹೆಜ್ಜೆಯನ್ನು ಮುಂದಿಡುವದೇ ಆಗಿದೆ.

ವಿವೇಕವು ಒಳಿತು ಕೇಡುಗಳ ಪಾರ್ಥಕ್ಯವನ್ನು ತಿಳಿಸುತ್ತದೆ. ಉತ್ತೇಜಕ ವಸ್ತುವಿನ ರೂಪದಲ್ಲಿ ಮದ್ಯದ ಬಳಕೆಯ ಕೆಟ್ಟ ಫಲ ಹಾಗೂ ಔಷಧ ರೂಪದಲ್ಲಿ ಮದ್ಯದ ಬಳಕೆಯ ಒಳ್ಳೆಯ ಫಲಗಳ ವಿಚಾರವನ್ನು ವಿವೇಕವೇ ಮಾಡುತ್ತದೆ. ವಿವೇಕದ ಸಹಾಯದಿಂದಲೇ, ಮನವು ಯಾವುದೊಂದು ವಸ್ತುವಿನ ಬಳಕೆಯ ಒಳ್ಳೆಯ ಫಲವನ್ನು ತಿಳಿದುಕೊಳ್ಳುತ್ತದೆ. ಇದರಿಂದ ಮುಕ್ತಿ ಪಡೆಯುವಲ್ಲಿ ಸಹಾಯಕವಾದ ವೈರಾಗ್ಯದ ಅನುಶೀಲನೆಗಾಗಿ ವಿವೇಕವು ಆವಶ್ಯವಾಗಿದೆ. ಈ ಪ್ರಕಾರ, ನಾವು ಕೇವಲ ವಿವೇಕ ಮತ್ತು ವೈರಾಗ್ಯಗಳ ಮೂಲಕ ಸಮರ್ಥಿಸಲ್ಪಟ್ಟ ಕರ್ಮಗಳೇ ಸತ್ಕರ್ಮ ಇಲ್ಲವೆ ವಿದ್ಯಾಮಾಯೆ ಆಗಿರುವದನ್ನು ಕಾಣುತ್ತೇವೆ.

ಕೆಟ್ಟ ಕರ್ಮ ಇಲ್ಲವೆ ಅವಿದ್ಯಾ ಮಾಯೆಯು ಸರಿಯಾಗಿ ಇದಕ್ಕೆ ವಿಪರೀತವಾಗಿದೆ. ಯಾವ ಕರ್ಮವು ಚೈತನ್ಯದ ವಿಕಾಸವನ್ನು ಸೀಮಿತಗೊಳಿಸುವದೋ, ಹಾಗೂ ಪ್ರಕೃತಿಯ ನಿಯಮದ ವಿರುದ್ಧದ ಆಚರಣೆಯಲ್ಲಿ ಪ್ರವೃತ್ತಗೊಳಿಸುವದೋ, ಅದನ್ನು ಕೆಟ್ಟ ಕರ್ಮವೆಂದು ಕರೆಯಬಹುದಾಗಿದೆ. ಅಣು ಚೈತನ್ಯದ ಕ್ರಮ ವಿಕಾಸದ ಅರ್ಥವೆಂದರೆ, ಮನದ ಸೂಕ್ಷ್ಮತ್ವ ಪ್ರಾಪ್ತಿಯೊಂದಿಗೇನೇ ಚೈತನ್ಯದ ಸೃಷ್ಟಿ ಇಲ್ಲವೆ ವ್ಯಾಪಕ ರೂಪದ ವಿಕಾಸವಾಗಿದೆ.



ಸೂಕ್ಷ್ಮಾಭಿಮುಖೀ ಗತಿಯು ಹೆಚ್ಚಳದೊಂದಿಗೇನೇ ಮನದಲ್ಲಿ ಸೂಕ್ಷ್ಮತ್ವದ ಪ್ರಾಪ್ತಿಯ ಪ್ರವೃತ್ತಿಯು ಜಾಗ್ರತವಾಗುತ್ತದೆ. ಆಗ ತಾನೇ ಅಣು ಚೈತನ್ಯದ ಈ ಕ್ರಮ ವಿಕಾಸವು ಸಂಭವಿಸುತ್ತದೆ. ವ.ನವು ಜಡದೊಂದಿಗ ಸಂಬಂಧ ಹೊಂದುವದರಿಂದ, ಪ್ರಕೃತಿಯ ಬಂಧನವು ದೃಢವಾಗುತ್ತದೆ. ಮತ್ತು ಚೈತನ್ಯದ ಪ್ರಕಾಶವು ಅಸ್ಪಷ್ಟವಾಗುತ್ತದೆ. ಈ ಅವಸ್ಥೆಯಲ್ಲಿ ಚೈತನ್ಯದ ಸ್ವಾಭಾವಿಕ ಸೂಕ್ಷ್ಮಾಭಿಮುಖೀ ಗತಿಯೂ ಸಹ ನಿಲ್ಲದಿರಲಾರದು. ಏಕೆಂದರೆ, ಪ್ರಕೃತಿಯು ತಾನು ಇಚ್ಛಿಸದಿರುವ ಕರ್ಮಗಳಿಗೋಸುಗ ಪುರುಷನಿಗೆ ದಂಡ ನೀಡುತ್ತದೆ. ಮತ್ತು ಇದರಿಂದಾಗಿಯೇ ಅವನು ಅದೇ ಧಾರೆಯಲ್ಲಿ ಪುನಃ ನಿಲ್ಲದೆ ಮುನ್ನಡೆಯುವ ಸಂಭವವು ಇರುವುದಿಲ್ಲ. ಇದರಿಂದ, ಪುರುಷನು ಸೂಕ್ಷ್ಮತ್ವವನ್ನು ಸಂಪಾದಿಸುವುದು ಸಹ, ತಾತ್ಕಾಲಿಕ ರೂಪದಿಂದ ನಿಂತು ಹೋಗುತ್ತನೆ. ಜಡ ವಸ್ತುವಿನತ್ತ ಮನವು ಆಕರ್ಷಿತವಾಗುವುದು ಅವಿದ್ಯಾ ಮಾಯೆಯಾಗಿದೆ. ಮತ್ತು ಈ ಅವಿದ್ಯಾಮಾಯೆಂಯೇ ಷಟ್‌ರಿಪು ಮತ್ತು ಅಷ್ಟ ಪಾಶಗಳ ಸ್ರಷ್ಟಾ ಆಗಿದೆ, ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳು ಷಟ್‌ರಿಪುಗಳಾಗಿವೆ, ಹಾಗೆಯೇ ಘೃಣಾ, ಶಂಕೆ, ಭಯ, ಲಜ್ಜೆ, ಜುಗುಪ್ಸೆ, ಕುಲ,ಶೀಲ ಮತ್ತು ಮಾನಗಳು ಅಷ್ಟ ಪಾಶಗಳಾಗಿವೆ. 'ರಿಪು' ಇದರ ಅರ್ಥವೆಂದರೆ, ಶತ್ರು.ಆದ್ದರಿಂದ, ಷಟ್‌ರಿಪು ಎಂದರೆ,ಆರು ಶತ್ರುಗಳು ಎಂದರ್ಥ. ಇವುಗಳೆಲ್ಲವೂ ಮಾನವನ ಮನವನ್ನು ಜಡದತ್ತ ಸೆಳೆಯುತ್ತವೆ. ಮತ್ತು ಸೂಕ್ಷ್ಮದ ದಿಶೆಯ ಗತಿಯನ್ನು ತಡೆದು ಶತ್ರುವಿನಂತೆ ಕಾರ್ಯ ಮಾಡುತ್ತವೆ. ಇದರಿಂದ ಇವೆಲ್ಲವೂ ಶತ್ರುಗಳಾಗಿವೆ. ಇನ್ನು ಅಷ್ಟ ಪಾಶದ ಅರ್ಥವೆಂದರೆ, ಎಂಟು ಬಂಧನಗಳು. ಬದ್ಧ ಅವಸ್ಥೆಯಲ್ಲಿ ಮಾನವನಲ್ಲಿ ತಿರುಗಾಡುವ ಶಕ್ತಿಯು ಇರುವುದಿಲ್ಲ. ಅಷ್ಟ ಪಾಶಗಳು ಮಾನವನ ಮೇಲೆ ಬಂಧನ ಶಕ್ತಿಯನ್ನು ವಿಸ್ತರಿಸುತ್ತವೆ; ಮತ್ತು ಅವನ ಮುನ್ನಡೆಯನ್ನು ತಡೆಯುತ್ತವೆ.

ಸೃಷ್ಟಿಯ ನಿಯಮಕ್ಕೆ ಅನುಸರಿಸಿ, ಮಾನವನ ಸ್ವಾಭಾವಿಕ ಗತಿಯು ಸೂಕ್ಷ್ಮದ ದಿಶೆಯಲ್ಲಿ ಇದೆ. ಇದರಿಂದ ಎಲ್ಲರೂ ವಿದ್ಯಾಮಾಯೆಯ ಅನುಶೀಲನೆ ಮಾಡಿ, ಈ ಸ್ವಾಭಾವಿಕ ಗತಿಯನ್ನು ತ್ವರಿತಗೊಳಿಸಿ, ತಮ್ಮನ್ನು ಪರಮ ಸತ್ತೆಯೊಂದಿಗೆ ಲೀನಗೊಳಿಸುವ ಹಾದಿಯನ್ನು ಸುಗಮವಾಗಿ ಮಾಡಬೇಕಾಗಿದೆ.

ವಿದ್ಯಾಮಾಯೆಯ ಇಲ್ಲವೆ ಅವಿದ್ಯಾ ಮಾಯೆಯ ಅನುಶೀಲನೆ ಮಾಡುವವರನ್ನು ನಾಲ್ಕು ಶ್ರೇಣಿಗಳಲ್ಲಿ ವಿಂಗಡಿಸಬಹುದಾಗಿದೆ. ಮೊದಲನೆಯುವ

ರೆಂದರೆ, ಯಾರು ಪ್ರಕೃತಿಯ ನಿಯಮವನ್ನು ಒಪ್ಪಿ ನಡೆಯುವರೋ, ಹಾಗೂ ಅಣು ಚೈತನ್ಯವನ್ನು ವಿಕಾಸಗೊಳಿಸುವರೋ, ಅವರೆಲ್ಲರೂ ಸತ್ಪುರುಷರಾಗಿದ್ದಾರೆ. ಎರಡನೆಯವರೆಂದರೆ, ಯಾರು ಪ್ರಕೃತಿಯ ನಿಯಮವನ್ನು ಒಪ್ಪಿ ನಡೆಯುವರೋ, ಆದರೆ ಅಣು ಚೈತನ್ಯವನ್ನು ವಿಕಾಸಗೊಳಿಸುವ ದಿಶೆಯಲ್ಲಿ ಉದಾಸೀನರಾಗಿರುತ್ತಾರೋ ಅವರು.ಮೂರನೆಯವರೆಂದರೆ,ಯಾರು ಪ್ರಕೃತಿಯ ನಿಯಮಗಳನ್ನು ಒಪ್ಪುವರೋ ಮತ್ತು ಅಣುಚೈತನ್ಯದ ವಿಕಾಸದಲ್ಲಿ ಉದಾಸೀನರಾಗಿರುವರೋ ಅವರು. ಇನ್ನು ನಾಲ್ಕನೆಯವರೆಂದರೆ, ಯಾರು ಪ್ರಕೃತಿಯ ನಿಯಮಗಳನ್ನು ಒಪ್ಪುವುದಿಲ್ಲವೋ ಮತ್ತು ಇದರ ಹೊರತಾಗಿ ಅಣುಚೈತನ್ಯದ ಅವನತಿಯನ್ನುಂಟು ಮಾಡುವರೋ ಅವರು. ಈ ಜನರು ಹೀನರಿಗಿಂತಲೂ ಹೀನರಾಗಿದ್ದಾರೆ. ಮಾನವನ ಸೃಷ್ಟಿಯಲ್ಲಿ ಸಗುಣ ಬ್ರಹ್ಮನ ಉದ್ದೇಶವೇನೆಂದರೆ, ಅವನ ಮಾಧ್ಯಮದಿಂದ ತನ್ನ ಸೂಕ್ಷ್ಮತ್ವವನ್ನು ಪಡೆಯುವ ಇಚ್ಛೆಯನ್ನು ಪೂರ್ಣಗೊಳಿಸಿಕೊಳ್ಳುವುದೇ ಆಗಿದೆ, ಇದರಿಂದ ಅಣುವು ಸಹ, ಪರಮ ಪದವನ್ನು ಪಡೆಯುವ ಸೌಭಾಗ್ಯವನ್ನು ಪಡೆಯುತ್ತದೆ. ಮತ್ತು ಇದನ್ನೇ ಅದರ ಧರ್ಮವೆನ್ನುತ್ತಾರೆ. ಪರಮ ಪದಕ್ಕೆ ಹಿಂತಿರುಗಿಸುವುದಕ್ಕೋಸುಗ, ಅಣು ಚೈತನ್ಯವು ತನ್ನ ಅಸ್ತಿತ್ವವನ್ನು ನೀಗಿಕೊಳ್ಳಬೇಕಾಗುತ್ತದೆ. ಆದರೆ, ಹೀಗೆ ಮಾಡುವುದರಲ್ಲಿ ಪ್ರಕೃತಿಯ ಅನುಶಾಸನವನ್ನು ಅವಶ್ಯವಾಗಿಯೇ ಒಪ್ಪಿ ನಡೆಯ ಬೇಕಾಗುತ್ತದೆ. ಇಲ್ಲವಾದರೆ,ಅದು ಆತಂಕವನ್ನು ಉಂಟುಮಾಡಿ,ಪ್ರಗತಿಯನ್ನು ತಡೆದ ನಿಲ್ಲಿಸಬಹುದು. ಅಂದ ಮೇಲೆ, ಮೊದಲನೆಯ ಶ್ರೇಣಿಯ ಮಾನವರೇ ಉತ್ತಮ ಮಾನವರಾಗಿದ್ದಾರೆ. ಏಕೆಂದರೆ, ಅವರು ತಮ್ಮ ಧರ್ಮವನ್ನು ಒಪ್ಪಿ ಸಗುಣ ಬ್ರಹ್ಮನ ಉದ್ದೇಶದ ವೃತ್ತಿಗೋಸುಗ ಕರ್ಮ ಮಾಡುತ್ತಾರೆ.

ಪಶುವು ಸಹ, ಪ್ರಕೃತಿಯ ಅನುಶಾಸನವನ್ನು ಒಪ್ಪಿ ನಡೆಯುತ್ತದೆ. ಆದರೆ, ಅಣುಚೈತನ್ಯದ ವ್ಯಾಪಕ ವಿಕಾಸವಾಗದ ಕಾರಣ, ಅದು ಅಣುಚೈತನ್ಯದ ಅಸ್ತಿತ್ವವನ್ನು ತಡೆದು ಹಾಕುವುದಕ್ಕೆ ಅನುಕೂಲ ಕಾರ್ಯವನ್ನು ಮಾಡಲಾರದು. ಎರಡನೆಯ ಶ್ರೇಣಿಯ ಮಾನವನು ಕೇವಲ ಪ್ರಕೃತಿಯ ಅನುಶಾಸನವನ್ನು ಒಪ್ಪಿ ನಡೆಯುತ್ತಾನೆ. ಅವನು ಈ ಪಶುಗಳಿಗಿಂತ ಯಾವ ಪ್ರಕಾರದಿಂದಲೂ ಶ್ರೇಷ್ಠನಲ್ಲ. ಇವರು ಚೈತನ್ಯದ ವ್ಯಾಪಕ ವಿಕಾಸವನ್ನು ಸಾರ್ಥಕಗೊಳಿಸುವುದಿಲ್ಲ. ಆದ್ದರಿಂದ, ಇವರನ್ನು ಮಾನವ ದೇಹ ಹೊತ್ತ ಪಶುವೆನ್ನಬಹುದು.

ಮೂರನೆಯ ಮತ್ತು ನಾಲ್ಕನೆಯ ಶ್ರೇಣಿಯ ಮನುಷ್ಯರು ವಾಸ್ತವದಲ್ಲಿ



ಪಶುಗಳಿಗಿಂತಲೂ ಹೀನರಾಗಿದ್ದಾರೆ. ಪಶುವು ಕೇವಲ ಪ್ರಕೃತಿಯ ಅನುಶಾಸನವನ್ನು ಒಪ್ಪಿ ನಡೆಯುತ್ತದೆ. ಏಕೆಂದರೆ, ಅದಕ್ಕಿಂತ ಹೆಚ್ಚಿಗೇನನ್ನೂ ಮಾಡುವ ಸಾಮರ್ಥ್ಯವು ಅವುಗಳಲ್ಲಿ ಇರುವುದಿಲ್ಲ. ಆದರೆ, ಈ ಹೀನ ಮತ್ತು ಹೀನತಮ ಮಾನವನು ತನ್ನ , ಆಚರಣೆಯ ಮೂಲಕ, ಕೇವಲ ಪ್ರಕೃತಿಯ ವಿರುದ್ಧ ಮಾಡುವನಷ್ಟೇ ಅಲ್ಲ, ಪ್ರತಿಯಾಗಿ ಅವನು ತನ್ನ ಅಭಿವ್ಯಕ್ತಿಯನ್ನು ಸಿಹ ಸೀಮಿತಗೊಳಿಸುತ್ತಾನೆ. ಅಂದ ಮೇಲೆ, ಅವನು ಕೇವಲ ಮಾನವ ದೇಹ ಹೊತ್ತ ಪಶುವಷ್ಟೇ ಅಲ್ಲ; ಪ್ರತಿಯಾಗಿ ಪಶುವಿಗಿಂತಲೂ ಅಧಮನಾಗಿದ್ದಾನೆ.

ಮೊದಲಿನ ಅಧ್ಯಾಯದಲ್ಲಿ ಹೇಳಿದಂತೆ ಮಾನವನು ತಾನು ಮಾಡಿದ ಕರ್ಮಗಳ ಫಲವನ್ನು ಅವಶ್ಯವಾಗಿ ಭೋಗಿಸಬೇಕಾಗುತ್ತದೆ. ಇದರಿಂದ ಅವನು ಯಾವುದೇ ಪ್ರಕಾರದ ಬಿಡುಗಡೆಯನ್ನು ಪಡೆಯಲಾರನು. ಈ ಕರ್ಮಫಲ ಭೋಗದಿಂದ ಬಿಡುಗಡೆ ಪಡೆಯಲು ಮಾನವನು ಬಹಳಷ್ಟು ಮಾಡಬೇಕಾಗುತ್ತದೆ. ಅವನ ಈ ಪ್ರಯತ್ನವು ಎಲ್ಲಿಯ ತನಕ ಯುಕ್ತಿಪೂರ್ಣ ಇಲ್ಲವೆ ಸಾರ್ಥಕವಾಗಿದೆ; ಎಂಬುದನ್ನು ವಿಚಾರಪೂರ್ವಕ ನೋಡೋಣ.

ಗೃಹಶಾಂತಿ ಇಲ್ಲವೆ ಪ್ರಾಯಶ್ಚಿತ್ತದ ಮೂಲಕ ಬಿಡುಗಡೆ ಪಡೆಯುವ ಸಂಭವವಿದೆ; ಎಂದು ಬಹು ಜನರು ನಂಬಿದ್ದಾರೆ. ಆದರೆ, ಅವರ ಈ ನಂಬುಗೆಯು ಪೂರ್ಣವಾಗಿ ತಪ್ಪಾಗಿದೆ. ಏಕೆಂದರೆ, ಮಾಡಿದ ಕರ್ಮಗಳ ಪ್ರಭಾವದಿಂದ ಸ್ವಾಭಾವಿಕ ಅವಸ್ಥೆಗೆ ಹಿಂತಿರುಗುವುದಕ್ಕೋಸುಗ ಮನವು ಕರ್ಮಫಲವನ್ನು ಅವಶ್ಯವಾಗಿ ಭೋಗಿಸಬೇಕಾಗುತ್ತದೆ. ಇದು ಪ್ರಕೃತಿ. ಇದುವೇ ಪ್ರಕೃತಿಯ ವಿಧಾನವೂ ಅಹುದು; ಪ್ರತಿಕ್ರಿಯೆಯ ಭೋಗದ ಮಾಧ್ಯಮದಿಂದ ಮನವು ಸ್ವಾಭಾವಿಕ ಅವಸ್ಥೆಗೆ ಹಿಂತಿರುಗುವ ಗತಿಯನ್ನು ಅವಶ್ಯವಾಗಿಯೇ ದ್ರುತ ಇಲ್ಲವೆ ಮಂದಗೊಳಿಸಬಹುದು. ಹೇಗೆಂದರೆ, ಯಾವ ಪ್ರತಿಕರ್ಮ ಭೋಗವು ಮನವನ್ನು ಸ್ವಾಭಾವಿಕ ಅವಸ್ಥೆಗೆ ಮರಳಿ ತರುವುದಕ್ಕಾಗಿ ಒಂದು ತಿಂಗಳ ಕಾಲವನ್ನು ತೆಗೆದುಕೊಳ್ಳುವುದೋ, ಅದನ್ನು ತಂತ್ರದ ಪ್ರಭಾವದಿಂದ ಮೊಟಕುಗೊಳಿಸಬಹುದು. ಇಲ್ಲವೆ ಹೆಚ್ಚಿಸಬಹುದಾಗಿದೆ. ಅಂದರೆ, ಒಂದು ದಿನ ಇಲ್ಲವೆ ಒಂದು ವರ್ಷವನ್ನಾಗಿ ಮಾಡಬಹುದು. ಆದರೆ, ಯಾವುದೇ ಪ್ರಕಾರ, ಅದನ್ನು ಒಮ್ಮೆಲೇ ತೊಡೆದು ಹಾಕುವ ಸಂಭವವಿಲ್ಲ. ಹೇಗೆಂದರೆ, ಒಂದು ತಿಂಗಳ ಕರಾರಿನ ಮೇಲೆ ಯಾವನೊಬ್ಬನು ಒಂದು ನೂರು ರೂಪಾಯಿ ಸಾಲವನ್ನು ತೆಗೆದುಕೊಂಡರೆ, ಅವನು ಸಾಲ ನೀಡಿದವನಿಗೆ ಕೇಳಿಕೊಂಡು ಒಂದು ತಿಂಗಳಿನ ಅವಧಿಯನ್ನು ಒಂದು ವರ್ಷ ಇಲ್ಲವೆ ಎರಡು

ವರುಷಗಳ ವರೆಗೆ ವಿಸ್ತರಿಸಿಕೊಳ್ಳಬಲ್ಲನು. ಆದರೆ, ಅವನು ಸಾಲವನ್ನಂತೂ ತೀರಿಸಲೇ ಬೇಕಾಗುತ್ತದೆ. ಮತ್ತು ಪುನಃ ಒಂದು ತಿಂಗಳಿನ ವೆಚ್ಚದ ರೂಪಾಯಿಗಳನ್ನು ಒಂದೇ ದಿನದಲ್ಲಿಯೂ ಸಹ, ವೆಚ್ಚ ಮಾಡಬಲ್ಲನು. ಆದರೆ, ಅದರಿಂದ ಸಾಲದ ಅಂಕಿಯಲ್ಲಿ ಯಾವದೇ ಪರಿವರ್ತನೆಯು ಆಗುವುದಿಲ್ಲ. ಅದೇ ಪ್ರಕಾರ, ಮಾನವನು ತಾಂತ್ರಿಕ ಪದ್ಧತಿಯ ಮೂಲಕ ತಾನು ಮಾಡಿದ ಕರ್ಮಗಳ ಫಲ ಭೋಗದ ಗತಿಯನ್ನು ದ್ರುತ ಇಲ್ಲವೆ ಮಂದಗೊಳಿಸಬಲ್ಲನು. ಆದರೆ, ಅದರಿಂದ ಯಾವ ರೀತಿಯಿಂದಲೂ ಬಿಡುಗಡೆ ಪಡೆಯನು. ಕರ್ಮಫಲ ಇಲ್ಲವೆ ಕರ್ಮದ ಪ್ರತಿಕ್ರಿಯೆಯ ಭೋಗವನ್ನು ಕರ್ತೃನು ಅವಶ್ಯವಾಗಿಯೇ ಭೋಗಿಸಬೇಕಾಗುತ್ತದೆ. ಆದರೆ, ತಾಂತ್ರಿಕ ಪ್ರಕ್ರಿಯೆಯ ಮೂಲಕ ಭೋಗದ ಕಾಲವನ್ನು ಹೆಚ್ಚಿಸುವುದರಿಂದ, ಭೋಗದ ತೀವ್ರತೆಯ ಅನುಭೂತಿಯು ಅಷ್ಟೇ ಆಗುವದಿಲ್ಲ. ಇದರಿಂದ, ನಿಶ್ಚಯವಾಗಿಯೂ ಜನರು ಗೃಹಶಾಂತಿಯ ಮೂಲಕವೇ ಕರ್ಮಫಲ ಭೋಗದಿಂದ ಬಿಡುಗಡೆ ಪಡೆಯುತ್ತೇವೆ; ಎಂದು ತಿಳಿಯುತ್ತಾರೆ. ಉದಾಹರಣೆಗೆ ನೋಡಿರಿ. ಒಂದು ವೇಳೆ, ಯಾವನೊಬ್ಬ ವ್ಯಕ್ತಿಯ ಅದೃಷ್ಟ ಎಣಿಕೆ ಮಾಡಿ ನೋಡಿದರೆ, ಅವನು ತನ್ನ ಕೈ ಮುರಿಯುವಿಕೆಯ ಕಷ್ಟವನ್ನು ಭೋಗಿಸುವದಿದ್ದರೆ, ಗೃಹ ಶಾಂತಿಯ ಮೂಲಕ, ಈ ಮುರಿಯುವಿಕೆಯಿಂದ ಬಿಡುಗಡೆಯಾಗಬಲ್ಲದು; ಇಲ್ಲವೆ, ಚಿಕ್ಕ ಚಿಕ್ಕ ದುರ್ಘಟನೆಗಳ ಮಾಧ್ಯಮದಿಂದ ಈ ಭೋಗದ ಅವಧಿಯನ್ನು ವಿಸ್ತರಿಸಬಹುದು. ಆದರೆ, ಎಷ್ಟು ಮಾನಸಿಕ ಕ್ಲೇಶವನ್ನು ಭೋಗಿಸಬೇಕಾಗಿದೆಯೋ, ಅವರಲ್ಲೇನೂ ಕಡಿಮೆಯಾಗುವಂತಿಲ್ಲ. ಅರ್ಥಾತ್ ಮಾನಸಿಕ ಆಳತೆಯಲ್ಲಿ ಎಷ್ಟೊಂದು ಭೋಗಿಸಬೇಕಾಗಿದೆಯೋ, ಅದು ಎಲ್ಲಿಯ ವರೆಗೆ ತೀರುವದಿಲ್ಲವೋ, ಅಲ್ಲಿಯವರೆಗೆ ಮಾಡಿದ ಕರ್ಮಗಳ ಫಲವನ್ನು ಭೋಗಿಸಲೇಬೇಕಾಗುತ್ತದೆ.

ಗೃಹಶಾಂತಿಯ ಮೂಲಕ ಯಾವ ರೀತಿ ಸಮಯವನ್ನು ಹೆಚ್ಚಿಸಬಹುದೋ, ಅದೇ ರೀತಿ, ಕಡಿಮೆ ಮಾಡಲೂ ಬಹುದು. ಉದಾಹರಣೆಗೆ, ನೀಲಮ ಮುಂತಾದ ಶಿಲೆಗಳನ್ನು ಧರಿಸಿ ಮಾನವನು ತನ್ನ ಕರ್ಮ ಫಲ ಭೋಗದ ಧಾರೆಯನ್ನು ಬದಲಿಸಿಕೊಳ್ಳಬಲ್ಲನು. ಅಥವಾ ಇದರ ಪ್ರಭಾವದಿಂದ ಲಾಟರಿ ಮುಂತಾದವುಗಳಿಂದ ಧನ ಲಾಭ ಮಾಡಿಕೊಳ್ಳಬಲ್ಲನು. ಇಲ್ಲವೆ, ಕರ್ಮ ಕ್ಷೇತ್ರದಲ್ಲಿ ಉನ್ನತ ಪದವಿ ಗಳಿಸಬಲ್ಲನು. ಈ ಎಲ್ಲವುಗಳಿಂದ ಮಾನವನಿಗೆ ಗೃಹಶಾಂತಿಯ ಮೂಲಕ ಹೀಗೆ ಆಗುವುದೆಂಬ ನಂಬುಗೆಯುಂಟಾಗುತ್ತದೆ. ಆದರೆ, ವಾಸ್ತವದಲ್ಲಿ ಹೀಗೆ ಆಗುತ್ತಿರುವುದಿಲ್ಲ. ಭಾಗ್ಯ ಇಲ್ಲವೆ ಮಾಡಿದ



ಕರ್ಮದ ಫಲ ಭೋಗದ ಪರಿಣಾಮವನ್ನು ಮಾನವನು ಎಂದಿಗೂ ಬದಲಿಸಲಾರನು. ಇಲ್ಲವೆ, ತೊಡೆದು ಹಾಕಲಾರನು. ಮೊದಲೇ ಹೇಳಿರುವಂತೆ, ಯಾವ ಕರ್ಮದ ಮೂಲಕ, ಮಾನವನು ಎರಡನೆಯವರ ಮನದಲ್ಲಿ ಸುಖಾತ್ಮಕ ಸ್ಪಂದನವನ್ನು ಜಾಗ್ರತಗೊಳಿಸುವನೋ, ಅವನು ಮಾನಸ ಆಳತೆಯಲ್ಲಿ ಅಷ್ಟೇ ಸುಖದ ಕಾರಣವಾಗುತ್ತಾನೆ. ಈ ಸುಖಭೋಗದ ಪರಿಮಾಣವು ಬದಲಾಗಲಾರದು. ಕೇವಲ ಭೋಗದ ಕಾಲವು ಮಾತ್ರ ಕುಂಠಿತವಾಗಬಲ್ಲದು. ಇಲ್ಲವೆ ವಿಸ್ತಾರವಾಗಬಲ್ಲುದು. ಗೃಹ ಶಾಂತಿಯ ಮೂಲಕ ಭಾಗ್ಯ ಪರಿವರ್ತನೆಯು ಸಹ, ಇದೇ ಪ್ರಕಾರದ್ದಾಗಿದೆ. ಉದಾಹರಣೆಗಾಗಿ ಹೇಳುವುದಾದರೆ, ನೀಲಮ ಧರಿಸಿ ಯಾವನೊಬ್ಬನು ಲಾಟರಿಯಲ್ಲಿ ಒಂದು ಸಾವಿರ ರೂಪಾಯಿ ಪಡೆದರೆ, ಅವನು ಆ ಹಣವನ್ನು ತನ್ನ ಅದೃಷ್ಟದಲ್ಲಿ ನಿಶ್ಚಯವಾಗಿಯೂ ಪಡೆಯಲೇ ಬೇಕಾದ ಧನದಿಂದಲೇ ಪಡೆದೆನೆಂದು ಹೇಳಬಹುದು. ಈ ಹಣವನ್ನು ಅವನು ದೀರ್ಘ ಕಾಲದಲ್ಲಿ ಬಹಳಷ್ಟು ಚಿಕ್ಕ ಚಿಕ್ಕ ಮೊತ್ತಗಳಲ್ಲಿ ಪಡೆಯ ಬಹುದಿತ್ತು. ಒಂದೇ ಕಂತಿನಲ್ಲಿ ಇಷ್ಟೊಂದು ಹೆಚ್ಚು ಹಣವು ಸಿಕ್ಕ ಕಾರಣ, ಉಳಿದೆಲ್ಲ ಕಂತುಗಳಿಂದ ಪಡೆಯಲಿಕ್ಕೆ ಇನ್ನೇನೂ ಬಾಕಿ ಉಳಿಯುವುದಿಲ್ಲ. ಆಗ ಸಹ, ಒಂದೇ ಕಾಲಕ್ಕೆ ಇಷ್ಟೊಂದು ಹೆಚ್ಚು ಹಣವನ್ನು ಪಡೆಯುವುದರಿಂದ, ಮಾನವನಿಗೆ ಗೃಹಶಾಂತಿ ಇಲ್ಲವೆ ನೀಲಮ ಧಾರಣೆಯಿಂದಲೇ ಅದೃಷ್ಟ ಇಲ್ಲವೆ ಭಾಗ್ಯವು ಬದಲಾಗುವುದೆಂಬ ನಂಬುಗೆಯು ಉಂಟಾಗುತ್ತದೆ. ವಾಸ್ತವವಾಗಿ ಭಾಗ್ಯವು ಎಂದಿಗೂ ಬದಲಾಗದು. ಕೇವಲ ಭೋಗದ ಸಮಯವಷ್ಟೇ ಬದಲಾಗಬಲ್ಲದು. ಆದ್ದರಿಂದ, ಮುಮುಕ್ಷು ಆಧ್ಯಾತ್ಮಿಕ ಸಾಧಕನ ಜೀದನದಲ್ಲಿ ಸುಖ–ದುಃಖಗಳ ಭೋಗವು ಒಳ್ಳೇ ತೀವ್ರವಾಗಿ ಆಗುತ್ತದೆ. ಇದರಿಂದ, ಅವನ ಕರ್ಮ ಫಲಭೋಗವು ಸಹ, ಅತ್ಯಲ್ಪ ಕಾಲದಲ್ಲಿ ತೀರಿ ಹೋಗುತ್ತದೆ ಎಂಬುದನ್ನು ಕಾಣಬಹುದು. ಮುಮುಕ್ಷು ವ್ಯಕ್ತಿಯು ಈ ಜೀವನದಲ್ಲಿಯೇ ಮೋಕ್ಷ ಲಾಭವನ್ನು ಪಡೆಯ ಬಯಸುತ್ತಾನೆ; ಮತ್ತು ಇದರಿಂದ ಪ್ರಕೃತಿಯ ಬಂಧನದಿಂದ ಬಿಡುಗಡೆಯಾಗಲಿಕ್ಕಾಗಿ, ಸಕಲ ಸಂಸ್ಕಾರ ಭೋಗಗಳನ್ನು ಇದೇ ಜನ್ಮದಲ್ಲಿ ಕೊನೆಗೊಳಿಸಲು ಬಯಸುತ್ತಾನೆ.

ಸತ್ಕರ್ಮದ ಶುಭ ಫಲದ ಪ್ರಭಾವದಿಂದ ಕೇಡು ಕರ್ಮದ ಕೆಟ್ಟ ಫಲ ಭೋಗದಿಂದ ಬಿಡುಗಡೆ ಪಡೆಯುವ ಸಂಭವವಿದೆ; ಎಂದು ಜನರ ನಂಬುಗೆಯಿದೆ. ಅವರ ವಿಚಾರದ ಮೇರೆಗೆ, ಒಳ್ಳೆಯ ಮತ್ತು ಕೆಟ್ಟ ಕರ್ಮಗಳ ಪರಿಮಾಣವು ಒಂದು ವೇಳೆ, ಸಮಾನವಿದ್ದರೆ, ಭೋಗಿಸುವುದಕ್ಕೋಸುಗ ಸ್ವಲ್ಪ

ಸಹ ಬಾಕಿ ಉಳಿಯುತ್ತಿದ್ದಿಲ್ಲ. ಆದರೆ, ಹೀಗೆ ಆಗುತ್ತಲೂ ಇಲ್ಲ; ಮತ್ತು ಆಗುವ ಸಂಭವವೂ ಇಲ್ಲ. ಒಳಿತು ಕೇಡುಗಳ ಎಲ್ಲ ಪ್ರಕಾರದ ಕರ್ಮಗಳು ಮನದಲ್ಲಿ ಒಂದು ವಿಕೃತಿಯನ್ನು ಹುಟ್ಟಿಸುತ್ತವೆ; ಮತ್ತು ಅದಕ್ಕೆ ಸಮಾನವಾದ ರೂಪದಲ್ಲಿ ಒಂದು ವಿಪರೀತ ಕ್ರಿಯೆಯ ಮೂಲಕವೇ ಮನವು ಈ ವಿಕೃತಿಯಿಂದ ಬಿಡುಗಡೆ ಪಡೆಯುತ್ತದೆ. ಆದ್ದರಿಂದ, ಕೆಟ್ಟ ಕರ್ಮಗಳ ಮೂಲಕ ಯಾವ ವಿಕೃತಿಯು ಉತ್ಪನ್ನವಾಗುವುದೋ, ಅದು ಒಳ್ಳೆಯ ಕರ್ಮದ ಮೂಲಕ ದೂರವಾಗಲಾರದು. ಏಕೆಂದರೆ, ಒಳ್ಳೆಯ ಕರ್ಮವು ಸಹ ಮನದಲ್ಲಿ ಇನ್ನೊಂದು ವಿಕೃತಿಯನ್ನು ಉಂಟು ಮಾಡುತ್ತದೆ. ಪ್ರತಿಯೊಂದು ವಿಕೃತಿಯನ್ನು ದೂರಗೊಳಿಸಲಿಕ್ಕಾಗಿ ಒಂದು ಸ್ವತಂತ್ರ ವಿಪರೀತ ಧರ್ಮದ ಪ್ರತಿಕ್ರಿಯೆಯೇ ಬೇಕು. ಅಂದ ಮೇಲೆ, ಒಳ್ಳೆಯ ಕರ್ಮದ ಒಳ್ಳೆಯ ಫಲದ ಇಲ್ಲವೆ, ಕೆಟ್ಟ ಫಲದ ಕೆಟ್ಟ ಕರ್ಮದ ಭೋಗವನ್ನು ಬೇರೆ ಬೇರೆ ಮಾಡಬೇಕಾಗುತ್ತದೆ. ಇದುವೇ ಪ್ರಕೃತಿಯ ನಿಯಮವಾಗಿದೆ.

ಯುಕ್ತಿ ಮತ್ತು ತರ್ಕದ ಮೂಲಕ ಯಾವ ಕರ್ಮದ ಪ್ರತಿಕರ್ಮವನ್ನೂ ತೊಡೆದು ಹಾಕುವ ಸಂಭವವಿಲ್ಲ, ಎಂಬುದನ್ನು ನಾವು ಕಾಣುತ್ತೇವೆ. ಇದರಿಂದ, ತಮ್ಮ ಅದೃಷ್ಟಕ್ಕಾಗಿ ಭಗವಾನನಿಗೆ ದೋಷಕೊಡುವುದಾಗಲಿ ಇಲ್ಲವೆ ಅದೃಷ್ಟದ ಕಷ್ಟದಿಂದ ಬಿಡುಗಡೆ ಪಡೆಯಲು ಪ್ರಾರ್ಥಿಸುವುದಾಗಲಿ ಕೇವಲ ಮೂರ್ಖತನವಷ್ಟೇ. ಯಾರು ಕರ್ಮ ಮಾಡುವರೋ, ಅವರೇ ಫಲವನ್ನು ಸಹ ಭೋಗಿಸಬೇಕಾಗುತ್ತದೆ. ಬೆಂಕಿಯಲ್ಲಿ ಕೈಯಿಟ್ಟರೆ ಕೈ ಸುಡುತ್ತದೆ. ಇದಕ್ಕಾಗಿ ಭಗವಾನನಿಗೆ ದೋಷಕೊಡುವುದು ತಿಳಿಗೇಡಿತನ. ಇಲ್ಲವೆ ಮೂರ್ಖತನವಲ್ಲದೆ ಬೇರೇನೂ ಅಲ್ಲ. ಬೆಂಕಿಯ ಧರ್ಮವೇ ಸುಡುವುದಾಗಿದೆ. ಇನ್ನು ಏನಿನಿತು ಅದರ ಸಂಪರ್ಕದಲ್ಲಿ ಬರುವುದೋ, ಅದು ಸುಟ್ಟುಹೋಗುತ್ತದೆ. ಇದೇ ಪ್ರಕಾರ, ಕರ್ಮದ ಪ್ರತಿಕರ್ಮವನ್ನು ಭೋಗಿಸಲೇಬೇಕೆಂಬುದು ಪ್ರಕೃತಿಯ ನಿಯಮವಾಗಿದೆ. ಭಗವಾನನು ಯಾವ ರೂಪದಲ್ಲಿಯೂ ಇದಕ್ಕೆ ಹೊಣೆಗಾರನಾಗಿಲ್ಲ. ಏಕೆಂದರೆ, ಭಗವಾನನು ಕರ್ಮವನ್ನು ಮಾಡುತ್ತಿಲ್ಲ. ಮಾನವನು ತಾನೇ ಕರ್ಮ ಮಾಡುತ್ತಾನೆ. ಆದ್ದರಿಂದ, ಅವನೇ ತನ್ನ ಎಲ್ಲ ಕರ್ಮಗಳಿಗಾಗಿ ಹೊಣೆಗಾರನಾಗುತ್ತಾನೆ.

ಪ್ರಾರ್ಥನೆಯ ಅರ್ಥವೆಂದರೆ ದೇಹ, ಮನ ಮತ್ತು ವಾಕ್ಯಗಳಿಂದ ಭಗವಾನನ ಬಳಿ ತನ್ನ ನಿಸ್ಸಹಾಯಕತೆಯನ್ನು ಹೇಳಿಕೊಂಡು ಅವನ ನೆರವನ್ನು ಪಡೆಯುವ ಪ್ರಯತ್ನವೇ ಆಗಿದೆ. ಯಾರು ಪ್ರಾರ್ಥನೆ ಮಾಡು



ವರೋ, ಅವರು, ಭಗವಾನನ ಇಚ್ಛೆಯಿಂದಲೇ ತಾವು ತಮ್ಮ ಎಲ್ಲ ಕ್ಲೇಶಗಳಿಂದ ಪಾರಾಗಬಲ್ಲೆವೆಂದು ನಂಬುತ್ತಾರೆ. ಇದರಿಂದ, ತಮ್ಮ ದೀನತನದ ನೆನಪನ್ನು ಭಗವಾನನಿಗೆ ಮಾಡಿಕೊಡುವುದರ ಹೊರತು ಪ್ರಾರ್ಥನೆಯು ಮತ್ತೇನೂ ಅಲ್ಲ. ಉದಾಹರಣೆಗಾಗಿ ಹೀಗೆ ಹೇಳಬಹುದು. ಆರ್ಥಿಕ ಹೀನತೆಯ ಕಾರಣ, ಒಂದು ವೇಳೆ, ಯಾರಾದರೂ ಭಗವಾನನ ಬಳಿ ಪ್ರಾರ್ಥಿಸಿದರೆ, ಅದರ ಅರ್ಥವು ಎಲ್ಲರ ಒಡೆಯನಾದ ಭಗವಾನನು ಅವರನ್ನು ಆರ್ಥಿಕ ಕಷ್ಟದಲ್ಲಿ ನೂಕಿ ಅವರನ್ನು ಕುರಿತು ಸುವಿಚಾರವನ್ನು ಮಾಡಿಯೇ ಇಲ್ಲ. ಅಂದ ಮೇಲೆ, ಅವನು ಇನ್ನೊಮ್ಮೆ ಈ ಕುರಿತು ವಿಚಾರ ಮಾಡಲಿ ಎಂದಾಗುತ್ತದೆ. ಅರ್ಥಾತ್ ಇನ್ನೊಂದು ದೃಷ್ಟಿಯಿಂದ ಭಗವಾನನ ವಿಚಾರದಲ್ಲಿ ಪಕ್ಷಪಾತದ ದೋಷವನ್ನು ಹೊರಿಸಿದಂತಾಗುತ್ತದೆ. ಇದು ಪೂರ್ಣವಾಗಿ ಅನುಚಿತವಷ್ಟೇ. ಅಂದ ಮೇಲೆ ಸೈದ್ಧಾಂತಿಕ ವಿಚಾರದಿಂದ ಪ್ರಾರ್ಥನೆಯು ಕೇವಲ ತಿಳಿಗೇಡಿತನವಲ್ಲದೆ ಮತ್ತೇನೂ ಅಲ್ಲ. ಮನುಷ್ಯನು ತಾನು ಮಾಡಿದ ಕರ್ಮದ ಫಲವನ್ನು ಭೋಗಿಸುತ್ತಾನೆ. ಇದುವೇ ಬದಲಾಗದ ನಿಯಮವಾಗಿದೆ. ಭಗವಾನನ ಮೇಲೆ ದೋಷವನ್ನು ಹೊರಿಸಿದ್ದರಿಂದ ಬಿಡುಗಡೆ ಪಡೆಯುವ ಯಾವುದೇ ಉಪಾಯವಿಲ್ಲ.

ಬೆಂಕಿಯಲ್ಲಿ ಕೈಯಿಡುವುದರಿಂದ ಕೈ ಸುಟ್ಟುಹೋಗುತ್ತವೆ. ಎಷ್ಟೇ ಪ್ರಾರ್ಥನೆ ಮಾಡಲೊಲ್ಲರೇಕೆ?ಬೆಂಕಿಯಿಂದ ಅದನ್ನು ಉಳಿಸುವುದು ಆಗಲಾರದು. ಏಕೆಂದರೆ, ಈ ಪ್ರಕಾರದ ಪ್ರಾರ್ಥನೆಯನ್ನು ಸ್ವೀಕರಿಸುವುದರ ಅರ್ಥವೆಂದರೆ, ಬೆಂಕಿಗೆ ತನ್ನ ಜನ್ಮ ಜಾತ ವಿಶೇಷ ಗುಣದಿಂದ,ಅರ್ಥಾತ್ ಸುಡುವ ಶಕ್ತಿಯಿಂದ, ವರ್ಜಿತಗೊಳಿಸುವುದು ಅಥವಾ ಕೈ ಚಳಕದಿಂದ ಅದರ ಸುಡುವ ಶಕ್ತಿಯಿಂದ ಪ್ರಭಾವಿತಗೊಳ್ಳಲಾರದಂತೆ ಮಾಡುವುದಾಗಿದೆ. ಆದರೆ, ಭಗವಾನನ ಸೃಷ್ಟಿಯಲ್ಲಿ ನಿಯಮದ ಭಂಗವು ಎಲ್ಲಿಯೂ ಆಗದು. ಎಲ್ಲ ವಸ್ತುಗಳು, ಕ್ಷುದ್ರವಾಗಿರಲಿ ಅಥವಾ ಬೃಹತ್ತಾಗಿರಲಿ, ತಮ್ಮ ತಮ್ಮ ಧರ್ಮದ ಪಾಲನೆಯನ್ನು ಮಾಡುತ್ತವೆ. ಆದ್ದರಿಂದ, ಈ ಮಾತು ಸಂಭವಿಸದು. ಪ್ರಾರ್ಥನೆಯಿಂದ ಪ್ರಭಾವಿತನಾಗಿ ಭಗವಾನನೆಂದೂ ತನ್ನ ಸೃಷ್ಟಿಯ ನಿಯಮವನ್ನು ಭಂಗಗೊಳಿಸಲಾರನು. ಆದ್ದರಿಂದ, ಈ ಉದ್ದೇಶದಿಂದ, ಒಂದು ವೇಳೆ, ಯಾರಾದರೂ ಭಗವಾನನನ್ನು ಪ್ರಾರ್ಥಿಸಿದರೆ, ಇದು ಆತನ ಮೂರ್ಖತನವಲ್ಲದೆ ಬೇರೆ ಏನೂ ಅಲ್ಲ.

ಪ್ರಕೃತಿಯ ನಿಯಮಾನುಸಾರ,ಎಲ್ಲರೂ ತಾವು ಮಾಡಿದ ಕರ್ಮಗಳ ಫಲ

ವನ್ನು ಭೋಗಿಸಲೇ ಬೇಕಾಗುತ್ತದೆ. ಪ್ರಾರ್ಥನೆಯ ಪ್ರಭಾವದಿಂದ ಈ ನಿಯಮದ ಭಂಗವಾಗಲಾರದು.

ಜ್ಞಾನ ಇಲ್ಲವೆ ಛಂದದ ಮಾಧ್ಯಮದಿಂದ ಭಗವಾನನ ಮಹಿಮೆಯ ಕೀರ್ತನೆ ಮಾಪುವುದೇ ಸ್ತುತಿಯಾಗಿದೆ. ಇದನ್ನು ಮನರಂಜನೆಯಲ್ಲದೆ ಬೇರೆ ಏನೆಂದೂ ಹೇಳಲಾರೆವು. ತನ್ನ ಇಚ್ಛೆಯ ಪೂರ್ತಿಗಾಗಿ ಮಾನವನು ಸಮರ್ಥ ವ್ಯಕ್ತಿಯನ್ನು ಸಂತೋಷ ಪಡಿಸುತ್ತಾನೆ. ಭಗವಾನನ ಮಹಿಮೆಯ ಕೀರ್ತನೆಯ ಅರ್ಥವೆಂದರೆ, ಅವನನ್ನು ಹರ್ಷಗೊಳಿಸುವುದೇ ಆಗಿದೆ. ಸರ್ವಜ್ಞನಾದ ಭಗವಾನನಿಗೆ ಸರ್ವ ಶಕ್ತಿವಂತ, ದಯಾಮಯ ಮತ್ತು ಕರುಣಾಮಯ ಮುಂತಾದ ವಿಶೇಷಣಗಳ ಬಳಕೆಯ ಹಿಂದೆ ಅಡಗಿರುವ ಉದ್ದೇಶವೆಂದರೆ, ಭಗವಾನನು ಅದರಿಂದ ಹರ್ಷಗೊಂಡು, ಹರ್ಷಗೊಳಿಸುವವನ ಮೇಲೆ ಸ್ವಲ್ಪ ಕೃಪೆ ಸುರಿಸಲಿ ಎಂದು ಮತ್ತು ಸರ್ವ ಶಕ್ತಿವಂತನಾದ ಕಾರಣ, ಅವನು ವಿಶೇಷ ವ್ಯಕ್ತಿಯನ್ನು, ಅವನು ಮಾಡಿದ ಕರ್ಮಗಳ ಬಂಧನದಿಂದ ಬಿಡುಗಡೆಯನ್ನು ಮಾಡಿಸುವ ಕ್ಷಮತೆಯೂ ಸಹ ಅವನಲ್ಲಿ ಅವಶ್ಯವಾಗಿಯೇ ಇದೆ, ಎಂಬುದಾಗಿದೆ. ಅಂದ ಮೇಲೆ, ಸ್ತುತಿಯ ಹಿಂದೆ ಅನುಗ್ರಹ ಪಡೆಯುವ ಪ್ರಯತ್ನವೇ ಪ್ರಬಲ ರೂಪದಿಂದ ಕಾರ್ಯ ಮಾಡುತ್ತಿದೆ. ಆದ್ದರಿಂದ, ಪ್ರಾರ್ಥನೆಯಂತೆಯೇ ಸ್ತುತಿಯ ಹಿಂದೆ ಸಹ, ಮಾನವನು ವ್ಯರ್ಥ ಕಾಲಹರಣ ಮಾಡುತ್ತಾನೆ. ಪ್ರಾರ್ಥನೆ ಮತ್ತು ಸ್ತುತಿ ಅರ್ಥಾತ್ ಭಿಕ್ಷೆ ಇಲ್ಲವೆ ಹರ್ಷಗೊಳಿಸುವ ಮೂಲಕ ಮಾನವನು ಏನಿನಿತೂ ಪಡೆಯಲಾರನು. ಆದರೆ, ಭಕ್ತಿಯು ಹೀಗಲ್ಲ. ಭಕ್ತಿಯು ಏನು ಎಂಬುದನ್ನು ನೋಡುವಾ. "ಭಕ್ತಿ" ಒಂದು ಸಂಸ್ಕೃತ ಶಬ್ದ ವಾಗಿದೆ. ಭಜ + ಕ್ತಿನ್ = ಭಕ್ತಿ. ಇದರ ಅರ್ಥವು ಕೇವಲ ಕರೆಯುವುದು. ಇದು ಪ್ರಾರ್ಥನೆ ಮತ್ತು ಸ್ತುತಿಯಿಂದ ಪೂರ್ಣ ಬೇರೆಯಾಗಿದೆ. ಇದರ ಉಪಯೋಗವೇನೆಂಬುದನ್ನು ನೋಡುವಾ. ಸಗುಣ ಬ್ರಹ್ಮನ ಮೂಲಕ ಹುಟ್ಟಿದ ಮುಮುಕ್ಷುವಾದ ಅಣು ಚೈತನ್ಯಕ್ಕೆ ಪರಮ ಪದವನ್ನು ಪಡೆಯ ಲಿಕ್ಕೋಸುಗ, ಭಕ್ತಿಯ ಆಶ್ರಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಭೂಮಾ ಚೈತನ್ಯದತ್ತ ಮುನ್ನಡೆಯುವ ಒಂದೇ ಒಂದು ಹಾದಿಯೆಂದರೆ, ಮನ ಮತ್ತು ಪ್ರಾಣಗಳಿಂದ ಅವನನ್ನು ಕರೆಯುತ್ತ ಕರೆಯುತ್ತ ಅವನಲ್ಲಿಯೇ ಲೀನವಾಗಿ ಹೋಗುವುದು. ಲಕ್ಷ್ಯ ವಸ್ತು ಇಲ್ಲವೆ ವಿಷಯದ ಭಾವನೆಯನ್ನು ತಾಳುತ್ತ ಕೊನೆಯಲ್ಲಿ ಅದೇ ಆಗಿ ಹೋಗುವುದು ಮಾನವನ ಮನದ ಸ್ವಾಭಾವಿಕ ಧರ್ಮ ವಾಗಿದೆ. ಉದಾಹರಣೆಗಾಗಿ ನೋಡಿರಿ, ಒಂದು ವೇಳೆ, ಯಾರಾದರೂ



ತಮ್ಮನ್ನು ಪೂರ್ಣ ಹುಚ್ಚರೆಂದು ಭಾವಿಸಿಕೊಂಡರೆ, ಕೊನೆಗೆ ಅವರು ವಾಸ್ತವ ದಲ್ಲಿ ಹುಚ್ಚರಾಗಿ ಹೋಗುತ್ತಾರೆ. ಅದೇ ಪ್ರಕಾರ, ಅಣು ಚೈತನ್ಯವೂ ಸಹ ಬೃಹತ್ತಿನ ಭಾವನೆಯನ್ನು ತಾಳುತ್ತ ತಾಳುತ್ತ ಒಂದು ದಿನ ಬೃಹತ್ತಿನ "ಭೂಮಾ ಚೈತನ್ಯ"ದಲ್ಲಿ ರೂಪಾಂತರಗೊಳ್ಳುತ್ತದೆ. ಭೂಮಾ ಸತ್ತೆಯಲ್ಲಿ ತನ್ನನ್ನು ಲೀನ ಗೊಳಿಸುವುದಕ್ಕಾಗಿ ಅಣುವು "ನಾನು ಅವನೇ ಇದ್ದೇನೆ"ಯ ಭಾವನೆಯಲ್ಲಿ ಮೈಮರೆಯಬೇಕಾಗುತ್ತದೆ. ಆ ಕೂಡಲೇ ಅವನು, ಒಂದು ದಿನ, ಅದರಲ್ಲಿ ರೂಪಾಂತರಗೊಳ್ಳಬಲ್ಲನು. ಆದ್ದರಿಂದ ಭಕ್ತಿ ಅರ್ಥಾತ್ ಭೂಮಾ ಚೈತನ್ಯ ವನ್ನು ಕುರಿತು ಇರುವ ಆಕರ್ಷಣೆಯು ಮಾನವನನ್ನು ಭೂಮಾದಲ್ಲಿ ನೆಲೆ ಗೊಳಿಸುತ್ತದೆ. ಭಕ್ತಿಯ ಮೂಲಕ ಭೂಮಾದಲ್ಲಿ ನೆಲೆಗೊಳ್ಳುವ ಆಕಾಂಕ್ಷೆ ಇಲ್ಲವೆ ಮುಮುಕ್ಷುತ್ವವು ಕೂಡ ಅನುಗ್ರಹ ಪಡೆಯುವ ಪ್ರಯತ್ನವೇ ಆಗಿದೆ. ಮತ್ತು ಇದರಿಂದಾಗಿ ಭಕ್ತಿಯು ಸಹ, ಪ್ರಾರ್ಥನೆಯೇ ಆಗಿದೆ; ಎಂದು ಕೆಲ ಜನರು ಹೇಳುತ್ತಾರೆ. ಆದರೆ, ಇಂಥ ಭಾವನೆಯು ಅರ್ಥ ಹೀನವಾಗಿದೆ. ಏಕೆಂದರೆ, ಮಾನವನ ಸೃಷ್ಟಿಯ ಹಿಂದೆ ಭಗವಾನನ ಉದ್ದೇಶವು ತನ್ನ ಪ್ರತಿ ಯೊಂದು ಅಣುವನ್ನು ಸಹ ತನ್ನಂತೆಯೇ ಮುಕ್ತ ಪುರುಷನನ್ನು ಮಾಡುವುದು ಹಾಗೂ ಪರಮ ಸತ್ತೆಯಲ್ಲಿ ವಿಲೀನಗೊಳಿಸುವುದೇ ಆಗಿದೆ. ಜಗತ್ತಿನಲ್ಲಿ ಚಿಕ್ಕ, ದೊಡ್ಡ ಪ್ರತಿಯೊಂದರ ಸೃಷ್ಟಿಯ ಹಿಂದೆ ಇದೊಂದೇ ಉದ್ದೇಶವು ಕಾರ್ಯ ಮಾಡುತ್ತದೆ. ಆದ್ದರಿಂದ ಸ್ರಷ್ಟಾನ ಉದ್ದೇಶವನ್ನು ಕಾರ್ಯನ್ವಿತಗೊಳಿಸು ವುದಕ್ಕೋಸುಗ ಹಾಗೂ ಮಾನವ ಜನ್ಮವನ್ನು ಸಾರ್ಥಕಗೊಳಿಸಲಿಕ್ಕೋಸುಗ ಒಂದು ವೇಳೆ,ಯಾರಾದರೂ ಭಕ್ತಿಯ ಆಶ್ರಯ ಪಡೆದರೆ, ಅವರ ಈ ಪ್ರಯತ್ನ ವನ್ನು ಭಗವಾನನ ಅನುಗ್ರಹ ಪಡೆಯುವ ಪ್ರಯತ್ನವೆಂದು ಹೇಳಲಾಗದು. ಏಕೆಂದರೆ, ಒಂದು ವೇಳೆ, ಈ ಪ್ರಯತ್ನವನ್ನು ಮಾಡದಿದ್ದರೂ ಸಹ, ಇಲ್ಲವೆ ಅದಕ್ಕೆ ವಿಪರೀತವಾಗಿ ನಡೆದುಕೊಂಡರೂ ಸಹ, ಅವನು ಸ್ವಲ್ಪ ದಿನ ಮೊದಲು ಇಲ್ಲವೆ ಸ್ವಲ್ಪ ದಿನಗಳ ನಂತರ, ಅದೇ ಹಾದಿಯ ಅನುಶೀಲನೆಯನ್ನು ಮಾಡ ಬೇಕಾಗುತ್ತದೆ. ಆದ್ದರಿಂದ, ಭಕ್ತಿಯು ಪ್ರಾರ್ಥನೆ ಇಲ್ಲವೆ ಸ್ತುತಿ ಅಲ್ಲ. ಪ್ರಾರ್ಥನೆ ಇಲ್ಲವೆ ಸ್ತುತಿಯು ವ್ಯರ್ಥ ಕಾಲಹರಣವಾಗಿರುವಾಗ, ಭಕ್ತಿಯು ಪರಮ ಪದವನ್ನು ಪಡೆಯುವಲ್ಲಿ ಅವಲಂಬಿಸಲು ಯೋಗ್ಯವಾದ ಮತ್ತು ಶ್ರೇಷ್ಠವಾದ ಉಪಾಯವಾಗಿದೆ.

ಸ್ತುತಿ ಇಲ್ಲವೆ ಪ್ರಾರ್ಥನೆಯ ಮೂಲಕ ಕರ್ಮದಿಂದ ಬಿಡುಗಡೆ ದೊರೆ ಯದು. ಹಾಗಾದರೆ, ಇದರಿಂದ ಬಿಡುಗಡೆ ಹೊಂದುವ ಉಪಾಯವು

ಯಾವುದು? ಇದರ ಒಂದೇ ಒಂದು ಉಪಾಯವೆಂದರೆ, ಕೆಟ್ಟ ಕರ್ಮದಿಂದ ದೂರವಿರುವುದೇ ಆಗಿದೆ. ಏಕೆಂದರೆ, ಕೆಟ್ಟ ಕರ್ಮದ ಪರಿಣಾಮವಾಗಿ ಮಾನವನ ಮೇಲೆ ಪ್ರಕೃತಿಯ ಬಂಧನವು ಹೆಚ್ಚು ಹೆಚ್ಚು ದೃಢವಾಗುತ್ತದೆ. ಬೆಂಕಿಯಲ್ಲಿ ಕೈಯಿಟ್ಟರೆ, ಕೈ ಸುಟ್ಟೇ ಸುಡುವುದು. ಸ್ತುತಿ ಇಲ್ಲವೆ ಪ್ರಾರ್ಥನೆಯಿಂದ ಇಲ್ಲಿ ಯಾವ ಫಲವೂ ಸಿಗದು. ಆದ್ದರಿಂದ ಸುಡುವ ಕಷ್ಟದಿಂದ ರಕ್ಷಿಸಿಕೊಳ್ಳಲು ಕೈಯನ್ನು ಬೆಂಕಿಯಲ್ಲಿ ಇಡಕೂಡದು. ಅದೇ ಪ್ರಕಾರ, ಕೆಟ್ಟ ಕರ್ಮವನ್ನು ಮಾಡದಿರುವುದರಿಂದ, ಕೆಟ್ಟ ಫಲ ಭೋಗದ ಸಂಭವವೂ ಇರದು. ಜಗತ್ತಿನ ಸೃಷ್ಟಿಯು ಹಿಂದೆ ಯಾವಾಗ ಸಗುಣ ಬ್ರಹ್ಮನ ಉದ್ದೇಶವು ತನ್ನ ಪ್ರತಿಯೊಂದು ಅಣುವಿನ ಮುಕ್ತಿಯ ಉಪಾಯ ಮಾಡುವುದೇ ಇರುವುದಾದರೆ, ಪ್ರಕೃತಿಯ ನಿಯಮಾನುಸಾರ ಪ್ರತಿಕರ್ಮದ ಭೋಗವು ಸಹ, ಮಾನವನನ್ನು ಅವಶ್ಯವಾಗಿಯೇ ಆ ಶಾಶ್ವತ ಮುಕ್ತಿಯತ್ತ ಕ್ರಮೇಣ ಮುಂದೆ ಕರೆದೊಯ್ಯುವುದೇ ಆಗಿದೆ. ಮಾನವನನ್ನು ಕೆಟ್ಟ ಕರ್ಮದಿಂದ ತಡೆದು ಮುಕ್ತಿ ಮಾರ್ಗದತ್ತ ಆಕರ್ಷಿಸುವ ಮಂಗಲಮಯ ಅಭಿಪ್ರಾಯದಿಂದ ಭಗವಾನನು ಪ್ರತಿಕರ್ಮ ಭೋಗದ ಈ ಕಠೋರ ನಿಯಮವನ್ನು ನಿರ್ಮಿಸಿದ್ದಾನೆ. ದಂಡದ ಮೂಲಕ ಭಗವಾನನು ಮಾನವನಿಗೆ ಕೆಟ್ಟ ಕರ್ಮದಿಂದ ದೂರವಿರುವ ಶಿಕ್ಷೆಯನ್ನು ನೀಡುತ್ತಾನೆ. ಆದರೆ, ಮಾನವನು ತನ್ನ ಅಜ್ಞಾನದ ಕಾರಣ ಈ ಪಾಠವನ್ನು ಗ್ರಹಿಸದೆ ತನ್ನ ದುರ್ಭಾಗ್ಯಕ್ಕಾಗಿ ಭಗವಾನನಿಗೆ ದೋಷ ಕೊಡುತ್ತಾನೆ.

ತನ್ನ ದುರ್ಭಾಗ್ಯಕ್ಕಾಗಿ ಭಗವಾನನಿಗೆ ದೋಷ ಕೊಡುವುದು, ಅಥವಾ ದುರ್ಭಾಗ್ಯದಿಂದ ಬಿಡುಗಡೆ ಪಡೆಯುವುದಕ್ಕಾಗಿ ಪ್ರಾರ್ಥನೆ ಇಲ್ಲವೆ ಸ್ತುತಿಯ ಆಶ್ರಯ ಪಡೆಯುವುದು, ಎಳ್ಳಷ್ಟೂ ಯುಕ್ತಿಪೂರ್ಣವಾಗಿಲ್ಲ. ಬುದ್ಧಿವಂತ ಮನುಷ್ಯನು ಕಷ್ಟ ಕಾರ್ಪಣ್ಯಗಳ ಭೋಗದ ಮಾಧ್ಯಮದ ಪರಮ ಕಲ್ಯಾಣಮಯಿ ಭಗವಾನನ ಅಮೋಘ ನಿರ್ದೇಶನವನ್ನು ಗ್ರಹಿಸುತ್ತಾನೆ; ಹಾಗೂ ಕೆಟ್ಟ ಕರ್ಮದಿಂದ ನಿವೃತ್ತನಾಗುವ ಸಾಧನೆಯಲ್ಲಿ ತೊಡಗುತ್ತಾನೆ. ಆದ್ದರಿಂದ, ಕೆಟ್ಟ ಕರ್ಮವನ್ನು ಬಿಡುವುದೇ ಬುದ್ಧಿವಂತಿಕೆಯ ಕಾರ್ಯವಾಗಿದೆ.

## ೭

## ಮಾನವನ ಲಕ್ಷ್ಯವು ಯಾವುದು?

ಸಗುಣ ಬ್ರಹ್ಮನ ಸೃಷ್ಟಿಯು ರಹಸ್ಯದೊಳಗೆ ಅನಂತ ಸಂಖ್ಯೆಯ ಅಣುಗಳ ಮುಕ್ತಿಯ ಕಾಮನೆಯು ಗುಪ್ತ ಭಾವದಿಂದ ಇದೆ. ಸೂಕ್ಷ್ಮ ಅಣು ಸಮೂಹವನ್ನು ವಿಭಜಿಸುವುದಕ್ಕಾಗಿ, ಅದನ್ನು ಜಡ ಕ್ಷಿತಿ ತತ್ತ್ವದಲ್ಲಿ ತರಬೇಕಾಯಿತು. ಇದರಿಂದ, ಸಗುಣ ಬ್ರಹ್ಮನು ಓರ್ವ ಅನಂತ ಜ್ಞಾನ ಸತ್ತೆಯಾಗಿದ್ದಾನೆ. ಮತ್ತು ಅವನು ತನ್ನ ಸೂಕ್ಷ್ಮತೆಯ ಕಾರಣ ಅವಿಭಾಜ್ಯನಾಗಿದ್ದಾನೆ; ಎಂಬುದು ತಿಳಿದುಬರುತ್ತದೆ. ಈ ಅನಂತ ಜ್ಞಾನ ಸತ್ತೆಯ ಕಲ್ಪನೆಯೇ ಸೃಷ್ಟಿಯಾಗಿದೆ. ಸೃಷ್ಟಿ ಚಕ್ರದ ಲೀಲೆಯಿಂದ, ಈ ಕಲ್ಪನಾ ಧಾರೆಯು ಸಗುಣನ ಚಿತ್ತದಿಂದ ಹೊರಟು ಅವನಲ್ಲಿಯೇ ಲೀನವಾಗುತ್ತದೆ; ಮತ್ತು ಮಾನವನ ಸ್ಥಾನವೂ ಸಹ ಈ ಕಲ್ಪನಾ ತರಂಗದ ಕೊನೆಗೆ ಇದೆ; ಎಂಬ ತಥ್ಯವು ಹೊರಹೊಮ್ಮುತ್ತದೆ. ಆದ್ದರಿಂದ, ಕೆಲವು ದಿನ ಮೊದಲು ಇಲ್ಲವೆ ಕೆಲವು ದಿನಗಳ ನಂತರ, ಮಾನವನು ಈ ಕಲ್ಪನಾ ತರಂಗದಲ್ಲಿ ಲೀನವಾಗಲೇ ಬೇಕು. ಸಗುಣ ಬ್ರಹ್ಮನು ಓರ್ವ ಸೂಕ್ಷ್ಮ ಸತ್ತೆಯಾಗಿದ್ದಾನೆ. ಆದ್ದರಿಂದ, ಅವನಲ್ಲಿ ಲೀನವಾದ ಬಳಿಕ, ಸೂಕ್ಷ್ಮ ಸತ್ತೆಯ ರೂಪದಲ್ಲಿ ಸಹ, ಮಾನವನ ವೈಯಕ್ತಿಕ ಅಸ್ತಿತ್ವದ ಯಾವ ಸ್ಥಾನವೂ ಇರುವುದಿಲ್ಲ.ಅವನು ಒಂದು ಅನಂತ ಸತ್ತೆಯಾಗಿರುವ ಕಾರಣ, ಎರಡನೆಯದರ ಅಸ್ತಿತ್ವವು ಇರಲಾರದು. ಇದರಿಂದ, ಅದರಲ್ಲಿ ಲೀನವಾಗುವುದರಿಂದ, ಮಾನವನು ತಾನೇ ಸಗುಣ ಬ್ರಹ್ಮನಾಗುತ್ತಾನೆ. ಉದಾಹರಣೆಗೆ ನೋಡಿರಿ: ಒಂದು ಹನಿ ನೀರನ್ನು ಒಂದು ಗ್ಲಾಸು–ನೀರಿನಲ್ಲಿ ಕೂಡಿಸಿದ ಬಳಿಕ, ಆ ಹನಿಯು ತನ್ನ ಪೃಥಕ್ ಅಸ್ತಿತ್ವವನ್ನು ಸಮಾಪ್ತಗೊಳಿಸುತ್ತದೆ. ಮತ್ತು ಅದು ಗ್ಲಾಸಿನ ನೀರಿನಲ್ಲಿ ಸೇರಿ ಒಂದಾಗುತ್ತದೆ. ಅದೇ ಪ್ರಕಾರ, ಮಾನವನು ಸಹ, ಪರಮ ಶಾಶ್ವತ ಸತ್ತೆಯಲ್ಲಿ ಲೀನವಾದ ಮೇಲೆ, ತನ್ನ ಪೃಥಕ್ ಅಸ್ತಿತ್ವ

ವನ್ನು ಕಳೆದುಕೊಳ್ಳುತ್ತಾನೆ.

ಸಗುಣ ಬ್ರಹ್ಮನಲ್ಲಿ ಅಣು ಚೈತನ್ಯವು ಲೀನವಾಗುವುದೇ ಸೃಷ್ಟಿಯ ಪರಮ ಮತ್ತು ಚರಮ ಲಕ್ಷ್ಯವಲ್ಲ. ನಿರ್ಗುಣತ್ವವನ್ನು ಸಂಪಾದಿಸುವ ಮುನ್ನ ಅಣು ಚೈತನ್ಯವು ಸಗುಣ ಬ್ರಹ್ಮನೇ ಆಗುತ್ತದೆ. ಇದರಿಂದ, ಜಗತ್ತನ್ನು ಸೃಷ್ಟಿಸಿದ ಸಗುಣ ಬ್ರಹ್ಮನ ಉದ್ದೇಶ್ಯವೇ ವ್ಯರ್ಥವಾಗುತ್ತದೆ.

ತನ್ನ ಪ್ರತಿಯೊಂದು ಅಣುವು ನಿರ್ಗುಣತ್ವವನ್ನು ಹೊಂದಲಿ, ಎಂಬುದೇ ಸಗುಣ ಬ್ರಹ್ಮನ ಇಚ್ಛೆಯಾಗಿದೆ. ಅಣುವಿನ ಸಾಧನಾಪೂರ್ಣ ಪ್ರಯತ್ನದ ಕಾಲಕ್ಕೆ ಅಥವಾ ಯಾವಾಗ ಭೂಮಾ ಮಾನಸ ತರಂಗದಲ್ಲಿ ಅಣುವು ಸಗುಣತ್ವ ವನ್ನು ಸಂಪಾದಿಸುವುದೋ, ಆ ಕಾಲಕ್ಕೆ ಅವನ ಇಚ್ಛೆಯು ವ್ಯರ್ಥವಾಗುತ್ತದೆ. ಸಗುಣ ಸತ್ತೆಯಲ್ಲಿ ಅಣುವು ಲೀನವಾಗಿ ಹೋಗುವುದನ್ನೇ ಮುಕ್ತಿ ಎನ್ನುತ್ತಾರೆ. ಅರ್ಥಾತ್ ಕಲ್ಪನಾ ತರಂಗ ಅಥವಾ ಸೃಷ್ಟಿ ಚಕ್ರದಿಂದ ಮುಕ್ತಿ. ಆದರೆ, ಇದು ನಿಜವಾಗಿ ಮುಕ್ತಿಯಲ್ಲ. ಏಕೆಂದರೆ, ಕಲ್ಪನಾ ತರಂಗದಲ್ಲಿ ಅಣುವು ಈ ಸೂಕ್ಷ್ಮ ಸಗುಣ ಸ್ಥಿತಿಯಿಂದ, ಮರಳಿ ಸೃಷ್ಟಿ ಚಕ್ರದಲ್ಲಿ ಬರಬೇಕಾಗುತ್ತದೆ. ಇದರಿಂದ, ಈ ಮುಕ್ತಿಯು ಶಾಶ್ವತ ಮುಕ್ತಿಯಲ್ಲ. ಏಕೆಂದರೆ, ಇದರಿಂದ ಭೂಮಾದ ಸೃಷ್ಟಿ ಲೀಲೆಯ ಮೂಲ ಉದ್ದೇಶ್ಯವು ಪೂರ್ಣವಾಗುವುದಿಲ್ಲ. ಅರ್ಥಾತ್ ಪ್ರಕೃತಿಯ ಬಂಧನದಿಂದ ಶಾಶ್ವತ ಮುಕ್ತಿಯು ದೊರೆಯುವುದಿಲ್ಲ.

ಪರಮ ನಿರ್ಗುಣ ಸತ್ತೆಯಲ್ಲಿ ಲೀನವಾಗಿ, ನಿರ್ಗುಣತ್ವವನ್ನು ಸಂಪಾದಿಸುವುದು ಇಲ್ಲವೆ ಪ್ರಕೃತಿಯ ಬಂಧನದಿಂದ ಪೂರ್ಣವಾಗಿ ಮುಕ್ತವಾಗುವುದೇ ನಿಜವಾದ ಮುಕ್ತಿಯಾಗಿದೆ. ಮತ್ತು ಇದನ್ನು ಮೋಕ್ಷವೆನ್ನುತ್ತಾರೆ. ನಿರ್ಗುಣದಲ್ಲಿ ಯಾವನು ಒಂದು ಸಲ ಲೀನವಾಗುವನೋ, ಅವನ ಮೇಲೆ, ಪ್ರಕೃತಿಯು ಪುನಃ ತನ್ನ ಬಂಧನ ಶಕ್ತಿಯನ್ನು ಆರೋಪಿಸಿ, ಅವನನ್ನು ಸೃಷ್ಟಿ ಚಕ್ರದಲ್ಲಿ ತರಲಾರದು. ಮತ್ತು ಈ ರೀತಿ, ಅವನು ಪರಮ ಪುರುಷನ ಚಿರಂತನ ಇಚ್ಛೆಯನ್ನು ಈಡೇರಿಸುತ್ತಾನೆ. ಇದರಿಂದ, ಸಗುಣ ಬ್ರಹ್ಮನಲ್ಲಿ ಲೀನವಾಗುವುದೇ, ಅರ್ಥಾತ್ ಮುಕ್ತಿಯನ್ನು ಸಂಪಾದಿಸುವುದೇ, ಮಾನವನ ಚರಮ ಅಥವಾ ಪರಮ ಲಕ್ಷ್ಯವಲ್ಲ. ಅವನ ಲಕ್ಷ್ಯವು ಇನ್ನೂ ಮಹಾನ್ ಇದೆ. ಅವನ ಲಕ್ಷ್ಯವು ಮೋಕ್ಷ ಇಲ್ಲವೆ ಕೈವಲ್ಯ–ಮುಕ್ತಿಯಾಗಿದೆ.

೮

# ಆಧ್ಯಾತ್ಮಿಕ ಅನುಶೀಲನೆ ಮತ್ತು ಅದರ ಪ್ರಯೋಜನೆ

ಪ್ರಕೃತಿಯ ಬಂಧನದಿಂದ ಬಿಡುಗಡೆ ಪಡೆಯುವುದಕ್ಕಾಗಿ ಮಾಡುವ ಎಲ್ಲ ಪ್ರಕಾರದ ಪ್ರಯತ್ನಗಳೇ ಸಾಧನೆ ಇಲ್ಲವೆ ಆಧ್ಯಾತ್ಮಿಕ ಅನುಶೀಲನೆಯಾಗಿದೆ.

ಈಗ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ಪ್ರಕೃತಿಯ ಬಂಧನದಿಂದ ಪೂರ್ಣವಾಗಿ ಮುಕ್ತನಾಗುವ ಸಂಭವವಿದೆಯೋ? ಇಲ್ಲವೊ? ಏಕೆಂದರೆ, ಒಂದು ವೇಳೆ ಹೀಗಿಲ್ಲವಾದರೆ, ಆಧ್ಯಾತ್ಮಿಕ ಅನುಶೀಲನೆ ಇಲ್ಲವೆ ಸಾಧನೆಯಲ್ಲಿ ಸಮಯವನ್ನು ಹಾಳು ಮಾಡುವಲ್ಲಿ ಏನೂ ಅರ್ಥವಿಲ್ಲ. ಸೃಷ್ಟಿ ತತ್ತ್ವದ ಪ್ರಸಂಗದಲ್ಲಿ ಈ ಮುನ್ನವೇ, ಯಾವ ಪ್ರಕಾರ ಸಗುಣ ಬ್ರಹ್ಮನು ತನ್ನ ಬದ್ಧಾವಸ್ಥೆ (ಪ್ರಜಾಪತಿ) ಯಿಂದ ಮುಕ್ತ (ಹಿರಣ್ಯ ಗರ್ಭ) ನಾದನು? ಎಂಬುದನ್ನು ಕುರಿತು ಹೇಳಲಾಗಿದೆ. ಅಂದ ಮೇಲೆ, ನಾವು ಸಾಧನೆಯ ಮೂಲಕ ಪ್ರಕೃತಿಯ ಬಂಧನದಿಂದ ಮುಕ್ತಿ ಲಾಭವನ್ನು ಪಡೆಯುವ ಸಂಭವಪಿದೆ; ಎಂಬ ಸಿದ್ಧಾಂತವನ್ನು ತಲುಪುತ್ತೇವೆ. ಪ್ರಕೃತಿಯ ಬಂಧನದಿಂದ ಮುಕ್ತಿ ಪಡೆಯುವುದರ ಅರ್ಥವೆಂದರೆ, ನಿರ್ಗುಣತ್ವವನ್ನು ಸಂಪಾದಿಸುವುವೇ ಸರಿ. ಏಕೆಂದರೆ ಆಗಮಾತ್ರ, ಪ್ರಕೃತಿಯ ಬಂಧನದಿಂದ ಪೂರ್ಣವಾಗಿ ಮುಕ್ತನಾಗಬಹುದಾಗಿದೆ. ಪ್ರಜಾಪತಿಯು ಸಾಧನೆ ಮಾಡಿಯೇ ಹಿರಣ್ಯಗರ್ಭನಾಗಿದ್ದಾನೆ. ಆದ್ದರಿಂದ ಪ್ರಕೃತಿಯ ಬಂಧನದಿಂದ ಮುಕ್ತನಾಗುವ ಒಂದೇ ಒಂದು ಉಪಾಯವೆಂದರೆ ಸಾಧನೆ ಇಲ್ಲವೆ ಆಧ್ಯಾತ್ಮಿಕ ಅನುಶೀಲನೆಯಾಗಿದೆ.

ಸೃಷ್ಟಿ ತತ್ತ್ವದಿಂದ, ಪ್ರತಿ ಸಂಚರ ಧಾರೆಯಲ್ಲಿ ಭೂಮಾ ಮಾನಸದಿಂದ ಉತ್ಪನ್ನವಾದ ಪಂಚಭೂತಾತ್ಮಕ ದೇಹದಲ್ಲಿಯೇ ಅಣು ಚೈತನ್ಯದ ವ್ಯಾಪಕ ಅಭಿವ್ಯಕ್ತಿಯಾಗುತ್ತಿದೆ ಮತ್ತು ಪೂರ್ಣತರ ಅಭಿವ್ಯಕ್ತಿಯೊಂದಿಗೆ ಪ್ರಕೃತಿಯ

ಪ್ರಭಾವದಿಂದ ಅಣುಚೈತನ್ಯವು ಮನದೊಂದಿಗೆ ಕೂಡಿಕೊಳ್ಳುತ್ತಿದೆ ಎಂಬುದನ್ನು ಕಂಡುಕೊಳ್ಳುತ್ತೇವೆ. ಪ್ರಕೃತಿಯ ಸತ್ತ್ವ, ರಜ ಮತ್ತು ತಮ-ಈ ಮೂರು ಗುಣಗಳು ಮನದ ಮಹತ್ತತ್ತ್ವ, ಅಹಂ ತತ್ತ್ವ ಮತ್ತು ಚಿತ್ತಗಳನ್ನು ಸೃಷ್ಟಿಸುತ್ತವೆ. ಹತ್ತು ಇಂದ್ರಿಯಗಳ ಮಾಧ್ಯಮದಿಂದ ಚಿತ್ತದ ಕ್ರಿಯೆಯು ಮತ್ತಷ್ಟು ವಿಸ್ತೃತವಾಗುತ್ತದೆ. ಅರ್ಥಾತ್ ಪ್ರಕೃತಿಯ ಹೆಚ್ಚುತ್ತಿರುವ ಪ್ರಭಾವದ ಕಾರಣ, ಅಣು ಚೈತನ್ಯವು ಮಹತ್ತತ್ತ್ವ ಇಲ್ಲವೆ ಬುದ್ಧಿ ತತ್ತ್ವದಲ್ಲಿ ಪರಿಣಮಿಸುತ್ತದೆ. ಗುಣ ಬಂಧನವು ದೃಢವಾಗುವುದರೊಂದಿಗೆ, ಅದು ಕ್ರಮೇಣ ಅಹಂ ತತ್ತ್ವ ಮತ್ತು ಚಿತ್ತಗಳಲ್ಲಿ ರೂಪಾಂತರಗೊಳ್ಳುತ್ತದೆ. ಹೀಗೆ ಹತ್ತು ಇಂದ್ರಿಯಗಳ ಮಾಧ್ಯಮದಿಂದ ಚಿತ್ತವು ಸ್ಥೂಲ ಕರ್ಮಗಳಿಗೆ ಅಂಟಿಕೊಳ್ಳುತ್ತದೆ. ಅಣು ಚೈತನ್ಯದ ಮೇಲೆ. ಪ್ರಕೃತಿಯ ಪ್ರಭಾವವು ಮೆಲ್ಲ ಮೆಲ್ಲನೆ ವ್ಯಾಪಿಸುತ್ತದೆ. ಮತ್ತು ಇದರಿಂದ ಅಣು ಚೈತನ್ಯವು ಪ್ರಕೃತಿಯ ಪ್ರಭಾವ ಸರಿಸಿ ಮೆಲ್ಲ–ಮೆಲ್ಲನೆ ಸ್ವರೂಪಾವಸ್ಥೆಗೆ ಹಿಂತಿರುಗುತ್ತದೆ. ಸೂಕ್ಷ್ಮತೆಯನ್ನು ಪಡೆದುಕೊಳ್ಳುವ ಧಾರೆಯಲ್ಲಿ ಇದು ಮೊದಲು ಚಿತ್ತದಿಂದ ಅಹಂ ತತ್ತ್ವದಲ್ಲಿ, ಅಹಂ ತತ್ತ್ವದಿಂದ ಮಹತತ್ತ್ವದಲ್ಲಿ ಮತ್ತು ಎಲ್ಲಕ್ಕಿಂತ ಕೊನೆಗೆ ಮಹತ್ತತ್ತ್ವದಿಂದ ಅಣುಚೈತನ್ಯದಲ್ಲಿ ಹಿಂತಿರುಗಿ ಬಂದು, ಪ್ರಕೃತಿಯ ಬಂಧನದಿಂದ ಪೂರ್ಣವಾಗಿ ಮುಕ್ತವಾಗುತ್ತದೆ. ಈ ಪ್ರಕಾರ, ಆಧ್ಯಾತ್ಮಿಕ ಅನುಶೀಲನೆಯ ತಾತ್ಪರ್ಯವೆಂದರೆ, ಮೆಲ್ಲ–ಮೆಲ್ಲನೆ, ಪ್ರಕೃತಿಯ ಗುಣಬಂಧನದ ಪ್ರಭಾವದಿಂದ, ಪೂರ್ಣವಾಗಿ, ತನ್ನನ್ನು ಮುಕ್ತಗೊಳಿಸಿಕೊಳ್ಳುವುದಾಗಿದೆ. ಮೊದಲೇ ಹೇಳಿರುವಂತೆ, ಮಾನವನು ಚೈತನ್ಯದ ಪ್ರೇರಣೆಯಿಂದಲೇ ಸಾಧನೆಯನ್ನು ಮಾಡುತ್ತಾನೆ. ಚಿತ್ತ ಭೂಮಿಯ ಚೇತನೆಯೇ ಸಾಧನೆಯ ಪ್ರಥಮ ಕ್ಷೇತ್ರವಾಗಿದೆ. ಚಿತ್ತದ ಕ್ಷೇತ್ರದಲ್ಲಿ, ಸಾಧನೆಯ ಫಲವಾಗಿ ಚಿತ್ತ ಧಾತುವು ಅಹಂ ತತ್ತ್ವದಲ್ಲಿ ರೂಪಾಂತರಗೊಳ್ಳುತ್ತದೆ. ಇನ್ನು ಅಹಂ ತತ್ತ್ವವು, ಸಾಧನೆಯ ಎರಡನೆಯ ಕ್ಷೇತ್ರವಾಗಿದೆ. ಸಾಧನೆಯ ಫಲವಾಗಿ, ಅಹಂ ತತ್ತ್ವವು ಪ್ರಕೃತಿಯ ರಜೋಗುಣದ ಪ್ರಭಾವದಿಂದ ಮುಕ್ತವಾಗಿ, ಮಹತ್ತತ್ತ್ವದಲ್ಲಿ ಸೇರುತ್ತದೆ. ಈ ಪ್ರಕಾರದಿಂದ ಕೇವಲ ಮಹತ್ತತ್ತ್ವ ಇಲ್ಲವೆ ವಿಶುದ್ಧ ನಾನು–ತನದ ಬೋಧೆಯೇ ಉಳಿಯುತ್ತದೆ. ಭೂಮಾದ ನಾನುವಿನಿಂದ ಬೇರೆಯಲ್ಲದ, ಈ ಮಹತತ್ತ್ವದ ಸ್ಥಿತಿಯು ಇಲ್ಲವೆ ವಿಶುದ್ಧ ನಾನು–ತನದ ಬೋಧೆಯೇ ಸವಿಕಲ್ಪ ಸಮಾಧಿ ಎನಿಸಿದೆ. ಇದಾದ ನಂತರ ಸಾಧನೆಯ ಮೂಲಕ, ಮಹತತ್ತ್ವವು ಪ್ರಕೃತಿಯ ಸತ್ತ್ವಗುಣ ಬಂಧನದಿಂದ ಮುಕ್ತವಾಗಿ, ಸಂಪೂರ್ಣವಾಗಿ ಚೈತನ್ಯದಲ್ಲಿ ಸೇರು



ತ್ತದೆ. ಅರ್ಥಾತ್ ಚೈತನ್ಯವು ಪ್ರಕೃತಿಯ ಬಂಧನದಿಂದ ಮುಕ್ತವಾಗುತ್ತದೆ. ಮತ್ತು ಈ ಅವಸ್ಥೆಗೆ ನಿರ್ವಿಕಲ್ಪ ಸಮಾಧಿ ಎನ್ನುತ್ತಾರೆ. ಆದ್ದರಿಂದ ಸಾಧನೆಯ ಪ್ರಾರಂಭವು ಚಿತ್ತದಲ್ಲಿ ಆಗುತ್ತದೆ. ಅಹಂ ತತ್ತ್ವದಲ್ಲಿ ಅದು ಪರಿಪಕ್ವಗೊಳ್ಳುತ್ತದೆ. ಮತ್ತು ಮಹತ್ತತ್ತ್ವದಲ್ಲಿ ಅದು ಸಮ್ಯಕ್ ರೂಪ ತಾಳುತ್ತದೆ.

ಪ್ರಕೃತಿಯ ಗುಣ ಬಂಧನದಿಂದ ಮನವನ್ನು ಮುಕ್ತಗೊಳಿಸುವುದು ಸುಲಭ ಕಾರ್ಯವಲ್ಲ. ಅನೇಕರ ಮನದಲ್ಲಿ, ಮಾನವೀಯ ಅಣುಚೈತನ್ಯವನ್ನು ಅಣು ಪ್ರಕೃತಿಯೇ ಗುಣಾನ್ವಿತಗೊಳಿಸುವುದೋ ಹೇಗೆ? ಎಂಬ ಪ್ರಶ್ನೆ ಏಳುತ್ತದೆ. ಇಲ್ಲ; ಹೀಗಾಗುವುದಿಲ್ಲ. ನಿರ್ಗುಣ ಬ್ರಹ್ಮನಲ್ಲಿ ಪ್ರಕೃತಿಯು ಪುರುಷನನ್ನು ಗುಣಾನ್ವಿತಗೊಳಿಸಲಾರದು. ಏಕೆಂದರೆ, ಅಲ್ಲಿ ಅದು ಪುರುಷನಿಗಿಂತ ದುರ್ಬಲವಾಗಿರುತ್ತದೆ. ಯಾವ ಕಾರಣದಿಂದ ಅನಂತ ಪ್ರಕೃತಿಯು ಪುರುಷನನ್ನು ಗುಣಾನ್ವಿತಗೊಳಿಸಲಾರದೋ, ಅದೇ ಕಾರಣ, ಅಣು ಪ್ರಕೃತಿಯು ಸಹ, ಅಣು ಪುರುಷನನ್ನು ಗುಣಾನ್ವಿತಗೊಳಿಸಲಾರದು. ಆದ್ದರಿಂದ, ಸಗುಣ ಬ್ರಹ್ಮನಲ್ಲಿಯೇ ಅಣುಪ್ರಕೃತಿಯು ಅಣುಪುರುಷನನ್ನು ಗುಣಾನ್ವಿತಗೊಳಿಸುತ್ತದೆ ಎಂಬ ಧಾರಣೆಯು ತಪ್ಪಾಗಿದೆ. ಅಂದ ಮೇಲೆ, ಅವಶ್ಯವಾಗಿಯೇ, ಬೇರಾವುದೋ ಪ್ರಕೃತಿಯು ಪುರುಷನನ್ನು ಗುಣಾನ್ವಿತಗೊಳಿಸುತ್ತದೆ. ಏಕೆಂದರೆ, ಪ್ರಕೃತಿಯ ಗುಣ ಬಂಧನವಿಲ್ಲದಿದ್ದರೆ, ಸಗುಣ ಬ್ರಹ್ಮನ ಸೃಷ್ಟಿಯೇ ಆಗಲಾರದು. ಆದ್ದರಿಂದ, ಎರಡು ಅಣು ಪ್ರಕೃತಿಗಳು ಅಣು ಪುರುಷನನ್ನು ಗುಣಾನ್ವಿತಗೊಳಿಸಿವೆ; ಎಂದು ವಿಚಾರ ಮಾಡಬಹುದು. ಆದರೆ ಇದರಿಂದ, ಅನಂತ ಪುರುಷರನ್ನೂ ಸಹ, ಎರಡು ಅನಂತ ಪ್ರಕೃತಿಗಳು ಗುಣಾನ್ವಿತಗೊಳಿಸುತ್ತವೆ; ಎಂಬ ವಿಚಾರದ ಸಂಭಾವ್ಯತೆ ಉಂಟಾಗುತ್ತದೆ. ಆದರೆ ಇದು ಯುಕ್ತಿ ಸಂಗತವಾಗದು. ಪ್ರಕೃತಿಯು ಒಂದೇ ಸತ್ತೆಯಾಗಿದೆ. ಇದನ್ನು ಅಣು ಇಲ್ಲವೆ ಅಂಶದಲ್ಲಿ ವಿಭಜಿಸಲಾಗದು. ಇದರಿಂದ, ಕೇವಲ ಅನಂತ ಪ್ರಕೃತಿಯೇ, ಪ್ರತಿಯೊಂದು ಅಣುಚೈತನ್ಯವನ್ನು ಗುಣಾನ್ವಿತಗೊಳಿಸಬಲ್ಲದು, ಅನಂತ ಪ್ರಕೃತಿಯು ತನ್ನ ಅನಂತ ಶಕ್ತಿಯ ಮೂಲಕ ಅನಂತ–ಪುರುಷನನ್ನು ಗುಣಾನ್ವಿತಗೊಳಿಸುತ್ತದೆ ಮತ್ತು ಅಣುಚೈತನ್ಯವು, ಮುಕ್ತಿಯ ಉದ್ದೇಶ್ಯದಿಂದ ಈ ಅನಂತ ಪ್ರಕೃತಿಯ ವಿರುದ್ಧ ಹೋರಾಡಬೇಕಾಗುತ್ತದೆ. ಮತ್ತು ಈ ಹೋರಾಟದಲ್ಲಿ ಅದನ್ನು ಸೋಲಿಸಬೇಕಾಗುತ್ತದೆ. ಆದ್ದರಿಂದ, ಸಾಧನೆಯೇನೂ ಹಗುರಾದ ಕಾರ್ಯವಲ್ಲ.

ಪ್ರಕೃತಿಯು ಯಾವಾಗಲೂ ಅಸ್ಥಿರವಾದ ಒಂದು ಶಕ್ತಿಯಾಗಿದೆ

ಇದರಿಂದ ಅದರ ಸಾಪೇಕ್ಷ ಸೃಷ್ಟಿಯೂ ಸಹ, ಯಾವಾಗಲೂ ಬದಲಾಗುತ್ತಿರು
ತ್ತದೆ. ಸೃಷ್ಟಿ ಚಕ್ರದ ಎಲ್ಲ ವಿಕಾಸವೂ ಭೂಮಾ ಚೈತನ್ಯದ ಸ್ಥೂಲ ವಿಕಾಸ
ವಾಗಿದೆ. ಆದ್ದರಿಂದ, ಸೃಷ್ಟಿ ಚಕ್ರದಲ್ಲಿಯ ಯಾವುದೇ ಬದಲಾವಣೆಯು
ಭೂಮಾ ಮಾನಸದಲ್ಲಿಯೂ ಅನುರೂಪ ಬದಲಾವಣೆಯನ್ನು ತರುತ್ತದೆ.
ಮತ್ತು ಇದರಿಂದ ಸೃಷ್ಟಿ ಧಾರೆಯಲ್ಲಿ, ಪರಿವರ್ತನೆಯಾಗುತ್ತದೆ. ಆದರೆ,
ಸೃಷ್ಟಿ ಧಾರೆಯಲ್ಲಿ ಈ ಪರಿವರ್ತನೆಯು ಮೆಲ್ಲ ಮೆಲ್ಲನೆ ಆಗುತ್ತದೆ. ಏಕೆಂದರೆ,
ಭೂಮಾ ಮನದಲ್ಲಿ ಪರಿವರ್ತನೆಯನ್ನು ಉಂಟು ಮಾಡುವಲ್ಲಿ ಪ್ರಕೃತಿಗೆ ಹೆಚ್ಚು
ಸಮಯ ತಗಲುತ್ತದೆ. ಭೂಮಾ ಚೈತನ್ಯವು ಅನಂತವಾಗಿರುವ ಕಾರಣ,
ಪರಿವರ್ತನೆಯು ಕ್ರಮೇಣ ಆಗುತ್ತದೆ. ಅನಂತ ಭೂಮಾ ಮನವನ್ನು
ಪೂರ್ಣವಾಗಿ ಸುತ್ತಿ ಅದರಲ್ಲಿ ಯಾವುದೇ ಪರಿವರ್ತನೆಯನ್ನು ಉಂಟು ಮಾಡು
ವಲ್ಲಿ ಸತತ ಕ್ರಿಯಾಶೀಲವಾದ ಪ್ರಕೃತಿಗೆ ಸಾಕಷ್ಟು ವೇಳೆ ಹಿಡಿಯುತ್ತದೆ.
ಭೂಮಾ ಮನವನ್ನು ಗುಣಾನ್ವಿತಗೊಳಿಸುವ ಸಮಯಕ್ಕೆ ಪ್ರಕೃತಿಯು ಅಣು
ಮಾನಸದ ಮೇಲೆ ಸಹ, ತನ್ನ ಗುಣವನ್ನು ವಿಸ್ತರಿಸುತ್ತದೆ. ಇದರಿಂದ, ಅಣು
ಮಾನಸದ ಕ್ರಿಯಾಶೀಲತೆಯು ಬಹಳ ಹೆಚ್ಚಾಗುತ್ತದೆ. ಅನಂತ ಪ್ರಕೃತಿಯ
ಪೂರ್ಣ ಪ್ರಧಾವಕ್ಕೊಳಗಾದ ಅಣು ಮಾನಸವು ಚಾಂಚಲ್ಯದ ಕೊನೆಯ
ಅವಸ್ಥೆಯನ್ನು ಹೊಂದುತ್ತದೆ. ಸರ್ವ ಸಾಮಾನ್ಯವಾಗಿ ತಿಳಿದು ಬರುವಂತೆ
ಈ ಅಣು ಮಾನಸದ ಚಾಂಚಲ್ಯದ ಮತ್ತು ಅದರಿಂದ ಹುಟ್ಟಿದ ಪರಿವರ್ತನ
ಶೀಲತೆಯ ವಿಷಯದಲ್ಲಿ ವಿವರ ಪೂರ್ಣ ವರ್ಣನೆಯು ನಿರರ್ಥಕವಷ್ಟೇ.
ಮಾನವ ಮನದ ಈ ವಿಶೇಷ ಗುಣವು,ಪ್ರಕೃತಿಯು ನೀಡಿದುದೇ ಆಗಿದೆ.

ಪ್ರಕೃತಿಯ ಚಿರಂತನ ಚಾಂಚಲ್ಯವೇ ಅದರ ಸೃಷ್ಟಿಯನ್ನು ಮುಂದಕ್ಕೆ
ಕರೆದೊಯ್ಯುತ್ತಿದೆ. ಮತ್ತು ಈ ಚಾಂಚಲ್ಯವು ಅಣು ಮಾನಸದ ಮೇಲೆ ತನ್ನ
ಪ್ರಭಾವವನ್ನು ವಿಸ್ತರಿಸುತ್ತದೆ. ವಿಶೇಷ ಸ್ಥಾನ ಇಲ್ಲವೆ ವಿಶೇಷ ಕಾಲದಲ್ಲಿ
ಈ ಚಾಂಚಲ್ಯದ ಹೆಚ್ಚು ಕಡಿಮೆಗಳು ಕಂಡುಬರುತ್ತವೆ. ಪ್ರಕೃತಿಯ ಪ್ರಭಾವದ
ಭಿನ್ನತೆಯ ಕಾರಣ, ಅಣು ಮಾನಸದ ಮೇಲೆ, ಕೆಲವೆಡೆ ಬಂಧನವು ದೃಢವಾಗಿ
ರುತ್ತದೆ. ಮತ್ತೆ ಕೆಲವೆಡೆ ಸಡಿಲಾಗಿರುತ್ತದೆ. ಅದರ ಪ್ರಭಾವವು
ಮಹತ್ತತ್ತ್ವದ ಮೇಲೆ ಎಲ್ಲಕ್ಕಿಂತ ಕಡಿಮೆ ಇರುತ್ತದೆ. ಮತ್ತು ಚಿತ್ತದ
ಮೇಲೆ ಎಲ್ಲಕ್ಕಿಂತ ಹೆಚ್ಚಿಗಿರುತ್ತದೆ. ಇದರಿಂದ ಚಿತ್ತಕ್ಕೆ ಹೋಲಿಸಿದರೆ,
ಮಹತ್ತತ್ತ್ವದಲ್ಲಿ ಚಾಂಚಲ್ಯವು ಅತಿ ಕಡಿಮೆ ಇರುತ್ತದೆ. ಸಾಧನೆ ಇಲ್ಲವೆ
ಆಧ್ಯಾತ್ಮಿಕ ಅನುಶೀಲನೆಯು ಅಣುಚೈತನ್ಯದ ಮೇಲೆ ಪ್ರಕೃತಿಯ ಪ್ರಭಾವವನ್ನು



ಸಡಿಲಿಸುತ್ತದೆ. ಮತ್ತು ಅದರೊಂದಿಗೇನೇ ಮನದ ಚಂಚಲತೆಯು ಸಹ, ಮೆಲ್ಲ-ಮೆಲ್ಲಗೆ ಕಡಿಮೆಯಾಗುತ್ತದೆ. ಮನದ ಚಂಚಲತೆಯ ಕಾರಣವು ಪ್ರಕೃತಿಯೇ ಆಗಿದೆ. ಇದರಿಂದ, ಅದರ ಪ್ರಭಾವವು ಕಡಿಮೆಯಾಗುವುದರೊಂದಿಗೇನೇ, ಮನವು ಸಹ ಸ್ವಲ್ಪ ಸಮಯ ಸ್ಥಿರವಾಗುತ್ತದೆ. ಆದರೆ, ಅಣು ಚೈತನ್ಯವು ಪ್ರಕೃತಿಯ ಪ್ರಭಾವದಿಂದ ಎಲ್ಲಿಯ ವರೆಗೆ ಮುಕ್ತವಾಗುವುದಿಲ್ಲವೋ, ಅಲ್ಲಿಯ ವರೆಗೆ, ಮಾನಸ ಭೂಮಿಯಲ್ಲಿ ಈ ಸ್ಥಿರತೆಯು ಇಲ್ಲವೆ ಶಾಂತಿಯು ದೀರ್ಘ ಕಾಲದ ವರೆಗೆ ಇರಲಾರದು.

ಮನದ ಸ್ಥಿರತೆಯನ್ನು ದೃಢವಾಗಿಸುವುದು ಹಾಗೂ ಮನವನ್ನು ಏಕಾಗ್ರಗೊಳಿಸುವುದು-ಎರಡೂ ಒಂದೇ ಆಗಿವೆ. ಆದ್ದರಿಂದ, ಎಲ್ಲಿಯ ವರೆಗೆ ಅಣು ಚೈತನ್ಯವು ಪ್ರಕೃತಿಯ ಪ್ರಭಾವದಿಂದ ಮುಕ್ತವಾಗುವುದಿಲ್ಲವೋ, ಅಲ್ಲಿಯ ವರೆಗೆ ಮನವು ಏಕಾಗ್ರವಾಗುವ ಸಂಭವವಿಲ್ಲ. ಸಾಧನೆ ಇಲ್ಲವೆ ಆಧ್ಯಾತ್ಮಿಕ ಅನುಶೀಲನೆಯ ಲಕ್ಷ್ಯವೂ ಸಹ, ಇದೇ ಮಾನಸಿಕ ಏಕಾಗ್ರತೆಯ ಪ್ರತಿಷ್ಠೆಯಾಗಿದೆ. ಮಾನಸಿಕ ಏಕಾಗ್ರತೆಯನ್ನು ಪಡೆಯುವ ಉದ್ದೇಶ್ಯದಿಂದ, ಮೊತ್ತ ಮೊದಲು ಸ್ಥೂಲತಮ ಅಭಿವ್ಯಕ್ತಿಯಾದ ಚಿತ್ತವನ್ನು ಪ್ರಕೃತಿಯ ಪ್ರಭಾವದಿಂದ ಮುಕ್ತಗೊಳಿಸಬೇಕು. ಅಹಂ ತತ್ತ್ವ, ಮಹತ್ತತ್ತ್ವ ಇಲ್ಲವೆ ಬುದ್ಧಿ ತತ್ತ್ವಗಳನ್ನು ಸಹ, ಒಂದೊಂದಾಗಿ ಇದೇ ರೀತಿ ಮಾಡಬೇಕು. ಚಿತ್ತ, ಅಹಂ ತತ್ತ್ವ ಮತ್ತು ಮಹತ್ತತ್ತ್ವಗಳಲ್ಲಿ ವ್ಯಾಪ್ತವಾದ ಮನವು ಕ್ರಮೇಣ ಈ ಮೂರರಿಂದಲೂ ಬೇರೆಯಾದ ಮೇಲೆಯೇ ಏಕಾಗ್ರವಾಗಬಲ್ಲದು. ಆದ್ದರಿಂದ, ಮನದ ಏಕಾಗ್ರತೆಯು ಸಾಧನೆ ಇಲ್ಲವೆ ಆಧ್ಯಾತ್ಮಿಕ ಅನುಶೀಲನೆಯಲ್ಲದೆ ಬೇರೇನೂ ಅಲ್ಲ. ಮತ್ತು ಇದರಿಂದ, ಅಣು ಚೈತನ್ಯವು ಪ್ರಕೃತಿಯ ಪ್ರಭಾವದಿಂದ ಮುಕ್ತವಾಗುತ್ತದೆ.

ಆದರೆ, ಮನದ ಏಕಾಗ್ರತೆಯು ಮುಕ್ತಿಯ ಹಾದಿಯಲ್ಲಿ ಎಷ್ಟು ಸಹಾಯ ಸಲ್ಲಿಸುತ್ತದೆ? ಎಂಬುದನ್ನು ಸ್ವಲ್ಪ ಪರೀಕ್ಷಿಸಿ ನೋಡಬೇಕು. ವ್ಯಕ್ತ ಜಗತ್ತಿನಿಂದ ಮನವನ್ನು ಒಂದುಗೂಡಿಸಿ ಹಿಂತಿರುಗುವುದೇ ಮನದ ಏಕಾಗ್ರತೆಯಾಗಿದೆ. ಇದು ಮನದ ಲಯ ಇಲ್ಲವೆ ಧ್ವಂಸವಲ್ಲ. ಅಣು ಚೈತನ್ಯದ ಮೇಲೆ ಪ್ರಕೃತಿಯ ಗುಣ ಬಂಧನದ ಆರೋಪದಿಂದ ಮನದ ಸೃಷ್ಟಿಯಾಗಿದೆ. ಅಂದ ಮೇಲೆ, ಮನವು ಇರುವ ವರೆಗೆ ಪ್ರಕೃತಿಯ ಪ್ರಭಾವವೂ ಸಹ ಅವಶ್ಯವಾಗಿ ಇರುತ್ತದೆ. ಮನದ ಏಕಾಗ್ರತೆಯ ಅರ್ಥವು, ಪ್ರಕೃತಿಯ ಬಂಧನದಿಂದ ಮುಕ್ತಿಯಲ್ಲ. ಇದು ಕೇವಲ ಮುಕ್ತಿ ಪಥಕ್ಕಾಗಿ ಅವಲಂಬಿಸಲು ಯೋಗ್ಯವಾದ

ಒಂದು ಉಪಾಯವಾಗಿದೆ. ಸಂಪೂರ್ಣವಾಗಿ ಏಕಾಗ್ರವಾದ ಮೇಲೂ ಸಹ, ಮನವು ಇರುತ್ತದೆ. ಆದರೆ, ಅದರ ಮೇಲೆ ಪ್ರಕೃತಿಯ ಗುಣಬಂಧನವು ಸಡಿಲಾಗಿರುತ್ತದೆ. ಮಹತ್ತತ್ತ್ವದ ಮೇಲೆ ಪ್ರಕೃತಿಯ ಗುಣಬಂಧನವು ಬಹು ಕಡಿಮೆ ಇರುತ್ತದೆ. ಏಕಾಗ್ರವಾದ ಮನದಲ್ಲಿ, ಚಿತ್ತ ಮತ್ತು ಅಹಂ ತತ್ತ್ವಗಳು ಲೀನವಾದ ಮೇಲೆ ಕೇವಲ ಮಹತ್ತತ್ತ್ವವೊಂದೇ ಉಳಿಯುತ್ತದೆ. ಮನದ ಧ್ವಂಸ ಇಲ್ಲವೆ ಲಯವು ಆಗುವ ವರೆಗೆ ಮಹತ್ತತ್ತ್ವ ಇಲ್ಲವೆ ಬುದ್ಧಿತತ್ತ್ವವು ಉಳಿಯುತ್ತದೆ. ಮಹತ್ತತ್ತ್ವವು ಕೇವಲ 'ನಾನು-ತನ'ದ ಬೋಧೆಯನ್ನು ಹೇಳುತ್ತದೆ. ಮನದ ಈ ಏಕಾಗ್ರತೆಯನ್ನು ಮೋಕ್ಷ ಇಲ್ಲವೆ ಮಹಾನಿರ್ವಾಣ ಎಂದು ಕರೆಯಲಾರೆವು. ಏಕಾಗ್ರ ಮನವು ಸವಿಕಲ್ಪ ಸಮಾಧಿಯ ಅವಸ್ಥೆಯಾಗಿದೆ. ಅಲ್ಲಿ ಇರುವ ಒಂದೇ ಒಂದು ಭಾವವೆಂದರೆ, 'ನಾನು ಅವನೇ ಇದ್ದೇನೆ' ಎಂಬುದಾಗಿದೆ.

ಪ್ರಕೃತಿಯ ಗುಣ ಬಂಧನದ ಹೆಚ್ಚಳದ ಕಾರಣ, ಸೃಷ್ಟಿಯ ವಿಕಾಸವು ಸೂಕ್ಷ್ಮದಿಂದ ಸ್ಥೂಲದತ್ತ ಆಗುತ್ತದೆ. ಗುಣ ಬಂಧನದ ದೃಢತೆ ಹಾಗೂ ಶಿಥಿಲತೆಗಳ ಮೂಲಕ ಜಡತೆ ಹಾಗೂ ಸೂಕ್ಷ್ಮತೆಗಳು ನಿರ್ಧರಿಸಲ್ಪಡುತ್ತವೆ. ಇದರಿಂದ, ವಿಶೇಷ ವ್ಯಕ್ತಿಯಲ್ಲಿ ಅವನ ಮಹತ್ತತ್ತ್ವವು ಎಲ್ಲಕ್ಕಿಂತ ಹೆಚ್ಚು ಸೂಕ್ಷ್ಮವಾಗುತ್ತದೆ. ಮತ್ತು ಚಿತ್ತವು ಎಲ್ಲಕ್ಕಿಂತ ಜಡವಾಗುತ್ತದೆ. ಸಾಧನೆ ಇಲ್ಲವೆ ಆಧ್ಯಾತ್ಮದ ಅನುಶೀಲನೆಯು ಮನಸ್ಸಿಗೆ ಸಹಾಯ ನೀಡುತ್ತದೆ. ಜಡತೆ ಇಲ್ಲವೆ ಸೂಕ್ಷ್ಮತೆಗಳು ಪ್ರಕೃತಿಯ ಪ್ರಭಾವದ ಪರಿಮಾಣ ಭೇದಾನುಸಾರ ಆಗುತ್ತದೆ. ಮತ್ತು ಗುಣ ಬಂಧನವು ಕಡಿಮೆಯಾಗುವುದರಿಂದಲೇ, ಮನವು ಮರಳಿ ಸೂಕ್ಷ್ಮತೆಯತ್ತ ಹಿಂತಿರುಗುತ್ತದೆ. ಸಾಧಾರಣವಾಗಿ ಭೂಮಾ ಚಿತ್ತದ ಮೇಲೆ, ಪ್ರಕೃತಿಯ ಚರಮ ಪ್ರಭಾವದ ಮೂಲಕ ಹುಟ್ಟಿಕೊಂಡ ಜಗತ್ತಿನ ವಸ್ತುಗಳ ಭಾವನೆಯಲ್ಲಿಯೇ ಮನವು ಸೇರಿಕೊಳ್ಳುತ್ತದೆ. ಚರಮ ಜಡ ಭಾವದಲ್ಲಿ ಸೇರಿಕೊಳ್ಳುವುದಕ್ಕಾಗಿ, ಮನದ ಮೇಲೆ, ಪ್ರಕೃತಿಯ ಪ್ರಭಾವವು ಬಹಳ ಹೆಚ್ಚಾಗುತ್ತದೆ. ಮೊದಲೇ ನೋಡಿರುವಂತೆ, ಚೈತನ್ಯವು ಪೂರ್ಣ ವಿಕಾಸಿತವಾಗುವ ಕಾರಣ, ಮಾನವ ಮನವು ಕರ್ಮ ಮಾಡುವ ಸ್ವಾತಂತ್ರ್ಯವನ್ನು ಹೊಂದುತ್ತದೆ. ಮತ್ತು ಜೊತೆ ಜೊತೆಗೆ ಪ್ರಕೃತಿಯ ಬಂಧನವನ್ನು ತೊರೆಯುವ ಇಚ್ಛೆಯೂ ಸಹ, ಅವನಲ್ಲಿ ಕ್ರಮೇಣ ಉಂಟಾಗುತ್ತದೆ. ಇದರಿಂದ, ಪ್ರಕೃತಿಯು ಎರಡು ವಿಪರೀತ ಧರ್ಮಗಳನ್ನುಳ್ಳ ಭಾವವನ್ನು (ಶಕ್ತಿ) ಸೃಷ್ಟಿಸುತ್ತದೆ. ಇದನ್ನೇ ಮಾಯೆ ಎಂಬ ಹೆಸರಿನಿಂದ ಕರೆಯುತ್ತಾರೆ. ಇವುಗಳೇ ಅವಿದ್ಯಾ ಮಾಯೆ ಮತ್ತು ವಿದ್ಯಾ ಮಾಯೆ. ಯಾವ ಜನರು ವಿದ್ಯಾಮಾಯೆಯ



ಆಶ್ರಯವನ್ನು ಗ್ರಹಿಸುವರೋ, ಅವರು ತಾವು ಪಡೆದ ಸ್ವಾಧೀನತೆಯನ್ನು ಸಾರ್ಥಕಗೊಳಿಸುತ್ತಾರೆ. ಮತ್ತು ಶೀಘ್ರವಾಗಿಯೇ ಪರಮ ಪದವನ್ನು ಪಡೆಯುತ್ತಾರೆ. ಏಕೆಂದರೆ ವಿದ್ಯಾ ಮಾಯೆಯು ಮನವನ್ನು ಸೂಕ್ಷ್ಮದತ್ತ ಕರೆದೊಯ್ಯುತ್ತದೆ. ಇನ್ನು ಯಾರು ಅವಿದ್ಯಾ ಮಾಯೆಯ ಆಶ್ರಯವನ್ನು ಗ್ರಹಿಸುವರೋ, ಅವರು ಸಗುಣ ಬ್ರಹ್ಮನ ಕಲ್ಪನಾ ತರಂಗದಲ್ಲಿ ಕರ್ಮ ಮತ್ತು ಕರ್ಮ ಫಲಗಳ ಚಕ್ರದಲ್ಲಿ ತಿರುಗುತ್ತಾರೆ. ಅವಿದ್ಯಾ ಮಾಯೆಯು ಮನವನ್ನು ಜಡ ವಿಷಯದತ್ತ ಕರೆದೊಯ್ಯುತ್ತದೆ. ಹಾಗೂ ಜಡತ್ವದಲ್ಲಿ ಸೇರಿಸುತ್ತದೆ. ವಾಸ್ತವದಲ್ಲಿ ಮನವನ್ನು ಜಗತ್ತಿನ ವಸ್ತುಗಳಲ್ಲಿ ತೊಡಗಿಸಿ, ಪ್ರಕೃತಿಯ ಅಧೀನವಾಗಿರಿಸಲು, ಅವಿದ್ಯಾ ಮಾಯೆಯ ಬಂಧನವು ಹಗ್ಗದಂತೆ ಕೆಲಸ ಮಾಡುತ್ತದೆ. ಸಾಧನೆ ಇಲ್ಲವೆ ಅಧ್ಯಾತ್ಮದ ಅನುಶೀಲನೆಯು ಮಾನವನನ್ನು ಪ್ರಕೃತಿಯ ಅಧೀನತೆಯ ಬಂಧನದಿಂದ ಮುಕ್ತಗೊಳಿಸಿ, ಸ್ವಾಧೀನತೆಯತ್ತ ಮುಂದೆ ಮುಂದೆ ನಡೆಸುತ್ತದೆ ಮತ್ತು ಇದರಿಂದ, ಅವನ ಮನವು ಸೂಕ್ಷ್ಮತೆಯನ್ನು ಗ್ರಹಿಸುತ್ತದೆ. ಪ್ರಕೃತಿಯ ಗುಣ ಬಂಧನದಲ್ಲಿ ಶಿಥಿಲತೆಯು ಬರುವುದರಿಂದ, ಮನವು ಸೂಕ್ಷ್ಮತೆಯತ್ತ ಹೋಗುತ್ತದೆ. ಷಟ್ ರಿಪು ಹಾಗೂ ಅಷ್ಟ-ಪಾಶಗಳು ಅವನ ಮಾರ್ಗದಲ್ಲಿ ಮತ್ತಷ್ಟು ಅಡ್ಡಿ ಆತಂಕಗಳನ್ನು ಒಡ್ಡುವುದಿಲ್ಲ. ಪ್ರಕೃತಿಯ ಪ್ರಭಾವದ ಶಿಥಿಲತೆಯಿಂದ ಅವಿದ್ಯಾ ಮಾಯೆಯ ಬಂಧನವು ಯಾವ ಪ್ರಕಾರ ಶಿಥಿಲವಾಗುವುದೋ, ಅದೇ ಪ್ರಕಾರ, ಅವಿದ್ಯಾ ಮಾಯೆಯ ಬಂಧನ ಇಲ್ಲವೆ ಶೃಂಖಲೆಗಳು ಕಳಚಿ ಬೀಳುವುದರಿಂದ, ಪ್ರಕೃತಿಯ ಗುಣ ಬಂಧನವು ಸಹ, ಶಿಥಿಲವಾಗುತ್ತದೆ. ಆದ್ದರಿಂದ, ಅವಿದ್ಯಾ ಮಾಯೆಯು ಮೋಕ್ಷದ ಪ್ರಾಪ್ತಿಯಲ್ಲಿ ಸಹಾಯಕವಾಗುವುದಿಲ್ಲ. ಏಕೆಂದರೆ, ಇದು ಕೇವಲ ಮನದ ಮೇಲೆ, ಗುಣ ಬಂಧನವನ್ನು ವಿಸ್ತರಿಸುತ್ತದೆ. ಹಾಗೂ ಮನವನ್ನು ಜಗತ್ತಿನ ವಸ್ತುಗಳಲ್ಲಿ ತೊಡಗಿಸಿ, ಅದನ್ನು ಚರಮ ಜಡತೆಯತ್ತ ಕೊಂಡೊಯ್ಯುತ್ತದೆ. ಮನದ ಸಮತೆಯನ್ನು ದೃಢಪಡಿಸಲು, ಇದನ್ನು ಏಕಾಗ್ರಗೊಳಿಸಲು ಹಾಗೂ ಜಗತ್ತಿನ ವಿಷಯಗಳ ಪ್ರಭಾವವನ್ನು ದೂರಗೊಳಿಸಿ, ಸೂಕ್ಷ್ಮದತ್ತ ಕೊಂಡೊಯ್ಯುವುದೇ ಪ್ರಕೃತಿಯ ಬಂಧನವನ್ನು ತೊಡೆದು ಹಾಕುವ ಉಪಾಯವಾಗಿದೆ. ಅವಿದ್ಯೆಯನ್ನು ಆಶ್ರಯಿಸುವವರಿಗೆ ಇದೆಂದೂ ಸಾಧ್ಯವಾಗದು. ಮನವು ಸಮತೆಯಲ್ಲಿ ಇಲ್ಲದಾಗ, ಪಾಂಚಭೌತಿಕ ವಿಷಯಗಳಲ್ಲಿ ಲೀನವಾದ ಮನವು ಜಡದ ಗುಲಾಮನಾಗುತ್ತದೆ. ಮತ್ತು ಮನದ ಏಕಾಗ್ರತೆಯು ಆಗ ದುರ್ಲಭವಾಗುತ್ತದೆ. ಈ ಪ್ರಕಾರ, ಮನವು ಪ್ರಕೃತಿಯ ಬಂಧನ

ವನ್ನು ಕಡಿದೊಗೆದು ಮೋಕ್ಷ ಲಾಭ ಪಡೆಯುವುದು, ಎಂದೆಂದಿಗೂ ಸಂಭವಿಸದು. ಇದರಿಂದ ಮೋಕ್ಷ ಪ್ರಾಪ್ತಿಯ ಉದ್ದೇಶ ಈಡೇರಲು ಅವಿದ್ಯೆಯ ಆಶ್ರಯವನ್ನೇ ತೊರೆಯಬೇಕು.

ಸಾಧನೆಯ ಬಲದಿಂದ ಅಣು ಚೈತನ್ಯವು ಪ್ರಕೃತಿಯ ಬಂಧನದಿಂದ ಮುಕ್ತವಾಗಿ, ಪರಮ ಪದವನ್ನು ಪಡೆಯುತ್ತದೆ. ಪ್ರಕೃತಿಯ ಪ್ರಭಾವವು ದೃಢವಾದಂತೆ, ಚೈತನ್ಯವು ಸ್ತಂಭಿತವಾಗುತ್ತದೆ. ಚೈತನ್ಯವು, ಬೋಧಿ ಹಾಗೂ ಬುದ್ಧಿಗಳಿಂದ ಕೂಡಿದ ಚರಮ ಜ್ಞಾನವಾಗಿದೆ. ಆದ್ದರಿಂದ, ಪ್ರಕೃತಿಯ ಹೆಚ್ಚಿನ ಪ್ರಭಾವದ ಅರ್ಥವೆಂದರೆ–ಅಜ್ಞತೆಯ ವಶವರ್ತಿಯಾಗಿ ವಿಶೇಷ ರೂಪದಿಂದ ಇರುವುದೇ ಸರಿ. ಪ್ರಕೃತಿಯ ಪ್ರಭಾವವು ಕಡಿಮೆಯಾದಂತೆ, ಸ್ವಾಭಾವಿಕವಾಗಿ ಬೋಧಿಯು ಜಾಗ್ರತವಾಗುತ್ತದೆ. ಹಾಗೂ ಚೈತನ್ಯವು ವಿಕಾಸವಾಗುತ್ತದೆ. ಆಧ್ಯಾತ್ಮಿಕ ಅನುಶೀಲನೆಯು ಪ್ರಕೃತಿಯ ಪ್ರಭಾವವನ್ನು ಶಿಥಿಲಗೊಳಿಸಿ ಇಲ್ಲವೆ ದೂರೀಕರಿಸಿ, ಮಾನವನನ್ನು ಪೂರ್ಣ ಜ್ಞಾನದತ್ತ, ಪೂರ್ಣ ಅಭಿವ್ಯಕ್ತ ಚೈತನ್ಯದತ್ತ ಕರೆದೊಯ್ಯುತ್ತದೆ.

ಸಾಧನೆಯೆಂದರೆ ಪ್ರಕೃತಿಯ ವಿರುದ್ಧ ಹೋರಾಡುವುದು ಹಾಗೂ ಈ ಹೋರಾಟದಲ್ಲಿ ವಿಜಯ ಪಡೆದು, ಪ್ರಕೃತಿಯನ್ನು ಅಧೀನಪಡಿಸಿಕೊಳ್ಳುವುದಾಗಿದೆ. ಪ್ರಕೃತಿಯು ಒಂದು ಅದ್ಭುತ ಶಕ್ತಿಯಾಗಿದೆ! ಇದು ಎಲ್ಲ ಸತ್ತೆಗಳನ್ನೂ, ಅಷ್ಟೇ ಏಕೆ, ಪ್ರಾಕೃತಿಕ ವಿಚಿತ್ರತೆಯನ್ನೂ ಸಹ, ನಿಯಂತ್ರಿಸುತ್ತದೆ. ಅಂದ ಮೇಲೆ, ಸಾಧನೆಯ ಇಲ್ಲವೆ ಅಧ್ಯಾತ್ಮ ಅನುಶೀಲನೆಯ ಅರ್ಥವೆಂದರೆ– ಈ ಸರ್ವ ನಿಯಾಮಕ–ಸತ್ತೆಯಾದ ಪ್ರಕೃತಿಯ ಮೇಲೆ ಅಧಿಕಾರವನ್ನು ಸ್ಥಾಪಿಸುವುದಾಗಿದೆ. ಮೊದಲೇ ಹೇಳಿದಂತೆ, ಪುರುಷ ಮತ್ತು ಪ್ರಕೃತಿಗಳೆರಡೂ ಒಂದೇ ಭೇದಿಸಲಾಗದ ಮತ್ತು ಬೇರ್ಪಡಿಸಲಾಗದ ಸತ್ತೆಯಾಗಿವೆ. ಹೋರಾಟಕ್ಕಿಂತ ಮುನ್ನ, ಯಾವ ಪ್ರಕೃತಿಯು ಪುರುಷನನ್ನು ನಿಯಂತ್ರಿಸುತ್ತಿತ್ತೋ, ಅದೇ ಹೋರಾಟದಲ್ಲಿ ಸೋತು ಹೋದ ಬಳಿಕ, ಪುರುಷನಿಗೆ ಅಧೀನವಾಗುತ್ತದೆ. ಈ ಪ್ರಕಾರ ಸಾಧನೆಯ ಬಲದ ಮೇಲೆ, ಪುರುಷನು ಸರ್ವ–ನಿಯಾಮಕ ಸತ್ತೆಯಾದ ಪ್ರಕೃತಿಯನ್ನು ಹೋರಾಟದಲ್ಲಿ ಸೋಲಿಸಿ, ಅದರ ಮೇಲೆ ಪ್ರಭುತ್ವವನ್ನು ಸ್ಥಾಪಿಸುತ್ತಾನೆ. ಆದ್ದರಿಂದ, ಸಾಧನೆಯು ಇಲ್ಲವೆ ಆಧ್ಯಾತ್ಮಿಕ ಅನುಶೀಲನೆಯು ಮಾನವನನ್ನು, ಅನಂತ, ಅಲೌಕಿಕ ಶಕ್ತಿಯ ಅಧಿಕಾರಿಯನ್ನಾಗಿ ನಿರ್ಮಿಸುತ್ತದೆ.

ಸಾಧನೆಯ ಮೂಲಕ ಅಲೌಕಿಕ ಶಕ್ತಿಯು ಪ್ರಾಪ್ತವಾಗುತ್ತದೆ. ಈ



ಶಕ್ತಿಯ ಸರಿಯಾದ ಉಪಯೋಗವಾವುದು? ಎಂಬುದನ್ನು ಅರಿಯಬೇಕು. ಬ್ರಹ್ಮನ ಸ್ವರೂಪಾವಸ್ಥೆಯಲ್ಲಿ, ಅರ್ಥಾತ್ ನಿರ್ಗುಣ ಸ್ಥಿತಿಯಲ್ಲಿ, ಪುರುಷ ಮತ್ತು ಪ್ರಕೃತಿಯರೀರ್ವರೂ ಇರುತ್ತಾರೆ. ಆದರೆ, ಪುರುಷನು ಅಲ್ಲಿ ಹೆಚ್ಚು ವ್ಯಕ್ತನಾಗಿದ್ದಾನೆ. ಮತ್ತು ಪ್ರಕೃತಿಯು ಅವನ ಮೇಲೆ, ತನ್ನ ಗುಣ ಬಂಧನವನ್ನು ವಿಸ್ತರಿಸಲಾರಳು. ನಿರ್ಗುಣದ ಈ ದುರ್ಬಲ ಪ್ರಕೃತಿಯು ಪುರುಷನ ಇಚ್ಛೆಯಾದರೆ ಸಾಕು; ದೂರ ಹೋಗಿ ಬಿಡುತ್ತದೆ. ಆದರೆ, ಪುರುಷನು ಹೀಗೆ ಮಾಡುವುದಿಲ್ಲ. ಗುಣ ಬಂಧನವು ಇಲ್ಲದಿರುವುದರಿಂದ, ಪ್ರಕೃತಿಯ ಮೇಲೆ ಆಧಿಪತ್ಯವನ್ನು ವಿಸ್ತರಿಸಬೇಕೆಂಬ ಇಚ್ಛೆಯೂ ಸಹ, ಪುರುಷನಲ್ಲಿ ಜಾಗ್ರತವಾಗದು. ಪುರುಷನ ಮೇಲೆ ಪ್ರಕೃತಿಯ ಪ್ರಭಾವವು ವಿಸ್ತಾರವಾದ ಮೇಲೆ ಮಾತ್ರ ಈ ಪ್ರಕಾರದ ಇಚ್ಛೆಯುಂಟಾಗುತ್ತದೆ. ಇದರಿಂದ, ಪುರುಷನ ದುರ್ಬಲತೆಯ ಕಾರಣದಿಂದಾಗಿಯೇ, ಅವನ ಮೇಲೆ ಪ್ರಭುತ್ವವನ್ನು ವಿಸ್ತರಿಸುವ ಇಚ್ಛೆಯುಂಟಾಗುತ್ತದೆ. ಇದರಿಂದ, ಪುರುಷನು ಪ್ರಕೃತಿಗೆ ಅಧೀನನಾಗುತ್ತಾನೆ. ಮತ್ತು ತನ್ನ ಪ್ರಭುತ್ವವನ್ನು ಶಾಶ್ವತಗೊಳಿಸುವಲ್ಲಿ ಅಸಮರ್ಥನಾಗುತ್ತಾನೆ. ಆದ್ದರಿಂದ, ಪುರುಷನು ಎಂದೆಂದೂ ಪ್ರಕೃತಿಯ ಮೇಲೆ, ಪ್ರಭುತ್ವವನ್ನು ನಡೆಸಲಾರನು. ಸಾಧನೆಯ ಮೂಲಕ, ಮಾನವನು ಮೆಲ್ಲ ಮೆಲ್ಲನೆ, ಪ್ರಕೃತಿಯ ಬಂಧನದಿಂದ ಮುಕ್ತಿ ಲಾಭ ಪಡೆಯುತ್ತಾನೆ. ಮತ್ತು ಇದರಿಂದ, ಯಾವ ಶಕ್ತಿಯು ಪ್ರಾಪ್ತವಾಗುವುದೋ, ಅದನ್ನೂ ಸಹ, ಮೆಲ್ಲ ಮೆಲ್ಲನೆ ಅರ್ಜಿಸುತ್ತಾನೆ. ಪ್ರಭುತ್ವದ ಲಾಲಸೆಯಿಂದ ಸಾಧನೆಯ ಮೂಲಕ ಗಳಿಸಿದ ಈ ಶಕ್ತಿಯನ್ನು ಪ್ರಯೋಗಿಸುವುದೆಂದರೆ, ಮರಳಿ ಪ್ರಕೃತಿಯ ಬಂಧನದಲ್ಲಿಯೇ ಸಿಲುಕಿದಂತೆ. ಪ್ರಕೃತಿಯ ಗುಣ ಬಂಧನವೇ, ಶಕ್ತಿಯನ್ನು ಪ್ರಯೋಗಿಸುವ ಇಚ್ಛೆಯನ್ನು ಉಂಟು ಮಾಡುತ್ತದೆ. ಆದ್ದರಿಂದ, ಶಕ್ತಿ–ಪ್ರಯೋಗದ ಇಚ್ಛೆ ಇಲ್ಲವೆ ಶಕ್ತಿಯ ಪ್ರಯೋಗವು, ಮಾನವನ ಮುಖಾಂತರ, ವಿಶೇಷ ರೂಪದಿಂದ ಇಚ್ಛೆಪಟ್ಟು ಮತ್ತು ಬಹಳ ಕಷ್ಟಪಟ್ಟು ಗಳಿಸಿದ ಮುಕ್ತಿಗೆ ಬಾಧಕವಾಗುತ್ತದೆ. ಮತ್ತು ಅದು ಮರಳಿ ಪುರುಷನನ್ನು ವಿಪರೀತ ಧಾರೆಯಲ್ಲಿ ಕೊಂಡೊಯ್ದು, ಪ್ರಕೃತಿಯ ನಿಯಂತ್ರಣಕ್ಕೆ ಅಧೀನನನ್ನಾಗಿಸುತ್ತದೆ. ಆಗ ಮಾನವನು ಪ್ರಕೃತಿಯ ಬಂಧನವನ್ನು ಕಡಿದು ಹಾಕಲಾರನು.

ಮಾನವನು ಇತರರಿಂದ ಕೀರ್ತಿ ವಾರ್ತೆ ಪಡೆಯುವ ಲಾಲಸೆಯಿಂದ ಸಾಧನೆಯ ಮೂಲಕ ಗಳಿಸಿದ ಶಕ್ತಿಯನ್ನು ಪ್ರಯೋಗಿಸುತ್ತಾನೆ. ಅಲೌಕಿಕ ಶಕ್ತಿಯ ಪ್ರದರ್ಶನದ ಮೂಲಕ, ಮಾನವನು ಸಹಜವಾಗಿಯೇ ಅನ್ಯರಿಂದ

ಪ್ರಶಂಸೆ ಪಡೆಯುತ್ತಾನೆ. ಹಾಗೂ ಅವರಿಗೆ ಶ್ರದ್ಧೇಯನೆನಿಸುತ್ತಾನೆ. ಅಷ್ಟೇ ಏಕೆ? ಆರಾಧ್ಯನೂ ಆಗುತ್ತಾನೆ. ಸಾಧಾರಣ ಜನರು ಅವನನ್ನು ಅತಿ ದೊಡ್ಡ ಸಾಧಕನೆಂದು ಎಣಿಸುತ್ತಾರೆ. ವಿಭೂತಿ ಇಲ್ಲವೆ ಮಹಿಮೆ ಪ್ರದರ್ಶನದ ಹಿಂದೆ ಇದೇ ಅಭಿಪ್ರಾಯವಿದೆ. ಇತರರಿಂದ ಶ್ರದ್ಧೆ ಮತ್ತು ಭಕ್ತಿಗಳನ್ನು ಪಡೆಯುವ ಇಚ್ಛೆಯು ಅವಿದ್ಯೆಯನ್ನು ಆಶ್ರಯಿಸಿದ ಮಾನ ಮತ್ತು ಮದ ರಿಪುಗಳ ವಶದಲ್ಲಿ ಕೆಡಹುತ್ತದೆ. ಈ ಅಭಿಪ್ರಾಯದಂತೆ ಶಕ್ತಿಯ ಬಳಕೆಯು ಮನವನ್ನು ಅವಿದ್ಯೆಯ ಆಶ್ರಯಕ್ಕೆ ತಳ್ಳುತ್ತದೆ. ಮತ್ತು ಅವಿದ್ಯಾ ಮಾಯೆಯು ಮಾನವನ ಅಧಃಪತನಕ್ಕೆ ಕಾರಣೀಭೂತವಾಗುತ್ತದೆ. ಆದ್ದರಿಂದ, ಅಲೌಕಿಕ ಶಕ್ತಿಯ ಬಳಕೆಯು ಮಾನವನನ್ನು ಅವಿದ್ಯೆಗೆ ಅಧೀನಗೊಳಿಸುತ್ತದೆ. ಮತ್ತು ಅದರ ನೈತಿಕ ಅಧಃಪತನವನ್ನು ಉಂಟು ಮಾಡುತ್ತದೆ.

ದುಃಖದ ನಿವೃತ್ತಿಯ ಉದ್ದೇಶದಿಂದ ಅಂದರೆ, ಕಠಿಣ ರೋಗದಿಂದ ಪಾರುಗಾಣಿಸುವ ಉದ್ದೇಶದಿಂದ, ಸಾಧನೆಯಿಂದ ಸಂಪಾದಿಸುವ ಶಕ್ತಿಯನ್ನು ಬಳಸುವುದು ಯೋಗ್ಯವೆಂದು ಅನೇಕ ವ್ಯಕ್ತಿಗಳ ಅಭಿಪ್ರಾಯವಿದೆ. ಆದರೆ, ಇದರ ಹಿಂದೆ ಸಹ, ಯಾವುದೇ ಯುಕ್ತಿ ಇಲ್ಲ. ಪ್ರತಿಯೋರ್ವನೂ ತನ್ನ ತನ್ನ ಕರ್ಮ ಫಲವನ್ನು ಭೋಗಿಸಲೇಬೇಕು. ಮತ್ತು ರೋಗ, ಶೋಕ ಇಲ್ಲವೆ ದೈವ–ದುರ್ಘಟನೆ ಇವುಗಳೆಲ್ಲವೂ ಕರ್ಮ ಫಲ ಭೋಗದ ಬೇರೆ ಬೇರೆ ರೂಪಗಳೇ ಆಗಿವೆ. ಭಗವಾನನು ಸರ್ವಮಂಗಲಮಯನಾಗಿದ್ದಾನೆ. ಹಾಗೂ ಅವನ ಸೃಷ್ಟಿಯ ನಿಯಮಕ್ಕೆ ಅನುಸರಿಸಿಯೇ, ಮಾನವನಿಗೆ ತಾನು ಮಾಡಿದ ಕರ್ಮಗಳ ಫಲವನ್ನು ಭೋಗಿಸಬೇಕಾಗುತ್ತದೆ. ಈ ಭೋಗದ ಮಾಧ್ಯಮದಿಂದ, ಮಾನವನು ಅನ್ಯಾಯದಿಂದ ದೂರವಿರುವ ಶಿಕ್ಷಣವನ್ನು ಗ್ರಹಿಸುತ್ತಾನೆ. ಮಾನವನನ್ನು ಅವನ ಕೃತ ಕರ್ಮಗಳ ಫಲವನ್ನು ಭೋಗಿಸಲು ಹಚ್ಚುವುದರ ಹಿಂದೆ ಭಗವಾನನ ಈ ಉದ್ದೇಶವೇ ಇದೆ. ಸಾಧನೆಯಿಂದ ಪಡೆದ ಅಲೌಕಿಕ ಶಕ್ತಿಯ ಮೂಲಕ, ಈ ಚಿರಂತನ ನಿಯಮಗಳನ್ನು ತಿರುವು ಮುರುವು ಮಾಡುವುದು ಕಲ್ಯಾಣಕಾರಿಯೇನೂ ಅಲ್ಲ. ಮಾಡಿದ ಕರ್ಮಗಳ ಫಲವನ್ನು ಭೋಗಿಸಲೇಬೇಕು. ಇದರಿಂದ ಬಿಡುಗಡೆ ನೀಡುವುದು, ಅತಿ ದೊಡ್ಡ ಸಾಧಕನ ಶಕ್ತಿಗೂ ಮೀರಿದುದಾಗಿದೆ. ಅವರು, ಬಹಳವಾದರೆ, ಕೇವಲ ತಾತ್ಕಾಲಿಕವಾಗಿ ಭೋಗವನ್ನು ತಡೆಯಬಹುದು. ಆದರೆ, ಕರ್ಮದ ಕರ್ತ್ತಾನು, ಬಾಕಿ ಉಳಿದ ಕರ್ಮಫಲದ ಭೋಗವನ್ನು ಅವಶ್ಯವಾಗಿ ಮಾಡಲೇಬೇಕು. ಆವಶ್ಯಕತೆ ಇದ್ದರೆ, ಇದಕ್ಕೋಸುಗ ಮೂರು-ಜನ್ಮವನ್ನು ಪಡೆಯಬೇಕಾಗುತ್ತದೆ.



ಕಠಿಣ ವ್ಯಾಧಿಯ ಭೋಗದ ರೂಪದಲ್ಲಿರುವ ದಂಡನೆಯು, ಮಾನವನನ್ನು ಕೇಡಿ ಕರ್ಮದ ಕೆಟ್ಟ ಫಲದಿಂದ ಸಚೇತನಗೊಳಿಸಿ, ಅವನ ಮನದಲ್ಲಿ ಮುಕ್ತಿಯ ಇಚ್ಛೆಯನ್ನು ಜಾಗ್ರತಗೊಳಿಸುತ್ತದೆ. ಆದರೆ ಅನೇಕ ಭ್ರಷ್ಟ ಮತ್ತು ಅಜ್ಞ ಸಾಧಕರು ತಮ್ಮ ಸಾಧನೆಯ ಮೂಲಕ ಗಳಿಸಿದ ಅಲೌಕಿಕ ಶಕ್ತಿಯ ಸಹಾಯದಿಂದ, ಮಾನವನ ನೋವಿನ ಭೋಗವನ್ನು ತಾತ್ಕಾಲಿಕವಾಗಿ ಇಲ್ಲವಾಗಿಸಿ, ಈ ಜಾಗೃತಿಯ ಸುಸಂಧಿಯಿಂದ ಅವನನ್ನು ವಂಚಿಸುತ್ತಾರೆ. ವಾಸ್ತವವಾಗಿ, ಅವರು ಆರ್ತನ ಕಲ್ಯಾಣಕ್ಕಿಂತಲೂ ಹೆಚ್ಚಾಗಿ ಅಕಲ್ಯಾಣವನ್ನೇ ಮಾಡುತ್ತಾರೆ.

ಸಾಧನೆಯಿಂದ ಪಡೆದ ಶಕ್ತಿಯ ಬಳಕೆಯನ್ನು ನಾಸ್ತಿಕತೆ ಎಂದು ಕರೆಯಬಹುದಾಗಿದೆ. ಏಕೆಂದರೆ, ಅತಿ-ಪ್ರಾಕೃತ ಶಕ್ತಿಯ ಸಹಾಯದಿಂದ, ಭಗವಾನನಿಂದ ಸೃಷ್ಟವಾದ ನಿಯಮಗಳ ಧಾರೆಯಲ್ಲಿ ತಿರುವು ಮುರುವು ಮಾಡುವುದು ಹಾಗೂ ಭಗವಾನನ ಸರ್ವಶಕ್ತಿಮಾನತೆಯ ಅವಹೇಳನ ಮಾಡುವುದು,ಒಂದೇ ಅಲ್ಲವೇನು? ಯಾವನೊಬ್ಬನು ನೀರಿನ ಮೇಲೆ ನಡೆದು ನದಿಯನ್ನು ದಾಟಬಲ್ಲನು. ಉರಿಯುವ ಬೆಂಕಿಯೊಳಗಿಂದ ನಡೆದು ಪಾರಾಗಬಲ್ಲನು. ಇಲ್ಲವೆ ಅತ್ಯಂತ ಅಚ್ಚರಿ ಹುಟ್ಟಿಸುವಂತೆ ಯಾವನೊಬ್ಬನನ್ನು ಕಠಿಣ ರೋಗದಿಂದ ಗುಣ ಪಡಿಸಬಲ್ಲನು. ಆದರೆ, ಇದೆಲ್ಲವನ್ನೂ ಮಾಡಲು, ಅವನು ಅವಶ್ಯವಾಗಿ ಜಲ ಮತ್ತು ಅಗ್ನಿಯ ಸ್ವಾಭಾವಿಕ ಧರ್ಮದ ಹಾಗೂ ಪ್ರಕೃತಿಯ ಕರ್ಮಫಲ ಭೋಗದ ನಿಯಮಗಳನ್ನು ಭಂಗಗೊಳಿಸಬೇಕಾಗುತ್ತದೆ. ನದಿಯ ನೀರಿನ ಮೇಲೆ ನಡೆಯುವುದರಿಂದ ಯಾರೇ ಆಗಲಿ, ಮುಳುಗುತ್ತಾರೆ. ಬೆಂಕಿಯ ಸಂಪರ್ಕವು ಸ್ವಲ್ಪವಾದರೂ ಸಹ, ಸುಟ್ಟು ಹೋಗುತ್ತಾರೆ. ಅದೇ ಪ್ರಕಾರ ಮಾನವನು ಮಾಡಿದ ಕರ್ಮಗಳ ಫಲವನ್ನು ಭೋಗಿಸಲೇ ಬೇಕಾಗುತ್ತದೆ. ಈ ಎಲ್ಲ ಅನಿವಾರ್ಯ ಪರಿಣಾಮದಿಂದ ಪಾರಾಗುವ ಅರ್ಥವೆಂದರೆ, ಭಗವಾನನ ಪ್ರಭುತ್ವವನ್ನು ಅಸ್ವೀಕಾರ ಮಾಡಿದಂತೆಯೇ ಸರಿ. ಇದು ಬರೀ ಅಸ್ವೀಕಾರವಷ್ಟೇ ಅಲ್ಲ; ಪ್ರತಿಯಾಗಿ ಸೃಷ್ಟಿಯ ಮೂಲ ಉದ್ದೇಶ್ಯವನ್ನೇ ಅಲ್ಲಗಳೆದಂತಾಗುತ್ತದೆ. ಇದಕ್ಕಿಂತ ಹೆಚ್ಚಿನ ನಾಸ್ತಿಕತೆಯು ಬೇರಾವುದೂ ಇರಲಾರದು.

ಪ್ರತಿಯೊಂದು ಕರ್ಮದ ಪ್ರತಿ ಕರ್ಮವಿದೆ. ಮತ್ತು ಇದು ಅವಶ್ಯವಾಗಿ ಆಗಲೇಬೇಕಾದುದು. ಅಲೌಕಿಕ ಶಕ್ತಿಯ ಬಳಕೆಯೂ ಸಹ ಒಂದು ಕರ್ಮವಷ್ಟೇ. ಇದನ್ನು ನಾಸ್ತಿಕ ಕರ್ಮ ಇಲ್ಲವೆ ಅಪಕರ್ಮವೆನ್ನುವುದೇ ಲೇಸು. ಇಂಥ ಕರ್ಮದ ಪರಿಣಾಮವನ್ನು ಮಾನವನು ಅವಶ್ಯವಾಗಿ ಭೋಗಿಸಲೇ

ಬೇಕಾಗುತ್ತದೆ. ಮತ್ತು ಎಲ್ಲಿಯು ತನಕ ಅವನ ಕರ್ಮಗಳ ಬೀಜ ಇಲ್ಲವೆ ಸಂಸ್ಕಾರ ಭೋಗವು ನಿರ್ಮೂಲವಾಗುವುದಿಲ್ಲವೋ, ಅಲ್ಲಿಯ ತನಕ ಅವನು ಪ್ರಕೃತಿಯ ಬಂಧನದಿಂದ ಬಿಡುಗಡೆಯಾಗುವ ಸಂಭವವಿಲ್ಲ. ಇದರಿಂದ ಆಧ್ಯಾತ್ಮಿಕ ಸಾಧನೆಯ ಮೂಲಕ ಗಳಿಸಿದ ಅಲೌಕಿಕ ಶಕ್ತಿಯ ಬಳಕೆಯು ಯಾವುದೇ ಅವಸ್ಥೆಯಲ್ಲಿ ಉಚಿತವೆನಿಸದು. ಇದರ ಬಳಕೆಯು ಕೇವಲ ಅಧಃಪತನದ ಕಾರಣವೇ ಸರಿ. ಆದ್ದರಿಂವ, ಈ ಶಕ್ತಿಯ ಬಳಕೆಯ ಲೋಭವನ್ನು ಒತ್ತಾಯದಿಂದ ಕಾಣದಂತೆ ಮಾಡಬೇಕು.

ಸಾಧನೆಯ ಮೂಲಕ ಮುಕ್ತಿ ಲಾಭವು ಆಗುತ್ತದೆ. ಆದ್ದರಿಂದ, ಇದಕ್ಕಾಗಿ ಒಂದು ವಿಶೇಷ ಕೌಶಲವು ಅವಶ್ಯವಾಗಿದೆ. ಯಾರು ಈ ಕೌಶಲವನ್ನು ತಿಳಿದುಕೊಳ್ಳುವರೋ, ಕೇವಲ ಅವರಷ್ಟೇ ಕಲಿಯಬಲ್ಲರು. ಅದರಿಂದ ಆಧ್ಯಾತ್ಮಿಕ ಸಾಧನೆಯನ್ನು ಕಲಿಯಲಿಕ್ಕೋಸುಗ ಸರಿಯಾದ ಶಿಕ್ಷಕನನ್ನು ಹುಡುಕಬೇಕಾಗುತ್ತದೆ. ಅಂದ ಮೇಲೆ, ಆಧ್ಯಾತ್ಮಿಕ ಸಾಧನೆಯನ್ನು ಕಲಿಯಲಿಕ್ಕಾಗಿ, ಹಾಗೂ ಮುಕ್ತಿ ಲಾಭಕ್ಕಾಗಿ ಗುರುವಿನ ಪ್ರಯೋಜನೆಯನ್ನು ಸ್ವೀಕರಿಸಲೇಬೇಕಲ್ಲವೇನು? ಯಾರಾದರೂ ತಂತಾನೇ ಇದನ್ನು ಕಲಿತುಕೊಳ್ಳಬಲ್ಲನೇನು? ಕೈ ಕಾಲುಗಳನ್ನು ಕಟ್ಟಿ ಹಾಕಿದ ಬಂದಿಯು, ಬೇರೆಯವರು ಬಂದು ಬಾಗಿಲು ತೆರೆಯದೆ ಇಲ್ಲವೆ ಬೇಡಿಗಳನ್ನು ಬಿಡಿಸದೆ, ತಾನು ಸ್ವತಃ ಶತ ಪ್ರಯತ್ನ ಮಾಡಿದರೂ ಸಹ, ತನ್ನನ್ನು ಕಾರಾಗೃಹದಿಂದ ಬಿಡಿಸಿಕೊಳ್ಳಲಾರನು. ಅದೇ ಪ್ರಕಾರ, ಪ್ರಕೃತಿಯ ಮೂಲಕ ಕಟ್ಟಿ ಹಾಕಿ, ಈ ವಿಸ್ತಾರವಾದ ವಿಶ್ವದ ಕಾರಾಗೃಹದಲ್ಲಿ ಹಾಕಲ್ಪಟ್ಟ ವ್ಯಕ್ತಿಯು ಎರಡನೆಯವರ ಸಹಾಯವಿಲ್ಲದೆ, ಮುಕ್ತಿಯನ್ನು ಪಡೆಯುವುದು, ಎಂದೆಂದಿಗೂ ಸಾಧ್ಯವಾಗದು. ಇದರ ಹೊರತು ಯಾವುದಕ್ಕಾಗಿಯೂ, ಯಾವುದೇ ಕಲಾಕೌಶಲ್ಯವನ್ನು ತಂತಾನೇ ಪೂರ್ಣವಾಗಿ ಕಲಿಯುವ ಸಂಭವವಿಲ್ಲ. ಇದಕ್ಕಾಗಿ ಚೆನ್ನಾಗಿ ತಿಳಿದ, ಮತ್ತು ತಿಳಿಸಬಲ್ಲ ಹಾಗೂ ಅನುಸರಣೆ ಮಾಡಲು ಯೋಗ್ಯನಾದ, ಶಿಕ್ಷಕನ ಪ್ರಯೋಜನವಿದೆ. ಇಂಥ ಅತ್ಯಾವಶ್ಯಕ ಶಿಕ್ಷಕನನ್ನೇ ಗುರು ಎನ್ನುತ್ತಾರೆ. ಆಧ್ಯಾತ್ಮಕ ಸಾಧನೆಯ ಕೌಶಲವನ್ನೂ ಸಹ ಗುರುವಿನಿಂದಲೇ ಕಲಿಯಬೇಕಾಗಿದೆ. ಆದ್ದರಿಂದ, ಗುರುವಿಲ್ಲದೆ ಮುಕ್ತಿ ಪಡೆಯುವ ಸಂಭವವಿಲ್ಲ. ಮುಕ್ತಿಯನ್ನು ಪಡೆಯುವ ಹೇತುವಿನಿಂದ, ಗುರುವು ಪ್ರಥಮ ಹಾಗೂ ಪ್ರಧಾನ ಪ್ರಯೋಜನೀಯನಾಗಿದ್ದಾನೆ.

ಓರ್ವ ಬಂಧಿತ ಮಾನವನನ್ನು ಬೇರೊಬ್ಬ ಬಂಧಿತ ಮನುಷ್ಯನು ಮುಕ್ತಗೊಳಿಸಲಾರನು. ಆದ್ದರಿಂದ, ಕೇವಲ ಮುಕ್ತ ಪುರುಷನು ಮಾತ್ರ ಗುರುವಾಗ



ಬಲ್ಲನು. ಮತ್ತು ಇತರರ ಮುಕ್ತಿ ಪ್ರಾಪ್ತಿಯಲ್ಲಿ ಸಹಾಯಕನಾಗಬಲ್ಲನು. ಪ್ರಕೃತಿಯ ಗುಣ ಬಂಧನದಿಂದ ಮುಕ್ತರಾದವರೇ ಮುಕ್ತ ಪುರುಷರು. ಈ ವಿಚಾರದಿಂದ ಕೇವಲ ಪರಮ–ನಿರ್ಗುಣ ಸತ್ತೆಯನ್ನೇ ಮುಕ್ತ ಪುರುಷನೆನ್ನಬಲ್ಲೆವು. ಆದರೆ, ನಿರ್ಗುಣ ಬ್ರಹ್ಮನು ಸ್ವಯಂ ಗುಣ ರಹಿತನಾಗಿರುವುದರಿಂದ ಎರಡನೆಯವರ ಮುಕ್ತಿಯ ಕಾರಣವಾಗಲಾರನು. ಏಕೆಂದರೆ, ಅವನಲ್ಲಿ ಎರಡನೆಯವರನ್ನು ಮುಕ್ತಗೊಳಿಸಬೇಕೆಂಬ ಕಾಮನೆಯ ಸಂಭಾವ್ಯತೆಯೂ ಸಹ ಇರದು. ಇದರಿಂದ, ಸಾಧನೆಯ ಮೂಲಕ ಪರಮ ಪದವನ್ನು ಪಡೆದು, ಜನ ಕಲ್ಯಾಣಕ್ಕಾಗಿ ಸಂಕಲ್ಪ ತಾಳಿ, ಪುನಃ ಸ್ವೇಚ್ಛೆಯಿಂದ ನಿರ್ದಿಷ್ಟ ಕಾಲಕ್ಕೋಸುಗ ಪ್ರಕೃತಿಯ ಗುಣಕ್ಕೆ ಅಧೀನನಾಗುವವರು ಮತ್ತು ಮಾನವ ದೇಹ ಹೊತ್ತು ಬರುವವರು ಮಾತ್ರ ಗುರುವಾಗಬಲ್ಲರು. ಎಷ್ಟು ದಿನಗಳ ವರೆಗೆ ಅವರು ದೇಹ ಧರಿಸಿ ಇರುವರೋ, ಅಷ್ಟು ದಿನಗಳ ವರೆಗೆ ಅವರು ಪ್ರಕೃತಿಯ ಗುಣಗಳಿಗೆ ಅಧೀನರಾಗಿಯೇ ಇರುತ್ತಾರೆ. ದೇಹವನ್ನು ತ್ಯಜಿಸಿದ ಬಳಿಕ ಅವರು ಪರಮ ಸತ್ತೆಯಲ್ಲಿ ಮರಳಿ ಲೀನವಾಗುತ್ತಾರೆ. ಪರಮ ಗುಣಾಧೀಶ ಸತ್ತೆ ಇಲ್ಲವೆ ಭಗವಾನನೇ ಮುಕ್ತನಾಗಿದ್ದಾನೆ. ಮತ್ತು ಅದರಿಂದಾಗಿ, ಅವನೇ ಗುರುವಾಗಿದ್ದಾನೆ. ಅರ್ಥಾತ್ ಗುರು ಮತ್ತು ಭಗವಾನರಲ್ಲಿ ಯಾವುದೇ ಪಾರ್ಥಕ್ಯವಿಲ್ಲ. ಸಗುಣ ಸತ್ತೆಯನ್ನು ಹೊರತು ಪಡಿಸಿ ಬೇರೆ ಏನಿನಿತೂ ಇರಲಾರದು. ಇದರಿಂದ ಗುರುವೇ ಅವತಾರ ರೂಪದಲ್ಲಿ ಸಗುಣ ಬ್ರಹ್ಮ ಇಲ್ಲವೆ ಭಗವಾನನಾಗಿದ್ದಾನೆ. ತನ್ನ ಪ್ರತಿಯೊಂದು ಅಣುದನ್ನು ಮುಕ್ತಗೊಳಿಸುವುದು ಸಗುಣ ಬ್ರಹ್ಮನ ಇಚ್ಛೆಯಾಗಿದೆ. ಮತ್ತು ಈ ಇಚ್ಛೆಯಿಂದ ಅವನು ಸೃಷ್ಟಿಯನ್ನು ರಚಿಸಿದ್ದಾನೆ. ಆದರೆ, ಸಗುಣ ಬ್ರಹ್ಮನು ಸ್ವತಃ ಒಂದು ರೂಪ ರೇಖಾ ಹೀನ, ನೋಡಲಿಕ್ಕಾಗದ, ಕೇಳಲಿಕ್ಕಾಗದ, ಒಂದು ಅತೀತ ಸತ್ತೆಯಾಗಿರುವ ಕಾರಣ, ಮುಕ್ತಿ ಗಳಿಸುವಲ್ಲಿ ಮಾನವನಿಗೆ ಸಹಾಯಕನಾಗಲಾರನು. ಅಣುವಿನ ಮುಕ್ತಿಯ ಪ್ರಯತ್ನದಲ್ಲಿ ಸಹಾಯಕನಾಗಲು ಅವನು ಮಾನವಾಧಾರವನ್ನು ಗ್ರಹಿಸಬೇಕಾಗುತ್ತದೆ. ಅವನು ಧರಿಸಿದ ಈ ಆಧಾರಕ್ಕೇ ಗುರು ಎನ್ನುತ್ತಾರೆ. ಇದರಿಂದ ಗುರುವು ಅವತಾರ ರೂಪದಲ್ಲಿ ಭಗವಾನನಾಗಿದ್ದಾನೆ. ಇದರಲ್ಲಿ ಯಾವುದೇ ಸಂದೇಹವಿಲ್ಲ.

ಮುಕ್ತ ಪುರುಷ ಇಲ್ಲವೆ ಸದ್ಗುರುವು ಜಗತ್ತಿನಲ್ಲಿ ದುರ್ಲಭನಾಗಿದ್ದಾನೆ. ಆದರೂ ಸಹ, ಸದ್ಗುರುವಿನ ಶೋಧದಲ್ಲಿ, ಪರ್ವತ, ಗುಹೆ, ಅಡವಿಗಳಲ್ಲಿ ಅಲೆಯುವ, ವಾಸಿಸುವ ಯಾವುದೇ ಆವಶ್ಯಕತೆಯಿಲ್ಲ. ಏಕೆಂದರೆ, ಸೃಷ್ಟಿ ರಚನೆಯ

ಹಿಂದೆ, ಯಾವಾಗ ಸಗುಣ ಬ್ರಹ್ಮನ ಮೂಲ ಇಚ್ಛೆಯು ತನ್ನ ಪ್ರತಿಯೊಂದು ಅಣುವಿನ ಮುಕ್ತಿಯ ಉಪಾಯ ಮಾಡುವುದೇ ಆಗಿದೆಯೋ, ಮುಮುಕ್ಷುವಾದ ಅಣುವಿಗೆ ತಕ್ಕ ಸಮಯಕ್ಕೆ ದರ್ಶನವಿತ್ತು. ಕೃತಾರ್ಥನನ್ನಾಗಿಸುವುದೂ ಸಹ ಅವನದೇ ಕಾರ್ಯವಾಗಿದೆ. ಮುಮುಕ್ಷು ಅಣುವಿನ ಪ್ರಬಲ ಇಚ್ಛೆಯನ್ನು ಈಡೇರಿಸಲು, ಸಗುಣ ಬ್ರಹ್ಮನೇ ಸದ್ಗುರುವಿನ ರೂಪದಲ್ಲಿ ತಕ್ಕ ಸಮಯಕ್ಕೆ ದರ್ಶನವೀಯುತ್ತಾನೆ. ಹೀಗಾಗದಿದ್ದರೆ, ಸೃಷ್ಟಿಯ ಉದ್ದೇಶವೇ ವ್ಯರ್ಥವಾಗುತ್ತದೆ ಹಾಗೂ ಸ್ರಷ್ಟಾನು ತಾನೇ ಸೃಷ್ಟಿಯ ಬಂಧನದ ಕಾರಣನಾಗುತ್ತಾನೆ. ಆದ್ದರಿಂದ, ಸದ್ಗುರುವನ್ನು ಹುಡುಕುತ್ತ ತಿರುಗಾಡುವುದು ನಿಷ್ಪ್ರಯೋಜನವಾಗಿದೆ. ಮುಕ್ತಿ ಹೇತುವುಳ್ಳ ಪ್ರಬಲ ಇಚ್ಛೆಯನ್ನು ಜಾಗ್ರತಗೊಳಿಸುವುದೇ ಪ್ರಯೋಜನವಾಗಿದೆ.

ಈಗ ಸದ್ಗುರುವಿನ ವಿಚಾರ ಮಾಡುವುದೆಂತು? ಅಂಥ ವಿಚಾರದಿಂದ, ಅಲ್ಪಜ್ಞರಾದ ಜನಸಾಮಾನ್ಯರೂ ಸಹ, ಅವನನ್ನು ಸಹಜವಾಗಿ ತಿಳಿಯುವಂತಾಗಬೇಕು. ಅಲೌಕಿಕ ಶಕ್ತಿಯ ಅಧಿಕಾರಿಯಾಗುವುದು ಇಲ್ಲವೆ ಪ್ರದರ್ಶನ ಮಾಡುವುದು, ಸದ್ಗುರುವಿನ ವಿಶೇಷತೆಗಳೇನು? ಆದರೆ, ಸಕಲ ವಿಭೂತಿಗಳಿಂದ ಸಂಪನ್ನನಾದ ಮುಕ್ತ ಪುರುಷನಿಗೆ ಸದ್ಗುರುವೆನ್ನಿಸಿಕೊಳ್ಳಲು ವಿಭೂತಿ ಪ್ರದರ್ಶನದ ಯಾವುದಾದರೂ ಪ್ರಯೋಜನವುಂಟೇ? ಮೊದಲೇ ಹೇಳಿರುವಂತೆ, ಯಾವುದೇ ಅವಸ್ಥೆಯಲ್ಲಿ ಅತಿ-ಪ್ರಾಕೃತ ಶಕ್ತಿಯ ಬಳಕೆಯು ಮಾನವನ ನೈತಿಕ ಪತನವನ್ನುಂಟು ಮಾಡುತ್ತದೆ. ಹಾಗೂ ಅವನನ್ನು ಅವಿದ್ಯಾಶ್ರಯಿಯನ್ನಾಗಿ ಮಾಡುತ್ತದೆ. ಆದರೆ, ಮುಕ್ತ ಪುರುಷನು ಮಾತ್ರ ಎಂದೆಂದಿಗೂ ಅವಿದ್ಯೆಯನ್ನು ಆಶ್ರಯಿಸುವುದಿಲ್ಲ. ಆದ್ದರಿಂದ, ಯಾರು ತಮ್ಮ ಅತಿಪ್ರಾಕೃತ ಶಕ್ತಿಯ ಪ್ರದರ್ಶನ ಮಾಡಿ, ಸದ್ಗುರುವಿನ ರೂಪದಲ್ಲಿ ಪ್ರತಿಷ್ಠೆಗೊಳ್ಳುವ ಪ್ರಯತ್ನ ಮಾಡುವರೋ, ಪ್ರಚಾರಕರಾಗಿರುವರೋ, ಅವರು ಮುಕ್ತ ಪುರುಷರೇ ಆಗಿರಲಾರರು. ಈ ಪ್ರಕಾರದ ಖಳ ವ್ಯಕ್ತಿಯಿಂದ ದೂರವಿರುವುದೇ ಕರ್ತವ್ಯವಾಗಿದೆ. ಅಲೌಕಿಕ ಶಕ್ತಿಯ ಅಧಿಕಾರಿಯಾಗುವುದರ ಮೂಲಕ, ಹಾಗೂ ಅದರ ಪ್ರದರ್ಶನದ ಮೂಲಕ, ಸದ್ಗುರುವಿನ ವಿಚಾರ ಮಾಡಲಾಗದು. ಸದ್ಗುರುವು ಮುಕ್ತ ಪುರುಷನಾಗಿದ್ದಾನೆ. ಪ್ರಕೃತಿಯ ಪ್ರಭಾವವು ಅವನನ್ನು ತಟ್ಟಲಾರದು. ಅವಿದ್ಯಾ ಮಾಯೆಯಿಂದ ಉತ್ಪನ್ನವಾದ ಷಟ್ ರಿಪು (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ) ಮತ್ತು ಅಷ್ಟ ಪಾಶ (ಘೃಣೆ, ಶಂಕೆ, ಭಯ, ಲಜ್ಜೆ, ಜುಗುಪ್ಸೆ, ಕಾಲ, ಶೀಲ, ಮಾನ)ಗಳ ಬಂಧನ ಜಾಲವು



ಅವನನ್ನು ವಶವರ್ತಿಯಾಗಿ ಮಾಡಿಕೊಳ್ಳದು. ವಿದ್ಯಾ ಮಾಯೆಯನ್ನೇ ಅವಲಂಬಿಸಿ, ಸೃಷ್ಟಿ ಚಕ್ರದ ಮೂಲ ವಿಶೇಷತೆಯೊಂದಿಗೆ ಹೆಜ್ಜೆಯಲ್ಲಿ ಹೆಜ್ಜೆ ಹಾಕಿ ನಡೆಯುತ್ತಾರೆ. ಅರ್ಥಾತ್ ಅವರು ವಿವೇಕ ಮತ್ತು ವೈರಾಗ್ಯಗಳನ್ನಷ್ಟೇ ಅನುಸರಿಸುತ್ತಾರೆ. ಇಂಥ ವ್ಯಕ್ತಿಯನ್ನು ಮಾತ್ರ ಸದ್ಗುರುವೆನ್ನಬಹುದು.

ಸದ್ಗುರುವಿನ ಮೂಲಕ ಪ್ರವರ್ತ್ತಿತವಾದ ಸಾಧನಾ ಪದ್ಧತಿಯ ಅನುಶೀಲನೆ ಮಾಡಿ ಮಾನವನು ಮುಕ್ತಿಲಾಭ ಪಡೆಯ ಬಲ್ಲನು, ಆದರೆ ಸಾಧನೆಯನ್ನು ಮಾಡದೆ, ಕೇವಲ ಸದ್ಗುರುವಿನ ಮೇಲೆ ಕೈಯೂರಿ, ಕುಳಿತುಕೊಳ್ಳುವುದರಿಂದ ಫಲ ದೊರೆಯದು. ಸಾಧನೆ ಇಲ್ಲದೆ ಮುಕ್ತಿ ಇಲ್ಲ. ಆದ್ದರಿಂದ, ಸರ್ವರೂ ಸಾಧನೆ ಮಾಡಲೇಬೇಕು. ತಾನೇ ಸ್ವತಃ ಯಾವ ಪ್ರಯತ್ನವನ್ನೂ ಮಾಡಬೇಕಿಲ್ಲ; ಸದ್ಗುರುವಿನ ಕೃಪೆಯಿಂದಲೇ ತಾವು ಮುಕ್ತರಾಗುತ್ತೇವೆ ಎಂಬ ತಪ್ಪು ಧಾರಣೆಯು ಅನೇಕರಿಗುಂಟು. ಸದ್ಗುರುವಿನ ಕೃಪೆ ಇಲ್ಲದೆ ಮುಕ್ತಿ ಇಲ್ಲವೆಂಬ ಮಾತೇನೋ ಸತ್ಯವಿದೆ. ಆದರೆ, ಹೀಗೆ ತಿಳಿದು, ತಾವು ಪ್ರಯತ್ನ ಮಾಡದೆ ಮುಕ್ತಿ ಪಡೆಯುವೆವೆಂಬ ಧಾರಣೆಯು ಸರಿಯಲ್ಲ. ಸದ್ಗುರುವಿನ ಕೃಪೆ ಪಡೆಯುವುದಕ್ಕಾಗಿ ಮೊದಲು ತನ್ನನ್ನು ಯೋಗ್ಯನನ್ನಾಗಿಸಿಕೊಳ್ಳಬೇಕು. ಅಯೋಗ್ಯ ಶಿಷ್ಯನ ಮೇಲೆ ಸದ್ಗುರುವಿನ ಕೃಪೆಯಾಗಲಾರದು. ಅವನ ಕೃಪಾಪಾತ್ರನಾಗಲಿಕ್ಕಾದರೂ ಅವನಲ್ಲಿ ವಿಶ್ವಾಸವಿರಿಸಿ, ಭಕ್ತಿ ತುಂಬಿದ ಚಿತ್ತದಿಂದ ಅವನು ಹೇಳಿದ ಸಾಧನಾ ಪದ್ಧತಿಯ ಅನುಶೀಲನೆ ಮಾಡಬೇಕು. 'ಅವನೇ ನನ್ನ ಸಲುವಾಗಿ ಎಲ್ಲವನ್ನೂ ಮಾಡುತ್ತಾನೆ;' ಎಂಬ ಧಾರಣೆ ಇರಿಸಿಕೊಂಡು ಕೈಕಾಲು ಮಡಿಚಿಕೊಂಡು ತೆಪ್ಪಗೆ ಕುಳಿತುಕೊಳ್ಳುವುದರಿಂದ ಕಾರ್ಯ ನಡೆಯದು. ಸದ್ಗುರುವು ಆರ್ತ ಜನರ ಕಲ್ಯಾಣದ ವ್ರತವನ್ನು ಕೈಕೊಂಡೇ ಮರ್ತ್ಯ ಭೂಮಿಗೆ ಐತಂದಿರುವನೆಂದು ಕೆಲವು ಜನರ ಧಾರಣೆಯುಂಟು. ಅಂದ ಮೇಲೆ, ಸಂಜೆಗೆ ದನಗಾಹಿಯು ಹುಲ್ಲುಗಾವಲಿನಿಂದ ಹಸುಗಳೆಲ್ಲವನ್ನೂ ಹುಡುಕಿ ಕಲೆ ಹಾಕಿ ಮನೆಯತ್ತ ಹೊಡೆದುಕೊಂಡು ಬರುವಂತೆಯೇ, ತನ್ನ ಮಹಾಪ್ರಸ್ಥಾನದ ಕಾಲಕ್ಕೆ ಸಗುಣ ಬ್ರಹ್ಮನು ಅವಶ್ಯವಾಗಿ ಎಲ್ಲರನ್ನೂ ತನ್ನೊಂದಿಗೆ ಕರೆದುಕೊಂಡು ಹೋಗುತ್ತಾನೆ: ಎಂದವರ ಧಾರಣೆ. ಇದೊಂದು ಅನುಪಮ ಉಪಮೆ! ಸದ್ಗುರುವು, ಮಾನವರನ್ನು ಹಸು ಮುಂತಾದ ದನಗಳಂತೆ, ಮೇಯಿಸಿಕೊಂಡು ಬರಲು ಈ ಪೃಥ್ವಿಯ ಮೇಲೆ ಬರುವುದಿಲ್ಲ. ಮಾನವರನ್ನು ತನ್ನಂತೆಯೇ, ಮುಕ್ತಗೊಳಿಸುವ ಪವಿತ್ರ ಸಂಕಲ್ಪವನ್ನು ಹೊತ್ತು ಅವನು ಬಂದಿರುತ್ತಾನೆ. ಬಂಧನದಿಂದ ಬಿಡುಗಡೆ ಪಡೆದು, ಬಹಳವಾಗಿ ಬಯಸಿದ

ಮುಕ್ತಿಯ ರಸಾಸ್ವಾದನೆಗಾಗಿ ಮಾನವನು ಅನ್ಯರ ಮೇಲೆ ಅವಲಂಬಿಸದೆ ಸ್ವತಃ ಅಧ್ಯಾತ್ಮದ ಅನುಶೀಲನೆಯಲ್ಲಿ ಯತ್ನಿಸಬೇಕಾಗುತ್ತದೆ.

ಸಾಧನೆಯನ್ನು ಪ್ರಾರಂಭಿಸುತ್ತಲೇ ಅಸೌಕರ್ಯಗಳು ಹುಟ್ಟಿಕೊಳ್ಳುತ್ತವೆ. ಮತ್ತು ಸಾಧನೆಯಲ್ಲಿ ಮುನ್ನಡೆಯುತ್ತಿರುವಂತೆಯೇ ಅಡ್ಡಿ ಆತಂಕಗಳೂ ಹೆಚ್ಚುತ್ತವೆ. ಪ್ರಕೃತಿಯ ಬಂಧನದಿಂದ ಬಿಡುಗಡೆ ಪಡೆಯುವ ಪ್ರಯತ್ನವೇ ಸಾಧನೆಯಾಗಿದೆ. ಪ್ರಕೃತಿಯಿಂದ ಹುಟ್ಟಿದ ಮನವು ತಾನೇ ವಿಕೃತಿ ಹೊಂದಿ, ಬಂಧನವನ್ನು ಕಳಚದಂತಿರಿಸುತ್ತದೆ. ಮುಕ್ತಿಗಾಗಿ, ಮನವು ವಿಕೃತಿಯಿಂದ ಪಾರಾಗಿ, ಸ್ವಾಭಾವಿಕ ಅವಸ್ಥೆಯಲ್ಲಿ ಬರಬೇಕಾಗುತ್ತದೆ. ಮೊದಲೇ ಹೇಳಿದಂತೆ, ಈ ವಿಕೃತಿಯು ಮಾಡಿದ ತಂತಮ್ಮ ಕರ್ಮಗಳ ಪ್ರತಿಕ್ರಿಯೆಯ ಹೊರತು ಇನ್ನೇನೂ ಅಲ್ಲ. ಭೋಗಿಸಿದಲ್ಲದೆ ಇದರಿಂದ ಬಿಡುಗಡೆ ಪಡೆಯುವ ಸಂಭವವಿಲ್ಲ. ಇದರಿಂದ, ಜನ್ಮ–ಜನ್ಮಾಂತರದ ಸಂಚಿತ ಸಂಸ್ಕಾರಗಳನ್ನು (ಪ್ರತಿಕ್ರಿಯೆಯ ಬೀಜ) ಭೋಗಿಸಿದಲ್ಲದೆ ಮುಕ್ತಿ ಲಾಭ ಪಡೆಯುವ ಸಂಭವವಿಲ್ಲ. ಸಾಧಾರಣವಾಗಿ ಕರ್ಮದೊಂದಿಗೇನೇ ಮಾನವನು ಪ್ರತಿ ಕರ್ಮವನ್ನೂ ಭೋಗಿಸುತ್ತಿರುತ್ತಾನೆ. ಕೆಲವು ಅಭುಕ್ತ ಸಂಸ್ಕಾರಗಳು ಉಳಿದುಕೊಂಡ ಬಳಿಕ, ಅವುಗಳನ್ನು ಭೋಗಿಸಲಿಕ್ಕಾಗಿ, ಪುನರ್ಜನ್ಮ ತಾಳಬೇಕಾಗುತ್ತದೆ, ಸಾಧಕನು ಸಂಸ್ಕಾರವನ್ನು ಭೋಗಿಸುವುದಕ್ಕಾಗಿ, ಪುನರ್ಜನ್ಮವನ್ನು ಬಯಸುವುದಿಲ್ಲ. ಮುಕ್ತಿ ಹೇತುವಿನಿಂದ, ಈ ಜನ್ಮದಲ್ಲಿಯೇ ಅವನು ಅಭುಕ್ತ ಸಂಸ್ಕಾರಗಳನ್ನು ಸಾಧ್ಯವಾದಷ್ಟು ಬೇಗ ಭೋಗಿಸಬಯಸುತ್ತಾನೆ. ಇದರಿಂದ, ಭೋಗದಿಂದ ಹುಟ್ಟಿದ, ದುಃಖ ದುಮ್ಮಾನ, ಬಾಧೆ–ವಿಪತ್ತುಗಳನ್ನು,ಜಯದ ಸಂಕೇತಗಳೆಂದು ಬಗೆದು,ಆದರದಿಂದ ಬರಮಾಡಿಕೊಳ್ಳುತ್ತಾನೆ.

ಪ್ರಕೃತಿಯ ಗುಣ ಬಂಧನದಿಂದ ಮುಕ್ತವಾಗುವುದೇ, ಸಾಧನೆಯ ತಾತ್ಪರ್ಯವಾಗಿದೆ. ಅವಿದ್ಯಾ ಮಾಯೆಯೂ ಸಹ, ಒಂದು ಗುಣ ಬಂಧನವೇ ಆಗಿದೆ. ಅಂದ ಮೇಲೆ ಇದರಿಂದ ಸಹ ಮುಕ್ತನಾಗಬೇಕು. ಒಂದು ವೇಳೆ, ಬಹು ದಿನಗಳಿಂದ, ಯಾವನೊಬ್ಬನು ಮನೆಯಲ್ಲಿ ವಿಘ್ನಗಳಿಲ್ಲದೆ ಇರುತ್ತಿದ್ದರೆ, ಅವನನ್ನು ಒಮ್ಮಿಂದೊಮ್ಮೆ ಒತ್ತಾಯ ಪೂರ್ವಕ ಹೊರಹಾಕುವುದು ತುಂಬಾ ಕಠಿಣ ಕಾರ್ಯ. ಅವನು ಸುಲಭವಾಗಿ ಮನೆಯನ್ನು ಬಿಡುವುದಿಲ್ಲ. ಅವನು ಪ್ರಾಣವನ್ನು ಪಣಕ್ಕೆ ಹಚ್ಚಿ ಅಡ್ಡಿ–ಆತಂಕಗಳನ್ನೊಡ್ಡುವನು. ತನ್ನ ಯಾವತ್ತೂ ಛಲ–ಬಲ, ಮತ್ತು ಕಲಾ–ಕೌಶಲ್ಯಗಳು ವ್ಯರ್ಥವಾದ ಮೇಲೆಯೇ, ಅವನು ಮನೆಯೊಡೆಯನಿಗೆ ಮರಳಿ ಅಧಿಕಾರ ನಡೆಸಲು ಇಂಬುಗೊಡುತ್ತಾನೆ. ಅದೇ



ಪ್ರಕಾರ, ಜನ್ಮ ಜನ್ಮಾಂತರದಿಂದ ಆಶ್ರಿತ ಮತ್ತು ಸಂಪುಷ್ಟವಾದ ಅವಿದ್ಯಾ ಮಾಯೆಯು ಸಾಧನೆಯನ್ನು ಪ್ರಾರಂಭಿಸಿದೊಡನೆಯೇ ಓಡಿಹೋಗುವುದಿಲ್ಲ. ಅದು ಸಾಧ್ಯವಿರುವಷ್ಟು ಅಡ್ಡಿ–ಆತಂಕಗಳನ್ನು ಹುಟ್ಟಿಸಿ, ತಾನು ಮುಂದುವರಿಯುವ ಪ್ರಯತ್ನ ಮಾಡುತ್ತದೆ. ಸದ್ಗುರುವಿನ ಮೂಲಕ ಪಡೆದ ಸಾಧನಾ-ಪದ್ಧತಿಯು ಅವಿದ್ಯಾ ಮಾಯೆಯನ್ನು ದೂರಗೊಳಿಸುವ ಒಂದು ಉಪಾಯವಷ್ಟೇ ಆಗಿದೆ. ಸಾಧನೆಯ ಸಿದ್ಧಿಯಿಂದಲೇ ಮಾನವನ ಅವಿದ್ಯಾ ಮಾಯೆಯಿಂದ ಬಿಡುಗಡೆಯನ್ನು ಪಡೆಯಬಲ್ಲನು. ಇದರಿಂದ, ನಿಶ್ಚಯವಾಗಿ ಸಾಧನೆಯನ್ನು ಪ್ರಾರಂಭಿಸುತ್ತಿದ್ದಂತೆಯೇ, ಅವಿದ್ಯಾ ಮಾಯೆಯ ಕಡೆಯಿಂದ ಪ್ರಬಲ ಅಡ್ಡಿ ಆತಂಕಗಳು ಎದುರಾಗುತ್ತವೆ. ಇದರಿಂದ, ಮಾನವನು ಬಾಧೆಗಳಿಂದ ವ್ಯಾಕುಲನಾಗಿ ಸಾಧನೆಯ ಮಾರ್ಗವನ್ನೇ ತೊರೆಯಲು ಬಾಧ್ಯಸ್ಥನಾಗುತ್ತಾನೆ. ಅಂದ ಮೇಲೆ, ಅವಿದ್ಯಾ ಮಾಯೆಯ ಮೇಲೆ ಪ್ರಬಲ ಆಘಾತ ಮಾಡುವ, ಇಲ್ಲವೆ ಅವನ್ನು ಪದಚ್ಯುತಗೊಳಿಸುವ ಪ್ರಯತ್ನವನ್ನು ಮಾಡುವ, ಸಾಧನೆಯು ಸ್ವಾಭಾವಿಕವಾಗಿಯೇ ಅವಿದ್ಯಾ ಮಾಯೆಯ ಕುರುಡು ಜಡ ಶಕ್ತಿಯ ಬಳಿ, ಅಡ್ಡಿ–ಆತಂಕಗಳನ್ನೆದುರಿಸಲೇಬೇಕಾಗುತ್ತದೆ. ಆದರೆ, ಸಾಧನೆಯಲ್ಲಿ ಬಾಧೆ–ವಿಘ್ನಗಳು ಬರುವುದು, ಅವಿದ್ಯಾ ಮಾಯೆಯ ಸೋಲಿನ ಸೂಚನೆಯನ್ನೇ ನೀಡುವವಷ್ಟೇ. ಭಗವಾನ ಇಲ್ಲವೆ ಸದ್ಗುರುವು ಎಂದೆಂದೂ ಸಾಧನೆಯಲ್ಲಿ ಬಾಧೆಗಳನ್ನ ಸೂಚಿಸುವುದಿಲ್ಲ. ಏಕೆಂದರೆ, ಪ್ರತಿಯೊಂದು ಅಣುವೂ ಸಾಧನೆ ಮಾಡಿ, ಅವನಂತೆಯೇ ಮುಕ್ತನಾಗಲಿ; ಎಂಬುದೇ ಅವನ ಇಚ್ಛೆಯಾಗಿದೆ. ಈ ಬಾಧೆ–ವಿಘ್ನಗಳು ಪ್ರಕೃತಿಯ ಅವಿದ್ಯಾ ಮಾಯೆಯ ಮೂಲಕ ಸೃಷ್ಟವಾಗುತ್ತವೆ. ಸಾಧನೆಯ ರೂಪದ ಅಸ್ತ್ರವನ್ನು ಪ್ರಯೋಗಿಸಿ, ಹೋರಾಟದಲ್ಲಿ ಪ್ರಕೃತಿಯನ್ನು ಸೋಲಿಸಿ ಮುಕ್ತಿಲಾಭವನ್ನು ಪಡೆಯಬೇಕು.

ಸೃಷ್ಟಿ ಲೀಲೆಯಲ್ಲಿ ಸಗುಣ ಬ್ರಹ್ಮನು ತನ್ನ ಪ್ರತಿಯೊಂದು ಅಣುವೂ ಸಾಧನೆ ಮಾಡಿ, ಮುಕ್ತಿ ಲಾಭವನ್ನು ಹೊಂದುವಲ್ಲಿ, ಸಹಾಯ ಸಲ್ಲಿಸುವ ಉದ್ದೇಶದಿಂದ, ವಿಕಸಿತ ಚೈತನ್ಯನಾದ ಮಾನವನ ಸ್ತರದ ವರೆಗೆ ತಂದಿರಿಸಿದ್ದಾನೆ. ಬೇರೆ ಪ್ರಾಣಿಗಳಲ್ಲಿ ಚೈತನ್ಯದ ಅಭಿವ್ಯಕ್ತಿಯು ಇರದು. ಆದ್ದರಿಂದ, ಸಾಧನೆ ಮಾಡಿ, ಮುಕ್ತಿ ಲಾಭ ಹೊಂದುವ ಸಾಮರ್ಥ್ಯವೂ ಸಹ, ಇವುಗಳಲ್ಲಿ ಇರದು. ಆದ್ದರಿಂದ,ಅಣು ಚೈತನ್ಯದ ವ್ಯಾಪಕ ವಿಕಾಸದ ಕಾರಣ ಯಾವ ಮಾನವನಾದರೂ ಸಾಧನೆಯ ಅಧಿಕಾರಿಯಾಗಿದ್ದಾನೆ. ಬೇರೆ ಎಲ್ಲ ಜೀವ ಜಂತುಗಳು, ಎಲ್ಲಿಯ ತನಕ ಮಾನವ ಸ್ತರವನ್ನು ತಲುಪುವುದಿಲ್ಲವೋ, ಅಲ್ಲಿಯ ತನಕ ಸಾಧನೆಯು

ಸುಸಂಧಿಯಿಂದ ವಂಚಿತವಾಗಿರುತ್ತವೆ.

ಪ್ರತಿಯೋರ್ವ ಮಾನವನು ಸಾಧನೆಯ ಅಧಿಕಾರಿಯಾಗಿದ್ದಾನೆ. ಆದ್ದರಿಂದ, ಸದ್ಗುರುವಿನ ರೂಪದಲ್ಲಿ ಸಗುಣ ಬ್ರಹ್ಮನು ಸರ್ವರೆಡೆಗೆ ಹೋಗಬೇಕಾಗುತ್ತದೆ. ಆದರೆ, ಮುಕ್ತಿಯ ತೀವ್ರ ಅಪೇಕ್ಷೆಯು ಇಲ್ಲದಿರುವುದರಿಂದ, ಮಾನವನು ತನ್ನ ಈ ಅಧಿಕಾರಕ್ಕಾಗಿ ಒತ್ತಾಯಿಸಲಾರನು. ಮತ್ತು ಇದರಿಂದ ಸಗುಣ ಬ್ರಹ್ಮನೂ ಸಹ, ಎಲ್ಲರ ಬಳಿಗೆ ಹೋಗಬೇಕಾಗಿಲ್ಲ. ಮುಕ್ತಿಯ ಇಚ್ಛೆಯು ಪ್ರಬಲಿಸಿದ ಬಳಿಕವೇ ಮಾನವನು ಸದ್ಗುರುವನ್ನು ಪಡೆಯುತ್ತಾನೆ. ಕೇವಲ ಆ ಜನರಿಗಾಗಿ ಮಾತ್ರ, ತಕ್ಕ ಸಮಯ ಬಂದಿದೆ; ಎಂದು ಹೇಳಬಹುದಾಗಿದೆ. ಮತ್ತು ಅವರೇ ಸಾಧನೆಯ ಅಧಿಕಾರಿಗಳಾಗಿದ್ದಾರೆ ಹಾಗೂ ಸದ್ಗುರುವನ್ನು ಪಡೆಯುವ ಅಧಿಕಾರಿಗಳೂ ಆಗಿದ್ದಾರೆ.

ಚೈತನ್ಯದ ಪೂರ್ಣ ಅಭಿವ್ಯಕ್ತಿಯಾದ ಬಳಿಕ, ಮಾನವನು ಒಳಿತು-ಕೇಡುಗಳ ಪಾರ್ಥಕ್ಯವನ್ನು ನಿರೂಪಿಸಿ, ಅದರಂತೆ ಕರ್ಮವನ್ನು ಮಾಡಬಲ್ಲನು. ಮುಕ್ತಿ ಲಾಭವನ್ನು ಪಡೆಯುವ ಇಚ್ಛೆಯೂ ಸಹ, ಒಂದು ಸತ್ಕರ್ಮವೇ ಆಗಿದೆ. ಹಾಗೆಯೇ ಎಲ್ಲ ಕರ್ಮಗಳಂತೆ ಈ ಕರ್ಮವನ್ನೂ ಸಹ, ತಾವೇ ಮಾಡಬೇಕಾಗುತ್ತದೆ. ಆದ್ದರಿಂದ, ಮುಕ್ತಿಗೋಸ್ಕರ, ಒಂದು ಪ್ರಬಲ ಇಚ್ಛೆಯನ್ನು ಜಾಗ್ರತಗೊಳಿಸುವುದಕ್ಕಾಗಿ ಹಾಗೂ ಸಾಧನೆಯ ಅಧಿಕಾರವನ್ನು ಹೊಂದುವುದಕ್ಕಾಗಿ, ಮಾನವನು ತನ್ನ ಕರ್ಮದ ಮೇಲೆಯೇ ಅವಲಂಬಿಸಿದ್ದಾನೆ. ಕೇವಲ ನಿಜವಾದ ಆಗ್ರಹ ಶೀಲ ವ್ಯಕ್ತಿಗಷ್ಟೇ ಸದ್ಗುರುವು ಸಾಧನೆಯನ್ನು ಕಲಿಸುತ್ತಾನೆ. ಆದ್ದರಿಂದ ಅವನ ಮೇಲೆ ಪಕ್ಷಪಾತದ ಆರೋಪವನ್ನು ಹೊರಿಸಲಾರೆವು. ಎಲ್ಲರೂ ಮುಕ್ತರಾಗಲಿ. ಇಂಥ ಇಚ್ಛೆಯು ಸಗುಣ ಬ್ರಹ್ಮನದಾದ ಮೇಲೆಯೂ ಸಹ, ಪೂರ್ಣ ಅಭಿವ್ಯಕ್ತವಾದ ಚೈತನ್ಯದ ಸುಸಂಧಿಯನ್ನು ಪಡೆದು, ಮುಕ್ತಿಗಾಗಿ ಒಂದು ತೀವ್ರ ಆಕಾಂಕ್ಷೆಯನ್ನು ಜಾಗ್ರತಗೊಳಿಸಿ, ಭಗವಾನನ ಈ ಸೃಷ್ಟಿ ಲೀಲೆಯ ಗೂಢವಾದ ಉದ್ದೇಶವನ್ನು ಸಫಲಗೊಳಿಸಿರಿ.

ತನ್ನಂತೆ ಪ್ರತಿಯೊಂದು ಅಣುವನ್ನೂ ಮುಕ್ತಗೊಳಿಸುವ ಇಚ್ಛೆಯಿಂದಲೇ ಸಗುಣ ಬ್ರಹ್ಮನು ಈ ಸೃಷ್ಟಿಯನ್ನು ರಚಿಸಿದ್ದಾನೆ. ಅವನ ಇಚ್ಛೆಯೇ ಇದಾದ ಮೇಲೆ ಪ್ರತಿಯೊಂದು ಅಣುವು, ಇಂದಾಗಲಿ, ನಾಳೆಯಾಗಲಿ; ಮುಕ್ತನಾಗಲೇಬೇಕು. ಆದರೆ, ಸಾಧನೆಯ ಮೂಲಕವೇ ಮುಕ್ತಿಯು ಲಭಿಸುತ್ತದೆ. ಅರ್ಥಾತ್ ಮುಕ್ತಿಗಾಗಿ ಮಾನವನು ಸಾಧನೆಯನ್ನು ಮಾಡಲೇಬೇಕು. ಆದ್ದರಿಂದ ಬುದ್ಧಿವಂತ ವ್ಯಕ್ತಿಯು ಸಮಯವನ್ನು ವ್ಯರ್ಥ ಹಾಳು ಮಾಡದೆ, ಆದಷ್ಟು ಬೇಗ ಸಾಧನೆಯನ್ನು ಪ್ರಾರಂಭಿಸುತ್ತಾನೆ. ಏಕೆಂದರೆ, ಈ ವಿಷಯದಲ್ಲಿ ಯಾವುದೇ ರೀತಿ ತಡ ಮಾಡಿದರೆ, ತನ್ನನ್ನೇ ವ್ಯರ್ಥವಾಗಿ ಜಗದ ದುಃಖ-ದುಮ್ಮಾನಗಳಿಂದ ಜರ್ಜರಗೊಳಿಸಿಕೊಂಡಂತೆ; ಎಂಬುದು ಅವನಿಗೆ ತಿಳಿದಿದೆ. ಕ್ಯಾಂಪಿನ (Camp) ತಾತ್ಪೂರ್ತಿಕ ವಾಸಸ್ಥಾನವನ್ನೇ ಶಾಶ್ವತ ವಾಸಸ್ಥಾನವೆಂದು ಬಗೆದು, ಅದರ ಅಸೌಕರ್ಯಗಳನ್ನು ಭೋಗಿಸುತ್ತಿರುವುದು ಮೂರ್ಖತನವಲ್ಲದೆ ಬೇರೇನೂ ಅಲ್ಲ. ಆದ್ದರಿಂದ, ನಶ್ವರವಾದ ಪಾಂಚಭೌತಿಕ ಜಗತ್ತಿನ ಭೋಗವನ್ನು ತ್ಯಜಿಸಿ, ಶಾಶ್ವತ ಲಕ್ಷ್ಯದತ್ತ ದೃಢ ಸಂಕಲ್ಪ ಮಾಡಿ, ಮುಂದುವರಿಯುವುದೇ ಬುದ್ಧಿವಂತನ ಕಾರ್ಯವಾಗಿದೆ. ಎಲ್ಲರೂ ಒಂದು ದಿನ ಈ ಲಕ್ಷ್ಯವನ್ನು ತಲುಪಲೇಬೇಕಾಗುತ್ತದೆ. ಆದ್ದರಿಂದ, ಸಾಧನೆಯನ್ನು ಮಾಡಿ, ಸಾಧ್ಯವಾದಷ್ಟು ಬೇಗ, ಮುಕ್ತಿಯನ್ನು ಸಂಪಾದಿಸುವುದು ಮಾನವನ ಅನಿವಾರ್ಯ ಕರ್ತವ್ಯವೇ ಆಗಿದೆ.

೯

## ಮಾನವನು ಸಾಧನೆಗೆ ಬೆದರುವುದೇಕೆ?

ಆಧ್ಯಾತ್ಮಿಕ ಸಾಧನೆಯು ಪ್ರತಿಯೊಬ್ಬ ಮಾನವನ ಕರ್ತವ್ಯವಾಗಿದ್ದರೂ ಸಹ, ಬಹು ಕಡಿಮೆ ಜನರು ಮಾತ್ರ ಇದನ್ನು ಮಾಡುತ್ತಾರೆ. ಇದರ ಕಾರಣ ವೇನೆಂದರೆ, ಮಾನವನು ಸಾಧಾರಣವಾಗಿ ಸಾಧನೆಯ ಹೆಸರು ಕೇಳಿದೊಡನೆ ಬೆದರಿ ಬಿಚ್ಚಿ ಬೀಳುತ್ತಾನೆ. ಮತ್ತು ಇದು ಕಾರಣ, ಅದರಿಂದ ದೂರವಾಗು ತ್ತಾನೆ. ಆದರೆ, ಅವನ ಈ ಭಯವು ಎಲ್ಲಿಯ ವರೆಗೆ ಯುಕ್ತಿಸಂಗತವಾಗಿದೆ ಯೆಂಬುದನ್ನು ನೋಡಬೇಕು.

ಎಲ್ಲಕ್ಕಿಂತ ಮೊದಲು, ಅವನು ಯೋಚಿಸುವುದು ಹೀಗೆ : "ದೈನಿಕ ಜೀವನದ ಧಾರೆಯನ್ನು ಅಡ್ಡಿಪಡಿಸದೆ, ಸಾಧನೆಯನ್ನು ಮಾಡುವುದೇ ಅಸಂಭವ ವಾಗಿದೆ. ಇದಕ್ಕಾಗಿ ಸಂಸಾರನ್ನು ತ್ಯಜಿಸಬೇಕಾಗುತ್ತದೆ. ಮುಕ್ತಿಯು ಕೇವಲ ನೈಷ್ಠಿಕ ತಪಸ್ವಿಗಳಿಗೆ ಮಾತ್ರ ಲಭ್ಯವಿದೆ; ಆದರೆ ಸಾಧಾರಣ ಮಾನವನ ಅಳವಿನಾಚೆಗಿದೆ;" ಎಂದು ಆ ಜನರು ತಿಳಿಯುತ್ತಾರೆ. ಆದರೆ ವಾಸ್ತವದಲ್ಲಿ, ಆ ಜದರ ಇಂಥ ವಿಶ್ವಾಸ ಇಲ್ಲವೆ ಭಕ್ತಿಯು ಎಳ್ಳಷ್ಟೂ ಯುಕ್ತಿ ಸಂಗತವಾಗಿಲ್ಲ. ವಿಚಾರ ಮಾಡಿದ ಬಳಿಕ ನಮಗೆ ಗೊತ್ತಾಗುವುದೇನೆಂದರೆ– ಆ ಜನರ, ಮೇಲೆ ಹೇಳಿದ, ವಿಶ್ವಾಸದ ಸಮರ್ಥನೆಯಲ್ಲಿ, ಸಂಸಾರವನ್ನು ತ್ಯಾಗ ಮಾಡುವುದರಿಂದ ಸಾಧನೆಗಾಗಿ ಕೇವಲ ಒಂದು ಸೌಕರ್ಯವು ಲಭಿಸುತ್ತದೆ. ಮತ್ತು ಅದು ಅವಿದ್ಯಾ ಮಾಯೆಯಿಂದ ಹುಟ್ಟಿದ ಜಾಗತಿಕ ಮೋಹ ಮತ್ತು ವಿಪತ್ತಿನಿಂದ ತಾತ್ಕಾಲಿಕ ಬಿಡುಗಡೆ ಪಡೆದು, ಏಕಾಂತ ಜೀವನವನ್ನು ಕಳೆಯುವ ಒಂದು ಸುಸಂಧಿಯಾಗಿದೆ. ಕೇವಲ ಇದೇ ಸೌಕರ್ಯದ ಹೇತುವಿನಿಂದ ಮಾನವನು ಸಾಧನೆಗೋಸ್ಕರ ಸಂಸಾರ ತ್ಯಾಗವನ್ನು ಅನಿವಾರ್ಯವೆಂದು ತಿಳಿಯುತ್ತಾನೆ. ಜನ ಸಮೂಹದ ಗುಂಪು–ಗದ್ದಲಗಳು ಸಾಧನೆಯ ಹಾದಿಯಲ್ಲಿ ಅಡೆ–ತಡೆ



ಯಾಗಿದೆ. ಮತ್ತು ವನಾರಣ್ಯದ ನಿರ್ಜನತೆಯು ಅದಕ್ಕೆ ಅನುಕೂಲವಾಗಿದೆ; ಎಂಬ ಈ ಮಾತನ್ನು, ಅವಶ್ಯಕವಾಗಿ ಒಪ್ಪದಿರಲಾರೆವು. ಆದರೆ, ಮೊದಲೇ ಹೇಳಿರುವಂತೆ, ಅವಿದ್ಯಾಮಾಯೆಯು ಕುರುಡು ಶಕ್ತಿಯೇ ಅಡ್ಡಿ-ಆತಂಕಗಳನ್ನು ಹುಟ್ಟಿಸುತ್ತದೆ. ಜನಮಂದೆಯನ್ನು ತ್ಯಾಗ ಮಾಡಿ, ಕೇವಲ ವನಕ್ಕೆ ಹೊರಟು ಹೋಗುವುದರಿಂದ ಅವಿದ್ಯಾ ಶಕ್ತಿಯ ಕೈಯಿಂದ ಬಿಡುಗಡೆ ಪಡೆಯ ಲಾರೆವು. ಅವಿದ್ಯಾ ಮಾಯೆಯು ಮನದಲ್ಲಿಯೂ ಅವನ ಜೊತೆಯನ್ನು ಬಿಡದು. ಜನಮಂದೆಯ ಗಲಿಬಿಲಿಯ ಬದಲು ಅಲ್ಲಿ ಮೃಗಾದಿಗಳ ವಿಕಟ ಗರ್ಜನೆಗಳ ಮುಖಾಂತರ ಅವನ ಸಾಧನೆಯಲ್ಲಿ ಅಡ್ಡಿ ಆತಂಕಗಳು ಉಂಟಾಗುತ್ತವೆ.

ತಮ್ಮ ತಮ್ಮ ಸ್ವಂತದ ಕ್ಷೇತ್ರಗಳಲ್ಲಿ ಮಾನವರು ಸಾಧಾರಣವಾಗಿ ಅಭ್ಯಸ್ತ ರಾಗಿರುತ್ತಾರೆ. ಇದರಿಂದ ಅವರು ದೊಡ್ಡ ದೊಡ್ಡ ಅಸೌಕರ್ಯಗಳನ್ನು ಸಹ ಲೆಕ್ಕಿಸುವುದಿಲ್ಲ. ಉದಾಹರಣೆಗೆ ನೋಡಿರಿ. ತುಲನಾತ್ಮಕವಾಗಿ ನಿರ್ಜನ ವಾಗಿರುವ ಹಳ್ಳಿಯಿಂದ ಬಂದ ಓರ್ವ ವ್ಯಕ್ತಿಯು ಕಲಕತ್ತೆಯ ಚೌರಂಗಿಯ ಯಾವುದೋ ಮನೆಯಲ್ಲಿ ಟ್ರಾಮ ಮತ್ತು ಬಸ್ಸುಗಳ ಘಡ ಘಡ ಶಬ್ದದ ಕಾರಣ, ಒಂದು ಘಂಟೆ ಸಹ ನಿದ್ರಿಸಲಾರನು. ಆದರೆ, ಅಲ್ಲಿಯ ನಿವಾಸಿಗಳು ಅಭ್ಯಸ್ತರಾಗಿರುವ ಕಾರಣ, ಇಡೀ ರಾತ್ರಿ ಚೆನ್ನಾಗಿ ನಿದ್ರಿಸುತ್ತಾರೆ. ಅದೇ ಪ್ರಕಾರ, ಕಲಕತ್ತೆಯ ಯಾವುದೇ ವ್ಯಕ್ತಿಯು ನಿರ್ಜನ ಹಳ್ಳಿಗಾಡಿಗೆ ಹೋದರೆ ಅಲ್ಲಿ ಒಂದು ದಿನ ಕಳೆಯಲೂ ಸಹ ಅಂಜುತ್ತಾನೆ. ಅಂದ ಮೇಲೆ, ಜನ ಸಮೂಹದ ಗಲಿಬಿಲಿಯಿಂದ ಮೊದಲು–ಮೊದಲು ಸಾಧನೆಯಲ್ಲಿ ಅಸೌಕರ್ಯ ವಾಗುತ್ತಿದ್ದರೂ ಸಹ, ವಾತಾವರಣದೊಂದಿಗೆ ರೂಢಿಯಾದ ಮೇಲೆ ಅವರಿ ಗಾವ ಅಸೌಕರ್ಯವಾಗುವುದಿಲ್ಲ. ಅಂದ ಮೇಲೆ, ನಿರ್ಜನತೆಯ ಹೇತುವಿನಿಂದ ಅರಣ್ಯಗಳಿಗೆ ಹೋಗುವುದು ಯುಕ್ತಿಸಂಗತವೆಂದು ತಿಳಿದು ಬರುವುದಿಲ್ಲ.

ಮನೆ ಮಾರು ತೊರೆದು ವನವಾಸಕ್ಕಾಗಿ ಓಡಿ ಹೋದ ಮಾನವನು ಜಗತ್ತಿನ ಮೋಹವನ್ನು ತೊರೆದಿರುವನೋ, ಇಲ್ಲವೋ? ಎಂಬುದನ್ನು ಈಗ ನೋಡೋಣ. ಮೋಹವು ಅವಿದ್ಯಾ ಮಾಯೆಯ ಸೃಷ್ಟಿಯೇ ಆಗಿದೆ. ಸಾಧ ನೆಯ ಮೂಲಕ ಅವಿದ್ಯಾ ಮಾಯೆಯ ಪ್ರಭಾವವನ್ನು ದೂರಗೊಳಿಸಿ, ಅದರ ಕೈಯಿಂದ ಬಿಡುಗಡೆ ಪಡೆಯಬೇಕಾಗುತ್ತದೆ. ಅವಿದ್ಯಾ ಮಾಯೆಯ ಪ್ರಭಾವ ವನ್ನು ದೂರ ಮಾಡದ ಹೊರತು, ಯಾರೂ ಜಗದ ಮೋಹದ ಬಂಧನದಿಂದ ಬಿಡುಗಡೆಯನ್ನು ಪಡೆಯರು. ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿಯು

ವುದರಿಂದಲೇ ಅವಿದ್ಯಾ ಮಾಯೆಯ ಕಠೋರ ಬಂಧನವು ಶಿಥಿಲವಾಗಬಲ್ಲದು.
ೇವಲ ಸಂಸಾರವನ್ನು ತೊರೆಯುವುದರಿಂದ ಇಲ್ಲವೆ ಅರಣ್ಯಕ್ಕೆ ಓಡಿ ಹೋಗು
ವುದರಿಂದ ಯಾವುದೇ ಲಾಭವಾಗದು. ತನ್ನನ್ನೇ ಆಕರ್ಷಣೆಯ ವಿಷಯದಿಂದ
ದೂರವಿರಿಸಿಕೊಂಡ ಮೇಲೆ, ಆಕರ್ಷಣೆಯೂ ಸಹ, ಮೆಲ್ಲ ಮೆಲ್ಲನೆ, ಅಡಗಿ
ಹೋಗುತ್ತದೆ. ಮತ್ತು ವಿಷಯದ ಉಪಸ್ಥಿತಿಯಿಂದ ಇಲ್ಲವೆ ವಿಷಯಕ್ಕೆ
ಅಂಟಿಕೊಳ್ಳುವುದರಿಂದ ಆಕರ್ಷಣೆಯೂ ಗಾಢವಾಗುತ್ತ ಹೋಗುತ್ತದೆ.
ಆದರೆ ಒತ್ತಾಯ ಪೂರ್ವಕ ಇಲ್ಲವೆ ಹೊಣೆಗೇಡಾಗಿ ವಸ್ತುವಿಗಂಟುವ
ಭಾವನೆಯನ್ನು ತೊರೆಯುವುದರಿಂದ ಮನದಲ್ಲಿ ಅವಶ್ಯವಾಗಿ ಕಷ್ಟವಾಗುತ್ತದೆ.
ಕಷ್ಟದ ಮೊತ್ತವೂ ಸಹ ಅತ್ಯಂತ ಹೆಚ್ಚಾದ ಮೇಲೆ, ಅದು ಮನದಲ್ಲಿ ಒಂದು
ತರಂಗವನ್ನು ಹುಟ್ಟಿಸುತ್ತವೆ. ಇದರಿಂದ, ಯಾವುದೇ ಕಾಲಕ್ಕೂ ಸಹ, ಶಾರೀ
ರಿಕ ರೋಗವು ಉತ್ಪನ್ನವಾಗಬಲ್ಲದು. ಇಲ್ಲವೆ ಸಾಧಕನ ನೈತಿಕ ಪತನವನ್ನೂ
ಮಾಡಬಲ್ಲದು. ಆದ್ದರಿಂದ ಸಾಂಸಾರಿಕ ಜೀವನವನ್ನು ತ್ಯಜಿಸಿ, ಒತ್ತಾಯ
ಪೂರ್ವಕ ಸಾಂಸಾರಿಕ ಮೋಹವನ್ನು ತೊರೆಯುವುದರಿಂದ ಯಾವ ಲಾಭವೂ
ಇಲ್ಲ. ಶಾರೀರಿಕ ಇಲ್ಲವೆ ಮಾನಸಿಕ ಬಲದ ವೃದ್ಧಿಗೋಸುಗ, ಪ್ರಯತ್ನಶೀಲ
ನಾಗದೆ, ಸಂಶಯಯುಕ್ತ ಸಾಮಾನ್ಯ ಸುಯೋಗ ಹಾಗೂ ಸೌಕರ್ಯವನ್ನು
ಪಡೆಯಬೇಕೆಂಬ ಉದ್ದೇಶ್ಯದಿಂದ ಸಂಸಾರವನ್ನು ತೊರೆಯುವಲ್ಲಿ ಯಾವುದೇ
ಪೌರುಷವೂ ಇಲ್ಲ; ವೀರತನವೂ ಇಲ್ಲ. ಪೌರುಷ ಪ್ರಧಾನ ವ್ಯಕ್ತಿಯು ಜಗದ
ಮೋಹ-ಬಂಧನಗಳ ಮಧ್ಯೆ ವೀರರಂತೆ ಅವುಗಳನ್ನೆದುರಿಸುತ್ತ, ಅವುಗಳನ್ನು
ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಅವನೇನೂ ಬೆದರಿ, ಸಂಸಾರವನ್ನು ಬಿಟ್ಟು
ಓಡಿಹೋಗುವುದಿಲ್ಲ. ಅವಿದ್ಯಾ ಮಾಯೆಯ ವಿರುದ್ಧದ ಸಂಗ್ರಾಮವೇ ಸಾಧನೆ
ಯಾಗಿದೆ. ಸಂಗ್ರಾಮದಲ್ಲಿ ವಿಜಯಿಯಾಗುವುದಕ್ಕಾಗಿ, ವೀರನಂತೆ ಶತ್ರು
ವನ್ನೆದುರಿಸಬೇಕಾಗುತ್ತದೆ. ಶತ್ರುವನ್ನು ಸಂತೋಷಪಡಿಸುವುದರಿಂದ ಇಲ್ಲವೆ
ಅವನ ಭಯದಿಂದ ಓಡಿ ಹೋಗುವುದರಿಂದ ಕೆಲಸವಾಗದು. ಆದ್ದರಿಂದ
ಜಗದ ವಸ್ತುಗಳಿಗೆ ಅಂಟಿಕೊಂಡಿರಬೇಕೆಂಬ ಭಯದಿಂದ ಸಂಸಾರವನ್ನು ತ್ಯಜಿ
ಸುವುದೇನೂ ಯುಕ್ತಿಸಂಗತವಲ್ಲ.

ಸಾಂಸಾರಿಕ ಕಷ್ಟ-ಕಾರ್ಪಣ್ಯಗಳ ಭಯದಿಂದ ಸಂಸಾರವನ್ನು ತ್ಯಜಿಸು
ವುದೂ ಸಹ, ಅದೇ ರೀತಿ, ಯುಕ್ತಿ ಸಂಗತವಾಗಿಲ್ಲ. ಸಾಮಾಜಿಕ ಜೀವನವನ್ನು
ಕಳೆಯುವುದಕ್ಕಾಗಿ ಹಣ ಗಳಿಸಿ ಕುಟುಂಬದವರನ್ನೂ ಮತ್ತು ಹತ್ತಿ ಹೊಂದಿದವ
ರನ್ನೂ ಪಾಲಿಸಿ-ಪೋಷಿಸಬೇಕಾಗುತ್ತದೆ. ಆದ್ದರಿಂದ, ಇದು ಸ್ವಲ್ಪ ಕಷ್ಟ



ದಾಯಕವಿದೆ. ಒಂದು ವೇಳೆ, ಹಣ ಗಳಿಕೆಯನ್ನು ಸರಿಯಾದ ರೀತಿಯಿಂದ ಮಾಡದಿದ್ದರೆ, ರೋಗ ಬಾಧೆ ಹಾಗೂ ಭಾಗ್ಯದ ವಿಡಂಬನೆಯಲ್ಲದೆ, ದರಿದ್ರತೆಯ ಕಷ್ಟವನ್ನೂ ಸಹ ಭೋಗಿಸಬೇಕಾಗುತ್ತದೆ. ಈ ಕಾರಣಗಳಿಂದಲೇ ಮಾನವನು ತನ್ನ ಎಲ್ಲ ಹೊಣೆ ಮತ್ತು ಕರ್ತವ್ಯವನ್ನು ಉಪೇಕ್ಷಿಸಿ, ಕೇವಲ ಸ್ವಂತದ ಚಿಂತೆಯನ್ನು ಹಚ್ಚಿಕೊಂಡು ಸಂಸಾರವನ್ನು ತ್ಯಜಿಸುತ್ತಾನೆ. ಆದರೆ, ಓಡಿಹೋಗಿ ತನ್ನನ್ನು ಉಳಿಸಿಕೊಳ್ಳುವ ಈ ಕೀಳು-ಪ್ರಯತ್ನವು, ಅವನನ್ನು ಅವಲಂಬಿಸಿದ ವ್ಯಕ್ತಿಗಳನ್ನು ಕುರಿತು ಉದಾಸೀನತೆ ಹಾಗೂ ಕರ್ತವ್ಯ ಹೀನತೆಯ ದ್ಯೋತಕವಲ್ಲವೇನು? ಸಂಸಾರವನ್ನು ತ್ಯಜಿಸಿ ಯಾರು ಅಡವಿಯ ಹಾದಿ ಹಿಡಿಯುವರೋ, ಅವರು ತಮ್ಮ ಕರ್ತವ್ಯ ಮತ್ತು ಹೊಣೆಯನ್ನು ಉಪೇಕ್ಷಿಸಿ, ಘೋರ ಸ್ವಾರ್ಥಪರತೆಯ ಪರಿಚಯ ನೀಡುತ್ತಾರೆ. ಕರ್ತವ್ಯ ಹೀನತೆ ಮತ್ತು ಸ್ವಾರ್ಥ ಪರತೆಗಳು ಮಂದ ಕರ್ಮಗಳಾಗಿವೆ. ಆದ್ದರಿಂದ ಇದರ ಕೇಡು-ಫಲವನ್ನು ಭೋಗಿಸದೆ ಮುಕ್ತಿ ಲಾಭ ಹೊಂದುವುದು ಅಸಂಭವವಾಗಿದೆ. ಇನ್ನೂ ಒಂದು ಮಾತಿದೆ. ಕೇವಲ ಸಂಸಾರವನ್ನು ತೊರೆದ ಮಾತ್ರಕ್ಕೆ ಮಾನವನು ತಾನು ತೊರೆದ ಹೆಂಡಿರು-ಮಕ್ಕಳ ಭಾವನೆಯನ್ನು ಮನದಿಂದ ದೂರಗೊಳಿಸಲಾರನು. ಅವಿದ್ಯಾ ಮಾಯೆಯ ಮೋಹವೆಂಬ ರಿಪುವಿನ ಮೂಲಕ ಉತ್ಪನ್ನವಾದ ಪ್ರಭಾವದಿಂದ, ಅವರ ಭಾವನೆಯು ಅವರ ಮನವನ್ನು ಚಂಚಲಗೊಳಿಸುತ್ತದೆ. ತ್ಯಜಿಸಿದ ಹೆಂಡಿರು-ಮಕ್ಕಳು, ಹಾಗೂ ಸ್ವಜನರ ಭಾವನೆಗಳ ಕಾರಣ, ಪ್ರಗತಿಯು ನಿಂತು ಹೋಗುತ್ತದೆ. 'ಯಾವ ಜನರು ಸಂಸಾರವನ್ನು ತೊರೆಯಬಲ್ಲರೋ, ಅವರು ಮಾನಸಿಕ ಕ್ಲೇಶ ಹಾಗೂ ಉದ್ವೇಗಗಳನ್ನು ಅತಿಕ್ರಮಿಸಿ ನಡೆಯುತ್ತಾರೆ;' ಎಂದು ಹೇಳುವುದರ ಅರ್ಥವೆಂದರೆ, ಜನರು ಅವಿದ್ಯಾ ಮಾಯೆಯ ಪ್ರಭಾವವನ್ನು ದಾಟಿ ಹೋಗುತ್ತಾರೆ, ಎಂದು. ಏಕೆಂದರೆ, ಭಾವನೆ ಇಲ್ಲವೆ ಕರ್ಮದಲ್ಲಿ, ಅವಿದ್ಯಾ ಮಾಯೆಯ ಪ್ರಭಾವದ ವಶವರ್ತಿಯಾದ ವ್ಯಕ್ತಿಯು, ಮಾನಸಿಕ ಕ್ಲೇಶ ಭೋಗವನ್ನು ಉಪೇಕ್ಷಿಸುವ ಸಂಭವವಿಲ್ಲ. ಅವನ ದೃಷ್ಟಿಯಲ್ಲಿ, ಸಂಸಾರದಲ್ಲಿ ಇದ್ದರೇನು? ಅಡವಿ ಹೊಕ್ಕರೇನು? ಎರಡೂ ಒಂದೇ ಸರಿ. ಏಕೆಂದರೆ, ಅವಿದ್ಯಾ ಮಾಯೆಯ ಪ್ರಭಾವವನ್ನೇ ದೂರಗೊಳಿಸಲು ಮಾನವನು ಅಡವಿಗೆ ಬರುತ್ತಾನೆ; ಒಂದು ವೇಳೆ ಈ ಉದ್ದೇಶ್ಯವೇ ಅವನಲ್ಲಿರುವುದು ಸಿದ್ಧಪಟ್ಟರೆ, ಅಡವಿ ಸೇರಿ, ಕಠೋರ ತಪೋಜೀವನವನ್ನು ಬಾಳುವುದು ಮತ್ತು ಸಂಸಾರದಲ್ಲಿ ಇದ್ದುಕೊಂಡು, ಸ್ವಾಭಾವಿಕ ಜೀವನ ಬಾಳುವುದು, ಈ ಎರಡರೊಳಗಿಂದ ಯಾವುದರಿಂದಲೂ ಅವರು ವಿವಶ

ಗುವುದಿಲ್ಲ.

ಕೇವಲ ವಸ್ತುವಿನ ಸಂಗವನ್ನು ತ್ಯಜಿಸುವುದರಿಂದಲೇ, ಮಾನವನು
ವಿದ್ಯಾ ಮಾಯೆಯ ಬಂಧನ ಪಾಶವನ್ನು ತೊಡೆದು ಹಾಕಲಾರನು. ಇದ
ಕ್ಕೋಸುಗ ಅವನು ಸೂಕ್ಷ್ಮದತ್ತ ಮನವನ್ನು ಕೊಂಡೊಯ್ಯಬೇಕಾಗುತ್ತದೆ.
ಕ್ಷಿತ ಗಾಯದ ಜಾಗೆಯನ್ನು ನೊಣಗಳ ಉಪದ್ರವದಿಂದ ರಕ್ಷಿಸಲು ಸಂತತ
ರಿಸುತ್ತ ಕೂಡ್ರುವುದೇನೂ ಪರಿಹಾರವಲ್ಲ. ಗಾಯವನ್ನು ಗುಣಪಡಿಸಲು
ಾದರೂ ಪ್ರಯತ್ನ ಮಾಡಲೇಬೇಕು. ಸದ್ಗುರುವಿನ ಮೂಲಕ ನಿರ್ದಿಷ್ಟ
ದ ಸಾಧನಾ ಪದ್ಧತಿಯೇ ಗಾಯವನ್ನು ಮಾಯಿಸುವ ಮಲಾಮು .ಆಗಿದೆ.
ನರ ಸಹಾಯದಿಂದಲೇ ಅವಿದ್ಯಾ ಮಯಯೆಯ ಬಂಧನವು ಹರಿದು ಹೋಗಿ,
ುಕ್ತಿ ಲಾಭವಾಗುತ್ತದೆ. ಅವಿದ್ಯಾ ಮಾಯೆಯ ಬಂಧನವು ಶಿಥಿಲಗೊಳ್ಳು
ದ್ದಂತೆಯೇ, ಪ್ರಪಂಚದ ಮೋಹ ಮತ್ತು ಕೇಡಿನ ಭೋಗಗಳು ಮಾನವನ
ಧ್ಯಾತ್ಮಿಕ ಸಾಧನೆಯಲ್ಲಿ ಬಾಧಕವಾಗಲಾರವು.ಆದ್ದರಿಂದ,ಅವಿದ್ಯಾ ಮಾಯೆಯ
ಯಿಂದ ಬಿಡುಗಡೆ ಪಡೆಯುವ ಒಂದೇ ಒಂದು ಉಪಾಯವೆಂದರೆ, ಸಾಧನೆ
ನ್ನು ಸಾಂಸಾರಿಕ ಜೀವನದ ಒಂದು ಅಂಗವೆಂದು ಬಗೆದು, ಸರಳವಾಗಿ
ಾಡುತ್ತ ಹೋಗುವುದಾಗಿದೆ. ಪ್ರಾರಂಭದಲ್ಲಿ ಅವಿದ್ಯಾ ಮಾಯೆಯು,
ವಶ್ಯವಾಗಿ, ಅಡ್ಡಿಯನ್ನು ಒಡ್ಡುತ್ತದೆ. ಆದರೆ ಒಂದು ಸಲ ಸೋತಮೇಲೆ,
ು ಮರಳಿ ಸಾಧನೆಯಲ್ಲಿ ಯಾವುದೇ ಬಾಧೆಯನ್ನು ಉಂಟು ಮಾಡಲಾರರು.
ಸಾರದಲ್ಲಿ ಬಗೆ ಬಗೆಯ ಸೌಕರ್ಯಗಳಿರುವ ಕಾರಣ, ಸಂಸಾರವನ್ನು ತ್ಯಜಿಸಿ
ವನಿಗಿಂತ ಸಂಸಾರಿ ವ್ಯಕ್ತಿಗೆ ಸಾಧನೆಯ ಸುಸಂಧಿಯು ಅಧಿಕವಾಗಿದೆ. ಅಡವಿಗೆ
ಿ ಹೋಗುವುದರಿಂದ, ಸಂಸಾರದ ಕಷ್ಟ ಕಾರ್ಪಣ್ಯಗಳಿಂದ ಪರಿತ್ರಾಣ ದೊರೆ
ುದು. ಸಾಂಸಾರಿಕ ಜೀವನದಲ್ಲಿ ಇನ್ನೂ ಒಂದು ದೊಡ್ಡ ಸೌಕರ್ಯವಿದೆ.
ಧ್ಯಾತ್ಮಿಕ ಸಾಧನೆಯ ಮುಖ್ಯ ಅಂಗವಾದ ಜನ ಕಲ್ಯಾಣದ ಸುಸಂಧಿಯು
ಸಾರದಲ್ಲಿ ಇರುವುದರಿಂದಲೇ ದೊರೆಯುತ್ತದೆ. ಅಡವಿಗೆ ಹೊರಟು
ೋದರೆ, ಈ ಸುಸಂಧಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಶ್ರದ್ಧೆ, ಭಕ್ತಿ
ಿಂದೊಡಗೂಡಿ, ಸದ್ಗುರುವು ನಿರ್ದೇಶಿಸಿದ, ಸಾಧನಾ ಪದ್ಧತಿಯ ಅನು
ಲನೆಯು ಸಂಸಾರದಲ್ಲಿಯೂ ಸಾಧ್ಯವಾಗಬಲ್ಲದು. ಇದಕ್ಕೋಸುಗ ಮನೆ
ಾರು, ಕುಟುಂಬಗಳನ್ನು ತೊರೆಯುವುದರಲ್ಲಿ ಯಾವುದೇ ಪ್ರಯೋಜನವಿಲ್ಲ.
ಕೃತಿಯ ಮೇಲೆ ಪ್ರಭುತ್ವವನ್ನು ಪಡೆಯುತ್ತಿದ್ದಂತೆಯೇ ಅವಿದ್ಯಾಮಾಯೆಯ
ಭಾವವೂ ಅಡಗಿ ಹೋಗುತ್ತದೆ. ಅವಿದ್ಯಾ ಮಾಯೆಯನ್ನು ಸರಿಸುವ



ಒಂದೇ ಒಂದು ಉಪಾಯವೆಂದರೆ, ಆಧ್ಯಾತ್ಮಿಕ ಸಾಧನೆಯಾಗಿದೆ. ಆದ್ದರಿಂದ, ಆಧ್ಯಾತ್ಮಿಕ ಸಾಧನೆಯು ಒಂದು ಆವಶ್ಯಕ ಕರ್ಮವಾಗಿದೆ. ಸಾಧನೆಗಾಗಿ ಸ್ಥಾನದ ವಿಚಾರ ಮಾಡುವುದೆಂದರೆ ಅರ್ಥಾತ್ ಒಂದು ಜಾಗೆಯನ್ನು ಒಳ್ಳೇದು ಇಲ್ಲವೆ ಅನುಕೂಲವೆಂದೂ ಮತ್ತೊಂದು ಜಾಗೆಯನ್ನು ಮಂದ ಇಲ್ಲವೆ ಪ್ರತಿಕೂಲವೆಂದೂ ತಿಳಿಯುವುದರ ಅರ್ಥವೆಂದರೆ ಬ್ರಹ್ಮನನ್ನೇ ಕುರಿತು ಸಮಾಲೋಚನೆ ಮಾಡಿದಂತೆಯೇ ಸರಿ. ತೋರು ಜಗತ್ತಿನ ಪ್ರತಿಯೊಂದು ಸ್ಥಾನವೂ ಪರಮ ಬ್ರಹ್ಮನ ವಿಕಾಸವಷ್ಟೇ. ಆದ್ದರಿಂದ, ವಿಶೇಷ ಸ್ಥಾನವನ್ನು ಒಳ್ಳೇದು ಇಲ್ಲವೆ ಕೆಟ್ಟದ್ದೆಂದು ಹೇಳುವುದರ ಅರ್ಥವೆಂದರೆ, ಬ್ರಹ್ಮನಲ್ಲಿ ಗುಣಗಳನ್ನು ಆರೋಪಿಸಿದಂತೆಯೇ ಸರಿ. ಒಂದು ವೇಳೆ, ಸಾಧನೆಯು ಪ್ರಾರಂಭದಲ್ಲಿಯೇ ಒಳಿತು–ಕೇಡುಗಳ ವಿಚಾರವನ್ನು ಆಧರಿಸಿ ನಡೆದರೆ, ಸಾಧಕನು ಸೃಷ್ಟ ಜಗದೊಂದಿಗೆ ಏಕಾತ್ಮ ಬೋಧೆಯು ಜಾಗ್ರತವಾಗುವುದು ಎಂದಿಗೂ ಸಂಭವಿಸದು. ಬ್ರಹ್ಮನ ಪ್ರತಿಯೊಂದು ಸ್ಥಾನವೂ ಸಮಾನವಾಗಿದೆ. ಮತ್ತು ಯಾವುದೇ ಸ್ಥಾನವಿರಲಿ, ಸಾಧನೆಗಾಗಿ ಉಪಯುಕ್ತ ಸ್ಥಾನವೇ ಆಗಿದೆ. ಸಂಸಾರವನ್ನು ತೊರೆದು ಅಡವಿ ಸೇರುವುದು ಸಂಪೂರ್ಣ ಯುಕ್ತಿ ಹೀನವಾಗಿದೆ. ಮತ್ತು ಸಂಸಾರವು ಬಿಟ್ಟು ಹೋಗುವುದೆಂಬ ಭಯದಿಂದ ಸಾಧನೆಯನ್ನು ಮಾಡದಿರುವುದೂ ಸಹ, ಅಷ್ಟೇ ಯುಕ್ತಿ ಹೀನವಾಗಿದೆ.

ಬ್ರಹ್ಮಚರ್ಯೆಯ ಭಯದಿಂದಲೂ, ಅನೇಕ ಜನರು ಸಾಧನೆಗೆ ಬೆದರುತ್ತಾರೆ. ಬ್ರಹ್ಮಚರ್ಯೆಯ ಅರ್ಥವೆಂದರೆ ಇಂದ್ರಿಯ ನಿಗ್ರಹ ಅರ್ಥಾತ್ ಸ್ತ್ರೀಯ ಸಂಗವನ್ನು ಪೂರ್ಣ ತೊರೆಯುವುದು; ಎಂದು ಅವರು ತಿಳಿಯುತ್ತಾರೆ. ಪ್ರಚಲಿತ ನಂಬುಗೆಗೆ ಅನುಸರಿಸಿ, ಹೀಗಾಗದೆ ಸಾಧನೆಯನ್ನು ಮಾಡುವ ಸಂಭವವೇ ಇಲ್ಲ; ಎಂದವರು ತಿಳಿಯುತ್ತಾರೆ. ಆದ್ದರಿಂದ, ಬ್ರಹ್ಮಚರ್ಯೆಯ ಅರ್ಥವೇನು? ಮತ್ತು ಯಾರಿಗೆ ಬ್ರಹ್ಮಚಾರಿ ಎನ್ನಬೇಕು? ಎಂಬುದನ್ನೂ ಸಹ ತಿಳಿದುಕೊಳ್ಳಬೇಕು. ಬ್ರಹ್ಮಚರ್ಯೆಯ ಅರ್ಥವೆಂದರೆ, ಮನದ ಹೊರಮುಖೀ ವೃತ್ತಿಯನ್ನು ಒಳಮುಖಿಯಾಗಿಸುವುದು ಮತ್ತು ಪೂರ್ಣವಾಗಿ ಅದನ್ನು ಬ್ರಹ್ಮನಿಗೆ ಸಮರ್ಪಿಸುವುದು. ಈಗ, ಮನದ ಹೊರಮುಖೀ ವೃತ್ತಿ ಯಾವುದು? ಮತ್ತು ಅದನ್ನೆಂತು ಒಳಮುಖಿಯಾಗಿಸಬಲ್ಲೆವು? ಎಂಬುದನ್ನೂ ಸಹ ತಿಳಿಯಲೇಬೇಕು. ಪ್ರಕೃತಿಯ ಪ್ರಭಾವದಿಂದ ಸೂಕ್ಷ್ಮ ಸತ್ತೆಯು ಸ್ಥೂಲ ಸತ್ತೆಯಾಗುವುದೇ ಸೃಷ್ಟಿಯಾಗಿದೆ. ಇಂದ್ರಿಯಗಳ ಮಾಧ್ಯಮದಿಂದ ಮಾನವನು ತನ್ನ ಸುತ್ತುಮುತ್ತಿನ ಯಾವ ವಸ್ತುಗಳನ್ನು ಯಾವಾಗಲೂ

ಹಿಸುವನೋ, ಅವುಗಳೇ ಸ್ಥೂಲ ಸೃಷ್ಟಿಯಾಗಿವೆ. ಮತ್ತು ಮನವು
ಷ್ಟಿಯ ಸೂಕ್ಷ್ಮ ಅಂಶವಾಗಿದೆ. ಆದ್ದರಿಂದ, ಪ್ರಕೃತಿಯ ಹೆಚ್ಚುತ್ತಿರುವ
ಭಾವದಿಂದ, ಮನವು ಸೂಕ್ಷ್ಮದಿಂದ ಜಡದಲ್ಲಿ, ಕ್ರಮೇಣ ಪರಿಣಮಿಸುತ್ತದೆ.
ಕೃತಿಯ ಪ್ರಭಾವದ ಕಾರಣದಿಂದ, ಮನದ ವೃತ್ತಿಗಳ ಗತಿಯು ಹೊರಮುಖಿ
ಾಗಿರುತ್ತದೆ. ಇದು ಕಾರಣ, ಮನವು ಜಡ ವಿಷಯಗಳಲ್ಲಿ ಅಂಟಿಕೊಳ್ಳು
ದೆ. ಇದರಿಂದ ಮನದ ಹೊರಮುಖೀ ವೃತ್ತಿಗಳನ್ನು ಅಂತರ್ಮುಖಿಗೊಳಿಸು
ದರ ಅರ್ಥವೇ ಮನವನ್ನು ಪ್ರಕೃತಿಯ ಪ್ರಭಾವದಿಂದ ಮುಕ್ತಗೊಳಿಸುವು
ಾಗಿದೆ. ಅರ್ಥಾತ್ ಜಡತ್ವದಿಂದ ಸೂಕ್ಷ್ಮತ್ವದತ್ತ ಕರೆದೊಯ್ಯುವುದೇ
ಗಿದೆ. ಬ್ರಹ್ಮನು ಸ್ವರೂಪತಃ ಸೂಕ್ಷ್ಮನಾಗಿದ್ದಾನೆ. ಆದ್ದರಿಂದ ಮನವು
ಡಕ್ಕೆ ಅಂಟಿಕೊಳ್ಳುವುದರಿಂದ, ಅದನ್ನು ಬ್ರಹ್ಮನಲ್ಲಿ ಸಮರ್ಪಿಸುವುದು
ಡೇರದು. ಮನದ ಗತಿಯನ್ನು ಜಡತ್ವದಿಂದ ಸೂಕ್ಷ್ಮತ್ವದತ್ತ ತಿರುಗಿಸಲು
ದನ್ನು ಬ್ರಹ್ಮನಲ್ಲಿ ಸಮರ್ಪಿಸಲೇಬೇಕಾಗುವುದು. ಮನದ ಮೇಲಿನ
ಕೃತಿಯ ಪ್ರಭಾವವನ್ನು ಸರಿಸಿದ ಮೇಲೆಯೇ ಈ ಸಮರ್ಪಣವು ಸಾಧ್ಯ
ಾಗುತ್ತದೆ. ಏಕೆಂದರೆ, ಪ್ರಕೃತಿಯೇ ಮನವನ್ನು ನಾಲ್ಕೂ ನಿಟ್ಟಿನಲ್ಲಿ ಜಡ
ಷಯದಲ್ಲಿ ಲಿಪ್ತಗೊಳಿಸುತ್ತದೆ. ಆದ್ದರಿಂದ ಬ್ರಹ್ಮಚರ್ಯೆಯ ಅರ್ಥ
ಂದರೆ, ಮನವನ್ನು ಪ್ರಕೃತಿಯ ಪ್ರಭಾವದಿಂದ ಮುಕ್ತಗೊಳಿಸುವುದಾಗಿದೆ.
ುತ್ತು ಯಾರ ಮನವು ಬ್ರಹ್ಮನಲ್ಲಿ ಸಮರ್ಪಿತವಾಗಿ ಬ್ರಹ್ಮನಲ್ಲಿಯೇ ಲೀನ
ಾಗುವುದೋ, ಅವನೇ ಬ್ರಹ್ಮಚಾರಿಯಾಗಿದ್ದಾನೆ. ಅವನ ಮನವು ಜಡದಲ್ಲಿ
ಕರ್ಷಿತವಾಗದೆ, ಸೂಕ್ಷ್ಮದಲ್ಲಿ ನೆಲೆಗೊಳ್ಳುತ್ತದೆ. ಹಾಗೂ ಯಾವಾಗಲೂ
ರಹ್ಮನಲ್ಲಿಯೇ ವಿಚಾರಣ ಮಾಡುತ್ತದೆ. ಕೇವಲ ಸಾಧನೆಯ ಮೂಲಕವೇ
ಈ ಅವಸ್ಥೆಯನ್ನು ಹೊಂದುವ ಸಂಭವವಿದೆ. ಅರ್ಥಾತ್ ಸಾಧನೆಯ ಪ್ರಭಾವ
ಂದ ಪ್ರಕೃತಿಯ ಬಂಧನವನ್ನು ಶಿಥಿಲಗೊಳಿಸಿ, ಹಾಗೂ ಮನವನ್ನು
ರಹ್ಮನಲ್ಲಿ ಸಮರ್ಪಿಸಿಯಾದ ಮೇಲೆಯೇ ಮಾನವನು ಬ್ರಹ್ಮಚಾರಿಯಾಗ
ಲ್ಲನು. ಲೌಕಿಕ ವಿಚಾರದಿಂದ, ಕಾಮ ರಿಪುವನ್ನು ಜಯಿಸುವುದನ್ನೇ ಬ್ರಹ್ಮ
ಚರ್ಯೆಯೆಂದು ತಿಳಿಯುತ್ತಾರೆ. ಆದರೆ ವಾಸ್ತವದಲ್ಲಿ ಷಡ್ರಿಪು ಮತ್ತು ಅಷ್ಟ
ಪಾಶಗಳ ಪ್ರತಿಯೊಂದು ಗತಿಯೂ ಬಹಿರ್ಮುಖಿಯಾಗಿರುತ್ತದೆ. ಈ
ಹದಿನಾಲ್ಕು ರಿಪು ಮತ್ತು ಪಾಶಗಳಲ್ಲಿ ಕೇವಲ ಕಾಮ ರಿಪುವೊಂದನ್ನೇ ವಶಪಡಿಸಿ
ಕೊಳ್ಳುವುದರಿಂದ ಯಾವನೂ ಬ್ರಹ್ಮಚರ್ಯೆಯನ್ನು ಪಾಲಿಸಲಾರನು. ಈ
ಷಡ್ರಿಪು ಮತ್ತು ಅಷ್ಟ ಪಾಶಗಳಿಂದ ಕೂಡಿದ ಅವಿದ್ಯಾ ಮಾಯೆಯ ಕಠೋರ



ಬಂಧನದಿಂದ ಮುಕ್ತನಾದ ಮೇಲೆಯೇ, ಮಾನವನು ಬ್ರಹ್ಮಚಾರಿಯಾಗಬಲ್ಲನು. ಅವಿದ್ಯಾ ಮಾಯೆಯ ಬಂಧನವು ಎಷ್ಟೊಂದು ದೃಢವಾಗಿದೆಯೆಂದರೆ, ಆಧ್ಯಾತ್ಮಿಕ ಸಾಧನೆಯ ಹೊರತು, ಬೇರಾವುದೇ ರೀತಿಯಿಂದ ಅದನ್ನು ತನ್ನ ವಶಪಡಿಸಿಕೊಳ್ಳುವುದು ಸಾಧ್ಯವಿಲ್ಲ. ಆಧ್ಯಾತ್ಮಿಕ ಸಾಧನೆಯನ್ನು ಮಾಡದೆ ಯಾರು ಹೀಗೆ ಮಾಡಲು ಬಯಸುವರೋ, ಅವರು ತಮ್ಮ ಸಮಯವನ್ನು ವ್ಯರ್ಥವಾಗಿ ನಷ್ಟಗೊಳಿಸುತ್ತಾರೆ. ಆಧ್ಯಾತ್ಮಿಕ ಸಾಧನವು ಹೇಗೆ ಹೇಗೆ ಮನವನ್ನು ಜಡದಿಂದ ಸೂಕ್ಷ್ಮದತ್ತ ಕರೆದೊಯ್ಯುವುದೋ, ಹಾಗೆಯೇ ಮಾನವನು ಕ್ರಮೇಣ ಬ್ರಹ್ಮಚರ್ಯದಲ್ಲಿ ಪ್ರತಿಷ್ಠಿತನಾಗುತ್ತಾನೆ. ಅರು ರಿಪುಗಳ ಮತ್ತು ಎಂಟು ಪಾಶಗಳ ಹೊರಮುಖೀ ಗತಿಯು, ಆಗ ಕ್ರಮೇಣ ತಂತಾನೇ ಕಡಿಮೆಯಾಗುತ್ತದೆ. ಅವುಗಳ ಪ್ರಭಾವವು ನಷ್ಟವಾಗುವುದರಿಂದ ಮನವು ಪೂರ್ಣವಾಗಿ ಜಡದಲ್ಲಿ ಅಂಟಿಕೊಂಡಿರಲಾರದು. ಆದ್ದರಿಂದ, ಆಧ್ಯಾತ್ಮಿಕ ಸಾಧನೆಯನ್ನು ಪ್ರಾರಂಭಿಸುವುದಕ್ಕಾಗಿ, ಸ್ತ್ರೀ ಸಂಭೋಗವನ್ನು ತೊರೆಯುವುದರಿಂದ ಯಾವ ಪ್ರಯೋಜನವೂ ಇಲ್ಲ. ಜಗತ್ತಿನ ವಸ್ತುಗಳನ್ನು ಕುರಿತು ಕಾಮ ಮತ್ತು ಮೋಹ ರಿಪುಗಳಿಂದ ಉತ್ಪನ್ನವಾದ ಆಸಕ್ತಿಯೇ ಮಾನವನನ್ನು ಸ್ತ್ರೀ ಸಂಭೋಗದಲ್ಲಿ ಉತ್ಸಾಹಿತಗೊಳಿಸುತ್ತದೆ. ಸಾಧನೆಯ ಪ್ರಭಾವದಿಂದ, ಇವುಗಳ ಬಂಧನವು ಶಿಥಿಲವಾದ ಮೇಲೆ, ಲೈಂಗಿಕ ಸಂಭೋಗದ ಅತಿ ಉಗ್ರ ಕಾಮನೆಯು ಮನವನ್ನು ಬಹುವಾಗಿ ಪೀಡಿಸದು. ಈ ವಿಷಯದಲ್ಲಿ ಮಾನವನು, ಆಗ ಬಹಳಷ್ಟು ಉದಾಸೀನನಾಗುತ್ತಾನೆ. ಆದ್ದರಿಂದ ಸಾಧನೆಗಾಗಿ ಇದನ್ನು ತ್ಯಜಿಸುವ ಪ್ರಶ್ನೆಯೇ ಏಳುವುದಿಲ್ಲ. ಮೊದಲೇ ಹೇಳಿರುವಂತೆ, ಸಾಧನೆಯು ಪ್ರಕೃತಿಯ ವಿರುದ್ಧ ಹೋರಾಟ ಹೂಡುವುದು ಮತ್ತು ಆ ಸಂಗ್ರಾಮದಲ್ಲಿ ಅದನ್ನು ಸೋಲಿಸುವುದೇ ಆಗಿದೆ. ಸಾಧನೆಯ ಮೂಲಕ ಗಳಿಸಿದ ಶಕ್ತಿಯು ಅವಶ್ಯವಾಗಿ, ಪ್ರಕೃತಿಯ ಶಕ್ತಿಗಿಂತ ಹೆಚ್ಚಾಗಿರುತ್ತದೆ. ಆದ್ದರಿಂದ, ಸಾಧನೆಯ ಬಲದ ಮೇಲೆ, ಮಾನವನು ಬ್ರಹ್ಮಚರ್ಯದಲ್ಲಿ ಪ್ರತಿಷ್ಠಿತನಾಗಬಲ್ಲನು. ಅವಿದ್ಯಾಮಾಯೆಯ ಬಂಧನವು ಎಷ್ಟೇ ದೃಢವಾಗಿರಲೊಲ್ಲದೇಕೆ, ಸಾಧನೆಯ ಮೂಲಕ, ಅವಶ್ಯವಾಗಿಯೇ ಅದರ ಬೇರನ್ನೇ ಕತ್ತರಿಸಬಹುದಾಗಿದೆ. ಆದ್ದರಿಂದ ಬ್ರಹ್ಮಚಾರಿಯಾಗಲು ಸ್ತ್ರೀಯ ಸಂಪರ್ಕವನ್ನು ತೊರೆಯುವ ಬದಲು, ಆಧ್ಯಾತ್ಮಿಕ ಸಾಧನೆಯೇ ಅತ್ಯಾವಶ್ಯಕವಾಗಿದೆ. ಈ ಪ್ರಸಂಗದಲ್ಲಿ, ಬ್ರಹ್ಮಚರ್ಯೆಯ ಲೌಕಿಕ ಅರ್ಥವಾದ ವೀರ್ಯ ಧಾರಣೆಯು ಸಹ, ಉಪೇಕ್ಷಿಸುವ ವಿಷಯವೇನಲ್ಲ; ಎಂಬುದನ್ನೂ ಲಕ್ಷ್ಯದಲ್ಲಿರಿಸಿಕೊಳ್ಳ

ಕು. ಸ್ನಾಯು ಕೋಶ ಮತ್ತು ಸ್ನಾಯು ತಂತುಗಳ ಪರಿಪುಷ್ಟಿಗಾಗಿ ಶುಕ್ರ ತು ಮತ್ತು ವೀರ್ಯಗಳ ಪ್ರಯೋಜನವು ಅನಿವಾರ್ಯವಾಗಿದೆ. ಆದ್ದರಿಂದ ನವನ್ನು ದೃಢವಾಗಿಸಲು, ಹಾಗೂ ಬೌದ್ಧಿಕ ವಿಕಾಸಗೊಳಿಸಲು, ಇವುಗಳನ್ನು ್ಗಸಿ ಇರಿಸಿಕೊಳ್ಳುವುದು ತುಂಬಾ ಆವಶ್ಯಕವಾಗಿದೆ.

ಮೊದಲು ಜೀವನದಲ್ಲಿ ಹಣ ಗಳಿಸಿ, ಮುಪ್ಪಿನ ಕಾಲದಲ್ಲಿ ಎಲ್ಲ ಕಾರ್ಯ ಂದ ಅವಕಾಶ ಪಡೆದು ಸಾಧನೆಯನ್ನು ಪ್ರಾರಂಭಿಸಿದರಾಯಿತು; ಎಂದು ವು ಜನರು ತಿಳಿಯುತ್ತಾರೆ. ಮುಪ್ಪಿನ ಅವಸ್ಥೆಯಲ್ಲಿ ಅಂಗಾಂಗಗಳು ಲಾದ ಮೇಲೆ, ಕರ್ಮ ಮಾಡುವ ಶಕ್ತಿಯೇ ಅಡಗಿ ಹೋಗುತ್ತದೆ. ದ್ದರಿಂದ, ಒಂದು ವೇಳೆ, ಶಕ್ತಿ ಇರುವಾಗಲೇ ಸಾಕಷ್ಟು ಹಣ ಗಳಿಸದಿದ್ದರೆ, ುಪ್ಪಿನ ಅವಸ್ಥೆಯಲ್ಲಿ ಸುಖದಿಂದ ಇರುವುದೆಂತು? ಈ ಚಿಂತೆಯಿಂದಲೇ ಾನವನು ವ್ಯಾಕುಲನಾಗಿ ತನ್ನ ಜೀವನದ ಮೊದಲನೆಯ ಭಾಗವನ್ನು ಹಣ ಕೆಯಲ್ಲಿಯೇ ತೊಡಗಿಸುತ್ತಾನೆ. ಮತ್ತು ಯಾವಾಗ ಮುಪ್ಪಿನ ಅವಸ್ಥೆಯ ರಣ, ಕರ್ಮ ಮಾಡುವ ಕ್ಷಮತೆ ಇರುವುದಿಲ್ಲವೋ, ಆಗ ಭಗವಂತನ ಸರಿನಿಂದ ಜಪ ಮಾಡುತ್ತಾನೆ. "ಸಾಧನೆಗಾಗಿ ಕಠೋರ ಪರಿಶ್ರಮದ ಯೋಜನವಿಲ್ಲ" ಎಂಬ ಭ್ರಾಂತ ಧಾರಣೆಯನ್ನು ಹೊಂದಿದ ಕಾರಣವೇ, ನರು ಮುಪ್ಪಿನ ಆವಸ್ಥೆಯನ್ನು ಸಾಧನೆಗಾಗಿ ಉಪಯುಕ್ತ ಸಮಯವೆಂದು ಿಯುತ್ತಾರೆ. ಯಾರ ಜನನವಾಗಿದೆಯೋ, ಅವನ ಮರಣವೂ ಅವಶ್ಯ ಗಿ ಆಗಲೇಬೇಕು. ಯಾರ ಮರಣವು ಯಾವಾಗ ಆಗಬಹುದೆಂಬುದನ್ನು ಾರೂ ಅರಿಯರು. ಪ್ರತಿಯೊಂದು ಮುಹೂರ್ತವೂ ಮಾನವನು ಮೆಲ್ಲ. ಲ್ಲನೆ ಮೃತ್ಯುವಿನತ್ತ ನಡೆಯುತ್ತಿದ್ದಾನೆ. ಪ್ರತಿಯೋರ್ವ ಮಾನವನು ುಪ್ಪಿನ ಅವಸ್ಥೆಯನ್ನು ಅವಶ್ಯವಾಗಿ ಪಡೆಯುತ್ತಾನೆ. ಎಂಬುದೇನೂ ್ಚಿತವಿಲ್ಲ. ಆದರೂ ಸಹ, ಜೀವನದಲ್ಲಿ ಎಲ್ಲಕ್ಕಿಂತ ಮಹತ್ವಪೂರ್ಣ ಾರ್ಯವಾದ ಆಧ್ಯಾತ್ಮಿಕ ಸಾಧನೆಯನ್ನು ಮುಪ್ಪಿನ ಆವಸ್ಥೆಯಲ್ಲಿ ಮಾಡುವುದ ್ಕಗಿ ಇಟ್ಟು ಬಿಡುತ್ತಾರೆ. ಆಗ ಸಂಪೂರ್ಣವಾಗಿ ಜೀವನದ ಏಟು-ಇದಿರೇಟು ೆ ಮತ್ತು ಮಾಡಿದ ಕರ್ಮಗಳ ಪಶ್ಚಾತ್ತಾಪದಿಂದ ಶರೀರವು ಸಾರ ಹೀನ ಗುತ್ತದೆ. ಮನವು ಹಿಂದಿನ ಸಂಸ್ಕಾರಗಳಿಗೆ ಅಂಟಿಕೊಳ್ಳುತ್ತದೆ. ಮತ್ತು ಾಸ ವಿಷಯಗಳನ್ನು ಗ್ರಹಿಸುವ ಸಾಮರ್ಥ್ಯವೂ ಉಳಿದು ಹೋಗಿರುತ್ತದೆ. ಧಾರಣವಾಗಿ, ಮಾನವನು ಮೃತ್ಯುವಿನ ಭಯದಿಂದಲೇ ಮುಪ್ಪಿನ ಅವಸ್ಥೆ ಲ್ಲಿ ಭಗವಂತನನ್ನು ಸ್ಮರಿಸುತ್ತಾನೆ. ಸಂಪೂರ್ಣ ಜೀವನದಲ್ಲಿ, ಮಾಡಿದ



ಕೆಟ್ಟ ಕರ್ಮಗಳ ಭಯದಿಂದ ಬೆದರಿ, ಅಸಹಾಯಕನಾಗಿ, ಅವನು ಭಗವಂತ ನೆದುರು, ಮಾಡಿದ ಪಾಪಗಳ ಭಯದಿಂದ ತನ್ನನ್ನು ಉಳಿಸಿಕೊಳ್ಳಲು ಕಾತರ ನಾಗಿ ಪ್ರಾರ್ಥಿಸುತ್ತಾನೆ. ಇದರಿಂದ ಮುದಿತನದ ಜೀರ್ಣವಾದ, ಶೀರ್ಣ ವಾದ ದೇಹ ಮತ್ತು ದಣಿದ ಮನಗಳಿಂದ, ಸಮಸ್ತ ಜೀವನದ ಸಂಸ್ಕಾರ ಭೋಗದಿಂದ ಹುಟ್ಟಿದ ಗ್ಲಾನಿಯೊಂದಿಗೆ ಭಗವಂತನ ನಾಮವನ್ನು ಜಪಿಸುವು ದರಿಂದ ಯಾವುದೇ ಫಲವು ದೊರೆಯುವುದಿಲ್ಲ. ಏಕೆಂದರೆ, ಶಾರೀರಿಕ ದುರ್ಬಲತೆಯು, ಮುಪ್ಪಿನ ಕಾರಣ ರೋಗ ವ್ಯಾಧಿ, ಬರಲಿರುವ ಸಾವಿನ ಭಯ ಮತ್ತು ಕಳೆದು ಹೋದ ಜೀವನದ ಚಿಂತೆಗಳಲ್ಲಿ ಸಿಲುಕಿದ ಮನವು ಆಗ ಯಾವುದೇ ರೀತಿಯಲ್ಲಿ ಏಕಾಗ್ರವಾಗಿ, ಆಧ್ಯಾತ್ಮಿಕ ಸಾಧನೆಯನ್ನು ಮಾಡಲಾರದು. ಒಂದು ಸುಪ್ರಸಿದ್ಧ ಮಾತಿದೆ. "ಹಸಿಯಿರಲು ಬಿದಿರು ಬಾಗುವುದು ಚೆನ್ನಾಗಿ; ಒಣಗಿದಾಗಲದು ಲಟಲಟನೆ ಮುರಿವುದು ಜೋರಾಗಿ." ಅಂದರೆ, ಹೊಸತನ್ನು ಜೀವನದ ಮೊದಲನೆಯ ಭಾಗದಲ್ಲಿಯೇ ಆರಂಭಿಸ ಬೇಕು. ಆಧ್ಯಾತ್ಮಿಕ ಸಾಧನೆಯ ವಿಷಯದಲ್ಲಿ ಸಹ ಇದೇ ಮೂಲ ಮಾತು ಅನ್ವಯಿಸುತ್ತದೆ.

ಕೆಲವು ಜನರು ಜಗದ ಭೋಗ ವಿಲಾಸಗಳನ್ನು ಬಿಡಬೇಕಾಗುವುದೆಂಬ ಭಯದಿಂದ ಸಾಧನೆಯಿಂದ ದೂರ ಓಡುತ್ತಾರೆ. ಈ ವಿನಾಕಾರಣ ಭಯವು ಆ ಜನರನ್ನು ಆಧ್ಯಾತ್ಮಿಕ ಅನುಶೀಲನೆಯಿಂದ ವಂಚಿತರನ್ನಾಗಿಸುತ್ತದೆ. ಮೊದಲೇ ಹೇಳಿದಂತೆ ಪ್ರಕೃತಿಯ ತಮೋಗುಣದ ಪ್ರಭಾವದ ಫಲವಾಗಿಯೇ ಜಗತ್ತಿನ ಭೋಗ ವಸ್ತುಗಳ ಉದ್ಭವವಾಗಿದೆ.. ಮತ್ತು ಮಾನವನು ಅವಿದ್ಯಾ ಮಾಯೆಯ ಪ್ರಬಲತೆಯ ಕಾರಣ, ಇವುಗಳನ್ನು ಸರಿಯಾದ ಅರ್ಥದಲ್ಲಿ ಅರಿತುಕೊಂಡು ಇವುಗಳತ್ತ ಆಕರ್ಷಿಸಲ್ಪಡುತ್ತಾನೆ. ಆಧ್ಯಾತ್ಮಿಕ ಸಾಧನೆಯಿಂದ ಅವಿದ್ಯಾಮಾಯೆಯ ಪ್ರಭಾವವು, ಮೆಲ್ಲ ಮೆಲ್ಲನೆ ಕೊನೆಗೊಳ್ಳುವುದರಿಂದ, ಮನದ ಗತಿಯು ಸಹ, ಸೂಕ್ಷ್ಮದ ದಿಶೆಯಲ್ಲಿಯೇ ಸಾಗುತ್ತದೆ. ಆ ಕಾಲಕ್ಕೆ ಸ್ಥೂಲ ಜಗದ ಭೋಗ್ಯ ವಸ್ತುಗಳ ಮೋಹವೂ ಸಹ ಸರಿಯುತ್ತದೆ. ಅವಿದ್ಯಾ ಮಾಯೆಯನ್ನು ಆಶ್ರಯಿಸಿದ ಕಾಮ, ಮೋಹ ಮತ್ತು ಲೋಭ-ಈ ಮೂರೂ ರಿಪುಗಳು, ಮಾನವನನ್ನು ಭೋಗ್ಯ ವಸ್ತುಗಳತ್ತ ಕೊಂಡೊಯ್ಯುತ್ತವೆ. ಮತ್ತು ಇವುಗಳ ಪ್ರಭಾವವು ಕಡಿಮೆಯಾಗುತ್ತಿದ್ದ ಹಾಗೆಯೇ ಭೋಗೋನ್ಮಾದ ಗಳೂ ಸಹ, ಹ್ರಾಸಗೊಳ್ಳುತ್ತವೆ. ಸಾಧಾರಣವಾಗಿ ಮಾನವನು ಜಗತ್ತಿನ ಭೋಗ ವಿಲಾಸದಿಂದ ಹರ್ಷಿಸುತ್ತಾನೆ. ಮತ್ತು ಭೋಗ ವಿಲಾಸಗಳನ್ನು

ೂರೆಯಬೇಕೆಂಬ ಭಾವನೆಯಿಂದ ದುಃಖಿತನಾಗುತ್ತಾನೆ. ಆದರೆ, ಮನವು
ರ್ಲಿಪ್ತವಾದ ಮೇಲೆ, ಇವುಗಳನ್ನು ತ್ಯಜಿಸುವ ಪ್ರಶ್ನೆಯೇ ಏಳದು. ಏಕೆಂದರೆ
ವುಗಳು ತೊಲಗಿ ಹೋಗುವುದರಿಂದ ಮನದಲ್ಲಿ ಆಗ ಯಾವುದೇ ಬಗೆಯ
ಷ್ಟವು ಉಂಟಾಗುವುದಿಲ್ಲ. ಪ್ರತಿಯಾಗಿ, ಮನವು ಆ ಕಾಲಕ್ಕೆ ಸುಖದ
ನುಭೂತಿಯನ್ನು ಹೊಂದುತ್ತದೆ. ಇಚ್ಛಿಸಿದ ವಸ್ತುಗಳು ದೊರೆಯದಿದ್ದರೇನೇ
ುನದಲ್ಲಿ ಸುಖವಾಗುತ್ತದೆ. ಅಂದ ಮೇಲೆ ಬೇಡಾದ ವಸ್ತುಗಳನ್ನು
ಡೆಯುವ ಮಾತೆಲ್ಲಿ ಬಂತು? ಉದಾಹರಣೆಗೆ ನೋಡಿರಿ : ಸೆರೆಯು
ಲ್ಲದಾಗ ಸೆರೆ ಕುಡುಕನಿಗೆ ಅತಿ ಕಷ್ಟವಾಗುತ್ತದೆ. ಆದರೆ ಸೆರೆಯನ್ನು
ರಿತು ಅನಾಸಕ್ತನಾದ ವ್ಯಕ್ತಿಗೆ ಇದರಿಂದೇನೂ ಆಗದು; ಹೋಗದು. ಅವನ
ುನದಲ್ಲಿ ಕಷ್ಟ ಉಂಟಾಗುವ ಪ್ರಶ್ನೆಯೇ ಏಳದು. ಏಕೆಂದರೆ, ಇದಕ್ಕಾಗಿ
ವನಿಗೆ ಯಾವುದೇ ಪ್ರಕಾರದ ಅಭಾವದ ಬೋಧೆಯೆನಿಸದು. ಸಾಧನೆಯ
ೂಲಕ ಮನವು ಸೂಕ್ಷ್ಮದತ್ತ ಹೋಗುತ್ತದೆ, ಜಡ ವಿಷಯದ ಭೋಗವು
ವನಿಗೆ ನೀರಸವೆನಿಸುತ್ತದೆ. ಇದು ಎಲ್ಲಿಯ ವರೆಗೆ ಎಂದರೆ, ಜಡ
ಂಪರ್ಕವೂ ಸಹ, ಅವನಿಗೆ ಅಸಹ್ಯವಾಗುತ್ತದೆ. ಇಂಥ ಅವಸ್ಥೆಯಲ್ಲಿ ಜಡವು
ೊಲಗಿ ಹೋಗುವ ಇಲ್ಲವೆ, ಅದನ್ನು ಪಡೆಯದಿರುವ ದುಃಖವು ಮನದಲ್ಲಿಯೇ
ುಂಟಾಗಲಾರದು. ಆಧ್ಯಾತ್ಮಿಕ ಸಾಧನೆಗಾಗಿ, ಭೋಗ ವಿಲಾಸದಿಂದ ತಮ್ಮನ್ನು
ತ್ತಾಯದಿಂದ ದೂರ ಮಾಡಬೇಕಾಗುತ್ತದೆ; ಎಂದು ಕೆಲವು ಜನರು ತಿಳಿ
ುತ್ತಾರೆ. ಈ ಭಾವನೆಯಿಂದ ಅವರು ಗಾಬರಿಗೊಳ್ಳುತ್ತಾರೆ. ಆದರೆ, ಈ
ೀತಿ ಒತ್ತಾಯಿಸಿ ಮನವನ್ನೆಂದೂ ವಶಪಡಿಸಿಕೊಳ್ಳುವುದು ಶಕ್ಯವಿಲ್ಲ.
ಕೆಂದರೆ, ಒತ್ತಾಯದಿಂದ ಮನವನ್ನು ವಿಷಯದಿಂದ ದೂರಗೊಳಿಸಿದ ಬಳಿಕ,
ರೀರದ ಮೇಲೆ ಇದರ ಪ್ರಭಾವ ಬೀಳುತ್ತದೆ.ಮತ್ತು ಇದರಿಂದ ಆರೋಗ್ಯವೇ
ುಸಿಯುತ್ತದೆ. ಸಾಧನೆಯ ಮಾರ್ಗದಲ್ಲಿ ಎಂದೆಂದೂ ಒತ್ತಾಯಿಸುವ
ಪ್ರಶ್ನೆಯೇ ಏಳುವುದಿಲ್ಲ. ಸದ್ಗುರುವಿನ ಮೂಲಕ ನಿರ್ದಿಷ್ಟ ಸಾಧನಾ ಪದ್ಧತಿ
ುಲ್ಲಿ ಇಂಥದೇ ಮಹಾತ್ಮ್ಯವಿದೆ. ಅದೆಂದರೆ, ಸಾಧಕನಿಗರಿವಾಗದಂತೆಯೇ
ುನವು ಜಡವನ್ನು ಮರೆತು ಸೂಕ್ಷ್ಮದತ್ತ ವಿಸ್ತರಿಸುತ್ತದೆ. ಮತ್ತು ಮೆಲ್ಲ
ುಲ್ಲನೆ, ಜಡದ ಸಂಬಂಧವನ್ನು ಸಂಪೂರ್ಣವಾಗಿ ಬಿಟ್ಟುಬಿಡುತ್ತದೆ. ಆದ್ದರಿಂದ
ೋಗ ವಿಲಾಸವನ್ನು ತ್ಯಜಿಸುವ ಭಯದಿಂದ ಸಾಧನೆಯನ್ನು ಮಾಡದಿರುವುದು
ಪ್ಪು. ಇದರಲ್ಲಾವ ಯುಕ್ತಿಯೂ ಇಲ್ಲ.



ಸಾಧನೆಯನ್ನು ಕುರಿತು ಬೆದರುವುದು ವಿನಾಕಾರಣವಷ್ಟೇ; ಎಂಬುದನ್ನು ವಿಚಾರ ಪೂರ್ವಕ ಕಂಡು ಕೊಂಡೆವು. ಮನುಷ್ಯರೆಲ್ಲರೂ ಅವಶ್ಯವಾಗಿ ಮಾಡಲೇಬೇಕಾದ ಸಾಧನೆಯನ್ನು, ವಿನಾಕಾರಣ ಭಯದಿಂದ ಬೆದರಿ, ಯಾರೊಬ್ಬರೂ ತೊರೆಯದಿರಲಿ. ಸಾಧನೆಯ ಮೂಲಕವೇ ಮಾನವನು ಆತ್ಮದ ಉಪಲಬ್ಧಿಯನ್ನು ಪಡೆಯಬೇಕು. ತನ್ನ 'ಭೂಮಾನಾನು'ವನ್ನು ಅರಿಯಬೇಕು.

## ಶ್ರೀ ಆನಂದಮೂರ್ತಿಯವರ ಸಾಹಿತ್ಯ ಕೃತಿಗಳ
## ಕನ್ನಡ ಅನುವಾದಗಳು

| | |
|---|---|
| ದ ವಚನಾಮೃತ ಭಾಗ–೩ | ೫–೦೦ |
| ದ ವಚನಾಮೃತ ಭಾಗ–೨೦ | ೫–೦೦ |
| ಷಿತ ಸಂಗ್ರಹ ಭಾಗ–೧ | ೭–೦೦ |
| ಸಾಗರದಲ್ಲಿ ಸ್ವರ್ಣ ಕಮಲ | ೯–೦೦ |
| ಯ ಮುಕ್ತಿ: ನವಮಾನವತಾವಾದ | ೮–೦೦ |
| ದ ವಚನಾಮೃತ ಭಾಗ–೮ | ೬–೦೦ |
| ದ ವಚನಾಮೃತ ಭಾಗ–೫ | ೬–೦೦ |
| ದ ವಚನಾಮೃತ ಭಾಗ–೧ | ೬–೦೦ |
| ದ ವಚನಾಮೃತ ಭಾಗ–೧೪ | ೬–೦೦ |
| ಮಿ ಕೃಷ್ಣ ಸುಂದರಂ | ೧೮–೦೦ |
| ಶಿವಾಯ ಶಾಂತಾಯ | ೧೮–೦೦ |
| ದ ಸೂತ್ರಮ್ (ಪುನರ್ಮುದ್ರಣ) | ೪–೦೦ |
| ಸಂಪದ | ೪–೦೦ |
| ದ ವಚನಾಮೃತ ಭಾಗ–೨ | ೬–೦೦ |
| ಷಿತ ಸಂಗ್ರಹ ಭಾಗ–೨ | ೮-೦೦ |
| ಮತ | ೧೦–೦೦ |
| ಭಾರತದ ಕಥೆಗಳು | ೫–೦೦ |
| ಮತ (ಸಾಧನಾ ವರ್ಷದ ಭಾಗ) | ೫–೦೦ |
| ಷಿತ ಸಂಗ್ರಹ ಭಾಗ–೧೩ | ೮–೦೦ |
| ಷಿತ ಸಂಗ್ರಹ ಭಾಗ–೧೪ | ೮–೦೦ |



| | | |
|---|---|---|
| ೨೧. | ಸುಭಾಷಿತ ಸಂಗ್ರಹ ಭಾಗ–೩ | ೮–೦೦ |
| ೨೨. | ಇಂದಿನ ಸಮಸ್ಯೆಗಳು (ಪುನರ್ಮುದ್ರಣ) | ೪–೦೦ |
| ೨೩. | ಸುಭಾಷಿತ ಸಂಗ್ರಹ ಭಾಗ–೪ | ೮–೦೦ |
| ೨೪. | ದೇಶಾಭಿಮಾನಿಗೆ | ೪–೦೦ |
| ೨೫. | ಸುಭಾಷಿತ ಸಂಗ್ರಹ ಭಾಗ-೫ | ೮–೦೦ |
| ೨೬. | ಸುಭಾಷಿತ ಸಂಗ್ರಹ ಭಾಗ–೬ | ೮–೦೦ |
| ೨೭. | ಮಾನವ ಸಮಾಜ ಭಾಗ–೧ | ೧೨–೦೦ |
| ೨೮. | ತತ್ತ್ವ ಕೌಮುದಿ | ೪–೦೦ |
| ೨೯. | ಮಾನವ ಸಮಾಜ ಭಾಗ–೨ | ೮–೦೦ |
| ೩೦. | ವಿಚಿತ್ರ ಅಭಿಜ್ಞತೆ | ೪–೦೦ |

ಪುಸ್ತಕಗಳು ದೊರೆಯುವ ಸ್ಥಳ:

**ಆನಂದ ಮಾರ್ಗ ಜಾಗೃತಿ,**
ಕರ್ನಾಟಕ ವಿಶ್ವವಿದ್ಯಾಲಯ ಕ್ಯಾಂಪಸ್,
ಧಾರವಾಡ–೫೮೦೦೦೩.